ಶ್ರೀ ಅಖಂಡೇಶ್ವರ ಗ್ರಂಥಮಾಲೆ ೨೪ ನೇ ಕುಸುಮ

ಸ್ವಯಂಜ್ಯೋತಿ



ಲೇಖಕರು : ಲಕ್ಕಪ್ಪ ಅ. ಶಿರಹಟ್ಟಿ

ಶ್ರೀ ಅಖಂಡೇಶ್ವರ ಗ್ರಂಥಮಾಲೆ ೭೪ ನೇ ಕುಸುಮ

ಸ್ವಯಂ ಜ್ಯೋತಿ
ಷಣ್ಮುಖ ಶಿವಯೋಗಿ

ಪ್ರಕಾಶಕರು
ಶ್ರೀ ಮ. ನಿ. ಪ್ರ. ಶಾಂತಲಿಂಗ ಸ್ವಾಮಿಗಳು

ಲೇಖಕರು

~~ಸಂಪಾದಕರು~~
ಲಕ್ಕಪ್ಪ ಅ. ಶಿರಹಟ್ಟಿ

ಶ್ರೀ ಸ್ವಯಂ ಜ್ಯೋತಿ ಷಣ್ಮುಖ ಶಿವಯೋಗಿ

ಲೇಖಕರು ; ಲಕ್ಕಪ್ಪ ಅ. ಶಿರಹಟ್ಟಿ

ಬೆಲೆ : 10-25

ಪ್ರಥಮ ಮುದ್ರಣ 1986 (ಪ್ರತಿಗಳು 1000)

ಮಾರಾಟಗಾರರು
ಶ್ರೀ ಎಸ್. ಎಸ್. ಭಾವಿಕಟ್ಟಿ
ಮೇನರೋಡ್ ಗುಲಬರ್ಗಾ.

ಮುದ್ರಕರು
ಗ್ರಿನೋಬಲ್ಸ್ ಪ್ರಾವೇಟ ಲಿಮಿಟೆಡ್

ಸಮರ್ಪಣೆ

ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲೂಕಿನಲ್ಲಿ ಜನಿಸಿ ಅನಂತಜನ ತಪೋನಿಧಿಗಳ ಸೇವೆ ಗೈದು ಶಿವಾನುಭಾವಿಗಳಾಗಿ ಪ್ರಭುವಿನ ಅಪರಾವತಾರಿಗಳಾದ ಲಿಂ. ಮುರುಗೇಂದ್ರ ಮಹಾ ಶಿವಯೋಗಿಗಳು ಗಚ್ಚಿನಮಠ ಅಥಣಿ ಇವರ ಕರಸಂಜಾತರಾಗಿ ಅವರ ಕೃಪೆಗೆ ಪಾತ್ರರಾಗಿ ಅವರಿಗೆ ಮಾತೃಸ್ವರೂಪಿಗಳಾಗಿ ಶ್ರೀ ಶಿವಯೋಗಿಯನ್ನೇ ಹಾಸಿಕೊಂಡು ಶಿವಯೋಗಿಯನ್ನೆ ಹೊದ್ದುಕೊಂಡು ಶಿವಯೋಗಿ ಶಿವಯೋಗಿ ಎನ್ನುತ್ತ ಭವಸಾಗರವನ್ನು ದಾಟಿದ ಲಿಂ. ಶ್ರೀ ಮ. ನಿ. ಪ್ರ. ಗುರುಸಿದ್ಧ ಮಹಾ ಶಿವಯೋಗಿಗಳು ವಿರಕ್ತಮಠ ಹಲ್ಯಾಳ [ತಾಲುಕಾ ಅಥಣಿ] ಇವರ ದಿವ್ಯ ಪಾದಕ್ಕೆ ಸಮರ್ಪಿಸಿದ ಗ್ರಂಥ ಕುಸುಮ

ಪ್ರಕಾಶಕರು

ಶಾಂತಲಿಂಗ ಮಹಾಸ್ವಾಮಿಗಳು

ಜೇವರಗಿ

ಪ್ರಕಾಶಕರ ನುಡಿ

ಭಕ್ತಿ ಎಂಬುದು ಬೇರು
ವಿರಕ್ತಿ ಎಂಬುದು ಮರ
ಜ್ಞಾನವೆಂಬುದು ಫಲ ನೋಡಾ
ಅಖಂಡೇಶ್ವರಾ

ಚರ ಚಕ್ರವರ್ತಿಗಳಾದ ಶ್ರೀ ಷಣ್ಮುಖ ಶಿವಯೋಗಿಗಳ ಪ್ರಸಾದ ವಾಣಿಯಂತೆ ಜ್ಞಾನವೆಂಬ ಫಲದ ರಸಸ್ವಾದನೆ ಕನ್ನಡ ನಾಡಿನ ಮಕ್ಕಳಿಗೆ ಸದುಪಯುಕ್ತವಾಗಲೆಂದು ೧೯೫೪ ರಲ್ಲಿ ಶ್ರೀ ಮಠದಲ್ಲಿ ಶ್ರೀ ಷಣ್ಮುಖಶಿವಯೋಗೀಶ್ವರ ಹೆಸರಿನಲ್ಲಿ ಒಂದು ಪ್ರಸಾದ(ಬೋರ್ಡಿಂಗ) ನಿಲಯವನ್ನು ಪ್ರಾರಂಭಿಸಲಾಯಿತು. ಆದರಿಂದ ನಾಡಿನ ಮಕ್ಕಳು ಉಪಯುಕ್ತ ಪಡೆದಿದ್ದಾರೆ ಪಡೆಯುತ್ತಲಿದ್ದಾರೆ.

ಧಾರವಾಡ, ಕರ್ನಾಟಕ. ವಿಶ್ವವಿದ್ಯಾಲಯದ ನಿವೃತ್ ಉಪ ಕುಲಪತಿಗಳೂ. ಉದ್ದಾಮ ಸಾಹಿತಿಗಳೂ. ಸೀಮಾ ಪುರುಷರೂಗಳಾದ ನಿವೃತ್ ಡಾ॥ ಶ್ರೀ ಆರ್, ಸಿ. ಹಿರೇಮಠ ಇವರ ಸೂಚನೆಯಂತೆ ಅಖಂಡೇಶ್ವರ ಗ್ರಂಥ ಮಾಲೆಯನ್ನು ೧೯೬೧ ರಲ್ಲಿ ಪ್ರಾರಂಭಿಸಿ ಅದರಿಂದ "ಜ್ಞಾನಜ್ಯೋತಿ" ಶ್ರೀ ಷಣ್ಮುಖ ಶಿವಯೋಗೀಶ್ವರ ತತ್ವರತ್ನಾಕ ಅಖಂಡೇಶ್ವರ ವಚನಗಳು ಗುಂಡ ಬ್ರಹ್ಮಗಳ ಸಾಹಿತ್ಯ ಹೀಗೆ ನುರಿತ ಸಾಹಿತಿಗಳಿಂದ ಸಂಪಾದಿತವಾದ ಹಾಗೂ ಸ್ವಂತ ಬರಹಗಾರರಿಂದ ಬರೆಯಲ್ಪಟ್ಟ ಗ್ರಂಥಗಳನ್ನು ಗ್ರಂಥಮಾಲೆ ಪ್ರಕಾಶನ ಪಡಿಸಿ ತನ್ನಸೇವೆ ಸಲ್ಲಿಸಿ ಕೃತಾರ್ಥವಾಗುತ್ತಲಿದೆ.

ಈ ಗ್ರಂಥಮಾಲೆಯಿಂದ ಪ್ರಕಾಶನಗೊಳಿಸಬೇಕೆಂಬ ಹಿರಿಯಾಸೆಯಿಂದ ವಯೋವೃದ್ಧರೂ ಜ್ಞಾನವೃದ್ಧರೂ ಕವಿಗಳೂ ಆದ ಶರಣ ಶ್ರೀ ಲಕ್ಕಪ್ಪ ಆ. ಶಿರಹಟ್ಟಿ ತೊರವಿ ಇವರು ಶ್ರೀ ಶಿವಯೋಗಿಗಳ ಚರಿತ್ರೆಯನ್ನು ತಮ್ಮ ಪಳಗಿದ ಲೆಕ್ಕಣಿಕೆಯಿಂದ ಕಾದಂಬರಿ ರೂಪದಲ್ಲಿ ರಚಿಸಿ ಶ್ರೀ ಶಿವಯೋಗಿಗಳ ಕೃಪೆಗೆ ಪಾತ್ರರಾಗಿದ್ದಾರೆ.

ಲಕ್ಕಪ್ಪ ಆ. ಶಿರಹಟ್ಟಿಯವರು ಈ ಕೃತಿ ರಚಿಸುವ ಪೂರ್ವದಲ್ಲಿ ಶ್ರೀ ಶಿವಯೋಗಿಗಳ ಬಗೆಗಿರುವ ಎಲ್ಲ ಸಾಹಿತ್ಯವನ್ನು ಸರಿಯಾಗಿ ಅಧ್ಯಯನ ಮಾಡಿರುವರು ಅವರ ಅಧ್ಯಯನ ಗ್ರಂಥದುದ್ದಕ್ಕೂ ಎದ್ದು ನಿಂತಿದೆ. ಶ್ರೀ ಶಿವಯೋಗಿಗಳ ಜೀವನದ ಮಹತ್ವದ ಘಟನೆಗಳನ್ನು ೧೩ ಪ್ರಕರಣದಲ್ಲಿ ಪ್ರಮಾಣ ಬದ್ಧವಾದ ಐತಿಹಾಸಿಕ ಆಧಾರಗಳಿಂದ ಸಂಗ್ರಹಿಸಿರುವರು. "ಕರಿಯು ಕನ್ನಡಿಯಲ್ಲಿ ಅಡಗಿದಂತೆ" ಚರಿತ್ರನಾಯಕರ ಜೀವನದ ಘಟನೆಗಳ ಸಂಗ್ರಹ ಕಾರ್ಯ ಯೋಗ್ಯ ರೀತಿಯಲ್ಲಿ ಮುನ್ನಡೆದಿದೆ ಎಂದು ಹೇಳಬಹುದು ಶ್ರೀ ಷಣ್ಮುಖ ಶಿವಯೋಗಿಗಳ ಚರಿತ್ರೆಯನ್ನು ಲೇಖಕರು ಭಕ್ತಿಯಿಂದ ಬಿತ್ತರಿಸುವ ಶಕ್ತಿ ಪ್ರಶಂಸನೀಯವಾಗಿದೆ. ಕಾರಣ ಈ ಗ್ರಂಥ ಕರ್ತರಿಗೆ ಶಿವಯೋಗಿ ಅಖಂಡ ಮಂಗಲವನ್ನೀಯಲಿ.

ವಿದ್ಯುದ್ವಯರಾದ ಪ್ರೊ. ಸಂಗಮೇಶ ಹಂಡಗಿ ಎಂ.ಎ.ಡಿ.ಪಿ.ಎ. ಶಂಕರ ಕಲಾ ಮಹಾವಿದ್ಯಾಲಯ ನವಲಗುಂದ ಇವರು ಈ ಸ್ವಯಂಜ್ಯೋತಿ ಗ್ರಂಥಕ್ಕೆ ತಮ್ಮ ಅನಂತ ಅಧ್ಯಯನ ಕಾರ್ಯಗಳನ್ನು ಬದಿಗಿರಿಸಿ ಸಕಾಲಕ್ಕೆ ಗ್ರಂಥಕ್ಕೆ ಸರಿಹೊಂದುವ ರೀತಿಯಲ್ಲಿ "ಚಿನ್ನದ ಗುಡಿಗೆ ರನ್ನದ ಕಳಸ ವಿಟ್ಟಂತೆ" ಮುನ್ನುಡಿ ಬರೆದುಕೊಟ್ಟು ಗ್ರಂಥಕ್ಕೆ ಶೋಭೆ ತಂದು ಕೊಟ್ಟದ್ದಕ್ಕಾಗಿ ಗ್ರಂಥಮಾಲೆ ಅವರಿಗೆ ಸ್ಮರಿಸುತ್ತದೆ ಹಾಗೂ ಶ್ರೀ ಶಿವಯೋಗಿ ಇದಕ್ಕೂ ಹೆಚ್ಚಿನ ಸ್ಥಾನಮಾನಗಳನ್ನು ಕೊಟ್ಟು ಅಖಂಡವಾಗಿ ಕಾಪಾಡಲೆಂದು ಪ್ರಾರ್ಥಿಸುತ್ತೇವೆ.

ಕಲಾಕೋವಿದ, ಸದ್ಭಕ್ತಿಭೂಷಣ ಬಸವರಾಜ ಬಳಬಟ್ಟಿ ಬಿ.ಡಿ.ಓ. ಆಫೀಸ ಜೇವರಗಿ ಇವರು ಸಕಾಲಕ್ಕೆ ನಕಾಶಗಳನ್ನು ಬರೆದು ಗ್ರಂಥಕ್ಕೆ ಐತಿಹಾಸಿಕ ಸ್ವರೂಪ ತಂದು ಕೊಟ್ಟಿದ್ದಾರೆ. ಅವರ ಉಪ ಕಾರ ಗ್ರಂಥಮಾಲೆ ಸ್ಮರಿಸದೇ ಇರದು ಅವರಿಗೆ ಶ್ರೀ ಶಿವಯೋಗಿ ಇದಕ್ಕೂ ಹೆಚ್ಚಿನಹುದ್ದೆಯನ್ನು ಕೊಟ್ಟು ಕಾಪಾಡಲೆಂದು ಆಶಿಸುತ್ತೇವೆ

ಜೇವರಗಿ ತಾಲೂಕಿನ ಹಂಗರಗಿ ಗ್ರಾಮದ ಹಿರೇಮಠದ ಕರ ಬಸಯ್ಯ ಶಿವಲಿಂಗಯ್ಯ ಇವರು ಪ್ರಸ್ತುತ ಮುಧೋಳ ತಾಲೂಕಿನ ಹಲಗಲಿ ಗ್ರಾಮದಲ್ಲಿರುವ ಶ್ರೀ ವೀರಭದ್ರೇಶ್ವರ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಸೇವೆಸಲ್ಲಿಸುತ್ತಿದ್ದಾರೆ. ಜೊತೆಗೆ ಜಿ. ಡಿ ಆರ್ಟ ಬಾಂಬೆ ಈ ಪದವಿಯನ್ನು ಪಡೆದು ಕುಂಚ ಬ್ರಹ್ಮರೆನಿಸಿದ್ದಾರೆ. ಈ ಮೊದಲು ಅಖಂಡೇಶ್ವರ ಗ್ರಂಥಮಾಲೆಯಿಂದ ೨೧ ನೇ ಕುಸುಮವಾಗಿ ಅರಳಿ ಬಂದ ಅಖಂಡೇಶ್ವರ ಗ್ರಂಥಕ್ಕೆ ಬೇಕಾಗುವ ಭಾವಚಿತ್ರಗಳನ್ನು ಬರೆದು ಕೊಟ್ಟಿದ್ದಾರೆ. ಈಗ ಪ್ರಕಾಶಗೊಳ್ಳುತ್ತಲಿರುವ ಸ್ವಯಂ ಜೋತಿ ಗ್ರಂಥಕ್ಕೆ "ಸ್ವಯಂ ಜ್ಯೋತಿ" ಎಂಬ ಮುಖ ಪುಟಕ್ಕೆ ಮುದ್ದಾದ ಕಲೆಯನ್ನು ಚಿತ್ರಿಸಿಕೊಟ್ಟಿದ್ದಕ್ಕಾಗಿ ಹಾಗೂ ಸುಂದರ ವಾದ ರೂಪರೇಷೆಯಿಂದ ಆಕರ್ಷಕ ರೀತಿಯಲ್ಲಿ ಶ್ರೀ ಷಣ್ಮುಖ ಶಿವಯೋಗಿಗಳ ಭಾವಚಿತ್ರವನ್ನು ಚಿತ್ರಿಸಿಕೊಟ್ಟಿದ್ದಕ್ಕಾಗಿ ಅವರನ್ನು ಮರೆಯಲಿಕ್ಕಾದೀತೆ ಅವರಿಂದ ಇಂತಹ ಕಲೆಗಳು ಜೀವನದುದ್ದಕ್ಕೂ ಬರೆದು ಬರಲಿ ಶ್ರೀ ಶಿವಯೋಗಿ ಅನಂತ ಶ್ರೇಯೋಲಾಭಗಳನ್ನಿತ್ತು ಕಾಪಾಡಲೆಂದು ಹಾರೈಸುತ್ತೇವೆ.

ಈ ಸ್ವಯಂ ಜ್ಯೋತಿ ಗ್ರಂಥ ಪ್ರಕಾಶನಗೊಳಿಸಲು ತ್ರಿಕರ್ಣ ಪೂರ್ವಕ ಸೇವೆಸಲ್ಲಿಸಿದ ಸದ್ಭಕ್ತಭೂಷಣ ಧರ್ಮವೀರ ಶ್ರೀಮಾನ್ ಎಚ್. ಟಿ. ರಾಮಲು ಗಂಗಾವತಿ ಅವರ ಸಂಬಂದಿಕರೂ ಅವರ ಸಹೋದ್ಯೋಗಿಗಳೂಗುರುಲಿಂಗಜಂಗಮಾರಾಧಕರೂಶರಣಸಾಹಿತ್ಯ

ಪ್ರೇಮಿಗಳೂ ಆದ ಹುಲಗಯ್ಯನವರು ಗಂಗಾದಪಿ ಇವರುಗಳಿಗೆ ಶ್ರೀ ಶಿವಯೋಗಿ ಇಂಥಾ ಕಾರ್ಯಗಳು ಅವರಿಂದ ಮುನ್ನಡೆಯು ತ್ತಿರಲಿ ಅವರಿಂದ ಅನಂತಬಗೆಯ ವ್ಯವಸಾಯಗಳು ಮುನ್ನಡೆ ಯಲಿ ಈ ಉಭಯರ ಸ್ಮರಣೆ ಗ್ರಂಥಮಾಲೆ ಸದಾವಕಾಲ ಸ್ಮರಿಸು ತ್ತದೆ. ಶ್ರೀ ಶಿವಯೋಗಿ ಸನ್ಮಂಗಲವನ್ನೀಯಲೆಂದು ಆಶಿಸುತ್ತೇವೆ.

ಈ ಕೈ ಬರಹದ ಕೃತಿಯನ್ನು ಮುದ್ದಾದ ಅಕ್ಷರಗಳಿಂದ ಮುದ್ದಾಗಿ ಬರೆದುಕೊಟ್ಟು ಗ್ರಂಥಕ್ಕೆ ಆಣಿಯಾಗುವಂತೆ ಮಾಡಿಕೊಟ್ಟ ಸಚ್ಚಾರಿತ್ರಶೀಲರೂ ಆದರ್ಶ ಶಿಕ್ಷಕರುಗಳಾದ ಕೃಪಾಪಾತ್ರ ಶ್ರೀ ಸೋಮಶೇಖರಯ್ಯ ದೊಡಬಸಯ್ಯ ಮಾಗಣಗೇರಿ ಶಿಕ್ಷಕರು ಸರ ಕಾರಿ ಕನ್ಯಾ ಹಿರಿಯ ಪ್ರಾಥಮಿಕ ಶಾಲೆ ಜೇವರಗಿ ಇವರಿಗೆ ಶ್ರೀ ಶಿವಯೋಗಿ ಅನಂತ ಭೋಗಭಾಗ್ಯಾದಿಗಳನ್ನಿತ್ತು ಅವರಿಗೂ ಸರ್ವ ಬಳಗಕ್ಕೂ ಕಾಪಾಡಲೆಂದು ಹಾರೈಸುತ್ತೇವೆ.

ಗ್ರಿನೋಬಲ್ಸ ಪ್ರೆಸ್ಸಿನ ಒಡೆಯರಾದ ಶ್ರೀಮಾನ್ ರಾಜೇಂದ್ರ ಪಾಟೀಲ ಗುಲಬರ್ಗಾ ಇವರು ತಮ್ಮ ಗ್ರಿನೋಬಲ್ಸ ಪ್ರೆಸ್ಸಿನಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಅವರಿಗೂ ಅವರ ಸಕಲ ಸಿಬ್ಬಂದಿ ವರ್ಗಕ್ಕೂ ಶ್ರೀ ಶಿವಯೋಗಿ ಸಕಲೈಶ್ವರ್ಯವನ್ನು ಕೊಟ್ಟು ಕಾಪಾ ಡಲಿ ಎಂದು ಆಶಿಸುತ್ತೇವೆ.

ಈ ಸ್ವಯಂ ಜ್ಯೋತಿ ಗ್ರಂಥವನ್ನು ಕನ್ನಡನಾಡಿನ ಸಾಹಿತ್ಯಾ ಭಿಮಾನಿಗಳು ಶ್ರದ್ಧೆಯಿಂದ ಓದಿದಾಗ ಲೇಖಕರ ಹಾಗೂ ಪ್ರಕಾಶ ಕರ ಶ್ರಮ ಸಾರ್ಥಕವಾಗುತ್ತದೆ. ಶ್ರೀ ಶಿವಯೋಗಿ ಅವರವರ ಭಾವಕ್ಕೆ ಅವರವರ ತೆರನಾಗಿ ಕಾಪಾಡುತ್ತಾನೆ.

ತಮ್ಮ

ಪ್ರಕಾಶಕರು

ಮುನ್ನುಡಿ

" ಶ್ರೀ ಷಣ್ಮುಖ ಶಿವಯೋಗಿಗಳ ಕುರಿತು ಗ್ರಂಥ ಒಂದನ್ನು ಶ್ರೀ ಮಠದಿಂದ ಪ್ರಕಟಗೊಳಿಸಲಿದ್ದೇವೆ. ಬರೆದವರು ಹಿರಿಯ ಲೇಖಕ ಶ್ರೀ ಲಕ್ಕಪ್ಪ ಅ, ಶಿರಹಟ್ಟಿಯವರು ಅದಕ್ಕೆ ನೀವು ಮುನ್ನುಡಿ ಬರೆಯಬೇಕು " ಎಂದು ಜೇವರಗಿಯ ಶ್ರೀ ನಿ, ಪ್ರ. ಶಾಂತಲಿಂಗ ಮಹಾಸ್ವಾಮಿಗಳು ಎರಡು ವರ್ಷಗಳ ಹಿಂದೆ ಬಸವನ ಬಾಗೇವಾಡಿಯಲ್ಲಿ ಬಸವ ಪುರಾಣ ಮಹಾಮಂಗಲೋತ್ಸವಕ್ಕೆ ನಾನು ಅತಿಥಿಯಾಗಿ ಹೋದಾಗ ಅಪ್ಪಣೆ ಮಾಡಿದ್ದರು. ಮತ್ತೆ ಈದೀಗ ಪತ್ರ ಬರೆದು ಮುದ್ರಿತ ಪ್ರತಿಯನ್ನು ಕಳಿಸಿದರು. ಶ್ರೀಗಳವರ ಸಾಮಾಜಿಕ ಕಳಕಳಿ ಜ್ಞಾನಾನ್ನದಾಸೋಹಕ್ಕಾಗಿ ಪಡುತ್ತಿರುವ ಶ್ರಮ ಅನುಕರಣೀಯ ಶ್ರೀ ಮಠದ ಪ್ರಭಾವವು ಇವರ ಸತತ ಪರಿಶ್ರಮದಿಂದಾಗಿ ಎಲ್ಲೆಡೆ ಹಬ್ಬುವಂತಾಗಿದೆ.

ಹಳೆಯ ತಲೆಮಾರಿನ ಹಿರಿಯ ಬರಹಗಾರರೊಬ್ಬರ ಹೊತ್ತಿಗೆಗೆ ಆದರಲ್ಲೂ ಬತ್ತಿದ ವಚನವಾಹಿನಿಯನ್ನು ಮತ್ತೆ ಹರಿಯಿಸಿದ ಮಹಾನುಭಾವರಾದ ಶ್ರೀ ಷಣ್ಮುಖ ಶಿವಯೋಗಿಗಳ ಚರಿತ್ರೆಗೆ ಮುನ್ನುಡಿ ಬರೆಯುವ ಸದಾವಕಾಶ ಶ್ರೀಗಳವರ ಕೃಪೆಯಿಂದ ಪ್ರಾಪ್ತವಾದುದು ಒಂದು ಸುಯೋಗವೆಂದೇ ಭಾವಿಸಿದ್ದೇನೆ. ಲೇಖಕರ ಬಯಕೆಯೂ ಅದಾಗಿತ್ತು.

ನನ್ನ ಹಾಗೂ ಶಿರಹಟ್ಟಿಯವರ ಪರಿಚಯ ಮೊದಲಾದುದು ೧೨ ವರ್ಷಗಳ ಹಿಂದೆ ಅವರೇ ಸಂಪಾದಕರಾಗಿದ್ದ ಅನುಭವ ಮಂಟಪ ತ್ರೈಮಾಸ ಪತ್ರಿಕೆಯ ಮೂಲಕ ನಮ್ಮ ಸಾಹಿತ್ತಿಕ ಸಾಧನೆ ಕುರಿತು

ಪರಸ್ಪರ ಪತ್ರವ್ಯವಹಾರ ಮಾಡುತ್ತಿದ್ದೆವು. ಒಮ್ಮೆ ನವಲಗುಂದಕ್ಕೂ ಆವರು ಬಂದು ಹೋದರು. ೮೭ ರ ಇಳಿವಯಸ್ಸಿನಲ್ಲಿಯೂ ಆವರ ಲೇಖನಿಗೆ ವಿರಾಮವಿಲ್ಲ.

ಪರಿಣತ ಮತಿಯ ಪಕ್ವಹೃದಯದ, ಅನುಭಾವಿ. ಕವಿಗಳಾದ ಶ್ರೀ ಶಿರಹಟ್ಟಿಯವರ ನುರಿತ ಲೇಖನಿಯಿಂದ ಮೂಡಿಬಂದ ಕೃತಿ "ಸ್ವಯಂ ಜ್ಯೋತಿ" ಷಣ್ಮುಖ ಶಿವಯೋಗಿಗಳ ಬೆಳಕಿನ ಬದುಕಿಗೆ ಔಚಿತ್ಯಪೂರ್ಣ ಶೀರ್ಷಿಕೆ ಇದು. ಕಾದಂಬರಿ ಶೈಲಿಯಲ್ಲಿ ಬರೆದ ಈ ಚರಿತ್ರೆ ಗ್ರಂಥವು ವಿಜಯನಗರದ ಪ್ರೌಢದೇವರಾಯನ ಕಾಲದ ಐತಿಹಾಸಿಕ ಹಿನ್ನಲೆಯಿಂದಲೇ ಪ್ರಾರಂಭವಾಗುತ್ತದೆ. ಚಕ್ರವರ್ತಿ ಪ್ರೌಢದೇವರಾಯನ ಕಿರಿಯ ಸಹೋದರ ಆರಗ ನಗರದ ಮಾಂಡಲಾಧಿಪತಿ ನಾಗ ಗಿರಿನಾಥರಾಯನು ಬಂಡುಗಾರರನ್ನು ಸದೆಬಡೆದು ವಿಜಯ ಸಾಧಿಸಿದ ಸಂದರ್ಭದಲ್ಲಿ ಅಲ್ಲಿಯ ಅಖಂಡೇಶ್ವರ ಶಿವಯೋಗಿಗಳ ಲಿಂಗಾನುಷ್ಠಾನಕ್ಕಾಗಿ, ನಿತ್ಯದಾಸೋಹಕ್ಕಾಗಿ ಕಾಣಿಕೆಗಳನ್ನು ಸ್ವೇತ ಛತ್ರ ಹಗಲು ದೀವಟಿಗೆ ಇತ್ಯಾದಿ ಬಿರುದು ಬಾವಲಿಗಳನ್ನು ಇತ್ತು ಗೌರವಿಸಿದ್ದಾನೆ. ಅಲ್ಲದೇ ಜೇವರಗಿ ಶ್ರೀ ಮಠದ ಮಹಾಕೋಟೆಯ ಗೋಡೆಯನ್ನು ಕಟ್ಟಿಸಿ ಕೃತಾರ್ಥನಾದ ಬಗ್ಗೆ ಶ್ರೀ ಮಠದ ಕೋಟೆಯಗೋಡೆಯಲ್ಲಿ ಸಿಕ್ಕುವ ಒಂದು ಶಿಲಾಶಾಸನದಿಂದ ವಿಧಿತವಾಗುತ್ತದೆ.

ಕರ್ನಾಟಕದ ಉತ್ತರದ ತುದಿಯಲ್ಲಿರುವ ಜೇವರಗಿಯ ಷಣ್ಮುಖ ಶಿವಯೋಗೀಶ್ವರ ಮಠದ ಮೂಲ ಪುರುಷರು ಅಖಂಡೇಶ್ವರರು. ಆ ಪರಂಪರೆಯಲ್ಲಿ ೧೬ ನೇ ಶತಮಾನಯಲ್ಲಿ ಬಂದ ಅಖಂಡೇಶ್ವರರು ಬೆಳಗಾಂವಿ ಕಡೆಯಿಂದ ಬಂದವರೆಂದು ಈ ವರೆಗೂ ನಂಬಲಾಗಿತ್ತು ಆದರೆ ದಕ್ಷಿಣದ ಶಿವಮೊಗ್ಗಾ ಜಿಲ್ಲೆಯ ಆರಗ ಗ್ರಾಮದಿಂದ ಬಂದವರೆಂಬುದು ಶಾಸನ ಒಂದರಿಂದ ಗೊತ್ತಾಗುತ್ತದೆ.

೧೫ ನೇ ಶತಮಾನದಲ್ಲಿ ದಕ್ಷಿಣದ ಆರಗದಲ್ಲಿ ಮೊಳಕೆಯೊಡೆದ ನಿರಂಜನ ವಂಶ ವಲ್ಲರಿಯು ಉತ್ತರದ ಜೇವರಗಿಯ ಪರ್ಯಂತರ

ಹಬ್ಬಿ ೨೦ ನೇ ರು ಶತಮಾನದ ವರೆಗೂ ಸಾಗಿಬಂದುದು ಅವಿಸ್ಮರ ಣೀಯ ಐತಿಹಾಸಿಕ ಸಂಗತಿ.

ಅಖಂಡೇಶ್ವರರು ಬಸವಣ್ಣನವರಿಂದ ಪಾವನವಾದ ಕಲ್ಯಾಣ ವನ್ನು ಕಾಣಬೇಕೆಂದು ಅರಗದಿಂದ ಹೊರಟವರು ಸಂಚರಿಸುತ್ತಾ ಧಾರವಾಡ ಜಿಲ್ಲೆಯ ಕಳಸಕ್ಕೆ ಬರುತ್ತಾರೆ. ಅಲ್ಲಿ ಲೀಲೆಗಳನ್ನೆಸಗಿ ಮಠವಂದನ್ನು ಸಂಸ್ಥಾಪಿಸಿ ಶ್ರೀ ವ ಠಕ್ಕೆ ಯೋಗ್ಯಸ್ವಾಮಿಗೆ ನಿರಂ ಜನ ಪಟ್ಟವಗಟ್ಟಿ ತಮ್ಮ ಪಯಣ ಮುಂದುವರಿಸುತ್ತಾರೆ. ಜೇವರ ಗಿಗೆ ಬರುತಾ ರೆ. ಹಳ್ಳದ ದಂಡೆಯಲ್ಲಿ ಸ್ವಯಂಭುವಾ ಕಲ್ಲಿನ ಶಿಲೆ ಯಿಂದ ಹೊರಬರುತ್ತಿರುವ ಬುಗ್ಗಿ ಯ ದಡದಲ್ಲಿ ಸ್ನಾನ ಶಿವಾರ್ಚನೆ ತೀರಿಸುತ್ತಾರೆ. ಅಲ್ಲಿನ ಮಲಶೆಟ್ಟಿಗೌಡರ ನಿರ್ಮಳ ಭಕ್ತಿಯನ್ನು ಸ್ವೀಕ ರಿಸುತ್ತಾರೆ. ಗೌಡರ ಮನೆಯಲ್ಲಿ ಅಖಂಡೇಶ್ವರ ಸ್ವಾಮಿಗಳೊಡನೆ ಭಕ್ತರು ಮಾಡಿದ ಧರ್ಮಜಿಜ್ಞಾಸೆ ಶುಷ್ಕವಾಗಿರದ ಭಕ್ತಿರಸಭರಿತ ವಾಗಿ ಕುತುಹಲಕಾರಿಯಾಗಿದೆ ಭಕ್ತರು ಕೇಳುವ ಸಮಸ್ಯೆಗಳು ಎಲ್ಲರ ಸಮಸ್ಯೆಗಳೇ ಆಗಿವೆ. ಶಿವಯೋಗಿ ನೀಡುವ ಉತ್ತರದಿಂದ ಸಂದೇ ಹದ ಮೋಡಕವಿದ ಮನಾಕಾಶದಲ್ಲಿ ಮೋಡಕರಗಿ ಜ್ಞಾನ ಚಂದ್ರನ ಬೆಳದಿಂಗಳು ಆವರಿಸಿ ನೆಮ್ಮದಿ ನೀಡುತ್ತದೆ ಶ್ರೀಗಳವರ ಸೇವೆ ಯಲ್ಲಿ ನಿರತರಾದ ಗೌಡರ ಧರ್ಮಪತ್ನಿ ದೊಡ್ಡಮ್ಮ ಗೌಡತಿ ಶುಚಿ ಜೀವನದ ಸಾತ್ವಿಕ ಸತಿ ಓದುಗರ ಗೌರವಾದರಗಳಿಗೆ ಪಾತ್ರಳಾಗು ತ್ತಾಳೆ. ದಯಾಳು ಸತಿಪತಿಗಳೀರ್ವರು, ಸಮರ್ಪಣಭಾವದಿಂದ ದಾಸೋಹ ಸೇವೆಯಲ್ಲಿ ನಿರತರಾಗಿರುತ್ತಾರೆ. ಸಂಪತ್ತಿಗೇನು ಕೊರತೆ ಇರಲಿಲ್ಲ ಆದರೆ ವಂಶಬೆಳಗುವ ಸಂತಾನದ ಕೊರತೆ ಮಾತ್ರ ಇತ್ತು. ಇಪ್ಪತ್ತು ವರ್ಷಗಳ ನಂತರ ಸತಿಗೆ ಕನಸಿನಲ್ಲಿ ಜಂಗಮದರ್ಶನ ಪತಿಯ ಕನಸಿನಲ್ಲಿ ಜ್ಯೋತಿಯ ದರ್ಶನವಾಗುತ್ತದೆ. ಇವರಿಬ್ಬರ ಕನಸ್ಸಿನ ಅರ್ಥವನ್ನು ಅರಿತರೆ ಇವರಿಗೆ ಪುತ್ರನಾಗುವನು ಅಷ್ಟೇ ಅಲ್ಲ ಅವನು ಜಂಗಮ ಜ್ಯೋತಿಯಾಗುವನೆಂಬ ಸಂಕೇತ ಸುವ್ಯಕ್ತ ವಾಗುತ್ತದೆ.

ಶುಭಮುಹೂರ್ತದಲ್ಲಿ ಜನಿಸಿದ ಶಿಸುವಿಗೆ ಗುರುವಿನಾಣತಿ ಯಂತೆ "ಷಣ್ಮುಖ" ಎಂಬ ನಾಮಕರಣವಾಗುವದು. ಈ ಶಿಸು ವಿನ ಬಾಲಲೀಲೆಗಳು ಸಾಮಾನ್ಯ ಶಿಸುವಿನಂತಿರದೇ ಆಧ್ಯಾತ್ಮಿಕ ಸಂಕೇತಗಳನ್ನು ಸೂಚಿಸುವಂತಿರುವದನ್ನು ಲೇಖಕರು ರಮ್ಯ ಮನೋಹರವಾಗಿ ಚಿತ್ರಿಸಿದ್ದಾರೆ. ಷಣ್ಮುಖಗೌಡ ಷಣ್ಮುಖಸ್ವಾಮಿ ಯಾದ ಸಂದರ್ಬದ ಚಿತ್ರಣ ಆಕರ್ಷಕ ಪರಿಣಾಮಕಾರಿ.

ಷಣ್ಮುಖಸ್ವಾಮಿಗಳು ಚರಜಂಗಮನಾಗಿ ಹಲವಾರು ಹಳ್ಳಿ ಪಟ್ಟಣಗಳನ್ನು ಸಂಚರಿಸುತ್ತಾರೆ. ಜೋಗುರು, ಹಿರೆಕೌಲಗಿ. ಚಿಕ್ಕೌ ಲಗಿ, ಕಲಬುರ್ಗಿ, ತಾಂಬಾಳ ಮುಂತಾದ ಊರುಗಳನ್ನು ಸುತ್ತಿ, ದಕ್ಷಿಣದ ರಾಮೇಶ್ವರ, ಮಧುರೆಗಳಲ್ಲಿ ತಪಾನುಷ್ಠಾನ ಗೈಯುತ್ತಾರೆ ಕನ್ಯಾಕುಮಾರಿ ವರೆಗೆ ಹೋಗಿ ಮರಳಿ ಕುಂಬಕೋಣ, ಕಂಚಿ, ಬೇಲೂರು, ಹಳೆಬೀಡು. ಶ್ರೀಶೈಲ. ಹಂಪೆಗಳನ್ನು ಸಂದರ್ಶಿಸಿ ಜೇವರಗಿ ಹತ್ತಿರದ ಜೋಗಿಕೊಳ್ಳಕ್ಕೆ ಬರುತ್ತಾರೆ. ನಂತರ ಕೋಳ ಕೊರು, ಮುದೆನೂರ, ಕೂಡಲಸಂಗಮ. ತಂಗಡಗಿ. ಮದ್ದರಕಿ. ಅಮೀನಗೌಡ. ಮುದ್ದೇಬಿಹಾಳ, ತೆಲಗಬಾಳ. ಗೌನಳ್ಳಿ, ಚಿನ್ಮಳ್ಳಿ, ನೆಲ್ಲಗಿ, ನರಿಬೋಳ. ಆಲೂರ ಚಿತಾಪೂರ. ಸುರಪುರ ಮುಂತಾದ ಗ್ರಾಮನಗರಗಳನ್ನು ತಮ್ಮ ಪಾದಾರ್ಪಣದಿಂದ ಪವಿತ್ರಗೊಳಿಸು ತ್ತಾರೆ. ಅಖಂಡೇಶ್ವರ ಅಂಕಿತದಲ್ಲಿ ತಾವೆ ಬರೆದ ವಚನಗಳನ್ನು ಹಾಗೂ ನಿರಾಳ ಸದ್ಗುರು ಸ್ತೋತ್ರ. ಪಂಚ ಸಂಜ್ಞಗಳನ್ನು ಷಟ್ಪದಿ ರೂಪದಲ್ಲಿ ಬರೆದಿದ್ದಾರೆ. ಇತ್ತೀಚಿಗೆ ಅವರೇ ಬರೆದಿರುವ ಅಪೂರ್ಣ ವಿದ್ದ ಕಾಲಜ್ಞಾನ ಸಿಕ್ಕುತ್ತದೆ. ಇವೆಲ್ಲವುಗಳನ್ನು ಬರೆದು ಭಕ್ತ ಜನ ರನ್ನು ಜಾಗ್ರತಗೊಳಿಸುತ್ತಾರೆ.

ಶಿವಯೋಗಿಗಳು ಗೈದ ಲೀಲೆ ಅಸಂಖ್ಯ ಅವುಗಳಲ್ಲಿ ಕೆಲವನ್ನು ಲೇಖಕರು ಹೃದಯಂಗಮವಾಗಿ ಬಣ್ಣಿಸಿದ್ದಾರೆ. ಆಕಳನ್ನು ಹಿಡಿ ಯಲು ಉಗ್ರವಾಗಿ ಬಂದ ಹುಲಿ ಶಿವಯೋಗಿಗಳ ತಪ ಪ್ರಭಾವ

ದಿಂದ ಸೌಮ್ಯವಾಗಿ ಹೋದುದು ಕುಷ್ಠರೋಗಿಯೊಬ್ಬ ನಿತ್ಯ ಅವರ ಶಿವಾನುಭವವನ್ನು ಕೇಳಿ ತನ್ನ ರೋಗ ಕಳೆದುಕೊಂಡುದು, ಬ್ರಹ್ಮರಾಕ್ಷಶಿಯ ಪೀಡೆಯನ್ನು ತೊಲಗಿಸಿದುದು, ಶ್ರೀಗಳವರ ತಪ ಪ್ರಭಾವಕ್ಕೆ ಮಣಿದು ತಾಂಬಾಳದ ಜಾಹಾಗೀರದಾರ ನಿಜಾಂಅಲಿ ಬುವಾ ತನಗೂ ತನ್ನ ಕುಟುಂಬಕ್ಕೂ ಶ್ರೀಗಳವರಿಂದ ಶಿವದೀಕ್ಷೆ ಲಿಂಗಧಾರಣೆ ಮಾಡಿಸಿಕೊಂಡುದು ಮಳಲ ಬಿತ್ತಿ ಬೆಳೆ ತಂದು ರೈತನ ಬಡತನ ನೀಗಿಸಿದುದು ಹೊಳೆಯ ಮಡುವಿನಲ್ಲಿ ಮುಳುಗಿಸತ್ತ ಮುದುಕಿಯನ್ನು ಬದುಕಿಸಿದುದು ಸಹಸ್ರಾರು ಜನ ಉಂಡರೂ ಪ್ರಸಾದದ ಹಂಡೆ ಬರಿದಾಗದೇ ಅಕ್ಷಯವಾದುದು ಬರಗಾಲದ ಬವಣೆಯಿಂದ ಬಳಲುತ್ತಿದ್ದಾಗ ಮಳೆ ತರಿಸಿ ಸಕಲ ಜೀವರಾಸಿಗಳಿಗೆ ಕಳೆತಂದುದು ಕೊಬ್ಬರಿ ಕಾಕುಳ್ಳ ಆದುದು ಶ್ರೀಗಳವರ ಕೃಪೆಯಿಂದ ಕಾಕುಳ್ಳು ಮತ್ತೆ ಕೊಬ್ಬರಿಯಾದುದು ಕಲ್ಲು ಕುಟಿಕನ ಕಿತ್ತ ಕಣ್ಣನ್ನು ಮತ್ತೆ ಮೊದಲಿನಂತೆ ಹಚ್ಚಿದುದು ಪಟ್ಟಣಶೆಟ್ಟಿ (ನಿಷ್ಟೆ) ವೀರಭದ್ರಪ್ಪನು ಶ್ರೀಗಳ ಕೃಪೆಯಿಂದ ಸುರುಪುರ ದೊರೆಯ ಮಂತ್ರಿಯಾದುದು ಇವೆಲ್ಲ ಲೀಲೆಗಳು ಶ್ರೀಗಳವರ ಲಿಂಗಪೂಜಾ ಪ್ರಭಾವದ ಪ್ರತೀಕಗಳಾಗಿವೆ ವೀರವೈರಾಗ್ಯದ ಉಜ್ವಲ ನಿದರ್ಶನಗಳಾಗಿವೆ. ಸತ್ ಸಂಕಲ್ಪದ ಸಂಕೇತಗಳಾಗಿವೆ.

ವಯೋವೃದ್ಧರಾದ ಗುರು ಅಖಂಡೇಶ್ವರರು ವೀರವೀರಾಗಿ ಷಣ್ಮುಖೀವರನ್ನು ಪೀಠಾಧಿಕಾರಿಯಾಗಲು ಮನಒಲಿಸಿದ ರೀತಿ ಹೃದ್ಯ ಅವರೀರ್ವರ ಸಂಭಾಷಣೆಯಲ್ಲಿಯ ನಿಜವಿರಕ್ತನ ಲಕ್ಷಣಗಳು ಮನನೀಯ! ಅನುಕರಣೀಯ ಪಿಠಾರೋಹಣ ಸಮಾರಂಭದ ವೈವಿಧ್ಯಮಯ ವೈಭವದ ಚಿತ್ರ ಕಣ್ಮುಂದೆ ಕಟ್ಟಿದಂತಿದೆ.

ಜೊಚ್ಚಿಲು ಈದ ಆಕಳ ಗಿಣ್ಣ ಹಳೆಯ ಜೋಳದ ಉದುರು ಗಡಬು ಬಯಸಿ ಬಂದ ಜಂಗಮನ ಪೂಜೆಯನ್ನು ಶಿವಯೋಗಿಗಳು ಮಾಡಿದ ರೀತಿ ಅನುಭವ ಪೂರ್ಣವಾಗಿ ವರ್ಣಿತವಾಗಿದೆ. ಜಂಗಮ

ತಂದ ಎತ್ತು ಕೊಂಬಿಗೆ ಕಟ್ಟಿದ ಜೋಳಿಗೆಯಲ್ಲಿ ಕಂತಿಬಿಕ್ಷೆ ಮಾಡಿ ಮಠಕ್ಕೆ ಬರುತ್ತಿರುವದು ನಿಜಕ್ಕೂ ಹೃದಯಸ್ಪರ್ಶಿ.

ಮದುವೆಯಂದು ಮಾಯಾದೇವಿಗೆ ಮಹಾಅಸ್ತು ಅದನ್ನೆಸೆದಾಗ ಉರುಳಿ ಬೆಳೆದ ನರರು ತೀರ ವಿರಳ ಈಗ ಆ ಬಾಣ ಬಿಲ್ಲಿಗೇರಿತು "ಇಂಥ ರೂಪಕ ಹನುಮಂತ ಸಮುದ್ರಕ್ಕೆ ಹಾರಿದಂತೆ ಸಂಸಾರ ಸಮುದ್ರ ಹಾರಿ ಬಂದಿದ್ದೇವೆ ಎಂಬ ವಿವರಣೆಗಳು ತೀರ ವಿರಳ" ಇಂಥ ಉಪಮೆಗಳಿಂದಾಗಿ ಶೈಲಿ ಆಕರ್ಷಕವಾಗಿದೆ. ಮಧ್ಯ ಮಧ್ಯ ಬಸವಾದಿ ಪ್ರಮಥರ ಹಾಗೂ ಷಣ್ಮುಖ ಶಿವಯೋಗಿಗಳ ವಚನಗಳನ್ನು ಸಂದರ್ಬಿಕವಾಗಿ ಬಳಸಿದುದರಿಂದ ವಿಷಯ ನಿರೂಪಣೆ ಸತ್ವಯುತವಾಗಿದೆ.

"ಜ್ಞಾನ ಜಲದ ಶೆಲೆ ಬಂದುದು ಎಲ್ಲಿಂದ?" ಎಂಬ ವಿಭಾಗದಿಂದ ಮೊದಲಾಗಿ ಮಠದ ಮುನ್ನಡೆ ಎಂಬ ವಿಭಾಗದಲ್ಲಿ ಮುಕ್ತಾಯವಾಗುವ ಈ ಕೃತಿ ಹದಿಮೂರು ವಿಭಾಗಗಳನ್ನೊಳಗೊಂಡಿದೆ ಸರಳ ಸುಂದರ ಶೈಲಿಯಲ್ಲಿ ಬಂದ ಈ ಕೃತಿಯನ್ನು ಸರ್ವರೂ ಓದಿ ಆನಂದಿಸಬಹುದಾಗಿದೆ.

ಪ್ರೊ. ಸಂಗಮೇಶ ಹಂಡಗಿ
ಎಂ. ಎ. ಡಿ. ಪಿ. ಎ.
ಮುಖ್ಯಸ್ಥರು ಕನ್ನಡವಿಭಾಗ
ಶ್ರೀ ಶಂಕರ ಮಹಾವಿದ್ಯಾಲಯ

ಲೇಖಕನ ಅರಿಕೆ

"ಸ್ವಯಂಜ್ಯೋತಿ" ಗ್ರಂಥ ಬರೆಯುವದು ನನ್ನ ಪಾಲಿಗೆ ಬಂದುದು ನನ್ನ ಸುದೈವವೆಂದು ಭಾವಿಸುತ್ತೇನೆ ಸುಮಾರು ಹತ್ತು ವರ್ಷಗಳಿಂದ ಸ್ವಯಂಜ್ಯೋತಿ ಶ್ರೀ ಷಣ್ಮುಖ ಶಿವಯೋಗಿಗಳ ವಿಷಯ ನನ್ನ ತಲೆಯಲ್ಲಿ ನಿನದಿಸುತ್ತಿದೆ. ಅದು ಬಂದುದು ಜೇವರಗಿ ಷಣ್ಮುಖ ಶಿವಯೋಗೇಶ್ವರ ಮಠದ ಪೀಠಾದಿಪತಿಗಳಾಗಿರುವ ಶ್ರೀ ಮ. ನಿ. ಪ್ರ. ಶಾಂತಲಿಂಗ ಮಹಾಶಿವಯೋಗಿಗಳ ಕೃಪೆಯಿಂದ. ಶ್ರೀಗಳು ಸ್ವತಹ ವಿದ್ವಾಂಸರು, ಜ್ಞಾನಿಗಳು, ಅನುಭಾವಿಗಳು. ಸಮಾಜದಲ್ಲಿ ಉನ್ನತಗೌರವಶಾಲಿಗಳು.

ಈ ಶತಮಾನದ ಮಧ್ಯಕಾಲದ ವರೆಗೆ ನಾಡಿನ ಜನರಿಗೆ ಅಖಂಡೇಶ್ವರ ವಚನಗಳ ಪರಿಚಯ ಮಾತ್ರ ಇತ್ತಲ್ಲದೆ ಅವುಗಳ ಕರ್ತೃ ಶ್ರೀ ಷಣ್ಮುಖ ಶಿವಯೋಗಿಗಳ ಬಗೆಗಾಗಲಿ ಮಠದ ಐತಿಹ್ಯದ ಬಗೆಗಾಗಲಿ ಬಹುಶ: ಗೊತ್ತಿರಲಿಲ್ಲ ಈ ಅನವಸ್ಥೆಯನ್ನು ಅರಿತ ಶ್ರೀ ಶಾಂತಲಿಂಗ ಸ್ವಾಮಿಗಳು ಕಾಲದ ಮರೆಗಿದ್ದ ಮಠದ ಇತಿಹಾಸವನ್ನು ಮೂಲ ಕರ್ತೃಗಳಾದ ಶ್ರೀ ಅಖಂಡೇಶ್ವರ ಶ್ರೀ ಷಣ್ಮುಖೇಶ್ವರ ಶಿವಯೋಗಿಗಳವರ ಚರಿತ್ರೆಗಳನ್ನು ಶೋಧಿಸಿ ಬೆಳಕಿಗೆ ತರುವದರಲ್ಲಿ ಸತತ ನಿರತರಾದರು ತಮ್ಮ ಅಧೀನ ಮಠಗ

ಳಲ್ಲಿ ದೊರೆವ ಹಳೆಯ ದಾಖಲೆಗಳನ್ನೆಲ್ಲ ಸಂಗ್ರಹಿಸಿದರು. ಅವುಗಳನ್ನು ಕುರಿತು ಅಖಂಡೇಶ್ವರ ವಚನಗಳ ಔನ್ನತ್ಯವನ್ನು ಕುರಿತು ವಿದ್ವಾಂಸರಿಂದ ಲೇಖನಗಳನ್ನು ಬರೆಯಿಸಿ ಸ್ಮಾರಕ ಗ್ರಂಥ ಪ್ರಕಟಿಸಿದರು ಕ್ರಮವಾಗಿ ಅಖಂಡೇಶ್ವರ ಗ್ರಂಥಮಾಲೆಯನ್ನು ಆರಂಭಿಸಿ ಈ ಕಾರ್ಯ ವ್ಯವಸ್ಥಿತವಾಗಿ ನಡೆಯುವಂತೆ ಮಾಡಿದ್ದಾರೆ. ಇದರಲ್ಲಿ ಶ್ರೀಗಳಿಂದ ಧಾರ್ಮಿಕ ಸಾಹಿತ್ತಿಕ ಸಾಮಾಜಿಕ ಸೇವೆ ಪರೋಕ್ಷವಾಗಿ ಸಲ್ಲುತ್ತದೆ. ಶ್ರೀ ಶಿವಯೋಗಿಗಳ ಪವಿತ್ರ ಹಾಗೂ ಘನ ಬದುಕಿನ ವಿವರಣೆಯನ್ನು ಗ್ರಂಥದ ಕೊನೆಯ ಅಧ್ಯಾಯದಲ್ಲಿ ಕಾಣಬೇಕು. ಡಾ. ವ್ಹಿ. ಶಿವಾನಂದ ಎಂ.ಎ.ಪಿ.ಎಚ್.ಡಿ. ಅವರು ಶ್ರೀಗಳವರ ಸಾಹಸಕ್ಕೆ ತುಂಬ ನೆರವಾದ ಸ್ಥಾನದಲ್ಲಿದ್ದಾರೆ.

ಮೊದಲು ಅಖಂಡೇಶ್ವರ ವಚನಗಳಿಂದ ಪ್ರಭಾವಿತನಾದ ನಾನು ಅವುಗಳ ಕರ್ತೃ ಶ್ರೀ ಷಣ್ಮುಖ ಶಿವಯೋಗಿಗಳ "ಆ ಬೆಳಗು ಬಾಳಿನ" ಪುಣ್ಯಸ್ಥಲವನ್ನು ನೋಡಲು ಬಯಸಿ ಕಲಬುರ್ಗಿಯಿಂದ ವಿಜಾಪೂರಕ್ಕೆ ಬರುವಾಗ ಜೇವರಗಿಗೆ ಇಳಿದೆನು. ಮಠಕ್ಕೆ ಹೋದೆನು ನನ್ನ ನಾಲ್ಕೈದು ಕೃತಿಗಳ ಪ್ರತಿಗಳನ್ನು ಕಿರುಕಾಣಿಕೆಯಾಗಿ ಶ್ರೀ ಶಾಂತಲಿಂಗ ಮಹಾಸ್ವಾಮಿಗಳ ಪಾದಕ್ಕೆ ಅರ್ಪಿಸಿ ದರ್ಶನ ಪಡೆದೆನು. ನನ್ನ ಪರಿಚಯ ಕೇಳಿಕೊಂಡು ಶಿವಯೋಗಿಗಳು ಪ್ರೇಮಾದರದಿಂದ ಪರಾಮರ್ಶಿಸಿದರು. ನನ್ನ ಆ ಕೃತಿಗಳನ್ನು ಒಂದು ಗಳಿಗೆ ಅವಲೋಕಿಸಿ "ನಮ್ಮ ಮಠಕೊಂದು ನಿಮ್ಮ ಸೇವೆ ಸಲ್ಲಲಿ" ಎಂದು ಅಪ್ಪಣೆ ಮಾಡಿದರು. "ಆ ಮಹಾಶಿವಯೋಗಿ ಬಲವಿತ್ತು ಮಾಡಿಸಿಕೊಂಡರೆ ಆಗಲಿ" ಎಂದು ಒಪ್ಪಿಕೊಂಡೆನು. ಈ ರೀತಿ ಮಠದ ಸಂಪರ್ಕ ಒದಗಿದುದರಲ್ಲಿ ಅವರ ಒಂದನೆಯ ನಿರೂಪಣೆಯಂತೆ ಬರೆದ ಕೃತಿ "ಭರತನೂರ ಬಯಲಮೂರ್ತಿ" ಎರಡನೆಯ

ನಿರೂಪಣೆ ಈಗ ಈ "ಸ್ವಯಂ ಜ್ಯೋತಿ" ಕಳೆದ ದಶಕದಲ್ಲಿ ಮಹಾಸ್ವಾಮಿಗಳವರು ಗುಂಜಿಹಳ್ಳಿ ಷಡಕ್ಷರಿ ಕವಿಗಳಿಂದ "ಶ್ರೀ ಷಣ್ಮುಖ ಶಿವಯೋಗೀಶ್ವರ ಕಾವ್ಯರತ್ನಾಕರ" ಎಂಬ ಪುರಾಣಕಾವ್ಯ ವನ್ನು ಬರೆಯಿಸಿದರು. ಈ ಕವಿಗಳು ವೀರಶೈವಾಚಾರ ಸಂಪನ್ನ ಸತ್ಕವಿಗಳು ಬಾಲ್ಯದಲ್ಲಿಯೇ ಇವರಿಗೆ ಕವಿತಾ ರಚನೆಯು ಒಲವು ಇದ್ದಿತು, ಇವರು ಬರೆದ ಸ್ತೋತ್ರ, ಹಾಡು, ಪದಮಂಜರಿ, ಶತಕ ನಾಮಾವಳಿ, ಅಷ್ಟಕ ಮುಂತಾದ ಚಿಕ್ಕ ಕೃತಿಗಳು ನೂರಾರು ಅವು ಸರಸವಾಗಿವೆ ಸುಂದರವಾಗಿವೆ ಅವರು ಬರೆದುದರಲ್ಲಿ ಪರಿಪೂರ್ಣ ಮಹಾಕಾವ್ಯ ಇದೊಂದೇ ಎಂದು ತೋರುತ್ತದೆ. ಮಧ್ಯಕಾಲದ ವೀರಶೈವ ಷಟ್ಪದಿ ಕಾವ್ಯಗಳ ಮಾದರಿಯಲ್ಲಿ ವಾರ್ಧಿಕ ಷಟ್ಪದಿಗ ಳಲ್ಲಿ ಸರಳ ನಿರರ್ಗಳ ಶೈಲಿಯಲ್ಲಿ ಈ ಕಾವ್ಯವನ್ನು ರಚಿಸಿದ್ದಾರೆ. ಕಥಾನಾಯಕ ಷಣ್ಮುಖ ಶಿವಯೋಗಿಯು ಆತ್ಮುದಾತ್ತನಾದುದರಿಂದ ಕಾವ್ಯವು ವಿಮಲ ವಿಶ್ರಾಂತವಾಗಿದೆ.

ಸ್ವಯಂಜ್ಯೋತಿಗೆ ಈ ಪುರಾಣ ಕಾವ್ಯರತ್ನಾಕರವೇ ಮೂಲಾ ಧಾರ ಈ ಕಾವ್ಯಕ್ಕೆ ಮುನ್ನುಡಿ ಬರೆದ ಪಂಡಿತರತ್ನ ಆಸ್ಥಾನ ವಿದ್ವಾನ ಲಿಂ. ಬಿ. ಶಿವಮೂರ್ತಿ ಅವರ ಈ ಪುರಾಣ ಕಾವ್ಯದ ವಿಷಯವನ್ನು ಸರಳ ಗದ್ಯ ರೂಪದಲ್ಲಿ ಬರೆದು ಪ್ರಕಟಿಸಿದರೆ ಶ್ರೀ ಶಿವಯೋಗಿಯ ಜೀವನ ಚರಿತ್ರೆಯನ್ನು ತಿಳಿಯ ಬಯಸುವ ಸಾಮಾನ್ಯ ಓದುಗರಿಗೆ ಅನುಕೂಲವಾಗುವದು ಎಂಬ ಸಲಹೆ ಯನ್ನು ಶ್ರೀ ಮಹಾಸ್ವಾಮಿಗಳವರು ತುಂಬ ಗಮನಿಸಿದ್ದಾರೆ.

೧೯೭೭ ರಲ್ಲಿ ಶ್ರೀಗಳವರು ಈ ಬಗೆಯ ತಮ್ಮ ಆದೇಶ ದೊಡನೆ ಕಾವ್ಯವನ್ನು ನನ್ನ ಕಡೆಗೆ ಕಳಿಸಿದರು ಹಾಗೂ ಕಾಲಕಾಲಕ್ಕೆ

ತಮ್ಮ ಶೋಧನೆಗಳಲ್ಲಿ ಮೂಡಿಬಂದ ಹೊಸ ಸಂಗತಿಗಳನ್ನು ತಿಳಿಸುತ್ತಿದ್ದರು. ಅವುಗಳಲ್ಲಿ ಒಂದು ಅತೀ ಮುಖ್ಯವಾದ ಸಂಗತಿ ಎಂದರೆ ಇದುವರೆಗೆ ಅಖಂಡೇಶ್ವರರು ಬೆಳಗಾಂವಿ ಕಡೆಯಿಂದ ಬಂದವರೆಂಬುದನ್ನಷ್ಟೇ ತಿಳಿಯಲಾಗಿತ್ತು. ಶ್ರೀಗಳು ಶಾಸನದ ಆಧಾರದಿಂದ ಅಖಂಡೇಶ್ವರರು ಅರಗದ ಮಠಾಧೀಶರೆಂದು ಅಲ್ಲಿಂದ ಕಳಸಕ್ಕೆ ಬಂದು ಕೆಲದಿನವಿದ್ದು ಅಲ್ಲೊಂದು ಮಠ ಸ್ಥಾಪನೆ ಮಾಡಿ ಕಲ್ಯಾಣ ಕುರಿತು ಉತ್ತರಕ್ಕೆ ಬಂದರೆಂದು ಗೊತ್ತಾದುದು ಇದರಿಂದ ಚರಿತ್ರೆಯ ಮೇಲೆ ಹೊಸ ಬೆಳಕು ಬಿದ್ದಿತು. ಸ್ವಯಂ ಜ್ಯೋತಿಯ ಮೂಲ ಹಸ್ತಪ್ರತಿ ಜೇವರಗಿ ಮಠಕ್ಕೆ ಕಳಿಸಲ್ಪಟ್ಟ ಬಳಿಕ ಈ ಹೊಸ ಸಂಗತಿ ಬಂದಿತು. ಈ ಸಂದರ್ಭದ "ಜ್ಞಾನ ಜಲದ ಸೆಲೆ ಬಂದುದು ಎಲ್ಲಿಂದ?" ಎಂಬ ಹೆಸರಿನ ಮೊದಲನೆಯ ಅಧ್ಯಾಯ ಮಾಡಿ ಸೇರಿಸಲಾಗಿತ್ತು. (ಮುದ್ರಣದಲ್ಲಿ ಇದನ್ನು ಬಂದ ಎಲ್ಲ ಪುಟಗಳ ತಲೆಯ ಮೇಲೆ ಎಳೆದದ್ದು ಸುಸಂಬದ್ಧವಾಗಿಲ್ಲ.)

ಶ್ರೀ ಷಣ್ಮುಖ ಶಿವಯೋಗಿಗಳ ಲೀಲಾ ಜೀವನವು ಕಾವ್ಯದ ಪ್ರಧಾನ ವಿಷಯವು ಈ ಗದ್ಯಗ್ರಂಥದಲ್ಲಿ ಶಿವಯೋಗಿಯ ಉನ್ನತವಾದ ಆಧ್ಯಾತ್ಮ ಜೀವನವನ್ನು ದಾರ್ಶನಿಕತೆಯನ್ನು ಅಭಿವ್ಯಕ್ತಗೊಳಿಸಲು ಯತ್ನಿಸಲಾಗಿದೆ. ಅದಕ್ಕನುಗುಣವಾಗುವಂತೆ ಸನ್ನಿವೇಶ ಚಿತ್ರಣದಲ್ಲಿ ಕೆಲವು ತಕ್ಕ ಬದಲಾವಣೆ ಮಾಡಿಕೊಂಡಿದ್ದೇವೆ ಅವರ ದಿವ್ಯ ಅನುಭೂತಿಗೆ ಕನ್ನಡಿಯಾಗಿರುವ ವಚನಗಳಲ್ಲಿ ಪುಸ್ತಕದ ಇತಿಮಿತಿಗೆ ಒಳಪಟ್ಟ ಕೆಲವನ್ನು ಬಳಸಿಕೊಂಡಿದೇವೆ. ಗ್ರಂಥವು ಕತೆ ರೂಪಕ ಚರಿತ್ರೆ ಇವುಗಳ ಸಮ್ಮಿಶ್ರ ಸ್ವರೂಪವಾಗಿದೆ ಯಶಸ್ಸು ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ನಾನು ತಿಳಿಯಲಾರೆ.

ಓದುಗರಲ್ಲಿ ಒಂದು ಪ್ರಾರ್ಥನೆ


ಶ್ರೀ ಸ್ವಾಮಿಗಳವರು ಈ ಗ್ರಂಥವನ್ನು ಅಚ್ಚುಹಾಕಿಸಲು ಒಂದು ಅಚ್ಚುಕೂಟಕ್ಕೆ (ಮುಂಗಡಪೂರ್ಣಹಣಕೊಟ್ಟು) ವಹಿಸಿಕೊಟ್ಟರು, ಆದರೆ ಆ ಅಚ್ಚುಕೂಟದವರ ಮೂರುವರೆ ವರ್ಷಕ್ಕೆ ಮಿಕ್ಕಿದ ವಿಲಂಬದಲ್ಲಿ ಗ್ರಂಥವು ಸಿಕ್ಕಿಹಾಕಿಕೊಂಡಿತು. ಅಚ್ಚಿನ ಕರಡು ತಿದ್ದುವ ಹೇಣೆಗಾರ ಮೇಲ್ವಿಚಾರಕರು ಅಚ್ಚಿನಾಲಯಕ್ಕೆ ಎಡತಾಕಂವದು ವ್ಯರ್ಥವಾಗುತ್ತಿರುವದಕ್ಕೆ ಬೇಜಾರಗೊಂಡು ಅದಕ್ಷರಾಗಿರಬಹುದಾದ ಕಾರಣ ಮುದ್ರಣದೋಷಗಳು ಪುಸ್ತಕದಲ್ಲೆಲ್ಲ ತುಂಬ ಹರಡಿಕೊಂಡಿವೆ. ಕೇವಲ ಅರ್ಥಾಂತರಗೊಳಿಸುವ ಹಾಗೂ ಅಪಾರ್ಥಗೊಳಿಸುವ ತಪ್ಪುಗಳಿಗಾಗಿ ಮಾತ್ರ (ಮತ್ತು ಬಿಟ್ಟುಹೋಗಿರುವ ಅಧ್ಯಾಯದ ಹೆಸರುಗಳಿಗಾಗಿ) ಒಂದು ದೀರ್ಘ ಒಪ್ಪೋಲೆಯನ್ನು ಕೊಟ್ಟಿದೆ ದಯವಿಟ್ಟು ಅದರಂತೆ ತಿದ್ದಿಕೊಂಡು ಓದಬೇಕಾಗಿ ವಿನಂತಿಸುವೆ

ಜನಸಾಮಾನ್ಯರ ಮನ ಬುದ್ಧಿಗಳನ್ನು ಮಹಾವಿಭೂತಿಯ ಆಧ್ಯಾತ್ಮಿಕ ಪ್ರಕಾಶವು ಬೆಳಗಲೆಂಬ ಘನ ಉದ್ದೇಶದಿಂದ ಈ ಗ್ರಂಥದ ಪ್ರಕಾಶನ ಕಾರ್ಯವನ್ನು ಶ್ರೀ ಶಾಂತಲಿಂಗ ಮಹಾಸ್ವಾಮಿಗಳವರು ಹಮ್ಮಿಕೊಂಡರು, ಆದರೆ ಅವರ ಈ ಕಾರ್ಯಕ್ಕೆ ಇದು ಕಾರಣಿಕ ಮಹಾಶಿವಯೋಗಿಯ ಚರಿತ್ರೆ ಎಂಬುದನ್ನು ಗಣಿಸದ ಪರಮೋದ್ಧಾರ ದಾನಿಯ ಭಕ್ತಿಭಾವನೆಯನ್ನು ಗೌರವಿಸದ ನುಡಿದ

ಮಾತಿನ ಹಾಗೂ ಕರ್ತವ್ಯದ ಪ್ರಜ್ಞೆ ಇಲ್ಲದ ಜನರಿಂದ "ಅಸಡ್ಡೆ"ಯ ಆತಂಕ ದೀರ್ಘಕಾಲ ಎದುರಾಯಿತು ಆದರೂ ಶ್ರೀಗಳು ಹಿಂಜರಿಯದೆ ಅದನ್ನು ಎದುರಿಸಿ ತಾಳ್ಮೆ–ಸಹನೆಗಳ ಮೂಲಕವೇ ಹೋರಾಡಿ ದಡ ತಲುಪಿದ್ದಾರೆ ಆದರಿಂದ ಸ್ವಭಿಮಾನ ಸಹಜವಾಗಿ ಕೃತಜ್ಞತೆಯೊಡನೆ ಅವರಿಂದ ಆಜ್ಞಾಪಿಸಲ್ಪಟ್ಟಂತೆ ಈ ಅಲ್ಪ ಸೇವೆಯನ್ನು ಪೂರೈಸಿ ಅವರ ಪಾದಗಳಿಗೆ ಅರ್ಪಿಸಿ ವಂದಿಸುತ್ತೇನೆ.

ಶ್ರೀ ಶಿವಯೋಗಿಗಳ ಕೋರಿಕೆಯನ್ನು ಹಾಗೂ ನನ್ನ ಮನವಿಗೆ ಮನಗೊಟ್ಟು ಪ್ರೊ. ಶ್ರೀ ಸಂಗಮೇಶ ಹಂಡಗಿ ಎಂ. ಎ. ಅವರು ಈ ಪುಸ್ತಕವನ್ನು ಕನ್ನಡಿಗರ ಕೈಯಲ್ಲಿ ತೆರೆಯುವಂತೆ ಔಚಿತ್ಯಪೂರ್ಣವಾಗಿ ಸುಂದರವಾದ ಮುನ್ನುಡಿಯನ್ನು ಬರೆಯುವ ಉಪಕಾರವೆಸಗಿದ್ದಾರೆ. ಹಳೆಯ ತಲೆಮಾರಿನ ಸಾಹಿತ್ಯಕ್ಕೂ ಆಧುನಿಕ ಸಾಹಿತ್ಯಕ್ಕೂ ಸೇತುವೆಯಂತೆ ಇದ್ದ ಅತ್ಯಂತ ಪರಿಣಿತ ಸಾಹಿತಿ ಶ್ರೀ ಸಂಗಮೇಶ ಹಂಡಗಿಯವರ ನನ್ನ ಸಾಹಿತ್ತಿಕ ಸ್ನೇಹಸಂಬಂಧ ಸ್ವಲ್ಪಕಾಲ ಸಂಭವಿಸಿತ್ತು. ೧೨ ವರ್ಷಗಳ ಅನಂತರ ಈ ಮುನ್ನುಡಿಯ ಸಂದರ್ಭ ಅಂದಿನ ಸವಿನೆನಪಿನ ಕಳೆಕೊಟ್ಟಿದೆ. ಅವರು "ಮಾಲುಡಿ" ತ್ರೈಮಾಸಿಕದ ಸಂಪಾದಕರಾಗಿ ಸ್ವತಂತ್ರ ಕೃತಿಗಳ ಕರ್ತರಾಗಿ ಜೀವನ ಕಾಯಕದೊಡನೆ ಸಾಹಿತ್ಯ ಸೇವಾ ನಿರತರೂ ಆಗಿದ್ದಾರೆ. ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಈ ಗ್ರಂಥ ಪ್ರಕಾಶನಕ್ಕೆ ಸಹಾಯ ಮಾಡಿದ ದಾನಿಗಳಿಗೂ ತಮ್ಮ ಕಲೆ ಹಾಗೂ ಇತರ ಸೇವೆಗಳಿಂದ ಶ್ರೀಗಳವರ ಸಾಹಸಕ್ಕೆ ನೆರವಾದ ಸೋಮಶೇಖರಯ್ಯ ಹಿರೇಮಠ ಶಿಕ್ಷಕ ಮಿತ್ರರಿಗೂ ಉಪಕೃತನಾಗಿದ್ದೇನೆ.



-:- ಅಖಂಡೇಶ್ವರ ವಚನ ಕರ್ತೃ -:-

ಸ್ವಯಂ ಜ್ಯೋತಿ ಶ್ರೀ ಷಣ್ಮುಖ ಶಿವಯೋಗಿಗಳು.

ಮಠಸ್ಥ ಜೇವರಗಿ.

ಪರಿವಿಡಿ

ಜ್ಞಾನ ಜಲದ ಸೆಲೆ ಬಂದದ್ದು ಎಲ್ಲಿಂದ?

ರಾಜಧಾನಿ ಅರಗ ನಗರದಲ್ಲಿ ಅಂದು ಉತ್ಸಾಹ ತುಂಬಿ ತುಳುಕುತ್ತಿತ್ತು. ಅರಮನೆಯ ಹೆಬ್ಬಾಗಿಲ ಮೇಲೆ ವಾದ್ಯಮೇಳ ಮೊಳಗುತ್ತಿದ್ದಿತು. ಅರಮನೆಯ ಎದುರಿನ ವಿಶಾಲವಾದ ರಾಜ್ಯಮಾರ್ಗ ನಾನಾ ಬಗೆಯಿಂದ ಅಲಂಕರಿಸಲ್ಪಟ್ಟಿತ್ತು. ಮಂಡಲಾಧಿಪತಿ ನಾಗ ಗಿರಿನಾಥರಾಯನು ವಿಜಯೋತ್ಸವದೊಡನೆ ಪುರ ಪ್ರವೇಶ ಸಮಾರಂಭವು ನಡೆಯಬೇಕಾಗಿದ್ದಿತು. ವಿಜಯನಗರ ಸಾಮ್ರಾಜ್ಯದ ಪಶ್ಚಿಮ ಭಾಗದ ಮೇಲೆ ನಾಡಿನಲ್ಲಿ ಮಾಪಿಳ್ಳೆಯರ ಬೇಡರ ಬೀಡುಗಾರರು ತಂಡ ತಂಡವಾಗಿ ದುರ್ಗಮವಾದ ಕೋಟೆಗಳನ್ನು ಹಿಡಿದುಕೊಂಡು ಗ್ರಾಮಗಳ ಮೇಲೆ ದಾಳಿ ಮಾಡುತ್ತಿದ್ದರು. ಮತಿತ ಬಲಿತು ಸ್ವತಂತ್ರರಾಗಲು ಯತ್ನಿಸುತ್ತಿದ್ದರು. ಒಟ್ಟಾಗಿ ವಿಜಯನಗರದ ದಳವನ್ನು ಎದುರಿಸಲು ಸಿದ್ಧರಾಗುತ್ತಿದ್ದರು. ಆ ಬೀಡುಗಾರರು ಒಡ್ಡು ಒಡೆದು ದಂಗೆಯನ್ನು ಅಡಗಿಸಲು ಚಕ್ರವರ್ತಿ ಪ್ರೌಢದೇವರಾಜನು ಗಿರಿನಾಥರಾಯನಿಗೆ ಅಜ್ಞೆ ಕಳಿಸಿದ್ದನು ವಿಜಯನಗರದಿಂದಲೂ ಒಂದು ದಲವನ್ನು ಅವನ ನೆರವಿಗೆ ಕಳಿಸಿದ್ದನು. ಸಮರದಲ್ಲಿ ಹೋರಾಡಿ ಗಿರಿನಾಥರಾಯನು ಬಂಡಾಯದ ಮುಖ್ಯರನ್ನು ಸೆರೆಹಿಡಿದು ವಿಜಯದ ವೃತ್ತಾಂತದೊಡನೆ ವಿಜಯನಗರಕ್ಕೆ ಕಳುಹಿಸಿ ತಮ್ಮ ರಾಜಧಾನಿಗೆ ಮರಳಿದ್ದನು. ಜನರು ಸಂತೋಷದಿಂದ ನಲಿದಾಡಿದ್ದರು.

ನಗರದ ನರನಾರಿಯರು ಒಳ್ಳೆಯ ಉಬ್ಬಿನಿಂದ ಮುಂಜಾವಿನಲ್ಲಿಯೇ ಓಡಾಡುತ್ತಿರುವುದಕ್ಕೆ ಇದೊಂದೇ ಕಾರಣವಿರಲಿಲ್ಲ. ಊರಿನ ಮಹೋನ್ನತ ಲಿಂಗತಪಸ್ವಿಗಳೂ ದರ್ಶನ-ಭಾಷಣ-ಬೋಧೆಗಳಿಂದ ಭಕ್ತರ ಹೃದಯಕ್ಕೆ ಬೆಳಕು ನೀಡುವವರೂ ಆಗಿದ್ದ ಅಖಂಡೇಶ್ವರ ಮಠದ

ಅಖಂಡೇಶ್ವರ ಶಿವಯೋಗಿಗಳು ಗುರುಮನೆಯ ಒಳಗಿನ ಯೋಗಸ್ಥಳದಲ್ಲಿ ಆರು ತಿಂಗಳು ಭಕ್ತರಿಗೆ ದರ್ಶನವಿಲ್ಲದೆ ಲಿಂಗಾನುಷ್ಠಾನಕ್ಕೆ ಕುಳಿತಿದ್ದರು. ಅವರು ಇಂದು ಆ ತಪಸ್ಸನ್ನು ಮುಕ್ತಾಯಗೊಳಿಸಿ ಹೊರಗೆ ಬರಲಿದ್ದಾರೆ. ತಮ್ಮ ಸ್ವಾಮಿಗಳ ದರ್ಶನಕ್ಕಾಗಿ ಭಕ್ತರ ಜಾತ್ರೆಯೇ ನೆರೆಯಲಿದೆ ಗಣಾರಾಧನೆಯ ಏರ್ಪಾಡು ನಡೆದಿದೆ.

ಅರಮನೆಯ ಮುಂದೆ ಆಡಳಿತದ ಅಧಿಕಾರಿಗಳೆಲ್ಲ ಕೂಡಿದರು. ತಮ್ಮ ದೊರೆಯನ್ನು ಗೌರವಿಸಿ ಕರೆತರಲು ಸನ್ನದ್ಧರಾದರು. ಗಿರಿನಾಥ ರಾಯನು ತನ್ನ ದಳದೊಡನೆ ನಗರದ ಮುಂದುಗಡೆ ಬಂದಿದ್ದನು. ನಾಗರಿಕರು ಅಧಿಕಾರಿಗಳು ಸಂಭ್ರಮದಿಂದ ಹೋಗಿ ಪುಷ್ಪ ಮಾಲೆಗಳಿಂದ ಸನ್ಮಾನಿಸಿ ಕೈಮುಗಿದು ಗೌರವಿಸಿ ಉತ್ಸವದೊಡನೆ ಅರಮನೆಗೆ ಕರೆದು ಕೊಂಡು ಬಂದರು. ಹೆಬ್ಬಾಗಿಲಲ್ಲಿ ರಾಣಿಯರು ಆರತಿ ಬೆಳಗಿ ನಿವಾಳಿ ತೆಗೆದರು. ಸ್ವಸ್ತಿವಾಚನವಾಯಿತು. ಜಯಘೋಷವಾದ ಬಳಿಕ ದೊರೆ ಅರಮನೆಯ ಒಳಗೆ ಹೋಗುವದು ಸಂಪ್ರದಾಯ! ಆದರೆ ಅವನು ಹಾಗೆ ಮಾಡಲಿಲ್ಲ. ಕುದುರೆಯಿಂದ ಇಳಿಯಲಿಲ್ಲ. ಅದನ್ನು ಮಠದ ಕಡೆಗೆ ಹೊರಳಿಸಿ ನಡೆದನು ಪರಿವಾರವು ಬೆಂಬಲಿಸಿತು.

ಅಖಂಡೇಶ್ವರ ಯತಿಗಳು ಹೊರಗೆ ಬಂದು ಪೀಠಸ್ಥರಾಗಿ ಸ್ವಲ್ಪ ಹೊತ್ತಾಗಿತ್ತು. ನಾ ನೀ ಎಂದು ಭಕ್ತರು ಹೂ ಹಣ್ಣು ಇಟ್ಟು ಸಾಷ್ಟಾಂಗ ವಾಗಿ ವಂದಿಸುತ್ತಿದ್ದರು. ಅಖಂಡೇಶ್ವರ ಸ್ವಾಮಿಗಳು ಲಿಂಗಸೇವೆ ಮಾಡಿ ಮಾಡಿ ಪುನೀತವಾಗಿದ್ದ ವರದ ಹಸ್ತವನ್ನೆತ್ತಿ ಮುಗುಳು ನಗೆಯಿಂದ ಸಂತಸಬೀರಿ ಆಶೀರ್ವದಿಸುತ್ತಿದ್ದರು. ಅಷ್ಟರಲ್ಲಿ ದೊರೆಗಳು ಬಂದರು. ಜನರು ಇಬ್ಭಾಗವಾಗಿ ಸರಿದರು. ಗಿರಿನಾಥರಾಯರು ಸಮರವೇಷದಲ್ಲಿಯೇ ಶ್ರೀಗಳ ಪಾದದ ಮೇಲೆ ತಲೆಯಿಟ್ಟು ವಂದಿಸಿದರು. ಶ್ರೀಗಳು ತಲೆಹಿಡಿದೆತ್ತಿ ಹತ್ತಿರದ ಆಸನದಲ್ಲಿ ಕೈಹಿಡಿದು ಕೂಡಿಸಿದರು. ಉಭಯತರ ಹೃದಯಗಳು ತುಂಬಿ ಕಣ್ಣನಿ ತುಳುಕಿದ್ದವು. ಶಿವಯೋಗಿಗಳು ಮಾತಿ

ಗಾರಂಭಿಸಿದರು "ತಮ್ಮ ಸಮರ್ಥ ಬಾಹುಬಲದಿಂದ ಬುದ್ಧಿಬಲದಿಂದ ವಿಶಾಲ ಪ್ರದೇಶವು ನಿಷ್ಕಂಟಕವಾಯಿತು. ಜನಜೀವನವು ಸುಗಮವಾಯಿತು. ಜಯಶಾಲಿಗಳಾದುದು ನಮಗೆ ತುಂಬ ಸಂತೋಷಕರ"

"ತಮ್ಮ ಪಾದ ಕೃಪಾಬಲದಿಂದ ಗುರುವೇ, ಅದು ಸಾಧಿಸಿದ್ದು. ತಮ್ಮ ತಪಃ ಪ್ರಭಾವದಿಂದ ರಾಜ್ಯದಲ್ಲಿ ದುರ್ವರ್ತನೆಗಳ ದೂರು ಇಲ್ಲ. ಜನರು ಸಜ್ಜನರಾಗಿದ್ದಾರೆ" ನಿಮ್ಮ ಭಾವನೆಗೆ ತಕ್ಕಂತೆ ಶಿವನ ಕೃಪೆ ದೊರೆಗಳೆ ಇರಲಿ, ಪ್ರಯಾಣದಿಂದ ಬಂದವರು ಇಲ್ಲಿಗೆ ಬಂದಿದ್ದೀರಿ. ಅರಮನೆಗೆ ಹೋಗಿ ಪರಾಮರಿಕೆ ಪಡೆಯಬೇಕು. ಆಶೀರ್ವಾದ ತಕ್ಕೊಳ್ಳಿರಿ.

ಅರಸು ಎದ್ದು ನಿಂತು ಕೈಮುಗಿದು "ಗುರುಗಳೆ ತಮ್ಮ ತಪೋನುಷ್ಠಾನ ಅತ್ತ ಸಮರದಲ್ಲಿ ಗೆಲವು ಇವೆರಡರ ಸಂತೋಷಕ್ಕಾಗಿ ನಾಳೆಯ ತಮ್ಮ ಲಿಂಗಾರ್ಚನೆ ಅರಮನೆಯಲ್ಲಿ ಜರುಗಬೇಕು" ಎನ್ನುತ್ತ ಹಿಂದೆ ನಿಂತಿದ್ದ ಸೇವಕನ ಕೈಯಿಂದ ಎರಡು ತೆಂಗುಗಳನ್ನು ತೆಗೆದುಕೊಂಡು ಪಾದದಲ್ಲಿಟ್ಟು ನಮಸ್ಕರಿಸಿದರು.

"ಆಗಲಿ ಬರುವೆವು" ಎಂದು ಶ್ರೀಗಳು ತಮ್ಮ ಕೈಯಲ್ಲಿದ್ದ ಫಲಗಳನ್ನು ಆಶೀರ್ವದಿಸಿ ಬೀಳ್ಕೊಟ್ಟರು.

ವಿಜಯನಗರದ ಪ್ರೌಢ ದೇವರಾಯನು ಧರ್ಮ, ಕಲೆ. ಸಾಹಿತ್ಯಗಳಿಂದ ತುಂಬ ಆಸಕ್ತಿ ಹೊಂದಿದ್ದನು. ಅವನ ಔದಾರ್ಯದ ಆಶ್ರಯದಿಂದ ವಚನ ಸಾಹಿತ್ಯದ ಪುನರುತ್ಥಾನವಾಯಿತು. ಮಹಾಮಹಾ ಕಾವ್ಯಗಳು ರಚಿಸಲ್ಪಟ್ಟವು. ಅವುಗಳ ಕರ್ತರಿಗೂ ಮಠಮಾನ್ಯಗಳಿಗೂ ಹೇರಳವಾದ ದತ್ತಿ-ದಾನ-ಉಂಬಳಿಗಳನ್ನು ಇತ್ತನು. ಗಿರಿನಾಥರಾಯನು ಆ ಚಕ್ರವರ್ತಿಯ ಕಿರಿಯ ಸೋದರನು ಧಾರ್ಮಿಕ ವಿಷಯದಲ್ಲಿ ಉದಾರವಾಗಿ ವರ್ತಿಸಲು ಗಿರಿನಾಥ ಮಾಂಡಲಾಧಿಪತಿಗೆ ಸ್ವಾತಂತ್ರ್ಯವಿತ್ತು.

ಮರುದಿನ ಅರಸನು ಆನಂದೋತ್ಸವದೊಡನೆ ಸ್ವಾಮಿಗಳನ್ನು ಅರ ಮನೆಗೆ ಬಿಜಯಂಗೈಸಿಕೊಂಡನು. ಪ್ರಜಾ ಪ್ರಸಾದಗಳು ವೈಭವದಿಂದ ನೆರವೇರಿದವು. ಅಷ್ಟರಲ್ಲಿ ಸಭಾಂಗಣದಲ್ಲಿ ಮಾನ್ಯ ವಿದ್ವಜ್ಜನರ ಅಧಿಕಾರಿ ಗಳ ಮನ್ನೆಯರ ಸಭೆ ಸೇರಿತು. ಅಖಂಡೇಶ್ವರ ಸ್ವಾಮಿಗಳನ್ನು ದಯ್ಯ ಮಾಡಿಸಿಕೊಂಡು ಉನ್ನತಾಸನದ ಮೇಲೆ ಕೂಡಿಸಿದರು. ಅತ್ಯಂತ ಪೂಜ್ಯ ಭಾವನೆಯಿಂದ ಗಿರಿನಾಥ ಒಡೆಯನು ಅಖಂಡೇಶ್ವರ ಶಿವಯೋಗಿ ಸನಿ ಧಿಗೆ ಈ ಭಕ್ತಿ ಕಾಣಿಕೆಗಳನ್ನು ಘೋಷಿಸಿದನು. ಮುನಿಕುಲ ಚಕ್ರವರ್ತಿ ಬಿರುದು, ಹಗಲು ದೀವಟಿಗೆ ಶ್ವೇತಛತ್ರ ಮಠದ ನಂದಾದೀಪಕ್ಕೆ ಲಿಂಗ ಪ್ರಸಾದಕ್ಕೆ ಕೆಲವು ಭೂಮಿ!

ತನ್ನ ಹಾಗೂ ಪಂಡಿತ ಮನ್ನೆಯರ ಅಂಕಿತದೊಡನೆ ಈ ಕಾಣಿಕೆ ಗಳನ್ನು ಲಿಖಿಸಿದ ಅರ್ಪಣೆಯ ಪತ್ರವನ್ನು ಪಾದಕ್ಕೆ ಅರ್ಪಿಸಿದನು, ಜಯ ಘೋಷವಾಯಿತು. ಶ್ರೀಗಳು ಯೋಗ್ಯ ಆಶೀರ್ವಚನ ನೀಡಿ ಗೌರವ ಪೂರ್ವಕ ಬೀಳ್ಕೊಂಡರು.

ಈ ಕಾಣಿಕೆಗಳನ್ನು ಅರಗದ ಅಧಿಪತಿ ಶಿಲಾಶಾಸನ ಮಾಡಿಸಿದ್ದಾನೆ. (ಶಿವಮೊಗ್ಗಾ ಜಿಲ್ಲಾ ಶಾಸನಗಳು *No. E. C. Vol. VIII 14* ಕ್ರಿ. ಶ. ಸುಮಾರು ೧೪೪೦.) ಲಿಂಗ ತಪಸ್ವಿಗಳಾಗಿ ಭಕ್ತರ ಭಯವನ್ನು ನಿವಾರಿಸುವದರಲ್ಲಿ ಉದ್ಯುಕ್ತರಾಗಿ ನಾಡನ್ನು ಪಾವನಗೊಳಿ ಸಿದ ಅಖಂಡೇಶ್ವರ ಸ್ವಾಮಿಗಳು ಲಿಂಗೈಕ್ಯರಾದ ಬಳಕಿನ ಸಮಾಧಿಯು ಈಗಲೂ ಅರಗದಲ್ಲಿ ಪೂಜ್ಯಸ್ಥಾನವಾಗಿ ಉಳಿದಿದೆ. ಮುಂದಿನ ಸುಮಾರು ನೂರು ವರ್ಷಗಳಲ್ಲಿ ಇದೇ ಅನ್ವಯದ, ಶಿವಯೋಗಾನುಷ್ಠಾನದಲ್ಲಿ ಬಲ್ಲಿದ ರಾದ ಕೆಲವು ಸ್ವಾಮಿಗಳು (ಅವರ ಸಂಖ್ಯೆ ತಿಳಿದಿಲ್ಲ) ಆ ಪೀಠವನು ಕ್ರಮವಾಗಿ ಅಲಂಕರಿಸಿ ಬಯಲಾದರು, ಈ ಸ್ವಾಮಿಗಳೆಲ್ಲ ಪೂರ್ವಾಶ್ರ ಮದ ಹೆಸರು ಅಂದರೆ ತೊಟ್ಟಿಲದ ಹೆಸರು ಏನೇ ಇದ್ದರೂ ಅವರು ಆ ಮಠದ ಅಧಿಕಾರಿಗಳಾದೊಡನೆ ಅವರಿಗೆ ಅಖಂಡೇಶ್ವರ ಸ್ವಾಮಿಗಳು

ಎಂದು ವಾಡಿಕೆಯಾಗಿತ್ತು. ಆ ಮಠವು ಅಖಂಡೇಶ್ವರ ಎಂಬುದು ಪರಬ್ರಹ್ಮದ ಸ್ವರೂಪ ಸಂಕೇತವಷ್ಟೆ!

ಸುಮಾರು ಕ್ರಿ.ಶ. ೧೬ನೆಯ ಶತಮಾನದ ಕಡೆಯ ಭಾಗದಲ್ಲಿ ಅರಗದ ವಿರಕ್ತ ಮಠಕ್ಕೆ ಅಧಿಕಾರಿಗಳಾದ ಅಖಂಡೇಶ್ವರ ಸ್ವಾಮಿಗಳು ಬಾಲ್ಯದಲ್ಲಿಯೇ ಚುರುಕುಬುದ್ಧಿಯುವರು ನಿಜದ ಅರುವಿನ ಬಗೆಗೆ ಆತುರವುಳ್ಳವರೂ ಆಗಿದ್ದರು. ಒಳ್ಳೆಯ ಗುರುವಿನಿಂದ ಅನುಗ್ರಹ ಸಂಸ್ಕಾರವು ಆಗಿತ್ತು. ಬೇಗನೆ ಉಪನಿಷದಾಗಮಗಳನ್ನು ಅಭ್ಯಸಿಸಿ ತತ್ವವಿಚಾರಗಳನ್ನು ತಿಳಿದುಕೊಂಡರು. ಅವುಗಳಿಗಿಂತ ಪದೇ ಪದೇ ಪ್ರತಿಗಳಾಗಿ ಬರುತ್ತಿದ್ದ ಕಲ್ಯಾಣದ ಶರಣರ ವಚನಗಳ ಕಟ್ಟುಗಳು ದೊರೆತಾಗಲೆಲ್ಲಾ ಅವುಗಳನ್ನು ಕೂಲಂಕಷವಾಗಿ ವಿವೇಚಿಸಿ ಓದುವದರಲ್ಲಿ ತಲ್ಲೀನರಾಗುತ್ತಿದ್ದರು ಷಟಸ್ಥಲ ಶಾಸ್ತ್ರವನ್ನು ಶರಣಧರ್ಮದ ವೀರ ಪ್ರಕ್ರಿಯೆಗಳನ್ನು ಮನನಮಾಡಿಕೊಂಡಿದ್ದರು. ತಮ್ಮ ನಡೆನುಡಿಗಳನ್ನು ಅವುಗಳಿಗೆ ಹೊಂದಿಸಿದ್ದರು. ಸಂಸಾರ ಬೇಕಾಗಿರಲಿಲ್ಲ. ಲಿಂಗತಪದಲ್ಲಿ ತೊಡಗಿ ಸಾಧನೆಯಲ್ಲಿದ್ದರು ಪ್ರೌಢ ವಯಸ್ಸಿಗೆ ಬರುವದರೊಳಗಾಗಿ ಮನವು ಘನವಾಗಿತ್ತು ರೂಪದಲ್ಲಿ ಸುಲಕ್ಷಣದ ಸಂಯೋಜನೆ ವೈರಾಗ್ಯದ ತೇಜಸ್ಸಿನ ಮೆರಗು ಮಿರುಗುತ್ತಿತ್ತು. ಮಠದ ನಿರಂಜನ ಪೀಠದ ಅಧಿಕಾರ ಸಹಜವಾಗಿಯೇ ಅವರ ಪಾಲಿಗೆ ಬಂದಿತು. ಅದನ್ನು ಸ್ವೀಕರಿಸಿದರು. ಭಕ್ತೋದ್ಧಾರವನ್ನು ಕೈಕೊಂಡರು. ಆದರೆ ಘನ ಮನ ಅಲ್ಲಿ ನಿಲ್ಲಲಿಲ್ಲ. ಅವರ ಭಾವದಲ್ಲಿ ಬೇರೂರಿದ ಬೇರೊಂದು ಸೆಳೆತವು ಅವರ ಸ್ಥಾನವನ್ನು ತ್ಯಜಿಸುವ ಚಪಲತೆಗೆ ಕಾರಣವಾಯಿತು.

ನೂರಾರು ವರ್ಷಗಳ ಹಿಂದೆ ಕಲ್ಯಾಣದಲ್ಲಿ ನೆರೆದ ಪರಮಾನುಭಾವಿಗಳು ಎಂತಹ ಮಹಾಕಾರ್ಯ ಮಾಡಿದರಲ್ಲ! ಶಿವ-ಜೀವ–ಜಗತ್ತುಗಳಿಗೆ ಸಂಬಂಧಿಸಿದ ಒಗಟನ್ನು ಒಡೆದು ಆ ತೊಡಕಿನಲ್ಲಿ ನರಳುತ್ತಿರುವ ಜೀವರಿಗಾಗಿ ಶಿವ ಸಾಮರಸ್ಯದ ಅಮೃತವನ್ನು ಶೋಧಿಸಿ ತೆಗೆದು ಉಂಡು ಉಣಿಸಿದರು. ಸವೆಯದ, ತೀರದ, ನಾಶವಿಲ್ಲದ ಆ ಅಮೃತವನ್ನು ವಚನಗಳಲ್ಲಿ

ತುಂಬಿದರು. ಅವು ಪ್ರತಿಯಾಗಿ ಕಟ್ಟುಗಳ ಮೊಟ್ಟೆಯಾಗಿ ದೇಶದಲ್ಲಿ ಸಾಗಿ ಬರುತ್ತಿವೆ, ನಾನೂರು ವರ್ಷ ಜಿಜ್ಞಾಸುಗಳು ಓದಿ ಸೌಖ್ಯದ ನೆಲೆಯನ್ನು ಕಂಡರು. ಶಾಂತಿಯನ್ನು ಅನುಭವಿಸಿದ ಹಲವು ಅನುಭಾವಿಗಳು ಈ ವಚನಗಳ ವರ್ಗೀಕರಣ ಸಂಕಲನ ವಿವರಣೆಗಳನ್ನು ರಚಿಸಿ ಅವುಗಳ ದಾರ್ಶನಿಕತ್ವವನ್ನು ಸ್ಫುಟಗೊಳಿಸಿದ್ದಾರೆ. ಆ ಶರಣ ಶ್ರೇಷ್ಠರು ಎಂತಹ ಮಹಾತ್ಮರು! ಅವರು ನಿಂದು ನಲೆದಾಡಿದ ನೆಲ ಪುಣ್ಯಕ್ಷೇತ್ರ ! ಅವರು ನುಡಿದು ಉಸುರಿದ ವಾಯು ಪರಮಸೌರಭಯುಕ್ತವು. ಅವರು ಮಿಂದ ನೀರು ಪಾವನ ತೀರ್ಥ ಆದವು. ಹೋಗಬೇಕು, ಆ ಕಲ್ಯಾಣವನ್ನು ನೋಡಬೇಕು ಆ ವಿಶಾಲ ಪ್ರಸಾದದಲ್ಲಿ ವಿಹರಿಸಬೇಕು. ಎಂಬ ಹಂಬಲ ಉಂಟಾಯಿತು. ಸಂಚಾರದ ಒಲವೂ ಅವರಲ್ಲಿ ಪ್ರಭಲವಾಗಿತ್ತು.

ಕ್ರಿ. ಶ. ೧೫೬೬ ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನವಾಗಿತ್ತು. ಜನಜೀವನದ ನೆಮ್ಮದಿ ಕಲಕಿತ್ತು. ಅಲ್ಲಿಂದ ಉತ್ತರದ ಭಾಗವು ಮಹಮ್ಮದೀಯ ಆಡಳಿತಕ್ಕೆ ಒಳಪಟ್ಟಿತ್ತು. ಅದರೊಂದಿಗೆ ಅರಗನಾಡು ಒದಗಿದ ಸಂಕಟ ತೊಳಲಾಟಗಳಲ್ಲಿ ಸಿಕ್ಕು ಅದರ ಧಾರ್ಮಿಕ ಆಸಕ್ತಿ ನಶಿಸಿತ್ತು. ಪ್ರಾಂತದ ಕೇಂದ್ರವಾಗಿದ್ದ ಅರಗ ನಗರವು ತನ್ನ ಸ್ಥಾನಮಾನವನ್ನು ಕಳೆದುಕೊಂಡು ಹಳ್ಳಿಯಾಗಿತ್ತು. [ಈಗ ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಒಂದು ಗ್ರಾಮ] ಭಕ್ತರಲ್ಲಿ ಧರ್ಮದ ಬಗೆಗೆ ಔದಾಸೀನ್ಯ ಹೆಚ್ಚುತಲಿತ್ತು. ಒಳಹೊರಗಿನ ಈ ಕಾರಣಗಳಿಂದ ಅಖಂಡೇಶ್ವರ ಸ್ವಾಮಿಗಳ ಮನಸ್ಸು ಅಲ್ಲಿ ನಿಲ್ಲದಾಯಿತು.

ತಮ್ಮ ಗುರು ಬಂಧುಗಳಲ್ಲಿ ಯೋಗ್ಯರಾದವರಿಗೆ ಪೀಠಾಧಿಕಾರವನ್ನು ಒಪ್ಪಿಸಿ ಹೊರಟು ನಿಂತರು. ಅವರ ಭೋಧ ಸುಧೆಗೆ ಪ್ರಭಾವಿತರಾಗಿರುವ ಕೆಲವೇ ಭಕ್ತರು ತಮ್ಮ ಗುರು ವಿರಹಕ್ಕಾಗಿ ಕಣ್ಣೀರು ಕರೆದರು, ಸ್ವಾಮಿಗಳು ಅವರಿಗೆ ನಾಲ್ಕು ಸಾಂತ್ವನದ ಮಾತುಗಳನ್ನು ಹೇಳಿ ಸಮಾಧಾನಗೊಳಿಸಿದರು. ಅದನ್ನು ಅತಿಯಾಗಿ ಗಮನಿಸಿ, ಭಾವಿಸಲಿಲ್ಲ. ಅರಗದ

ನಿರಂಜನ ಪೀಠದ ಅಧಿಕಾರಿ ಎಂಬುದನ್ನು ತ್ಯಜಿಸಿ ಅಖಂಡಯ್ಯ ಸ್ವಾಮಿ ಎಂಬ ಹೆಸರಿನಿಂದ ಮುಂದುವರಿದರು. ಅವರ ತೊಟ್ಟಿಲದ ಹೆಸರು ಅಖಂಡಯ್ಯ ಎಂಬುದಾಗಿತ್ತು. ಅರಗದಿಂದ ಹೊರಟು ಉತ್ತರಕ್ಕೆ ಪಯಣಿಸಿದರು. ವಯಸ್ಸು ಎಳೆಯ ಪ್ರಾಯ! ತಪಸ್ಸಿನಿಂದ ಗಟ್ಟಿಗೊಂಡ ಕಾಯ ಭಾವದಲ್ಲಿ ತೃಪ್ತಿಯನ್ನುಂಟು ಮಾಡುವ ಶಾಂತ ವಾತಾವರಣ ವಿದ್ದಲ್ಲಿ ಲಿಂಗಾನುಷ್ಠಾನವನ್ನು ಬಲಗೊಳಿಸುತ್ತ ಕೆಲವೊಂದು ದಿವಸಕ್ಕೆ ಈಗಿನ ಧಾರವಾಡ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಕಳಸ ಎಂಬ ಗ್ರಾಮಕ್ಕೆ ಬಂದರು.

ಜಿತೇಂದ್ರಿಯರಾದರೇನು ಒಳ್ಳೆಯ ಹರೆಯವಿದ್ದರೇನು ಮಿತಿಮೀರಿದ ಶ್ರಮದಿಂದ ದೇಹವು ಆಯಾಸಗೊಳ್ಳುವದು ಸಹಜ! ಅಖಂಡೇಶ್ವರರು ಕಳಸಕ್ಕೆ ಬಂದಾಗ ಸಾಕಷ್ಟು ದಣಿದು ಬಿಟ್ಟಿದ್ದರು. ಊರ ಗದ್ದಲದಲ್ಲಿ ಹೋಗಲಾರದೆ ಅವರ ದೃಷ್ಟಿ ಪರಭಾರೆ ವಿಶ್ರಾಂತಿಗೆ ಅನುವು ನೋಡುತ್ತಿತ್ತು. ಊರನ್ನು ಬಲಕ್ಕೆ ಮಾಡಿಕೊಂಡು ಮುಂದೆ ಸಾಗಿದ ದಾರಿಗುಂಟ ಬರಲು ಎಡಕ್ಕೆ ಹಾದಿಗೆ ಹತ್ತಿದ ಹೊಲದ ಆಚೆಗೆ ಹೊಲದಲ್ಲಿ ಜೋಳದ ಬೆಳೆಯ ನಡುವೆ ಒಂದು ಚಿಕ್ಕ ಗುಡಿಯಿದ್ದುದು ಕಾಣಿಸಿತು. ಸ್ವಾಮಿಗಳು ಬೆಳೆಯಲ್ಲಿ ನುಸುಳಿಕೊಂಡು ಅಲ್ಲಿಗೆ ಹೋದರು. ಗೋಡೆಯ ಮೇಲೆ ಬಿಳಿಯ ಮಟ್ಟಿನಿಂದ ಓರಣವಿಲ್ಲದ ಅಕ್ಷರಗಳಿಂದ "ದುಂಡೀ ಬಸವಣ್ಣನ ಗುಡಿ" ಎಂದು ಬರೆದಿದ್ದಿತು. ಓದಿ ಒಳ್ಳೆಯದೆ ಆಯಿತಲ್ಲ. ಯಾವ ಬಸವಣ್ಣನಾದರೂ ಇರಲಿ ಜನರಂತೂ ಯಾರೂ ಇಲ್ಲ. ಎಂದು ಒಳಹೊಕ್ಕರು. ಪೂಜೆಯ ಗಂಟು ತಲೆಗಿರಿಸಿಕೊಂಡು ಕಾಲುಚಾಚಿ ಮಲಗಿಕೊಂಡರು. ಯೋಗ ನಿದ್ದೆ ಆವರಿಸಿತು. ಕೋಳಿ ಕೂಗಿದ ಮೇಲೆಯೇ ಎಚ್ಚರ!

ಎದ್ದು ಜಲಾಶಯಗಳನ್ನು ಹುಡುಕಿಕೊಂಡು ಹೋದರು ಶೌಚ ಸ್ನಾನಗಳನ್ನು ತೀರಿಸಿಕೊಂಡು ಮರಳಿ ಗುಡಿಗೆ ಬಂದರು. ಮುಂದಿಯೇ ಇಲ್ಲ ಶಾಂತ ವಾತಾವರಣ! ದೀರ್ಘವಾದ ಲಿಂಗೋಪಾಸನೆ ಯಥಾರೀತಿ ನೆರ

ವೇರಿತು. ಕಂತೆಯು ಭಿಕ್ಷಗೆ ಊರಲ್ಲಿ ಹೋಗಿಬಂದಲು ಇದೇ ರೀತಿ ಮರು ದಿನ ನಡೆದಿರಲು ಒಮ್ಮೆ ಹೊಲದೊಡೆಯು ರಡ್ಡೇರ ನಾಗಪ್ಪನು ಆಕಸ್ಮಾತ್ತಾಗಿ ಸ್ವಾಮಿಗಳು ಗುಡಿಗೆ ಬರುವದನ್ನು ನೋಡಿದನು. ಕೂಡಲೆ ಅವರ ಹತ್ತಿರಬಂದು ಸಮಸ್ಕರಿಸಿ ವಿನಯದಿಂದ ಅವರ ಸಮಾಚಾರವನ್ನು ತಿಳಿದನು. ಅವರ ತೇಜಸ್ಸನ್ನು ನಡೆನುಡಿಗಳಲ್ಲಿಯ ಲಿಂಗಾನುಭವದ ಘನತೆಯುನ್ನು ಕಂಡು ಬೆರಗಾದನು. ಭಕ್ತಿಮಾರ್ಗ ನಿರತನಾಗಿರುವ ಆ ನಾಗಪ್ಪನು ಕೈ ಮುಗಿದು "ಬುದ್ಧೀ ಈ ಅಡವಿಯಲ್ಲಿ ಕಷ್ಟಪಡಬೇಕೆ ? ಮನೆಗೆ ದಯ ಮಾಡಿಸಬೇಕು. ಹಿತ್ತಲದಲ್ಲಿಯ ಒಂದು ಕೋಣೆಯಲ್ಲಿ ತಮಗೆ ಪೂಜಾದಿ ಕ್ರಿಯಗಳಿಗೆ ಎಲ್ಲ ಅನಕೂಲ ಮಾಡಿಕೊಡುವೆನು ದಯವಿಟ್ಟು ಅಪ್ಪಣೆಯಾಗಬೇಕು ಎಂದು ಬೇಡಿಕೊಂಡನು. ಆತನ ನಿರ್ಮಲ ಹೃದಯವನ್ನು ಅರಿತು. ಭಕ್ತಿ ಭಾವಕ್ಕೆ ಒಲಿದು ಅಖಂಡೇಶ್ವರ ಸ್ವಾಮಿಗಳು ಅವನ ಮನೆಗೆ ದಯಮಾಡಿಸಿದರು. ನಾಗಪ್ಪನು ಸಂತೋಷದಿಂದ ಹಿಗ್ಗಿ ಹಿತ್ತಲಿನ ಕೋಣೆಯನ್ನು ಸಾರಿಸಿ ಶುಚಿಗೊಳಿಸಿ ಮಡಿ ಮಾಡಿ ಅಲ್ಲಿ ಸ್ವಾಮಿಗಳ ಬಿಡಾರ ಮಾಡಿಸಿದನು. ಅವರಿಗೆ ಸಂತೋಷವಾಗುವಂತೆ ತನು–ಮನ–ಧನ ಗಳಿಂದ ಸೇವೆ ಮಾಡತೊಡಗಿದನು. ಆದರೆ ದಿನದಿನಕ್ಕೆ ದರ್ಶನಕ್ಕೆ ಬರುವವರ ಸಂಖ್ಯೆ ಬೆಳೆದು ಸ್ವಾಮಿಗಳ ಲಿಂಗಾನುಷ್ಠಾನಕ್ಕೆ ಆತಂಕವಾಗಹತ್ತಿತ್ತು. ಮನಸ್ಸಿಗೆ ಚಡಪಡಿಕೆಯಾಯಿತು ಶಾಂತಿ ಕದಡಿತು ನಾಗಪ್ಪನಿಗೆ ಇದರ ಅರಿವಾಗಿತ್ತು. ಆದರೆ ಏನು ಮಾಡುವದು? ಊರ ಜನ ಕೇಳುವಂತಿಲ್ಲ ಪೇಚೆಗೆ ಒಳಗಾಗಿದ್ದನು ಕೊನೆಗೆ ಅನಿವಾರ್ಯವಾಗಿ ಸ್ವಾಮಿಗಳೇ ನಾಗಪ್ಪನನ್ನು ಕರೆದು "ನಾಗಪ್ಪನವರೇ, ನಿಮ್ಮ ಭಕ್ತಿಗೆ ಸೇವೆಗೆ ನಾವು ಮಾರು ಹೋಗಿದ್ದೇವೆ. ಆದರೆ ದರ್ಶನಾರ್ಥಿಗಳಾದ ಈ ಜನರ ಗದ್ದಲ ಹೆಚ್ಚಾಯಿತು ನಮ್ಮ ಧ್ಯಾನ ಸಾಧನೆ ಸುಗಮವಾಗಿ ಸಾಗದಂತಾಗಿದೆ ನೀವಾಗಲಿ ಈ ಜನರ ಆಗಮನವನ್ನು ನಿರ್ಬಂದಿಸಿ ಭಕ್ತಿ ಭಾವನೆಯಿಂದ ಬರುವ ಜನರ ಮನಸ್ಸಿಗೆ ನೋವು ಮಾಡುವದು ಉಚಿತವಲ್ಲ. ನಾವು ಇಲ್ಲಿಂದ ಹೊರಡುತ್ತೇವೆ. ಶಿವನು ನಿಮಗೆ ಒಳ್ಳೆಯದು ಮಾಡಲಿ!" ಎಂದು ನಾಗಪ್ಪನಲ್ಲಿ

ಕಂಬನಿ ತುಳುಕಿತು. ಮರುಮಾತನಾಡಲು ಆಗಲಿಲ್ಲ. ಮನೆಯವರೆಲ್ಲ ವಿಷಾದಿಸಿದರು ವಂದನೆಗೈದು 'ಆಗಲಿಅಪ್ಪ' ಎಂದರು. ಜನರೇಳುವ ಮೊದಲು ಅರುಣೋದಯದಲ್ಲಿ ಅಖಂಡೇಶ್ವರರು ನಾಗಪ್ಪನ ಮನೆಯಿಂದ ಹೊರಟು ನಡೆದರು. ಊರ ಪಶ್ಚಿಮಕ್ಕೆ ಅನತಿ ದೂರದಲ್ಲಿ ಮುಳ್ಳುಪೊದೆ ಗಿಡಗಂಟಿ ಬೆಳೆದು ಒಂದು ಕಾಡು ದಿನ್ನೆಯನ್ನು ಕಂಡು ಇಲ್ಲಿ ಯಾರು ಬಾರದೆಂದು ಅದರಲ್ಲಿ ಸೇರಿ ಏರಿ ಸಾಗಿ ಒಂದು ಗಿಡದ ಆಸರೆದಲ್ಲಿ ತಮ್ಮ ಗಂಟುಇಟ್ಟರು. ಅಲ್ಲಿಂದಲೆ ಜಲಾಶಯಗಳಿಗೆ ಹೋಗಿ ನೀರು ತಂದಿಟ್ಟುಕೊಂಡು ಲಿಂಗಾನುಷ್ಠಾನದ ತಪಸ್ಸಿಗೆ ತೊಡಗಿದರು. ಅನಾಯಾಸವಾಗಿ ಇದ್ದ ತಮ್ಮ ದೇಹ ಬಲದಿಂದ ತಪಸ್ಸಿಗಾಗಿ ಒಂದು ಗುಹೆಯನ್ನು ಮಾಡಿಕೊಂಡರು. ಶಿವನ ಸಂಕಲ್ಪದಂತೆ ಒದಗಿದ ಈ ಕಾಯಕದಲ್ಲಿ-ಯೋಗಸಾಧನೆಯ ಗತಿಯಲ್ಲಿ ಕಲ್ಯಾಣ ಕುರಿತ ಪ್ರಯಾಣದ ಆತುರ ಸ್ವಲ್ಪ ಶಾಂತವಾಗಿತ್ತು. ಹಂಬಲ ಸ್ಥಗಿತವಾಗಿ ಉಳಿದಿತ್ತು ಅಳಿದಿರಲಿಲ್ಲ.

ಆ ದಿನ್ನೆಯಾಸುತ್ತಲಿನ ಹೊಲಗಳೂ ಧೋಂಡೋಪಂತ ಗದ್ರೆ ಎಂಬವರ ಭೂಮಿಯಾಗಿದ್ದಿತು. ಅದು ಫಲವತ್ತಲ್ಲದ ಭೂಮಿ. ಬೆಳೆ ಒಡವಾಗಿ ಬರುತ್ತಿತ್ತು. ಆ ವರ್ಷದ ಬೆಳೆ ಸತ್ವಶಾಲಿ ಭೂಮಿಗಿಂತ ಹುಲಸಾಗಿ ಬಂದಿತು. ಧೋಂಡೋಪಂತನಿಗೆ ಅತ್ಯಾಶ್ಚರ್ಯವಾಯಿತು. ಅಷ್ಟರಲ್ಲಿ ಅರಗದ ಸ್ವಾಮಿಗಳು ಊರೊಳಗಿಂದ ಹೋಗಿ ಅಡವಿಯಲ್ಲಿದ್ದಾರೆಂಬ ಸುಳಿವು ಕೆಳಸದ ಜನರಿಗೆ ಹತ್ತಿದ್ದಿತ್ತು. ಅದು ಧೊಂಡೋಪಂತನ ಕಿವಿಗೂ ಬಂದಿತು. ಅನಪೇಕ್ಷಿತವಾದ ಅವರ ಕರುಣೆಯಿಂದಲ್ಲೋ ತನಗೆ ಸಂಪದ್ಭರಿತವಾದ ಬೆಳೆ ಬಂದಿರಲಿಕ್ಕೆಬೇಕು. ನನ್ನ ನೆಲದಲ್ಲಿಯೋ ಇಂತಹ ಮಹಿಮಾವಂತರು ಇದ್ದರೂ ನಾನು ಅವರನ್ನು ಕಾಣಲಿಲ್ಲವಲ್ಲ? ಎಂದು ಪಶ್ಚಾತಾಪ ಪಟ್ಟನು. ಬಳಿಕ ಎಂದೂ ಅತ್ತ ಹೋಗದ ಆ ಕಾಡಡವಿಯಲ್ಲಿ ಹೋಗಿ ಗವಿಯ ಹತ್ತಿರ ಬಂದು ಶಿವಯೋಗಿಗಳ ದರ್ಶನಕ್ಕೆ ಕಾದು ಕುಳಿತನು. ತಮ್ಮ ಕ್ರಮದಂತೆ ಅವರು ಹೊರಗೆ ಬಂದುದನ್ನು ಸಾಧಿಸಿ

ಎದುರು ಹೋಗಿ ಸಾಷ್ಟಾಂಗವಾಗಿ ಎರಗಿ ಕೈಮುಗಿದು ನಮಿಸಿ ಪ್ರಾರ್ಥಿಸಿದನು. ತನಗೆ ಈ ಪಾದಕೃಪೆಯಾದುದನ್ನು ಸಂತೋಷದಿಂದ ಅರಿಕೆ ಮಾಡಿದನು. ಅಖಂಡೇಶ್ವರರು ನಗೆಮೊಗದಿಂದ 'ಆಗಲಪ್ಪಾ' ನಿನ್ನ ಸ್ಥಳವು ನಮಗೆ ಆಶ್ರಯವಿತ್ತಿತಲ್ಲ! ಶಿವ ಸಂಕಲ್ಪ !

" ಯಾರು ಬಾರದ ಸ್ಥಳವಿದು ಬಂದ್ಧೀ!"

" ನಮಗಾಗಿ ಮೀಸಲಾಗಿರಬೇಕು" ಎಂದು ನಕ್ಕರು ಸ್ವಾಮಿಗಳು, ಧೋಂಡೊಪಂತನು ಸಂಗಡ ತಂದಿದ್ದ ಹಣ್ಣು ಹೂವು ಹಾಲು ತುಪ್ಪಗಳನ್ನು ಅರ್ಪಿಸಿ ಮತ್ತೊಮ್ಮೆ ವಂದಿಸಿದನು. ಪ್ರಸಾದವಿತ್ತು ಆಶೀರ್ವದಿಸಿದರು.

ಧೋಂಡೊಪಂತನಲ್ಲಿ ಸ್ವಾಮಿಗಳ ಬಗೆಗೆ ನಿಷ್ಠೆನೆಲೆಯೂರಿ, ಕಾಡು ಬಯಲು ಮಾಡಿ ಕೆಲವು ಚಪ್ಪಳಿಗೆಗಳನ್ನು ಹಾಕ್ಕೈಸಿದನು. ಅದೊಂದು ಆಶ್ರಮದ ಸ್ವರೂಪ ತಳೆಯಿತು. ಅಲ್ಲಿಂದ ಊರಿಗೆ ಸುಗಮವಾದ ದಾರಿಯಾಯಿತು. ತತ್ವನಿಷ್ಠೆಯ ಜನರು ಜಿಜ್ಞಾಸೆಯಿಂದ ಸ್ವಾಮಿಗಳ ದರ್ಶನಕ್ಕೆ ಕೊಡುತ್ತ ಅವರಿಗೆ ಬೇಕಾದುದನ್ನು ಬೋಧಿಸುತ್ತ ನಡೆದರು. ತಮ್ಮ ಶಿವಯೋಗ ಸಾಧನೆ ಒಂದು ಹಂತಕ್ಕೆ ಬಂದಿದ್ದಿತ್ತು. ಮೊದ-ಮೊದಲು ಕೇವಲ ಆತ್ಮೋದ್ಧಾರಕ್ಕೆ ಚಿಂತಿಸುತ್ತಿದ್ದ ಶಿವಯೋಗಿಗಳು ಭಕ್ತೋದ್ಧಾರಕ್ಕೆ ಒಲಿದರು. ಒಂದು ವೇಳೆಯನ್ನು ಗೊತ್ತುಮಾಡಿ ಮುಮುಕ್ಷಗಳಿಗೆ ಶಿವಾನುಭವವನ್ನು ವಿವರಿಸಹತ್ತಿದರು. ಧೋಂಡೊಪಂತನು ಒಂದು ಭದ್ರವಾದ ಕಟ್ಟಡವನ್ನು ಅಲ್ಲಿ ಮಾಡಿಕೊಡಲು ಬಯಸಿ ಸ್ವಾಮಿಗಳ ಒಪ್ಪಿಗೆ ಕೇಳಿದನು. ಅವರ ಮಾನ ಸಮ್ಮತಿ ಪಡೆದಿದ್ದನು, ಆದರೆ ಅವರ ಆಯುಷ್ಯ ಮುಗಿದಿತ್ತು ಅದಾಗಲಿಲ್ಲ. ಸದಾ ಎಲೆ ಮನೆಗಳೇ ಆಶ್ರಮದ ಕಾರ್ಯಕ್ಕೆ ಆಧಾರವಾಗಿದ್ದವು.

ಒಂದು ದಿನ ಅಯ್ಯನವರ ಮನೆತನದ ಒಬ್ಬ ಮಹಿಳೆ ತನ್ನ ಚಿಕ್ಕ ಮಗುವಿನೊಂದಿಗೆ ಅಖಂಡೇಶ್ವರರ ಹತ್ತಿರ ಬಂದು "ಅಪ್ಪಾ ನನ್ನ ಪತಿ ಶಿವನಪಾದ ಸೇರಿದರು. ಇದೊಂದು ನನ್ನ ಮಗು. ನಾವು ಬಡವರು. ಈ ಮಗುವಿನ ಪೋಷಣೆ ನನ್ನಿಂದಾಗದು. ಇದನ್ನು ತಮ್ಮ ಪಾದಕ್ಕೆ ಅರ್ಪಿಸಿಕೊಳ್ಳಬೇಕು. ನಾನು ದುಡಿದು ನನ್ನದೊಂದು ಹೊಟ್ಟೆಯನ್ನು ಹೊರೆಯುತ್ತೇನೆ" ಎಂದು ಧೈರ್ಯದಿಂದ ಸೆರಗು ಹಾಸಿ ಎರಗಿ ಬೇಡಿಕೊಂಡಳು. ಸುಲಕ್ಷಣದ ಮಗು, ಸ್ವಾಮಿಗಳು ನೋಡಿ "ಆಗಲಮ್ಮಾ ಎಂದರು. ತಾಯಿ ಮಗುವನ್ನು ಅವರ ಪಾದದ ಮೇಲೆ ಹಾಕಿ ನಿಶ್ಚಿಂತಳಾಗಿ ಮರಳಿದಳು. ಮಗುವು ಪೂರ್ವ ಜನ್ಮದಲ್ಲಿ ಪರತತ್ವದ ಸಾಧನೆಯನ್ನು ಅಪೂರ್ವಗೈದು ಬಂದ ಪಿಂಡವೇ ಆಗಿತ್ತು. ಬೇಗನೆ ಅಪ್ಪಗಳ ಕರುಣೆಯನ್ನು ಅಪ್ಪಿಕೊಂಡಿತು.

ಸ್ವಾಮಿಗಳು ಆ ಮಗುವಿಗೆ ತಾಯಿ ತಂದೆಯಾಗಿ ಜೋಪಾನ ಮಾಡುತ್ತಾರೆ. ವಿದ್ಯೆ ಕಲಿಸುತ್ತಾರೆ. ತಮ್ಮ ತಪಃಶಕ್ತಿಯನ್ನೇ ಅಲ್ಲಿ ಇಡುತ್ತಾರೆ. ಫಲವತ್ತು ದೇಶದ ಹೆಬ್ಬೆರಳಿನಿನಂತೆ ಗಳಗಳನೆ ಬೆಳೆಯುತ್ತದೆ. ಮಗು! ಧರ್ಮ, ನೀತಿ. ವಿಚಾರ ಆಚಾರ ಎಲ್ಲದರಲ್ಲಿಯೂ ಬಲ್ಲಿದನನ್ನಾಗಿ ಮಾಡುತ್ತಾರೆ ಗುರುಗಳು! ಮಹೇಶ್ವರ ದೀಕ್ಷಾ ಸಂಸ್ಕಾರವನ್ನು ನೀಡುತ್ತಾರೆ. ಗುರುಮುಟ್ಟಿ ಗುರು ಆಗುತ್ತಾನೆ ಮಗು ! ಒಂದು ಸಂಜೆ ಆಶ್ರಮದ ಭಕ್ತರ ಸಮಕ್ಷಮ ಆತನಿಗೆ ಮರಿ ಅಖಂಡೇಶ್ವರ ಎಂದು ಹೆಸರಿಟ್ಟು ಅವನು ಆಶ್ರಮಕ್ಕೆ ತಮ್ಮ ಉತ್ತರಾಧಿಕಾರಿ ಎಂದು ಘೋಷಿಸಿದರು.

ಅಂದಿನ ಅನುಭವಗೋಷ್ಠಿ ಮುಗಿದ ಬಳಿಕ ಭಕ್ತರು ತೆರಳುವ ಅಪ್ಪಣೆಗಾಗಿ ಏಳುತ್ತಿರಲು "ಇನ್ನೂ ಸ್ವಲ್ಪ ಹೊತ್ತು ಕುಳಿತುಕೊಳ್ಳಿರಿ ಒಬ್ಬ ಮಹಾನುಭಾವರು ಬರುವವರಿದ್ದಾರೆ" ಎಂದು ಹೇಳಿ ಕೂಡ್ರಿಸಿ

ಕೊಂಡರು. ಆಗ ಪಣತಿಯು ಎಣ್ಣೆ ತೀರಿ ದೀಪ ನಿಸ್ತೇಜವಾಗಹತ್ತಿತು. ಸ್ವಾಮಿಗಳು ಮರಿಗೆ ಎಣ್ಣೆ ತರಲು ಹೇಳಿದರು. ಮರಿ ಮಗ್ಗುಲಲ್ಲಿದ್ದ ತಂಬಿಗೆಯು ನೀರನ್ನೇ ಪಣತಿಗೆ ಎರೆದನು ದೀಪ ಧಾರಾಳವಾಗಿ ಉರಿಯಿತು. ಅದೇ ಹೊತ್ತಿಗೆ ಬತ್ತಲೆಗುದುರೆ ಹತ್ತಿ ಬಂದ ಶಿರಹಟ್ಟಿ ಫಕೀರಸ್ವಾಮಿಗಳು ಬಾಗಿಲ ಮುಂದೆ ಇಳಿದರು. ಭಕ್ತರಿಗೆ ಆಶ್ಚರ್ಯ! ಉಭಯ ಶಿವಯೋಗಿಗಳು ಅನುಭಾವದ ಮಾತುಗಳಲ್ಲಿ ಕೆಲವು ವೇಳೆ ಮೈಮರೆತು ಆನಂದಿಸಿದರು. ಅಖಂಡೇಶ್ವರರ ಆತ್ಮ ಸಾಧನೆಯ ಉನ್ನತ ನಿಲುವನ್ನು ಮಹಿಮೆಯನ್ನು ಕಂಡು ತಾವು ಧನ್ಯರಾದೆವೆಂದು ಫಕೀರ ಸ್ವಾಮಿಗಳು ನುಡಿದರು ಅವರು ಅಂದು ಆಶ್ರಮದಲ್ಲಿ ಉಳಿಯಲು ಒಪ್ಪದೆ, ಪರಸ್ಪರ ಪ್ರಣಾಮಗಳಾದ ಬಳಿಕ ತಮ್ಮ ಉದ್ದೇಶಿತ ನೆರೆಯ ಗ್ರಾಮಕ್ಕೆ ತೆರಳಿದರು.

ಮರಿಸ್ವಾಮಿಗಳು ಗುರುಗಳ ಆಜ್ಞೆಯಂತೆ ವರ್ತಿಸುತ್ತ ದಕ್ಷತೆಯಿಂದ ಅವರ ಹಾಗೂ ಮಠದ ಸೇವೆ ಮಾಡ ತೊಡಗಿದರು. ಗ್ರಾಮಾಂತರ ಭಕ್ತರು ಈ ಆಶ್ರಮವನ್ನು ಮಠವೆಂದೇ ಸಂಬೋಧಿಸುತ್ತಿದ್ದರು. ಮಠದ ಉನ್ನತಿಗಾಗಿ ಮರಿಸ್ವಾಮಿಗಳು ತಮ್ಮ ಗಮನ ಕೊಡುತ್ತಿರುವದನ್ನು ತಿಳಿದು ಅಖಂಡೇಶ್ವರರಿಗೆ ಬಹಳ ಆನಂದವಾಯಿತ . ಒಂದು ಬಗೆಯ ಆಶ್ರಮ ಮಕ್ಕಳನ್ನ ಕರೆದು ಆ ತಾಯಿ ಸ್ವಪ್ನದ ಸಮಾಚಾರ ತಿಳಿಸಿದಳು. ಮಕ್ಕಳ ಮನಸ್ಸಿನಲ್ಲಿಯೂ ಭಕ್ತಿಭಾವ ಮನೆಮಾಡಿತು ತಮ್ಮ ತಂದೆಯ ಹೆಸರು ಉಳಿದು, ತಾಯಿಯ ಇಚ್ಛೆಯೂ ನೆರವೇರುವದು ಎಂದು ಬಗೆದು ಸ್ವಾಮಿಗಳು ತಪಗೈದ ಸ್ಥಳದಲ್ಲಿ ತೋರುಗದ್ದುಗೆ ನಿರ್ಮಿಸಿದರು. ಆ ಗದ್ದುಗೆಯನ್ನು ಆರಾಧಿಸಿ ಭಕ್ತಿಯಿಂದ ನಡೆದುಕೊಂಡವರ ಅಭೀಷ್ಟಗಳು ನೆರವೇರುತ್ತಲಿವೆ

ಅಖಂಡೆಪ್ಪ ದೊಡ್ಡಮಲ್ಲಪ್ಪ ಎಂಬುವರು ಕಳಸದಲ್ಲಿ ಶ್ರೀಮಂತರು. ಅವರಿಗೆ ಮಕ್ಕಳಿರಲಿಲ್ಲ. ಅಖಂಡೇಶ್ವರರ ಗದ್ದುಗೆಯಲ್ಲಿ ಭಕ್ತಿಯುಳ್ಳವರು. ತಮಗೆ ಸಂತಾನವಾದರೆ ಗದ್ದುಗೆಗೆ ಒಂದು ಸ್ಥಿರವಾದ ಸೇವೆ ಸಲ್ಲಿಸಲು

ಸಂಕಲ್ಪಿಸಿದರು. ಗಂಡು ಮಗು ಜನಿಸಿತು. ಅಖಂಡೇಶ್ವರ ಮಠವನ್ನು ಕಟ್ಟಿಸಿದರು. ಚೈತ್ರ ಶುದ್ಧ ೧೦ ರಂದು ಇಂದಿಗೂ ಆ ಮಠದ ಜಾತ್ರೆಯಾಗುತ್ತದೆ. ರಥೋತ್ಸವವಾಗುತ್ತದೆ.

ಮರಿ ಅಖಂಡೇಶ್ವರರೂ ಲಿಂಗ ತಪಸ್ವಿಗಳಾಗಿ ಮಹಿಮರಾಗಿ ಗುರುಗಳ ಗದ್ದುಗೆಯ ಆಶ್ರಯದಲ್ಲಿ ಹಲವಾರು ಲೀಲೆಗಳನ್ನು ಪ್ರಕಟಿಸುತ್ತಾರೆ. ಅವೆಲ್ಲವುಗಳನ್ನು ಇಲ್ಲಿ ವಿವರಿಸುವುದಕ್ಕೆ ಇದು ಸ್ಥಳವಾಗದು. ಅವರು ಭಕ್ತಿಪ್ರಿಯರಾಗಿ ಉದ್ಧಾರಕರಾಗಿ ಬಾಳಿ ಬಯಲಾದರು.

ಕೆಲವು ವರ್ಷವಿದ್ದು ಅಂದು ಕಳಸದಿಂದ ಹೊರಟ ಅಖಂಡೇಶ್ವರ ಸ್ವಾಮಿಗಳು ಉತ್ತರಕ್ಕೆ ನಡೆದರು. ಯಾವ ಊರು ಪಟ್ಟಣಗಳ ಮಾರ್ಗವಾಗಿ ಹೋಗುವೆವೆಂಬುದನ್ನು ಯಾರಿಗೂ ಹೇಳಿರಲಿಲ್ಲ. ಆ ಪ್ರದೇಶವೆಲ್ಲ ಮಹಮ್ಮದೀಯ ರಾಜ್ಯವಾದ್ದರಿಂದ ಕೆಲವು ಭಕ್ತರಿಗೆ ವಿವಂಚನೆಯಾಗಿತ್ತು. ಮಹಾಮಹಿಮರಿಗೆ ಯಾವ ಬಾಧೆಯೂ ಆಗದೆಂದು ಒಂದು ಸಮಾಧಾನ! ಉಳಿವೆಯಲ್ಲಿ ಸುಜ್ಞಾನ ನಿಧಿ ಚೆನ್ನಬಸವಣ್ಣನವರ ಮಹಮನೆಯ ದರ್ಶನ ಮಾಡಿಕೊಂಡು ಅಖಂಡೇಶ್ವರ ಸ್ವಾಮಿಗಳು ಕಲಬುರ್ಗಿ ಕಲ್ಯಾಣಗಳ ಕಡೆಗೆ ಹೊರಳಿದರು.

ಆರಗದಿಂದ ಹೊರಟ "ಜ್ಞಾನಜಲ ಸೆಲೆ" ಕಳಸದ ಭಕ್ತಜನರ ಹೃದಯ ಕಂದರದಲ್ಲಿ ಸ್ವಲ್ಪ ಮಟ್ಟಿಗೆ ದ್ರವಿಸಿ, ಮತ್ತೆ ಗುಪ್ತಗಾಮಿನಿಯಾಗಿ ಬಂದು ಜೋಗಿ ಕೊಳ್ಳದಲ್ಲಿ ಹೇಗೆ ಪುಟಿದು ಪಸರಿಸಿ, ಇಂದಿಗೂ ಎಂದೆಂದಿಗೂ ಜನಮನವನ್ನು ತಣಿಸುತ್ತಿರುವ ಅಖಂಡ ರಸರಾಶಿಯಾದುದನ್ನು ಮುಂದಿನ ಅಧ್ಯಾಯಗಳಲ್ಲಿ ತಿಳಿಯಬೇಕಾಗಿದೆ.

ಬೆಳಗಿನಲ್ಲಿ ಸ್ನಾನ ಪೂಜೆಗಳನ್ನು ಪೂರೈಸಿಕೊಂಡು ಮಲ್ಲಶೆಟ್ಟಿಗೌಡನು ಊರಿಗೆ ಸಮೀಪದ ತನ್ನ ಹೊಲಕ್ಕೆ ಬಂದಿದ್ದಾರೆ. ಆಳುಮಗನಿಗೆ ಬೆಳಸಿಗೆ ಕಿಚ್ಚು ಹಾಕಲು ಹೇಳಿ ಮಂಚಿಗೆಯನ್ನೇರಿ ನಿಂತಿದ್ದಾನೆ. ಮೂಡಲ

ಮುಗಿಲಲ್ಲಿ ಹೊಳೆಯುವ ಹಗಲೊಡೆಯನನ್ನು ನೋಡುತ್ತ ಕೈಮುಗಿದಿದ್ದಾನೆ. ಜಗವ ಬೆಳಗಿ ಬಲುಹ ಗೊಳಿಸಲು ತನ್ನ ಕರಗಳನ್ನು ಚಾಚಿ ಏರಿ ಬರುತ್ತಿರುವ ಆ ಸೂರ್ಯ ಕಿರಣಗಳನ್ನು ಸುತ್ತಮುತ್ತಲು ದೃಷ್ಟಿ ಹರಿಯುವವರೆಗೂ ಕಾಣುವ ಮಾಗಿ, ಬಂದ ಬಿಳಿಯ ಜೋಳದ ಬೆಳೆಗೆ ಮೆರಗು ಕೊಟ್ಟಿದೆ. ಭೂದೇವಿಯ ಸಿರಿಯ ಸೊಬಗು! ಮನಸಾರೆ ನೋಡಿ ಪ್ರಸನ್ನ ಚಿತ್ತನಾಗುತ್ತಿದ್ದಾನೆ ಗೌಡ! ಶಿವಪ್ರಸಾದ, ಶಿವನ ದಾನ! ಎಂಬ ಭಾವದಿಂದ ಶಿವನ ಸ್ಮರಿಸಿ ಆ ಸೊಬಗ ಸವಿಯುತ್ತಿದ್ದಾನೆ ಆತ! ಆಗಹೊರಳಿ ಹೊರಳಿ ನೋಡುತ್ತಿರುವಾಗ ಪಶ್ಚಿಮದಲ್ಲಿ ಜೋಳದ ಬೆಳೆಯ ಅಂಚಿನಲ್ಲಿ ಸಣ್ಣಾಗಿ ಹೊಗೆ ಹೊರಡುತ್ತಿರುವದು ಕಂಡಿತು. ಅಲ್ಲಿ ಬೇರೆ ಯಾರು ಬೆಂಕಿ ಹೊತ್ತಿಸುತ್ತಿದ್ದಾರೆ? ನಮ್ಮ ಶಿವಪ್ಪ ಆ ಕಡೆ ಹೊಗಿಲ್ಲ ಹೊಸಬರು ಯಾರೋ ಬಂದಂತೆ ಕಾಣುತ್ತದೆ ನೋಡುವೆ! ಎಂದು ಮಂಚಿಗೆಯಿಂದ ಇಳಿದು ಜೋಳದ ಬೆಳೆಯ ಹೊರಗೆ ಬಂದು, ಹಳ್ಳದ ದಂಡೆಯಲ್ಲಿ ನಿಂತು ನೋಡುತ್ತಾನೆ. ಕಂಡುದು ದಿವ್ಯ ದೃಶ್ಯ!

ಅನತಿ ದೂರದ ಹಳ್ಳದ ಬದಿಯಲ್ಲಿ ಜುಳು ಜುಳುನೆ ಹರಿಯುವ ಒಗ್ಗಿಯಲ್ಲಿ ಮಿಂದು ಜಂಗಮ ಮೂರ್ತಿಯೊಬ್ಬ ಕುಣಿಯುತ್ತಿದ್ದಾನೆ. ಶಿವ ಪೂಜೆಗೆ ಅಣಿಯಾಗುತ್ತಿದ್ದಾನೆ. ಬಲಗಡೆಯಲ್ಲಿದ್ದ ಚಿಕ್ಕ ಪೆಟ್ಟಿಗೆಯಿಂದ ಭಸ್ಮ, ರುದ್ರಾಕ್ಷಿ, ಧೂಪಾದಿ ಪೂಜೋಪಕರಣಗಳನ್ನು ತೆಗೆದು ಮುಂದಿರುವ ಮಡಿಯ ಪಾವಡದ ಮೇಲೆ ಇಡುತ್ತಿದ್ದಾನೆ. ಎಡಗಡೆಯ ಕೈಗೆ ಎಟಕುವ ಅಂತರದಲ್ಲಿ ಬೆಂಕಿಯನ್ನು ಹೊತ್ತಿಸಿಟ್ಟಿದ್ದಾನೆ. ಅಗ್ಗವಣಿ, ಪತ್ರಿ, ಪುಷ್ಪ ಮುಂತಾದವು ಮುಂದಿವೆ. ತಲೆಯ ಮೇಲೆ ಕಟ್ಟಿದ ಜಡೆ, ಕೊರಳರುದ್ರಾಕ್ಷಿ, ಹಾವುಗೆ, ಆರಲು ಹಾಕಿದ ಕಾವಿಯ ಬಟ್ಟೆ ಇವೆಲ್ಲವುಗಳನ್ನು ನೋಡಿದರೆ ಈತನು ಸಾಮಾನ್ಯ ಜಂಗಮನಾಗಿರದೆ ವೈರಾಗ್ಯ ಶೀಲನಾದ ಶಿವಯೋಗ ಸಾಧಕನಾಗಿರಬಹುದೆಂದು ಸಹಜವಾಗಿಯೆ ಕಾಣುತ್ತಿತ್ತು. ಸದ್ದಿಲ್ಲದೆ ಸಾಗಿದ್ದ ಈ ಶಿವಕ್ರಿಯೆಗಳನ್ನು, ಆನಂದದಲ್ಲಿ ಅರಳಿದ್ದ ಆ ಶಿವಯೋಗಿಯ ಮುಖಾರವಿಂದವನ್ನು ನೋಡು-ನೋಡುತ್ತ ಮಲ್ಲಶೆಟ್ಟಿಗೌಡರು ಹರುಷಪುಳಕಿತ

ನಾದನು. ಮನಸ್ಸು ಮಾರ್ದವಗೊಂಡಿತು. ಮುಂದೆ ಹೋಗಿ ವೈಯಕ್ತಿಕ ನಮಸ್ಕರಿಸುವ ಆತುರ ಅವನಿಗೆ, ಆದರೆ ಪೂಜೆಯ ವಲಯದಲ್ಲಿ ಪ್ರವೇಶ ಸಲ್ಲದೆಂಬ ಭಾವನೆ. ಗೌಡನು ಚಿಕ್ಕವನಾದರೂ ಮನೆತನದ ಸಕ್ರಿಯಾಚಾರಗಳ ಸಂಸ್ಕಾರದಿಂದ ಶಿವಭಕ್ತಿ ಸಂಪನ್ನನಾಗಿದ್ದನು. ಸಮಯೋಚಿತ ವಿಚಾರವೊಂದು ಅವನಿಗೆ ಹೊಳೆಯಿತು ಸಮಯೋಚಿತ ವಿಚಾರ ಮಾಡುವುದು ಅವನ ಹುಟ್ಟು ಗುಣ! ಅಲ್ಲಿಂದಲೇ ತಲೆಬಾಗಿ ಕೈಮುಗಿದು ಹೊರಳಿ ಹೊಲದೊಳಕ್ಕೆ ಹೋದನು. ಆಳುಮಗನು ಹತ್ತಿರ ಬಂದನು. ಅವನಿಗೆ ನೇರವಾಗಿ ಅವಸರದಿಂದ ಒಳ್ಳೆಯ ಸೀತನೆಗಳನ್ನು ಸುಟ್ಟು ಉದುರಿಸಿದ ಬಿಸಿಯ ಬೆಳಸಿಯ ಕಾಳುಗಳನ್ನು ಹಸನಾದ ವಸ್ತ್ರದಲ್ಲಿ ಕಟ್ಟಿಕೊಂಡು ಬಂದನು. ಅಷ್ಟರಲ್ಲಿ ಯತಿವರರ ಪೂಜೆ ಮುಗಿಯುವದರಲ್ಲಿತ್ತು ಒಳ್ಳೆಯ ಸಮಯ! ಮಲ್ಲಶೆಟ್ಟೆಪ್ಪ ಬೆಳಸಿಯ ಪಾವಡವನ್ನು ಬಿಚ್ಚಿ ಮುಂದಿಟ್ಟು ಸಾಷ್ಟಾಂಗವೆರಗಿದನು. ಅದನ್ನು ನೋಡಿ ಸ್ವಾಮಿಗಳು ಲಿಂಗಾವಸರಕ್ಕೆ ಬಂದುದು ಲಿಂಗಾರ್ಪಿತವಾಗುವದು. ಏಳಯ್ಯ ಭಕ್ತ ನಿನ್ನ ಭಕ್ತಿ ಶಿವನಿಗೆ ಸಲ್ಲುವದು" ಎಂದು ಇಷ್ಟಲಿಂಗಕ್ಕೆ ನೈವೇದ್ಯ ಮಾಡಿ ಒಂದಿಷ್ಟು ಕಾಳುಗಳನ್ನು ಬಾಯಲ್ಲಿ ಹಾಕಿಕೊಂಡು ಸಂತಸದಿಂದ 'ರುಚಿಯಾಗಿವೆ' ಬಾ ಕುಳಿತುಕೊಳ್ಳಪ್ಪಾ ಇಕೋ ಪ್ರಸಾದ ಎಂದು ಒಂದು ಮುಟ್ಟಿಗೆ ಕಾಳನ್ನು ಮರಳಿ ಅವನ ಉಡಿಗೆ ನೀಡಿದರು. ವಿನಯದಿಂದ ಬಾಗಿ ತಕ್ಕೊಂಡು ಗೌಡನು "ಸ್ವಾಮೀ ಸಾವಕಾಶವಾಗಿ ಸ್ವೀಕರಿಸಿ ಇನ್ನಷ್ಟು ಸೀತನೆ ಉದುರಿಸಿ ತರುತ್ತೇನೆ" ಎಂದು ಮತ್ತೆ ಹೊಲದೊಳಗೆ ಹೋದನು. ಬಹಳಷ್ಟು ಬಿಸಿಯಾದ ಬೆಳಸಿಯ ಕಾಳು ತಕ್ಕೊಂಡು ಬಂದು ಅಪ್ಪನವರ ಮುಂದಿನ ಪವಾಡದಲ್ಲಿ ಹಾಕಿ ತಾನಷ್ಟು ಇಟ್ಟುಕೊಂಡು ಕುಳಿತನು. ಮಾತಿಗಾರಂಭವಾಯಿತು.

" ಬಯಲಲ್ಲಿ ಸ್ನಾನ ಮಾಡಿದಿರಿ ಛಳಿಗಾಲವಿದು "

" ನಮಗಿದು ರೂಢಿ ತಮ್ಮಾ ! ಈಗ ಇನ್ನಷ್ಟು ಮುಂದಕ್ಕೆ ಹೋಗಬಹುದಾಗಿತ್ತು. ಆದರೆ ಇಲ್ಲಿಯ ಪರಿಸರ ವಿಶಾಲ ವಿಶ್ವದ ಸುಂದರ

ಮುಖದಂತೆ ಕಂಡಿತು. ಎರಡು ಹೊನಲು ಹರಿದು ಬಂದು ಕೂಡಿವೆ. ನಿರ್ಮಲವಾದ ನೀರು ! ಸುತ್ತೆಲ್ಲ ಶಿವನ ಸಂಪತ್ತು ! ಈ ಸೊಬಗಿನಲ್ಲಿ ಶಿವಪೂಜೆ ಮಾಡುವ ಮನಸ್ಸಾಯಿತು ತಮ್ಮಾ... ಇಳಿದೆ.

" ಆದಾಗಬಹುದು ಸ್ವಾಮಿ ! ಬೆಳಗಿನ ತಂಗಾಳಿ ಇನ್ನೂ ಬೀಸುತ್ತಿದೆ, ನೀರು ಬಹಳ ತಣ್ಣಗಿವೆ. ಊರಲ್ಲಿ ಬಂದಿದ್ದರೆ ಚೆನ್ನಾಗಿತ್ತು. ಇಲ್ಲಿ ನಮ್ಮ ಜನರೆಲ್ಲ ಭಕ್ತಿಸಂಪನ್ನರು. ಪರಸ್ಥಳದಿಂದ ಬರುವ ಜಂಗಮರನ್ನು ಕಂಡರೆ ಯಾರಾದರೂ ಕರೆದು ಸ್ನಾನ, ಪೂಜೆ, ಪ್ರಸಾದಗಳ ಸೇವೆ ಮಾಡುವರು.

"ತಮ್ಮಾ ! ಇಲ್ಲಿಹರಿದು ಬಂದು ಹಳ್ಳಕ್ಕೆ ಕೂಡುವ ಬುಗ್ಗಿಯ ನೀರು ಬಿಸಿಯಾಗಿಯೇ ಇದೆ. ನನಗೆ ಛಳಿಯಾಗಲಿಲ್ಲ ಈಗ ಲಿಂಗಪ್ರಸಾದಕ್ಕೆ ಶಿವನು ನಿನ್ನನ್ನು ತಂದೊದಗಿಸಿದ್ದಾನೆ. ನೋಡಿದೆಯಾ ಅವನ ಲೀಲೆ! ಯಾವ ಕಷ್ಟವಾಗಿದೆ ನನಗೆ! ತಮ್ಮಾ ನೀನು ಸಜ್ಜನ ನಿನ್ನ ಹೆಸರೇನು? ಹಿರಿಯರಿದ್ದಾರೆಯೇ?

"ಇಲ್ಲ ಸ್ವಾಮೀ, ತಾಯಿ-ತಂದೆ ಶಿವಾಧೀನರಾಗಿ ಆರು ವರ್ಷವಾದವು. ನನ್ನ ಹೆಸರು ಮಲ್ಲಶೆಟ್ಟೆಪ್ಪ, ನನ್ನ ತಂದೆ ಈ ಗ್ರಾಮದ ಗೌಡರು. ಆದರೂ ಈಗ ಗೌಡಕಿ ನನ್ನ ಕೊರಳಿಗೆ ಬಿದ್ದಿದೆ ತಮ್ಮಂಥವರ ಆಶೀರ್ವಾದದಿಂದ ಹೇಗೊ ನೀಗಿಸಿಕೊಳ್ಳುತ್ತಿದ್ದೇನೆ"

" ನೀನು ಅದಕ್ಕೆ ತಕ್ಕವನೇ ಆಗಿರುವೆ. ನಿನಗೆ ಶಿವನ ಕರುಣೆಯು ಒಲವಿದೆ''

" ತಮ್ಮ ಹೆಸರೇನು ಸ್ವಾಮೀ? "

" ಅಖಂಡೇಶ್ವರ" ಎಂದು

" ತಮ್ಮ ನಿಲುವಿಗೆ ತಕ್ಕ ಹೆಸರು. ಊರು ಯಾವದು? "

ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿಗೆ ಸೇರಿರುವ ಅರಗ [ಅರ್ಗಂ] ಅದು ಮಲೆನಾಡ ಪ್ರದೇಶ ನನಗೆ ಊರು ಕೇರಿಗಳೇನೂ ಇಲ್ಲ.

"ಈಗ ಪ್ರಯಾಣಿಸುತ್ತಿರುವದು ಎಲ್ಲಿಗಾಗಿ? ಬಹಳ ದೂರದಿಂದ ಬಂದಿರುವಿರಿ"

"ಹೌದು ಈ ಪ್ರಯಾಣ ಕೈಕೊಂಡು ಎರಡು ತಿಂಗಳಾಯಿತು. ಸಾವಕಾಶವಾಗಿ ಸಾಗಿದೆ. ಕಲ್ಯಾಣದ ಕಡೆಗೆ ಹೋಗಬೇಕೆಂದು ಒಂದು ದಾಯಿತು. ಅಲ್ಲಲ್ಲಿ ಅನೇಕ ಆಡಳಿತ ದೊರೆಗಳು, ದೇಸಾಯಿರು. ದೇಶಮುಖರು, ದಳವಾಯಿಗಳು, ಖಾನರು, ಅಧಿಕಾರ ನಡೆಸುತ್ತಿರುವ ಪ್ರದೇಶಗಳು, ನಮಗೆ ಯಾರಿಂದಲೂ ಏನೂ ಆಗಬೇಕಾಗಿಲ್ಲವಾದರೂ ತಮ್ಮ ತಮ್ಮ ಸೀಮೆಗಳಲ್ಲಿ ತಡೆತಡೆದು ಮುಂದೆ ಹೋಗಗೊಡುತ್ತಾರೆ. ಎಲ್ಲಿಯಾದರೂ ಭಾವುಕ ಭಕ್ತರು ಇದ್ದಲ್ಲಿ ನಿಮ್ಮಂತೆ ನಮ್ಮನ್ನು ಆದರಿಸಿ ಸತ್ಕರಿಸುತ್ತಾರೆ. ಸಂಕಲ್ಪದಂತೆ ಇಲ್ಲಿಯವರೆಗೆ ಬಂದಿದ್ದೇನೆ. ಕಲ್ಯಾಣವು ಶರಣರ ಪಾದ ಧೂಳಿಯಿಂದ ಪವಿತ್ರವಾದ ನೆಲ !"

"ಹೌದು ಪೂಜ್ಯರೆ, ಈಗ ಆ ಕಲ್ಯಾಣ ಕಟುಕರ ಕೇರಿಯಾಗಿದೆ" ಎಂದು ಸಾರುವ ಅಯ್ಯನವರು ಹೇಳಿದ್ದಾರೆ"

ಅಖಂಡೇಶ್ವರರು ಕಣ್ಣು ಮುಚ್ಚಿ ಕೆಲಹೊತ್ತು ಮೌನವಾಗಿ ಕುಳಿತರು. ಮತ್ತೆ ಕಣ್ತೆರದು ನಿಟ್ಟಿಸಿರು ಬಿಟ್ಟು! ಇದೇನು ಹೇಳುತ್ತಿರುವೆ ಗೌಡರೇ?"

"ಹೌದು ಸ್ವಾಮಿಗಳೇ ಅಹ್ಮದನಗರ, ಬೀದರ ರಾಜ್ಯಗಳನ್ನು ಗೆದ್ದುಕೊಂಡ ಬಳಿಕ ದಿಲ್ಲಿಯ ಬಾದಶಹರು, ಚಾಲುಕ್ಯರ ಕಾಲದ ಕಲ್ಯಾಣದ ಭದ್ರವಾದ ಕೋಟೆಯಲ್ಲಿ ತಮ್ಮದೊಂದು ಸೇನೆಯನ್ನು ತಂದಿಟ್ಟಿದ್ದಾರೆ. ಆ ದಂಡಾಳುಗಳಿಗೆ ಮಾಂಸಹಾರದ ಪೇಟೆ ಆಗಿದೆ ಕಲ್ಯಾಣ"

"ಇದು ಸ್ಥಿರವಲ್ಲ ಗೌಡರೇ"

"ನಿಜ! ಇಂದಿಗೆ ಮಾತ್ರ ಇಂದಿನ ಕಲ್ಯಾಣ ನಗರವನ್ನು ನೋಡುವ ದಕ್ಕಿಂತ ಹಿಂದಿನ ಕಲ್ಯಾಣದ ಶರಣರನ್ನು ಸ್ಮರಿಸಿ ಸಂತೋಷ ಪಡುವದು ಲೇಸೆಂದು ಹಿರಿಯರು ಹೇಳುತ್ತಾರೆ."

"ಹೂಂ ಒಂದಿಲ್ಲೊಂದು ದಿನ ಈ ಬಂಧನದಿಂದ ಬಿಡುಗಡೆ ಹೊಂದಿ ಕಲ್ಯಾಣವು ತನ್ನ ಪವಿತ್ರ ಕುರುಹುಗಳನ್ನು ತೋರಿ ಸಜ್ಜನರ ಬಗೆಯನ್ನು ಬೆಳಗದೆ ಇರಲಾರದು"

" ಎಂದಾದರೂ ಆದೀತು ಅಪ್ಪನವರೇ! ಶಿವನಾಟ ಹೀಗೆ ಎಂದು ಹೇಳಲಿಕ್ಕಾದೀತೆ?"

"ತಮ್ಮಾ ನೀನು ಜಾಣನಾಗಿದ್ದೀ! ಪಾಠಶಾಲೆಯಲ್ಲಿ ಓದಿದ್ದೀಯಾ?"

"ಓದೀನಿ ಸ್ವಾಮೀ, ಹುಜೂರ ಕೆಲಸಕ್ಕೆ ಉರ್ದು ಓದು ಬರಹ ಬರಲೇಬೇಕು. ಮೌಲ್ವಿಗಳಲ್ಲಿ ಉರ್ದು ಕಲಿತು ಜಂಗಿನ ಅಯ್ಯನವರಲ್ಲಿ ಕನ್ನಡ ಅಕ್ಷರಗಳನ್ನು ಕಲಿತಿದ್ದೇನೆ. ತಮ್ಮಂಥವರು ಹೇಳಿಕೊಟ್ಟ ಶರಣರ ವಚನಗಳನ್ನು ಬರೆದಿಟ್ಟುಕೊಂಡು ಕಂಠಪಾಠ ಮಾಡುತ್ತಿದ್ದೇನೆ "

"ಪುಣ್ಯವಂತಮಗು ನೀನು ನಿನಗೆ ಸತ್ಸಂಗದ ಆಸಕ್ತಿ ಇದೆ. ಶಿವನಲ್ಲಿ ಭಕ್ತಿ ಇದೆ. ಶಿವನ ಕರುಣೆ ಸದಾ ನಿನ್ನ ಮೇಲಿರುವದು"

"ತಮ್ಮ ಆಶೀರ್ವಾದ" ಗೌಡ ಎದ್ದು ವಂದಿಸಿದ. ಬೆಳಸಿ ತಿಂದು ಮುಗಿಸಿ ಆಗಿತ್ತು. ಅಖಂಡೇಶ್ವರರು ತಮ್ಮ ಸಾಮಗ್ರಿಗಳನ್ನು ಸಾವರಿಸಿ ಗಂಟು ಕಟ್ಟುತ್ತ, ಗೌಡರೇ ಮುಂದಿನ ಪ್ರಯಾಣ ಬೆಳಸುತ್ತೇನೆ"
"ಅದೇಕೆ ಸ್ವಾಮಿ ? ಈಗ ಮನೆಗೆ ಹೋಗೋಣ ಮಧ್ಯಾಹ್ನದ ತಮ್ಮ ಪೂಜಾ ಪ್ರಸಾದ ಮನೆಯಲ್ಲಿ ನಡೆಯಲಿ ನಿಮ್ಮ ಸೇವೆಗೆ ಅವಕಾಶ ಕೊಟ್ಟು ಕರುಣಿಸಬೇಕು" ಎಂದು ವಂದಿಸಿ ಬಿನ್ನವಿಸಿದನು.

ಕ್ಷಣಹೊತ್ತು ಆಲೋಚಿಸಿ, ಅಖಂಡೇಶ್ವರರು "ಆಗಲಪ್ಪ" ಎಂದರು. ಪೂಜೆಯ ಗಂಟನ್ನು ಬಗಲಲ್ಲಿ ಇರಿಸಿಕೊಂಡು ಹಾವುಗೆ ಮೆಟ್ಟಿ ಸಿದ್ಧರಾದರು. ಸಂತೋಷಪಟ್ಟ ಗೌಡರು ಸ್ವಾಮಿಗಳನ್ನು ಕರೆದುಕೊಂಡು ನಡೆದರು.

ಶರಣರ ವಚನಗಳನ್ನು ಹಾಡುತ್ತ ಭಿಕ್ಷೆಗಾಗಿ ಬರುವ ಜಂಗಮರು ಜೇವರಗಿಯ ಓಣಿಯಲ್ಲಿ ಅಲೆದಾಡುವದು ಅಪರೂಪವೇನಲ್ಲ. ಜನರು ತಮ್ಮ ಕೆಲಸದಲ್ಲಿ ತಾವಿರುತ್ತಿದ್ದರು. ಆದರೆ ಈಗ ಗೌಡರನ್ನು ಹಿಂಬಾಲಿಸಿ ಬರುವ ಶಿವಲಾಂಛನದ ಈ ತೇಜಸ್ಸು ಜಂಗಮ ಮೂರ್ತಿಯನ್ನು, ಜನರು ಕೈಮುಗಿದು ನಮಿಸುತ್ತ ನಿಂತು ನೋಡುತ್ತಿದ್ದರು. ಅವನ ಸ್ಫುರದ್ರೂಪ, ನಿಶ್ಚಲನೋಟ ನಯದ ನಡಿಗೆ ಅಷ್ಟು ಆಕರ್ಷಕವಾಗಿದ್ದವು. ದಾರಿಯಲ್ಲಿ ಇದ್ದ ಗೌಡರ ಸ್ನೇಹಿತರು ಕೆಲವರು ಸ್ವಾಮಿಗಳಿಗೆ ನಮಿಸಿ ಹಿಂಬಾಲಿಸಿ ಬಂದರು. ಗೌಡರ ಪತ್ನಿ ದೊಡ್ಡಮ್ಮ ಸುವಿಚಾರಿ, ಸದಾಚಾರಿ, ಮನೆಯ ಹೊರಾಂಗಣದಲ್ಲಿ ಗೌಡರು ಅವರ ಸ್ನೇಹಿತರು, ಶಿವತೇಜದಿಂದ ಶೋಭಿತನಾದ ಒಬ್ಬ ಜಂಗಮಮೂರ್ತಿಯೊಡನೆ ಬರುತ್ತಿರುವದನ್ನು ಒಳಗಿನಿಂದಲೇ ನೋಡಿದಳು

ಕೂಡಲೇ ತುಂಬಿದ ತಂಬಿಗೆ, ಭಸ್ಮ, ತಕ್ಕೊಂಡು ಬಾಗಿಲಿಗೆ ಬಂದಳು. ಶಿವಮೂರ್ತಿಯನ್ನು ಮುಂದೆ ಮಾಡಿ ಉಳಿದವರು ಹಿಂದೆ ನಿಂತರು. ಗೌಡತಿ ಸ್ವಾಮಿಯ ಪಾದ ತೊಳೆದು ಭಸ್ಮ ಧರಿಸಿ ವಂದಿಸಿದಳು. ಎದ್ದು ಮತ್ತೆ ಕೈಮುಗಿದು 'ಅಪ್ಪಾ ! ಒಳಗೆ ದಯಮಾಡಿಸಬೇಕು: ಎಂದಳು. ಆಗಲಿ ತಾಯೀ' ಎಂದ ಸ್ವಾಮಿ ಹೊಸ್ತಿಲೊಳಗೆ ಅಡಿಯಿಟ್ಟರು. ಪತಿಗೆ ತಕ್ಕ ಪತ್ನಿ ಸುವಿಚಾರಿ, ಸದ್ಭಕ್ತಿ ಸಂಪನ್ನೆ ! ಎಂಬುದನ್ನು ಸ್ವಾಮಿ ಅಷ್ಟರಲ್ಲಿಯೇ ಅರಿತುಕೊಂಡು ಬಿಟ್ಟರು. ಸದರಿನಲ್ಲಿ ಆಸನ ಹಾಕಿ ಸ್ವಾಮಿಗಳನ್ನು ಕೂಡ್ರಿಸಿ ಎಲ್ಲರೂ ನಮಸ್ಕಾರ ಮಾಡಿದರು.

ಇನ್ನೊಂದು ತಾಸಿಗೆ ಅಪ್ಪನವರು ಜಳಕ ಮಾಡಲಿ ಅಡಿಗೆ ಆಗುತ್ತದೆ.

ಎಂದು ಪಡಸಾಲೆಯಲ್ಲಿ ನಿಂತು ಹೇಳಿ ದೊಡ್ಡವ್ವ ಗೌಡತಿ ಒಳಗೆ ಹೋದಳು.

ಹತ್ತಿರ ಕುಳಿತ ತನ್ನ ಸ್ನೇಹಿತರ ಹೆಸರುಗಳನ್ನು ಗೌಡರು ಸ್ವಾಮಿಗಳಿಗೆ ಪರಿಚಯ ಮಾಡಿದರು. ಅವರಲ್ಲಿ ಜಿಜ್ಞಾಸುಗಳು, ಅನುಭವಿಗಳು ವಿನಯ ಶೀಲರೂ,ಆಗಿದ್ದರು. ಅವರಲ್ಲಿ ಓರ್ವ "ಸ್ವಾಮಿಗಳಿಗೆ ಯಾವ ಚಿಂತೆಯೂ ಇರುವದಿಲ್ಲ ನಿಶ್ಚಿಂತರು" ಚಿಂತೆ ಯಾರನ್ನು ಬಿಟ್ಟಿಲ್ಲ. ದೇಹವಿರುವವರೆಗೆ ಸ್ವಲ್ಪ ಸ್ವಲ್ಪ ಚಿಂತೆ ಇರುವದೇ ! ಆಗಲೇ ಗೌಡರು ಮನೆಗೆ ಕರೆಯುವ ಮೊದಲು ನಾನು ಕಂತೆಯ ಭಿಕ್ಷೆಯ ಚಿಂತೆ ಮಾಡ ಹತ್ತಿದ್ದೆ ಎಲ್ಲರೂ ಖೊಳ್ಳನೆ ನಕ್ಕರು.

"ಸುಮ್ಮನಿದ್ದರೆ ಶರೀರದ ಹಸಿವೆ. ತಾನೇಕೆ ಕೇಳಿತು? " ಅಪ್ಪನವರ ದೇಹವನ್ನು ಪೋಷಿಸಲೇಬೇಕಲ್ಲವೇ ?"

"ಅವಶ್ಯವಾಗಿ ಪೋಷಿಸಬೇಕು. ಸಕಲ ಧರ್ಮಾಚಾರಕ್ಕೂ ಪರಹಿತ ಮಾಟಿ ಪುಣ್ಯ ಗಳಿಸುವದಕ್ಕೂ ಶರೀರವೇ ಸಾಧನೆ. ಶಿವಯೋಗ ಸಾಧನೆ. ಶರೀರದ ಮೂಲಕವಾಗಿಯೇ ನಡೆಯುವದು. ಸಿದ್ಧಿಯ ಮೊದಲು ಶರೀರ ಪತನವಾದರೆ ಸಾಧನೆ ನಿಂತು ಹೋಗುತ್ತದೆ. ಸಾಧಕ ಶಿವಯೋಗ ಮತ್ತೆ ಹುಟ್ಟುವ ಕಷ್ಟಕ್ಕೆ ಒಳಗಾಗಬೇಕಾಗುವದು. ಯೋಗ-ಭೋಗಗಳೆರಡಕ್ಕೂ ಶರೀರವನ್ನು ಕಾಪಾಡಬೇಕು'.'

"ಹಾಗಾದರೆ ಅಪ್ಪನವರೆ ನಾವು ಮನ ಬಂದದ್ದನ್ನೆಲ್ಲ ತಿನ್ನುವದು ದೇಹರಕ್ಷಣೆಗಾಗಿಯೇ ಸರಿಯಾಯಿತು. ಆದರೂ ಬೇನೆ ಬೀಳುತ್ತೇವೆ. ಬೇಗ ಸಾಯುತ್ತೇವೆ ನಾಗಣ್ಣ ನುಡಿದ.

"ಬಯಸಿದ್ದನ್ನೆಲ್ಲ ತಿನ್ನುವುದು ಭೋಗಲಾಲಸೆ. ಮನಬಯಸಿದಂತೆ ದೇಹಬಯಸುವದಿಲ್ಲ. ಮನಬಂದಂತೆ ತಿನ್ನುವದು ದೇಹಕ್ಕೆ ಅಪಾಯ.

ದುರ್ವ್ಯಸನ ಮಾಡುವದು ದುರಾಶೆ. ದುರ್ಮೋಹಗಳಿಗೆ ಬಲಿಯಾಗುವದು ಇವುಗಳಿಂದ ಶರೀರ ಕೆಟ್ಟುಹೋಗುವದು ಹಾಗೆ ಮಾಡದೆ ಶರೀರಕ್ಕೆ ಅಗತ್ಯ ವಾದ ಆಹಾರ ಮಾತ್ರ ಕೊಟ್ಟು ರಕ್ಷಿಸಿಕೊಳ್ಳಬೇಕು. ದೇವರು ಕೊಟ್ಟ ದೇಹವನ್ನು ಕೆಡಿಸಿಕೊಳ್ಳಬಾರದು. ಅದರ ಸದುಪಯೋಗ ಮಾಡಿಕೊಳ್ಳ ಬೇಕು ಅದರ ನೆಲೆಯಲ್ಲಿ ಆತ್ಮೋದ್ಧಾರ ಸಾಧಿಸಬೇಕು. ಮಾನವ ಶರೀರ ಶಿವನ ಪ್ರಥಮ ಪ್ರಸಾದ. ಅದನ್ನು ಶಿವಕಾರ್ಯಕ್ಕೆ ಸಲ್ಲಿಸಬೇಕು.

ಗಂಭೀರವಾಗಿ ಹೇಳಿದ ಅಖಿಲೇಶ್ವರರ ಮಾತು ಎಲ್ಲರ ಮನಕ್ಕೆ ಹೊಳೆಯಿತು.

ವೀರಣ್ಣ ಕೇಳಿದ "ಹಸಿವೆಯ ಹಂಗು ಹರಿಯುವದು ಸಂಪೂರ್ಣ ವಾಗಿ ಶರೀರದ ಚಿಂತೆ ನೀಗುವದು ಯಾವಾಗ ಅಪ್ಪನವರೇ ?

"ದೇಹಭಾವ ಅಡಗಿದಾಗ! ಸಾಧಕನು ತನು ತಾನಲ್ಲವೆಂದೇ ಸಾಧನೆ ಯಲ್ಲಿ ಅಡಿ ಇಡುತ್ತಾನೆ ಆದರೆ ಶಿವಯೋಗಿಗೆ ಸಿದ್ಧಿಯುಂಟಾದಾಗಲೇ ಅದರ ಅರಿವು ಮರೆಯಾಗುತ್ತದೆ. ಆಗ ಅದರ ಚಿಂತೆ ಸಮಾಜವನ್ನು ಸೇರು ತ್ತದೆ. ಆ ಶರೀರವು ಸಮಾಜದ ಸೊತ್ತಾಗುತ್ತದೆ. ಸಮಾಜವು ಅದನ್ನು ಪೋಷಿಸುತ್ತದೆ ಅದರ ಮೂಲಕವೆ ಆ ಶಿವಯೋಗಿ ನೀಡುವ ಜ್ಞಾನದ ಬೆಳಕನ್ನು ಸಮಾಜವು ಅನುಭವಿಸುತ್ತದೆ.

"ಶಿವಯೋಗಿಗೂ, ಸಮಾಜಕ್ಕೂ ನಂಟು ಇದೆ. ಎನ್ನಿರಿ"

"ತುಂಬಾ ಇದೆ. ಸಮಾಜವು ಬಾಹ್ಯಾಂಗವಾಗಿ ಶಿವಯೋಗಿಯ ಯೋಗಕ್ಷೇಮ ನೋಡಿಕೊಳ್ಳುತ್ತದೆ. ಶಿವಯೋಗಿಯು ತನ್ನ ಜ್ಞಾನೋಪ ದೇಶದಿಂದ ಸಮಾಜದ ಹೃದಯವನ್ನು ಹಸನಾಗಿಸುತ್ತಾನೆ. ಲೋಕೋದ್ಧಾ ರವು ಅವನ ಕರ್ತವ್ಯವಾಗುತ್ತದೆ. ಇದೇ ಶರಣರ ಸಮಾಜ ಧರ್ಮದ ಮೂಲ ತತ್ವ"

"ನಿಜ! ನಿಜ!" ಎಂದು ತಲೆದೂಗಿದರು. ಆ ತರುಣ ಜಿಜ್ಞಾಸುಗಳು ಅಪ್ಪಾ ಅವರೆ, ಮುಂದಿನ ನಿಮ್ಮ ಪ್ರಯಾಣ ಎಲ್ಲಿದೆ ? ನಾಲ್ಕು ದಿನ ತಾವು ವಾಸಿಸಿರಿ ತಮ್ಮ ಪ್ರಸಾದ ವಾಣಿಯನ್ನು ಕೇಳಬೇಕೆನಿಸುತ್ತದೆ. ನಾವೆಲ್ಲ ಭಕ್ತರು ನಿಮ್ಮ ಸೇವೆ ಮಾಡುತ್ತೇವೆ" ಎಂದು ವೀರಣ್ಣ ಎಂದನು. "ಅವರು ಕಲ್ಯಾಣಕ್ಕೆ ನಡೆದಿದ್ದಾರೆಂದು" ಸಂಗಣ್ಣ ನುಡಿದ. ಅಲ್ಲಿಗೇಕೆ ಹೋಗುತ್ತೀರಿ ಇಲ್ಲಿಯೇ ಇದ್ದು ಬಿಡ್ರಿ" ಶಿವಪ್ಪ ಕೈಮುಗಿದೆಂದನು.

" ಕಲ್ಯಾಣವೀಗ ಕಟುಕರಕೇರಿ" ನಾಗಣ್ಣನ ನುಡಿ.

"ನಾನದನ್ನು ಸ್ವಾಮಿಗಳಿಗೆ ಹೇಳಿದ್ದೇನೆ" ಗೌಡರೆಂದರು.

" ಶರಣರ ಮಂದಿರಗಳು, ಸಾಧನೆಯ ಗುಹೆಗಳು. ಈಗ ಗಿಡಗಂಟಿಗಳಿಂದ ಮುಚ್ಚಿದ ಕಾಡುಗವಿಗಳಾಗಿವೆ. ಕೆರೆ, ತೊರೆ, ತೀರ್ಥಗಳು ಮಲಿನವಾಗಿವೆ ಹೋಗಿ ನಿಂತರೆ ಹಿಂದಿನ ನೆನಹಿನಿಂದ ಹೃದಯ ಮರಳಿಸಬೇಕಾಗಿದ್ದ ಶರಣರ ಜೀವನದ ಕುರುಹುಗಳು ಅವರು ನಡೆದಾಡಿದ ನೆಲವು ಈಗ ಕಳವಳಕ್ಕೂ ದುಃಖಕ್ಕೂ ಕಾರಣವಾಗಿವೆ" ಹೀಗೆ ವಿವರಿಸಿ ಹೇಳಿದನು ವೀರಣ್ಣ.

" ಕಲ್ಯಾಣದಲ್ಲಿಯ ಎಲ್ಲ ಶರಣರ ಅನುಭಾವದ ನುಡಿಗಳು ಇಂದಿಗೆ ಸಾವಿರಾರು ಪ್ರತಿಗಳಾಗಿ ಗ್ರಾಮ ಗ್ರಾಮಗಳಲ್ಲೆಲ್ಲ ದೊರೆಯುತ್ತವೆ. ಅವುಗಳಲ್ಲಿಯ ಆಧ್ಯಾತ್ಮಿಕ ತತ್ವಗಳ ಮನನದಿಂದ ಆತ್ಮಸಾಧನೆ ಮಾಡಬಹುದು" ಅನುಭಾವಿ ಶಿವಬಸಪ್ಪ ವಿನಯದಿಂದ ಹೇಳಿದರು.

ಆ ಮಾತುಗಳನ್ನು ಗಮನಿಸುತಿದ್ದು ಅಖಂಡಪ್ಪನವರು ಶಿವಪ್ಪನ ಮಾತು ಕೇಳಿ ಹೌದು ಬಸವಾದಿ ಪ್ರ ಮ ಥ ರ ವಚನಗಳೇ ಮುಖ್ಯ ನೂರಿನ್ನೂರು ವರ್ಷಗಳಲ್ಲಿ ಎರಡು ಸಲ ಅವುಗಳ ಸಂಗ್ರಾಹಕ ಪ್ರತಿಗಳು ನಿರ್ಮಾಣವಾಗಿ ಪ್ರಸಿದ್ಧಿಸಲ್ಪಟ್ಟವು. ಬಸವಣ್ಣನವರ ವಚನಗಳ ಓತಿಕಟ್ಟಿ ಹತ್ತಿರವಿದೆ. ಬೇರೆ ವಚನಗಳ ಕಟ್ಟು ಸಿಕ್ಕಾಗಲೂ ನೋಡುತ್ತೇವೆ.

"ಎಲ್ಲವನ್ನು ಕೇಳಿದಿರಿ ಅಪ್ಪನವರೇ ಇಲ್ಲಿಯೇ ಇದ್ದು ಬಿಡಿರಿ ನಿಮ್ಮ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆ ಇವರೆಲ್ಲರೂ ನನ್ನಂತೆಯೇ ಪರಾಮರಿಕೆ ಮಾಡುತ್ತಾರೆ" ಗೌಡ ಹೇಳಿದ ಧ್ವನಿಯೊಡನೆ ಎಲ್ಲರೂ ಇದ್ದು ಬಿಡಿರಿ, ಇದ್ದು ಬಿಡಿರಿ ಎಂದು ಒಟ್ಟಾಗಿಯೆ ಅಗ್ರಹ ಮಾಡಿದರು.

"ನೀವು ನನ್ನ ಹೃದಯವನ್ನು ಗೆದ್ದಿದ್ದೀರಿ. ನಿಮ್ಮ ಮಾತ ಮೀರಲಿಕ್ಕಾಗದು. ಆದರೆ ಜನರ ಗದ್ದಲದಲ್ಲಿ, ಸಂಸಾರಿಕರ ಜಂಜಡದ ಸನಿಹದಲ್ಲಿ ನನಗೆ ಇರಲಿಕ್ಕಾಗದು. ನನ್ನ ಅನುಷ್ಠಾನ ಸಾಗದು. ಊರ ಹೊರಗೆ ನನಗೊಂದು ಆಶ್ರಮ ರಚಿಸಿ ಕೊಡಿರಿ ಒಂದೆರಡು ದಿನಗಳ ಮಟ್ಟಿಗಾದರೆ ಗುಡಿಗುಂಡಾರಗಳಲ್ಲಿ ಇರುತ್ತಿದ್ದೆ" ಅವಶವಾಗಿ ಆಶ್ರಮ ರಚಿಸಿ ಕೊಡುತ್ತೇವೆ. ನಿಮಗೆ ತೃಪ್ತಿಯಾಗುವಂತೆ ಅದನ್ನು ಅಭಿವೃದ್ಧಿ ಪಡಿಸುತ್ತೇವೆ. ನಿಮಗೆ ಅವಶ್ಯವಿದ್ದ ಸೇವೆಯನ್ನು ಚ್ಯುತಿಯಿಲ್ಲದೆ ಮಾಡಲು ಸಿದ್ಧರಿದ್ದೇವೆ.

ಗೌಡರು ದೃಢವಾಗಿ ನುಡಿದರು. ಅವರ ಗೆಳೆಯರು ಸೈ ನಾವೆಲ್ಲ ಸಿದ್ಧರು" ಎಂದು ಚಪ್ಪಾಳೆ ತಟ್ಟಿದರು.

"ಹಾಗಾದರೆ ಇಲ್ಲಿಯೇ ಉಳಿಯುವೆ. ನನಗಾಗಿ ಒಂದು ಗುಡಿಸಲು ಚಪ್ಪರವಾದರೂ ಸಾಕು ಇಂದು ಸಂಜೆಯ ಅನುಷ್ಠಾನಕ್ಕೆ ಒಂದು ಚಿಕ್ಕ ಗುಡಿಸಲು ಆದರೂ ಆಗಲಿ ನಿಮ್ಮ ಹೃದಯ ದೊಡ್ಡದಿದೆ. ಅಲ್ಲಿ ವಿಹರಿಸುವೆ ಹೆಚ್ಚಿಗೇನು ಬೇಕು ನನಗೆ?

"ಜೈ ಬಸವೇಶ" ಎಂದು ಜೈಘೋಷ ಮಾಡಿ ಎಲ್ಲರೂ ವಂದಿಸಿ ಎದ್ದರು, ಅಡಿಗೆಯನ್ನು ನೋಡುತ್ತ ಪಡಸಾಲೆಗೆ ಬಂದು ನಿಂತಿದ್ದ ದೊಡ್ಡಮ್ಮಗೌಡತಿ ಸದರದಲ್ಲಿ ನಡೆದಿರುವ ಮಾತುಗಳನ್ನು ಆಲಿಸುತ್ತಿದ್ದಳು. ಕೊನೆಯ ನಿರ್ಣಾಯಕ ಸಂಭಾಷಣೆಗಳನ್ನು ಕೇಳುತ್ತಿದ್ದಂತೆಯೇ ಆಕೆಯ

ಅಂತರಂಗದ ಸಂತಸ ಉಕ್ಕಿ ಬಂದು ಅಲ್ಲಿಂದಲೇ ತಲೆಬಾಗಿ ಕೈಮುಗಿದಳು.

ಸಾಮಾನ್ಯ ಜಂಗಮನಂತೆ ಬಂದ ಒಬ್ಬ ಅಯ್ಯನವರ ಹಾಗೂ ಇಲ್ಲಿಯ ಭಕ್ತ ಸಮುದಾಯದ ನಡುವೆ ಇಷ್ಟು ಸ್ವಲ್ಪ ಸಮಯದಲ್ಲಿ ಗುರುಶಿಷ್ಯ ಸಂಬಂಧ-ದೇವಭಕ್ತ ಸಂಬಂಧ. ಇಷ್ಟು ತೀವ್ರ ಗತಿಯಿಂದ ಕುದುರುತ್ತಿರುವುದು. ಮುಂದೆ ಬರುವ ಒಂದು ಯಾವ ಮಹಾ ಬೆಳಕಿನ ಮುನ್ಸೂಚನೆಯಾಗಿರುವದೋ ? ಅದು ಅದರ ಸಂಕಲ್ಪ ಮಾಡಿದ ಶಿವನಿಗೆ ಗೊತ್ತು.

ಸ್ವಾಮಿಗಳು ಸ್ನಾನಕ್ಕೆ ಬರಲಿ. ಎಂದು ಗೌಡತಿಯು ಸೂಚಿಸಲು ಗೌಡನು ಅಖಂಡೇಶ್ವರರನ್ನು ಕರೆದುಕೊಂಡು ಒಳಗೆ ಹೋದನು. ಅಲ್ಲಿ ಸ್ನಾನ-ಪೂಜೆ-ಪ್ರಸಾದ ಸೇವೆಗಳಾದವು. ಆ ದಂಪತಿಗಳ ನಿರ್ಮಲ ಭಾವದ:ಸೇವೆಗೆ ಸಂತುಷ್ಟರಾದ ಸ್ವಾಮಿಗಳು ಹರಸುತ್ತ ಹೊರಗೆ ಬಂದರು ಅಷ್ಟರಲ್ಲಿ ಊಟ ತೀರಿಸಿ ಬಂದ ಪ್ರಮುಖರು ಇತರರು, ಹೋಗೆ ನೆರೆದಿದ್ದರು.

ಗೌಡರು ಅವರೆಲ್ಲರನ್ನು ಕೂಡಿ ಅಪ್ಪನವರನ್ನು ವಂದೆ ಮಾಡಿ ಕೊಂಡು ಸ್ಥಳ ಗೊತ್ತು ಮಾಡಲು ನಡೆದರು. ಅಖಂಡೇಶ್ವರರು ಬೇಗಿನಲ್ಲಿ ಅನುಷ್ಠಾನಗೈದ ನಿಸರ್ಗ ಸೌಂದರ್ಯದ ನೆರೆಯಲ್ಲಿ ಗೌಡರ ಹೊಲದ ಒಂದು ಸ್ಥಳದಲ್ಲಿ ನಿಂತು 'ಇಲ್ಲಿ ಇರಲಿ' ಅಂದರು. ಕೂಡಲೇ ಗೌಡರು ಅಲ್ಲಿ ಆಶ್ರಮಕ್ಕೆ ತಕ್ಕಷ್ಟು ಭೂಮಿಯನ್ನು ಸ್ವಾಮಿಯ ಪಾದಕ್ಕೆ ಅರ್ಪಿಸಿ ವಂದಿಸಿದರು. ತತಕ್ಷಣದಲ್ಲಿ ಸಾಕಷ್ಟು ಉತ್ಸಾಹಿಗಳು ಸಲಕರಣೆಗಳೊಡನೆ ಹೊರಟರು. ಕಟ್ಟಿಗೆ, ಸೋಗೆ, ಸೊಪ್ಪು, ಸೊರಬು ತಂದರು. ಐದು ಗಳಿಗೆಯಲ್ಲಿ ದಪ್ಪವಾಗಿ ಹೊಚ್ಚಿದ ಬೆಚ್ಚಗಿನ ಭದ್ರವಾದ ಗುಡಿಸಲು ಸಿದ್ಧವಾಯಿತು. ನೆಲ ಬಳಿದು ಹಾಸಿಗೆ ಹಾಕಿ ಸಾಮಾನು ತಂದಿಟ್ಟರು. ಸಂಜೆ ವೇಳೆಗೆ ಸ್ವಾಮಿಗಳನ್ನು ಅಲ್ಲಿ ಮೂರ್ತ ಮಾಡಿಸಿ ಮಂಗಲ ಆರತಿ ಮಾಡಿ ವಂದಿಸಿ ಅಪ್ಪಣೆ ಪಡೆದು ಎಲ್ಲರೂ ಮರಳಿದರು.

ಸ್ವಾಮಿಗಳ ಶಿವಯೋಗ ಸಾಧನೆ ತೀವ್ರಗೊಂಡಂತೆ ಆಶ್ರಮದ ಅಭಿವೃದ್ಧಿಯೂ ಆಯಿತು. ದರ್ಶನಕ್ಕೆ ಬಂದು ಕುಳ್ಳಿರುವ, ಕೇಳಲಿರುವ ಜನರಿಗೆ ಲಿಂಗಾಂಗ ಸಾಮರಸ್ಯ ಜ್ಞಾನವನ್ನು ಬೋಧಿಸುತ್ತಿದ್ದರು. ಶರಣರ ವಚನಗಳ ಮೂಲಕ ಷಟಸ್ಥಲ ಶಾಸ್ತ್ರವನ್ನು ವಿಶದೀಕರಿಸುತ್ತಿದ್ದರು. ಅದ ಕ್ಕಾಗಿ ಅನುಭವ ಮಂಟಪದ ದೊಡ್ಡ ಚಪ್ಪರ [ಪರ್ಣಕುಟೀರ] ಹುಟ್ಟಿತು. ಸ್ವಾಮಿಗಳ ಲಿಂಗಾನುಷ್ಠಾನಕ್ಕೆ ಏಕಾಂತದ ಬೇರೆ ಗುಡಿಸಲು ರಚಿಸಲ್ಪ ಟ್ಟಿತು. ಶ್ರೀಗಳ ಲಿಂಗ ತಪದ ತೇಜವೂ, ಜ್ಞಾನ ಪ್ರತಿಭೆಯೂ ಪಸರಿಸಿ ದಂತೆ ಪರಸ್ಥಳದ ಜನರೂ ಬರಹತ್ತಿದರು. ಅವರು ತಂಗುವದಕ್ಕೂ ಅನೇಕ ಎಲೆ ಮನೆಗಳೂ, ಮಂಟಪಗಳೂ ಉಂಟಾದವು. ಪತ್ರಿ ಪುಷ್ಪಗಳ ಗಿಡಬಳ್ಳಿಗಳಿಂದಲೂ ಆಶ್ರಮವೂ ಅಂದವಾಯಿತು. ಶಾಂತಿಸ್ಥಾನವಾಯಿತು.

ದೊಡ್ಡಮ್ಮ ಗೌಡತಿ ದೊಡ್ಡ ಗುಣದವಳು. ವಯಸ್ಸಿನಿಂದ ಕಿರಿಯ ಳಾದರೂ ಬುದ್ಧಿ ಹಿರಿಯದಾಗಿತ್ತು. ಶಿವಭಕ್ತಿ ಸಂಪನ್ನರ ಮನೆಯಲ್ಲಿ ಹುಟ್ಟಿ ಬೆಳೆದು ಶಿವಭಕ್ತಿ ಸಂಪನ್ನರ ಮನೆಗೆ ಸೊಸೆಯಾಗಿದ್ದಳು. ಪತಿಗೆ ಅನುರೂಪಳಾದ ಸತಿಯಾಗಿದ್ದಳು. ಅತ್ತೆಮಾವಂದಿರು ಬೇಗನೆ ಶಿವಾಧೀನ ರಾದುದರಿಂದ ಈಗ ತಾವೇ ಹಿರಿಯರು. ತಾವೇ ಕಿರಿಯರು. ದೊಡ್ಡಮ್ಮ ಆರಂಭದಲ್ಲಿಯೇ ಅಖಂಡೇಶ್ವರರಿಗೆ ಕಂತೆಯ ಬಿಕ್ಷೆಗೆ ಹೊರಡಲು ಅವಕಾಶ ಕೊಡಲಿಲ್ಲ. ಅವರ ಲಿಂಗಾರ್ಪಿತಕ್ಕೆ ಮೈಮನಗಳ ಮಡಿಯಿಂದ ತಾನೇ ಅಡಿಗೆ ಮಾಡಿ ಎಡೆ ಕಳಿಸುತ್ತಿದ್ದಳು. ಬೇರೆ ಭಕ್ತರು ಸ್ವಾಮಿಗಳ ಅರ್ಪಿತಕ್ಕೆ ವ್ಯವಸ್ಥೆ ಮಾಡ ಬಯಸಿದರೆ ಗೌಡತಿಗೆ ಮೊದಲೆ ತಿಳಿಸಬೇಕಾಗುತ್ತಿತ್ತು. ಇಲ್ಲದಿದ್ದರೆ ಗೌಡತಿಯ ಪ್ರಸಾದ ಸೇವೆ ಇದ್ದದೇ !

ಸಂಸಾರದ ಕಷ್ಟ ಕೋಟಲೆಗೆ ಬೇಸತ್ತು ಅಖಂಡೇಶ್ವರರ ಪಾರ ಮಾರ್ಥಿಕ ಜ್ಞಾನೋಪದೇಶಕ್ಕಾಗಿ ಬರುವವರ ಸಂಖ್ಯೆ ಬೆಳೆಯಿತು. ಹಿಂದು ಮುಂದಿಲ್ಲದ ಕೆಲವರು ಅಲ್ಲಿಯೇ ಸೇವಕರಾಗಿ ನಿಂತರು. ಆದ್ದರಿಂದ ಆಶ್ರಮದಲ್ಲಿ ಅನ್ನದಾಸೋಹದ ವ್ಯವಸ್ಥೆ ಅಗತ್ಯವಾಯಿತು. ಉದಾರಿಗಳು

ದಾನದ ಕೈಕೂಡಿಸಿದರು. ಆದರ ಏರ್ಪಾಡಾಯಿತು. ಎಲ್ಲ ಋತುಗಳಲ್ಲಿಯೂ ಆಶ್ರಮದ ಈ ಬೆಳೆದ ಕಾರ್ಯಗಳನ್ನು ಒಳಗೊಂಡು ನಡೆಸಲು ಚಪ್ಪರ ಗುಡಿಸಲುಗಳು ಅಸಮರ್ಥವೆನಿಸಿದವು. ಕ್ರಮವಾಗಿ ವಿವಿಧ ಕಟ್ಟಡಗಳು ಕೊಠಡಿಗಳು, ಮಂಟಪಗಳು ಉಂಟಾದವು. ಗೌಡರ ನೇತೃತ್ವದಲ್ಲಿ ಉತ್ತೇಜಿತರಾದ ಜೇವರಗಿಯ ಜನರ ಸಂಘಟನೆ ಆಶ್ರಮದ ಅಭಿವೃದ್ಧಿಗಾಗಿ ಏನನ್ನಾದರೂ ಮಾಡಲು ಸಿದ್ಧವಾಗಿತ್ತು. ನಾಲ್ಕಾರು ವರ್ಷಗಳು ಕಳೆದವು. ಒಂದು ದಿನ ಅನುಭವ ಗೋಷ್ಠಿಗೆ ಮಂಗಲವಾಗಿ ಗೌಡರು ಆಶ್ರಮದಿಂದ ಮರಳಿದಾಗ ಗೌಡ ತೆಗೆದ ಮಾತು ಇದು. ''ಅಖಂಡೇಶ್ವರ ಶಿವಯೋಗಿಗಳಿಂದ ನಮ್ಮ ಊರ ಗೌರವ ಹೆಚ್ಚಿದೆ. ನಮ್ಮ ಬುದ್ಧಿ-ಮನ-ಭಾವನೆಗಳಿಗೂ ಬೆಳಕಾದಿದೆ. ಈ ಆಶ್ರಮ ಪುಣ್ಯಸ್ಥಳವೆಂದು ಹಲವಾರು ಮಹನೀಯರು ಬರುತ್ತಿದ್ದಾರೆ. ಶರಣರ ಅನುಭವದ ವಚನಗಳ ಆಧಾರದ ಮೇಲೆ ತಾತ್ವಿಕ ವಿಚಾರಗಳ ಚರ್ಚೆ ಮನನಗಳು ನಡೆಯುತ್ತಿವೆ. ಇವೆಲ್ಲ ಈ ಸ್ವಾಮಿಗಳು ಇರುವವರೆಗೆ ಉಳಿದಾವು. ಮುಂದೆಯೂ ....'' ಶಿವಬಸಪ್ಪ ತತ್‌ಕ್ಷಣ ನುಡಿದ. "ಗೌಡರೇ ತಿಳಿತು ನಿಮ್ಮ ವಿಚಾರ, ಇದು ಪರಂಪರಾಗತವಾಗಿ ನಡಿಯುವಂತೆ ಮಾಡಬೇಕು."

"ಅಂದರೆ ಹೇಗೆ ಶರಣರೇ"

"ಈ ಆಶ್ರಮವನ್ನು ಮಠಪೀಠ ಎಂಬ ಅರ್ಥದಲ್ಲಿ ಈ ತಪಸ್ವಿ ಶಿವಯೋಗಿಯನ್ನು ಪೀಠಾಧಿಕಾರಿ ಸ್ವಾಮಿ ಎಂಬ ಅರ್ಥದಲ್ಲಿ ಪರಿವರ್ತಿಸಬೇಕು. ಇದಕ್ಕಾಗಿ ಕೆಲವು ಕಾರ್ಯಭಾರ ವಹಿಸಬೇಕಾಗುತ್ತದೆ.

"ವಹಿಸಿ ಮಾಡೋಣ" ಎಂದರು ಎಲ್ಲರೂ, ಬಳಿಕ ಅಲ್ಲಲ್ಲಿ ಮಾತು ಕತೆ ನಡೆದವು.

ಮರುದಿನ ಊರ ಹಿರಿಯರು, ವಾಣಿಜ್ಯೋದ್ಯಮಗಳ ಪ್ರಮುಖರು ಸಭೆ ಸೇರಿದರು. ಸರ್ವಸಮ್ಮತವಾಯಿತು. ಯೋಜನೆ ವಿವಿಧ ಕಾರ್ಯ

ಗಳಿಗೆ ಮಂಡಲಿಗಳು ನೇಮಕವಾದವು. ಪೀಠಾರೋಹಣಕ್ಕೆ ಅಖಂಡೇಶ್ವರರು ಸುಲಭವಾಗಿ ಒಪ್ಪಲಿಲ್ಲ. ನಿಮ್ಮ ಹೃದಯ ಪೀಠದಲ್ಲಿ ಮೆರೆದಿದ್ದೇನೆ. ಸುಲಭವಾಗಿ ಸಾಗಿದೆ ನನ್ನ ಲಿಂಗಾನುಷ್ಠಾನ! ಮಠ ಪೀಠಗಳಿಗೆ ನನ್ನನ್ನು ಬಂಧಿಸಬೇಡಿರಿ. ಎಂದು ವಾದಿಸಿದರು. ಕೊನೆಯಲ್ಲಿ ಭಕ್ತರ ಆಗ್ರಹಕ್ಕೆ ಒಪ್ಪಬೇಕಾಯಿತು.

ಪ್ರೇರಕ ಕಟ್ಟಡಗಳೊಡನೆ ಆಶ್ರಮವು ವಿರಕ್ತ ಮಠವೆಂಬ ಅಭಿದಾನ ಪಡೆಯಿತು. ನಾಲ್ಕು ಕಡೆಯಿಂದ ಬರಮಾಡಿಕೊಂಡ ಹರ-ಗುರು-ಚರ ಮೂರ್ತಿಗಳೆಲ್ಲ ಮಧ್ಯದಲ್ಲಿ ನಿರಂಜನ ಪೀಠಸ್ಥಾಪನೆಯಾಗಿ ಅಖಂಡೇಶ್ವರರ ಪೀಠಾರೋಹಣ ಸಮಾರಂಭವು ವಿದ್ಯುಕ್ತವಾಗಿ ಜರುಗಿತು. ನಾಡಿನ ಜನರನ್ನು ಸಂತೋಷ ಪಡಿಸಿತು. ಕೆಲವು ವರ್ಷ ಗತಿಸಿದವು.

ಮಲ್ಲಶೆಟ್ಟಿಗೌಡನ ಜೀವನ ಪರಿಶುದ್ಧವಾದದ್ದು. ಅವನ ದಿನಚರಿ ಮೂರು ಬಗೆಯ ಕಾರ್ಯಕಲಾಪಗಳಿಂದ ಕೂಡಿತ್ತು. ಮನೆಯ ಬೇಸಾಯ ಗ್ರಾಮದ ಗೌಡಿಕೆ, ಶಿವಯೋಗಿ ಮಠದ ಮೇಲ್ವಿಚಾರಣೆ ! ಬೇಸಾಯ ದಿಂದ ಬಂದುದನ್ನು ತನ್ನ ಒಡಲಿಗಾಗಿಯೇ ಉಪಯೋಗಿಸದೆ ದಾನ ಧರ್ಮಾದಿಗಳಿಗೆ ಹೆಚ್ಚಿಗೆ ವೆಚ್ಚ ಮಾಡುತ್ತಿದ್ದನು. ಅದು ಶಿವನ ಕರುಣೆಗೆ ಕಾರಣ. ಉತ್ಪಾದನೆ ಚೆನ್ನಾಗಿಯೇ ಆಗುತ್ತಿತ್ತು. ಮಹಮ್ಮದೀಯ ರಾಜರ ಪ್ರಭುತ್ವದಲ್ಲಿ ತೆರಿಗೆಯ ಮಟ್ಟಿಗೆ ಅಧಿಕಾರಿಗಳ ಸಂಬಂಧ ಗ್ರಾಮದ ಆಡಳಿತವೆಲ್ಲ ಗೌಡನ ಕಡೆಗೆಯೇ ಇರುವದು. ಈ ಗೌಡನು ದಯಾಳುವೂ ಕಲ್ಯಾಣಕರನೂ ಆದುದರಿಂದ ಅತ್ಯಂತ ಜನಪ್ರಿಯನಾಗಿದ್ದನು. ಶಿವಯೋಗಿ ಸೇವೆಯಲ್ಲಿ ಸದಾ ಆನಂದ ಪಡುತ್ತಿದ್ದನು. ಧರ್ಮಪತ್ನಿ ದೊಡಮಾ ತಾಯಿಯೂ ಹಾಗೇನೆ ! ಒಳ್ಳೆಯ ಜೋಡಿ. ಆಸೆ ಆಕಾಂಕ್ಷೆಗಳ ಹಾವಳಿ ಇಲ್ಲದ ಶಾಂತ ಜೀವನ ! ಮದುವೆ ಆಗಿ ಬಹಳ ವರ್ಷ ಕಳೆದರೂ ಪ್ರಾಯವು ಇಳಿಮುಖವಾದರೂ ಇವರಿಗೆ ಮಕ್ಕಳಾಗಿರಲಿಲ್ಲವೆಂಬ ಕೊರತೆಗೆ ಜನರೇ ಕೊರಗುತ್ತಿದ್ದರು ಹೊರತು ದಂಪತಿಗಳಿಗೆ ಆ ಹಂಬಲವಿರಲಿಲ್ಲ.

ಆದರೂ ಬಹುಕಾಲ ಕಳೆದ ಮೇಲೆ ಹೆಣ್ಣಿನ ಹೃದಯಕ್ಕೆ ಆ ಕೊರತೆಯು ಅರಿವಾಯಿತು. ತಮಗೆ ಮಕ್ಕಳಾಗಲೇ ಇಲ್ಲವಲ್ಲಾ ಎಂಬ ನೋವು ದೊಡ್ಡಮ್ಮ ಗೌಡತಿಗೆ ಬಾಧಿಸ ಹತ್ತಿತು. ಪತಿಯ ಮುಂದೆ ತನ್ನ ಅಳಲು ತೋಡಿಕೊಂಡು ಅವನ ಶಾಂತ ಮನಸ್ಸನ್ನು ಕದಡುವದಕ್ಕೂ ಹೆದರಿಕೆ. ಆದರೆ ಪತ್ನಿಯ ಮುಖ ಮೌನವಾದುದನ್ನು ನೋಡುತ್ತ ಗೌಡನು ಆಕೆಯು ವ್ಯಥೆಯನ್ನು ಗುರುತಿಸಿದ್ದನು. ಕಡೆಗೊಮ್ಮೆ ದೊಡ್ಡಮ್ಮ ಅಶ್ರುತುಂಬಿದ ಕಣ್ಣುಗಳಿಂದ ಗಂಡನನ್ನು ನೋಡುತ್ತ ನಮಗೆ ಮಕ್ಕಳ ಭಾಗ್ಯವೊಂದಿಲ್ಲ ವಲ್ಲ! ಶಿವನೇಕೆ ಕರುಣಿಸಲಿಲ್ಲ ? ಎಂದಳು. ಮಲ್ಲಶೆಟ್ಟಿ “ ಅದಕ್ಕೇಕೆ ಚಿಂತೆ ಆ ಭಾಗ್ಯದಿಂದೇನು ಆಗಬೇಕಾಗಿದೆ. ಶಿವಯೋಗಿಯ ಸೇವೆಯಲ್ಲಿ ತೃಪ್ತರಾಗಿದ್ದೇವೆ ಅವನ ಕರುಣೆಯಿಂದ ಎಲ್ಲವೂ ಇದೆ. ಮಕ್ಕಳಿಂದಲೇ ಇಹ-ಪರ-ಸೌಖ್ಯವೆಂದು ಯಾವ ಸಿದ್ಧಾಂತವೂ ಹೇಳುವದಿಲ್ಲ. ಲೌಕಿಕ ಶೋಭೆಗೆ ಮಗು ಬೇಕು ನಿಜ. ಶಿವಯೋಗಿಯ ಕೃಪೆ ಆದಾಗ ಅದೂ ಆಗಬಹುದು, ಅದಕ್ಕೆ ಕೊರಗುವದೇಕೆ? ” ಎನ್ನುತ್ತ ಮಡದಿಯ ಸೀರೆಯ ಸೆರಗಿನಿಂದಲೇ ಆಕೆಯ ಕಣ್ಣೀರು ಒರೆಸಿದನು. ಆಗ ಸತಿಯ ಮೊಗದಲ್ಲಿ ಮಿಂಚಿದ ನಸುಬೆಳಕು ಕಂಡು ಸಂತಸ ಪಟ್ಟನು. ಪತಿಯು ಪ್ರೇಮದಿಂದ ತಿಳಿ ಹೇಳಿದ ಅಮೃತವಾಣಿಯಿಂದ ಸತಿ ತನಗಿದ್ದ ನೋವನ್ನು ಮರೆತು ಮುನ್ನಿನಂತಾದಳು. ಯಥಾರೀತಿ ಅವರ ತನು-ಮನ-ಧನಗಳ ದಾಸೋಹ ಜೀವನ ಚ್ಯುತಿಯಿಲ್ಲದೆ ಸಾಗಿತ್ತು.

ಒಂದು ದಿನದಿರುಳು ದೊಡ್ಡವ್ವಾಂಬೆ ಒಂದು ದಿವ್ಯ ಕನಸು ಕಂಡಳು. ಶಿವಪೂಜಾ ಮಂದಿರ, ಶಿವಪೂಜೆಗೆ ಕುಳಿತ್ತಿದ್ದಾಳೆ. ಅಷ್ಟ ವಿದಾರ್ಚನೆ ಯಾಗಿ ಕಂದಿಪ್ಪ ಲಿಂಗವನ್ನು ನೇರವಾಗಿ ನಿರೀಕ್ಷಿಸುತ್ತಿದ್ದಾಳೆ. ಇದ್ದ ಕ್ಕಿದ್ದಂತೆಯೇ ಲಿಂಗದಲ್ಲಿ ಜಂಗಮಮೂರ್ತಿಯ ರೂಪೊಂದು ಮೂಡಿತು. ಅದು ಮಾತನಾಡಿತು. “ತಾಯೇ ನಿನ್ನ ಹೃದಯದಲ್ಲಿ ಬಚ್ಚಿಟ್ಟ ಬಯಕೆ ಯನ್ನು ಶಿವಯೋಗಿಯ ಸನ್ನಿಧಿಯಲ್ಲಿ ಅರಿಕೆ ಮಾಡು ಅವರ ಆಶೀರ್ವಾದ ನಿನ್ನುದರದಲ್ಲಿ ಪುಣ್ಯ ಪುರುಷ ಹುಟ್ಟಿ ಬರುವನು ” ಅಲ್ಲಿಯೇ ಅಡಗಿತು

ಆ ರೂಪ. ಎಚ್ಚರಾಯಿತು, ಎದ್ದು ಕುಳಿತಳು. ಉಷಃಕಾಲ ಲಿಂಗವ ನಮಿಸಿದಳು. ಕನಸನ್ನು ನೆನೆದಳು, ಹರ್ಷಪುಳಕಗೊಂಡು ಮೈಮಾರ್ದವಿಸಿತು. ಗಂಡನನ್ನು ಕಂಡಳು. ಕನಸನ್ನು ವಿವರಿಸಿದಳು. ಅವನು ಭಾವಪೂರಿತನಾಗಿದ್ದನು. ಅದನ್ನು ಕೇಳಿ "ಹೌದೆ ? ನನಗೂ ಒಂದು ದಿವ್ಯ ಸ್ವಪ್ನ ! ನಾನಿದ್ದೆ ನೀನಿದ್ದೆ ನಮ್ಮಿಬ್ಬರ ನಡುವೆ ಒಂದು ಕುಡಿದೀಪ ಹತ್ತಿತು. ಅದು ಜ್ಯೋತಿಯಾಯಿತು. ದೊಡ್ಡದಾಗುತ್ತ ನಮ್ಮಿಂದ ದೂರ ಸರಿಯಿತು. ಮನೆಗೂ ಊರಿಗೂ ಬೆಳಕು ನೀಡಿ ಬಯಲನ್ನೇರಿ ಹೋಯಿತು ಎಂದನು.

ಇಬ್ಬರಿಗೂ ಕೌತುಕ ಕುತೂಹಲ. ಸದ್ಯಕ್ಕೆ ಶಿವಯೋಗಿಗಳ ಅಡಿಯಲ್ಲಿ ಇದನ್ನು ಅರಿಕೆಮಾಡಬೇಕೆಂಬ ಆತುರ ಇಬ್ಬರಲ್ಲಿಯೂ ಉಂಟಾಯಿತು. ನಿತ್ಯಕರ್ಮಗಳನ್ನು ತೀರಿಸಿ ಸ್ನಾನ ಶಿವಾರ್ಚನೆಗೈದರು. ಆಳು ಕರೆದಿಟ್ಟ ಗೋವಿನ ಹಾಲು ತಕ್ಕೊಂಡು ಮಠಕ್ಕೆ ಬಂದರು. ಶಿವಯೋಗಿಗಳು ಬೆಳಗಿನ ಯೋಗಾನುಷ್ಠಾನ ಪೂರೈಸಿ ಆದೇ ಹೊರಗೆ ಬಂದು ಆಸೀನರಾಗಿದ್ದರು. ದಂಪತಿಗಳು ಮೈಯಿಗೆ ಮೈಯಿಕ್ಕಿ ವಂದಿಸಿದರು. ಮಂದಸ್ಮಿತರಾದ ಶಿವಯೋಗಿ ಕರುಣಾದೃಷ್ಟಿ ಬೀರಿ "ಬನ್ನಿ ಗೌಡರೇ ಬನ್ನಿ ತಾಯಿ ನೀವಿಬ್ಬರೂ ಜೊತೆಯಾಗಿ ಬಂದುದು ನಮಗೊಂದು ಶುಭಚಿನ್ಹೆ ಕುಳಿತುಕೊಳ್ಳಿ" ಎಂದರು. "ನೀವು ನಡೆಸಿದಂತೆ ನಡೆಯಬೇಕಲ್ಲವೇ ಅಪ್ಪಾ?" ಎನ್ನುತ್ತ ಗೌಡತಿ ತಲೆಬಾಗಿ ಕುಳಿತಳು. ಗೌಡರು ತಮ್ಮಿಬ್ಬರ ಸ್ವಪ್ನದ ಅರಿಕೆ ಮಾಡಿದರು. ಶಿವಯೋಗಿಗಳು ಆನಂದದಿಂದ ನುಡಿದರು. "ನೀವು ಪರಮ ಶಿವಭಕ್ತರು ಶಿವನು ಪರೀಕ್ಷಿಸುವದು ನಿಮ್ಮಂಥವರನ್ನೇ ! ನೀವೂ ಕೂಡ ಹುಲ್ಲುಮಾನವರಂತೆ ಮಾಯಾ-ಮೋಹದ ಮಕ್ಕಳಿಗಾಗಿ ಹಲವು ಹಂಬಲಿಸುವಿರೋ ಅಥವಾ ಅದನ್ನು ಕಡೆಗಣಿಸಿ ನೀವೇ ಶಿವಸಂತಾನವಾಗಿ ಶಿವಭಕ್ತಿಪಾರಮ್ಯದಲ್ಲಿ ಸುಖಿಸುವಿರೋ ನೋಡಬೇಕಾಗಿತ್ತೇನೋ ಅವನಿಗೆ ಇಪ್ಪತ್ತು ವರ್ಷ ಕಾದು ನೋಡಿದನು. ಕೆಣಕಿ ನೋಡಿದನು. ನಿಮ್ಮೆದೆಗೆ ಅಳುಕಾಗಲಿಲ್ಲ. ಈಗ ಆ ಭಕ್ತವತ್ಸಲನು ತಾನೇ ಪ್ರೇರಣೆಗೊಂಡು

ನಿಮ್ಮತ್ತ ಸುಳಿದಿದ್ದಾನೆ. ನೀವೆ ಧನ್ಯರು. ಬೇಗನೆ ನಿಮಗೆ ಮಗನಾದಿ ಮಹಾ ವಿಭೂತಿಯೊಬ್ಬ ಬರುವ ಯೋಗ ಕಂಡುಬರುತ್ತದೆ. ತಕ್ಕೊಳ್ಳಿರಿ ಈ ಫಲಗಳನ್ನು ಎನ್ನುತ್ತ ಎರಡು ಫಲಗಳನ್ನು ಅವರ ಉಡಿಗೆ ನೀಡಿ ಆಶೀರ್ವದಿಸಿದರು. "ನಿಮ್ಮ ಲೀಲೆ ನಮಗೆ ತಿಳಿಯುವದೇ ದೇವಾ? " ಎನ್ನುತ್ತ ಸತಿ-ಪತಿಗಳು ಪೂಸವಟ್ಟು ಗುರುಕೃಪೆಯನ್ನು ಕೊಂಡಾಡುತ್ತ ಮನೆಗೆ ಬಂದರು.

ಮುಂದೆ ಬೇಗನೆ ದೊಡ್ಡಮ್ಮ ಗೌಡತಿ ಗರ್ಭವತಿಯಾದಳು. ಚಿಹ್ನೆಗಳು ಕಂಡವು. ಊರಿಗೆಊರೇ ಸಂತಸಪಟ್ಟಿತು. ಆಕೆಯ ಬಯಕೆ ಏನು? ಮತ್ತಿಷ್ಟು ಅದೇ ಶಿವಕ್ರಿಯೆ, ಶಿವಧ್ಯಾನ, ಶಿವಪ್ರಸಾದ, ಶಿವಯೋಗಿ ಸನ್ನಿಧಿಯ ದರ್ಶನ. ಮಲ್ಲಶೆಟ್ಟಿಗೌಡ ಗ್ರಾಮದ ಧನಿ. ಸಜ್ಜನ ಶಿಖಾಮಣಿ ಗೌಡತಿ ಕರುಣಾಳು. ಬೆಸತಿಗೆ ಬಾಗಿನಗಳ ಸುರಿಮಳೆ ಸಾಮಾನ್ಯರಿಗಿಂತ ವಿಶಿಷ್ಟವಾದ ಕಳೆಗಳಿಂದ ಶೋಭಿಸುತ್ತಿದ್ದ ಈ ಗರ್ಭವತಿ ಮಾಘ ಬಹುಳ ಶಿವರಾತ್ರಿ ಸೋಮವಾರ ಬೆಳಗಿನ ಜಾವದಲ್ಲಿ ಶಿವಯೋಗಿ ಸೂಚಿಸಿದ ಮಹಾ ಪುರುಷನಿಗೆ ಜನ್ಮವಿತ್ತಳು. ಮನೆಯಲ್ಲ ಸಡಗರ, ಆನಂದದ ಬೆಳಕು ಬೆಳಗಿತ್ತು. ಆಪ್ತರು-ಸೇವಕರು-ಸ್ನೇಹಿತರು ತಮ್ಮಷ್ಟಕ್ಕೆ ತಾವೇ ಸಂತೋಷ ಸಮಾರಂಭಗಳನ್ನು ಮಾಡಿದರು. ಮಹಿಮಾಪುರುಷ ಅಖಂಡೇಶ್ವರರು ಮನೆಗೆ ಬಿಜಯಂಗೈದು ಮಗುವನ್ನು ಕರಕ್ಕೆ ತಕ್ಕೊಂಡು ನೋಡಿ ಆನಂದಿಸಿ ಲಿಂಗಧಾರಣೆ ಮಾಡಿ ಆಶೀರ್ವದಿಸಿ ಮರಳಿದರು. ಕ್ರಮವಾಗಿ ಸಾಮಾಜಿಕ. ಸಾಂಪ್ರದಾಯಕ ಕಾರ್ಯಕ್ರಮಗಳು ನಡೆದವು. ಸುಮಂಗಲೆಯರು ನೆರೆದು ಸುಕುಮಾರ ಓಜಸ್ಸು, ತೇಜಸ್ಸುಗಳನ್ನು ನೋಡಿ ನಲಿದರು ಸಿಂಗರಿಸಿದ ತೊಟ್ಟಿಲೊಳಗಿಟ್ಟು ಜೋಗುಳ ಪಾಡಿ ತೂಗಿದರು. ಪೂಜ್ಯರು ಸೂಚಿಸಿದ್ದ "ಷಣ್ಮುಖ" ಎಂದು ಹೆಸರಿಟ್ಟರು.

ಮಗು ಮದ್ದಾಗಿದ್ದರೂ ಸಾಮಾನ್ಯರ ಶಿಶುಗಳಂತೆ ಇರಲಿಲ್ಲ. ಆ ಮಗು ಶಿವಯೋಗಿಯ ಕರುಣೆ, ಶಿವನ ಸಂಕೇತ, ಸಾತ್ವಿಕ ಜೀವನದ

ಕುಟುಂಬದಲ್ಲಿ ಜನಿಸಿದ ಷಣ್ಮುಖ ಶಿಶುವಿನಲ್ಲಿ ಅಲೌಕಿಕವಾದ ವಿಶಿಷ್ಟ ಕಳೆ ಕಾಣಬರುತಿತ್ತು.

ಶಿವಚೈತನ್ಯವು ಸರ್ವರಲ್ಲಿದ್ದರೂ ಆ ಮಗುವಿನಲ್ಲಿ ಹುಟ್ಟಿದೊಡನೆಯೇ ಅಭಿವ್ಯಕ್ತಿರೂಪದಲ್ಲಿ ಇದ್ದಿರಲು ಸಾಕು. ಮೈಗೂ ಇಂದ್ರಿಯಗಳಿಗೂ ಪ್ರಚೋದನೆಯಿಲ್ಲದೆ ನಗುವನು ಅದು ವ್ಯಂಗವಾದ ನಗೆ! ಬಿಸಿಲ್ಗುದುರೆಗೆ ಭ್ರಮಿಸಿ ಧಾವಿಸುವ ಜಿಂಕೆಗಳಂತೆ ಲೋಕದ ಜನ ಸುಖವಿಲ್ಲದ ಸಂಸಾರದಲ್ಲಿ ಅನಿತ್ಯ ಸುಖಕ್ಕೆ ಹಂಬಲಿಸಿ ಒಡ್ಡಾಡುವದನ್ನು ಅಂತರಂಗದ ದೃಷ್ಟಿಗೆ ಕಂಡು ಅಪಹಾಸ್ಯ ಮಾಡುತ್ತಿರಬೇಕು. ಸುಮ್ಮನೆ ಮಲಗಿದ್ದಂತೆ ಕಣ್ಣು ತೇವಾಗಿ ಅಳಹತ್ತುವನು. ಬಂದು ನೋಡಿದರೆ ಯಾವ ಕಾರಣ ಇಲ್ಲ ತನ್ನ ಸುತ್ತಲಿನ ಪರಿಸರದಲ್ಲಿ ಅಲೆದಾಡುವ ಜನ ಹೊರಗಿನ ಹೊಳಪಿಗೆ ಮರುಳಾಗಿ ಮಾಯೆಯ ಬಲೆಯಲ್ಲಿ ಬಿದ್ದೇ ಬೀಳುತ್ತಿರುವ ಒಳನೋಟ ಅತಃಕರಣಕ್ಕೆ ವೇದಿಸುತ್ತಿತ್ತೇನೋ! ನಿದ್ರೆಯಿದ್ದರೂ ಕಾಲು ಜಾಡಿಸುವನು. ಹೊಚ್ಚಿದುದನ್ನು ಹಾರಿಸುವನು. ಇದು ಕಾಮಾದಿ ಕೀಟಲೆಗಳಿಗೆ ಅಂಗವಾಗಿರುವ ಸಂಸಾರದ ಮುಸುಕನ್ನು ಹೊದ್ದಲಿಯುದಂತೆ ಒದ್ದೇಳುವ ವೈರಾಗ್ಯ ಸಂಕೇತವಾಗಿರಬೇಕೆಂದು ಜ್ಞಾನದೃಷ್ಟಿಯುಳ್ಳ ಅನುಭಾವಿ ಅರ್ಥ ಮಾಡಬಹುದಾಗಿತ್ತು. ಹಸುಳೆಗೆ ಹನ್ನೊಂದು ತಿಂಗಳಾಗಿದ್ದರೂ ತಾಯಿ ತನ್ನನ್ನು ಬೇಗನೆ ಎತ್ತಿ ಎದೆಗವಚಿಕೊಳ್ಳಬೇಕೆಂದು ತವಕ ಪಡುತ್ತಿರಲಿಲ್ಲ. ತಾಯಿಯೇ ಎತ್ತಿ ಎದೆಗವಚಿಕೊಳ್ಳಬೇಕೆಂದು ಮುದ್ದಿಸಿ ಲಲ್ಲೆಗರೆದರೂ ಅವನ ಮುಖವರಳಿ ಮೋಹ ಬೀರುವ ಪ್ರತಿಕ್ರಿಯೆ ಎಷ್ಟೋ ಬರುತ್ತಿರಲಿಲ್ಲ. ಹೊಳೆಯುವ ಚಲಿಸುವ ಅಂದವಾದ ಆಟಿಗೆಗಳನ್ನು ಮುಂದೆ ಹಿಡಿದರೂ ಸಾಗಿ ಕೈಚಾಚಿಕೊಳ್ಳುತ್ತಿರಲಿಲ್ಲ. ಇಂದ್ರಿಯಗಳಲ್ಲಿ ಮನಸಿದ್ದರೆ ಅವುಗಳಿಗೆ ವಸ್ತುಗಳ ವೇದ್ಯವಷ್ಟೇ! ಶಿಸು ಷಣ್ಮುಖನ ಹೊರಗಣ್ಣಿನಲ್ಲಿ ಮನಸ್ಸು ಇತ್ತೋ ಇಲ್ಲವೋ!

ಮಗುವನ್ನು ಎತ್ತಿಕೊಳ್ಳಲು ಮುದ್ದಿಸಲು ಬಂದ ಆಪ್ತ ವರ್ಗದ ಮಹಿಳೆಯರು ತಮ್ಮ ಪ್ರೀತಿಗೆ ಪ್ರತಿಕ್ರಿಯೆಯನ್ನೇ ಮಗುವಿನಲ್ಲಿ ಕಾಣದೇ

"ಏನೋ ಅವ್ವಾ ! ಕೂಸು ವಿಚಿತ್ರವಾಗಿದೆ" ಎಂದು ಉದ್ಗರಿಸುತ್ತ ನಿಲ್ಲುತ್ತಿದ್ದರು. ಬುದ್ಧಿ ಹೇಗಾಗುತ್ತದೋ ಎಂದು ಗೊಣಗುತ್ತ ಹೋಗ್ತ್ತಿದ್ದರು. ತಾಯಿತಂದೆಗಳು ಮಗನ ಇರವನ್ನು ಗಮನಿಸುತ್ತಿದ್ದರು. ಈ ಮಾತು ಕೇಳುತ್ತಿದ್ದರು. ಆದರೆ ಅವರು ಗಾಬರಿಗೊಳ್ಳುವದು ಒತ್ತಟ್ಟಾಗಿರಲಿ, ಅಚ್ಚರಿಯೂ ಅನಿಸಿರಲಿಲ್ಲ. ಇದೆಲ್ಲ ಶಿವನಾಟ, ಶಿವಯೋಗಿ ಬಲ್ಲ. ಈ ದೃಢನಂಬಿಗೆಯಲ್ಲಿದ್ದರು. ಇದರ ರಸರಹಸ್ಯ ಆ ನಂಬಿಗೆಯಲ್ಲಿತ್ತು.

ತಾಯಿ ದೊಡ್ಡಮಾಂಬೆ ತಾನು ಸ್ನಾನ ಪೂಜೆ ಮಾಡಿದ ಬಳಿಕ ಮಗನನ್ನು ಎರೆದು ನಯವಾದ ಬಟ್ಟೆಗಳಿಂದ ಒರೆಸಿ ಸೂಕ್ಷ್ಮವಾಗಿ ಭಸ್ಮವನ್ನು ಹೂಸಿ ಹಣೆಯಲ್ಲಿ ಮೂಬೆರಳ ಭಸ್ಮ ಧರಿಸಿ ಪಾದೋದಕವನ್ನು ಬಾಯಿಗೆ ಹಾಕುವಳು, ಬಳಿಕ ಅಂಗಿ ತೊಡಿಸಿ ಮೊಲೆಯುಣಿಸಿ ಮಲಗಿಸುವಳು. ಆಮೇಲೆ ಮನೆಯ ಕೆಲಸಕ್ಕೆ ಹೊರಡುವಳು. ಒಂದು ದಿನ ಮಲ್ಲಶೆಟ್ಟಿ ಗೌಡರು ಅವಸರದ ಕಾರ್ಯಾರ್ಥವಾಗಿ ಬೇಗ ಹೋಗಲಿದ್ದನು. ಅಡಿಗೆಯಾಗಿತ್ತು. ಶಿವಕ್ರಿಯೆಗಳೆಲ್ಲ ಸಾಂಗವಾಗಿದ್ದವು. ಗಂಡನ ಊಟಕ್ಕೆ ಎಡೆ ಮಾಡುವದು ಪೂರ್ಣವಾಗಿತ್ತು. ಸಾಮಾನುಗಳನ್ನು ಮುಚ್ಚಿ ಓರಣವಾಗಿಟ್ಟಳು. ಕೈ ಒರೆಸಿಕೊಂಡು ಉಡಿಗೆ ಜಾಡಿಸಿ ಕೊಂಡಳು. ಮಗನನ್ನು ಕರೆದುಕೊಂಡು ಕುಳಿತು ಮೊಲೆ ಕುಡಿಸಬೇಕೆಂದು ತೊಟ್ಟಿಲ ಹತ್ತಿರ ಬಂದಳು. ತೊಟ್ಟಿಲ ಪರದೆ ಓರೆ ಮಾಡಿ ಇಣುಕಿ ನೋಡಿದಳು. ಹೊಸ ದೃಶ್ಯವೊಂದು ಕಣ್ಣಿಗೆ ಕಂಡಿತು. ಕ್ಷಣ ಹೊತ್ತು ನಿಂತು ನೋಡಿದಳು ಅಷ್ಟರಲ್ಲಿ ಗಂಡನು ಪಡಸಾಲೆಗೆ ಬಂದು ತಾಂಬೂಲದ ಚೀಲಕ್ಕೆ ಕೈ ಹಾಕಿದನು. "ಏನ್ರೀ ಬರ್ರೀ ಇಲ್ಲಿ ನೋಡ್ರಿ" ಎಂದು ಸತಿ ಕರೆದು ಸ್ವಲ್ಪ ಓರೆಯಾಗಿ ನಿಂತು ಪರದೆಯನ್ನು ಎತ್ತಿ ಹಿಡಿದಳು. ಮತ್ತೇನು ಎನ್ನುತ್ತ ಮಲ್ಲಶೆಟ್ಟಿಗೌಡನು ಬಂದು ತಲೆಹಾಕಿ ನೋಡಿದ. ಮಗುವಿನ ಭ್ರೂಮಧ್ಯದಲ್ಲಿ ಒಂದು ಚಿಕ್ಕ ದುಂಡಗಿನ ಬಿಳಿಯ ಕಳೆ ಮೂಡುವದು ಅಡಗುವದು ಮತ್ತೆ ಮೂಡುವದು ಅಡಗುವದು ಇಬ್ಬರು ನಿಂತು ಪರೀಕ್ಷಿಸಿದರು. ಒಬ್ಬರ ಮುಖವನೊಬ್ಬರು

ನೋಡಿದರು. ಮಂದಃಸ್ಮಿತರಾಗಿದ್ದರು.

ಮಲ್ಲಶೆಟ್ಟಿಗೌಡ " ನಮಗೆ ಇವನು ಎಲ್ಲರಿಗೆ ಹುಟ್ಟುವಂತೆ ಹುಟ್ಟಿದ ಮಗನೇ ಅಲ್ಲ. ಸೋಜಿಗದ ಮೂರ್ತಿ ಇದು ಶಿವನಾಟ ಶಿವಯೋಗಿ ಬಲ್ಲ ಎಂದು ಒಮ್ಮೆ ನಂಬಿದ್ದೇವೆ. ಅತ್ಯಾಶ್ಚರ್ಯ ಪಡುವ ಕಾರಣವೇನಿಲ್ಲ ನಮ್ಮ ಕಾಯಕ ನಮಗಿರಲಿ" ಎನ್ನುತ್ತಿರವಾಗಲೇ ಆಕಳು ಮೂಡಿ ಅಡಗುವದನ್ನು ನಿಲ್ಲಿಸಿತ್ತು. ಷಣ್ಮುಖ ಕಣ್ತೆರೆದ. ದೃಷ್ಟಿ ಶೂನ್ಯವನ್ನೇ ನಿಟ್ಟಿಸುವಂತಿತ್ತು. ಗೌಡನು ಸದ್ಭಾವದ ಉಕ್ಕಿ ಬಂದು ಕೈಮುಗಿದು ಹಿಂದಕ್ಕೆ ಸರಿದು ನಡೆದನು. ಸತಿಯೂ ಅಷ್ಟೇ ! ಎಂದಿನಂತೆ ಮಗನನ್ನು ಎತ್ತಿಕೊಂಡು ನೆಲದ ಮೇಲಿನ ಹಾಸಿಗೆಯಲ್ಲಿ ಕುಳಿತು ಮೊಲೆ ಕುಡಿಸಿದಳು. ಮಹಾಘನ ಬೆಳಕು ಮೂರ್ತಿಯಾಗಿ ಹಗುರಾಗಿ ದೊಡ್ಡಮ್ಮಾಂಬೆಯ ತೊಡೆಯ ಮೇಲಿದ್ದಾನೆಂಬುದನ್ನು ಲೋಕವು ಮುಂದಿನ ಹಲವು ವರ್ಷಗಳಲ್ಲಿ ಅರಿತು ಅನುಭವಿಸಿತು. ಇರಲಿ?

ಮರುದಿನ ಬೆಳಗಿನಲ್ಲಿ ಈ ಪುಣ್ಯದಂಪತಿಗಳು ಮಗುವಿನಲ್ಲಿ ತಾವು ಕಂಡ ಈ ವಿಶೇಷವನ್ನು ಶಿವಯೋಗಿಗಳ ಸನ್ನಿಧಿಗೆ ನಿವೇದಿಸಲು ಸ್ನಾನ ಪೂಜೆಗಳ ನಂತರ ಮಠಕ್ಕೆ ಬಂದರು. ಮಲ್ಲಶೆಟ್ಟಿ ಗೌಡರು ಅಭಿಮಾನಿಗಳು ಆತ್ಮೀಯರು ಮಗುವಿನಲ್ಲಿಯ ವಿಶೇಷ ಲಕ್ಷಣದ ನಿದರ್ಶನಗಳನ್ನು ಮೊದಲೇ ಶಿವಯೋಗಿಗಳಿಗೆ ಅರಹುತ್ತ ಬಂದಿದ್ದರು. ಕೇಳಿದಾಗಲೆಲ್ಲ ಅಖಂಡೇಶ್ವರರು ಅಂತರಂಗದಲ್ಲಿ ಮುದತಾಳುತ್ತಿದ್ದರು.

ಇಂದು ಸತಿ ಪತಿಗಳ ಜೊತೆಯಾಗಿ ಮಠಕ್ಕೆ ಬಂದಿದ್ದಾರೆ ಅಲ್ಲದೆ ತಾಯಿ ಬಗಲಲ್ಲಿ ಷಣ್ಮುಖನಿದ್ದಾನೆ ಎಂದಿನಂತೆ ಮುಂಜಾನೆ ದರ್ಶನ ಶಾಲೆಯಲ್ಲಿ ಅದೇ ಬಂದು ಆಸೀನರಾಗಿದ್ದ ಶಿವಯೋಗಿಗಳು ಆ ಹಿರಿಯ ಶಿವಭಕ್ತರನ್ನು ಕಂಡು ಅವರು ಅಂಗಳದಲ್ಲಿರುವಾಗಲೇ " ಬನ್ನಿ ಗೌಡರೇ " ಬನ್ನಿ ತಾಯೀ ಎಂದು ಕರೆಯುವಾಗ ಪೂಜ್ಯರಮುಖದಲ್ಲಿ ಸಂತೋಷದ ಸೂಸುತ್ತಿತ್ತು. ಬಾಗಿ ಕೈಮುಗಿಯುತ್ತ ಮೆಟ್ಟಿಲು ಹತ್ತಿ ಬಂದರು ಆ ನಿರ್ಮಲ

ಶಿವಭಕ್ತರಂ. ತಾಯಿಯು ಕಂಕುಳದಲ್ಲಿದ್ದ ಷಣ್ಮುಖನು ಅವತಾರದಿಂದ ಜರಿದು ಕೆಳಗೆ ಕುಳಿತನು ಅವರಿಬ್ಬರೂ ದಂಡ ಪ್ರಣಾಮ ಗೈದು ಷಣ್ಮುಖನನ್ನು ಪಾದಕ್ಕೆ ಎರಗಿಸುತ್ತಿರುವಾಗಲೇ ಶ್ರೀಗಳು ಅವನ್ನೆತ್ತಿಕೊಂಡು ತೊಡೆಯ ಮೇಲೆ ಕೂಡ್ರಿಸಿಕೊಂಡರು. ಬಳಿಕ ತಮ್ಮ ನೆಚ್ಚಿನ ಭಕ್ತರಿಗೆ ಕೂಡ, ಹೇಳಿ ಮಾಡುವ ಭಕ್ತಿಯು ಶಿವನಿಗೆ ಹಿತವಾಗಿಪ್ಪಂತೆ ಸತಿ-ಪತಿಗಳಾಗಿದ್ದವರು ನೀವು ಆದರೆ ಹೀಗೆ ಜೊತೆಯಾಗಿ ಮಠಕ್ಕೆ ಬರುವದು ಅಪರೂಪ ಬಂದಾಗ ಏನಾದರೂ ಹಿತಕರವಾದ ಸೂಚನೆ ಇರುತ್ತದೆ. ಎನಲು ನಸುನಗೆಗೂಡಿದ ದೊಡ್ಡಮಾಂಬೆ ತಲೆಎತ್ತಿ ಸ್ವಾಮಿಗಳನ್ನು ನೋಡಿ; ಅಪ್ಪಾ ನೀವು ನಡೆಸಿದಂತೆ ನಡೆಯುತ್ತಿದ್ದೇವೆ. ಆಡಿಸಿದಂತೆ ಆಡುವ ಗೊಂಬೆ ನಾವಲ್ಲವೇ?" ಎಂದಳು. ಗೌಡ ಕೈಮುಗಿದು ತಲೆಬಾಗಿ ವಿನಯವನ್ನು ಬೀರಿದನು. ಷಣ್ಮುಖನು ತಲೆಎತ್ತಿ ಅವ್ವನ ಮುಖ ನೋಡುವನು. ತಂದೆತಾಯಿಗಳ ಕಡೆ ನೋಡಿ ಚಪ್ಪಾಳೆ ತಟ್ಟುವನು. ಈ ಆಟವನ್ನು ನೋಡಿ ಮೂವರು ನಗುತ್ತಿದ್ದರು ಮನೆಯಲ್ಲಿ ಕಂಡಿರದ ಈ ಆಟ ನೋಡಿ ಗೌಡತಿ ಹೃದಯ ಅರಳಿತು

ನಿನ್ನೆ ತೊಟ್ಟಿಲಲ್ಲಿದ್ದಾಗ ಷಣ್ಮುಖನಭ್ರೂಮಧ್ಯದಲ್ಲಿ ಪ್ರಕಾಶ ಬಿಂದುವೊಂದು ಮೂಡಿ ಮೂಡಿ ಅಡಗುತ್ತಿತ್ತೆಂದು ಮಲ್ಲಶೆಟ್ಟಿ ವಿವರವಾಗಿ ಅರಿಕೆ ಮಾಡಿದನು ಆಗ ಷಣ್ಮುಖ ಆಟ ನಿಲ್ಲಿಸಿ ಕಣ್ಮುಚ್ಚಿ ಕುಳಿತಿದ್ದನು. ಶಿವಯೋಗಿಗಳು ಸ್ವಲ್ಪ ಸಮಯ ಶೂನ್ಯವನ್ನು ನೋಡುತ್ತ ಸುಮ್ಮನಾಗಿದ್ದರು. ಆಲೋಚಿಸುತ್ತಿರಬೇಕು, "ಬಳಿಕ ಪೂರ್ವ ಜನ್ಮದಲ್ಲಿ ಇವನೊಬ್ಬ ಸಾಧಕ ಶಿವಯೋಗಿ ಎಂದು ನಮಗನಿಸಿದೆ. ಶಿಶುಗಳಿಗೆ ಅಸಹಜವಾದ ಇವನ ವಿಚಿತ್ರ ರೀತಿಯ ನಿದರ್ಶನಗಳನ್ನು ನಿನ್ನ ಮಿತ್ರ ಬಾಂಧವರು ಮೊದಲೇ ಹೇಳುತ್ತ ಬಂದಿದ್ದಾರೆ.

ಈಗ ನಿಮಗೆ ಕಂಡುದೊಂದು ವಿಶೇಷ ನಿದರ್ಶನ! ಆ ಶಿವಯೋಗ ಸಿದ್ಧಿಯಾಗುವ ಮೊದಲೇ ಆ ಸಾಧನೆಯ ಮಟ್ಟ ದಿವ್ಯಾನುಭೂತಿಯ ಸನಿಹದಲ್ಲಿ ಬಂದಿರುವಾಗ ಇವನ ದೇಹ ಪತನವಾಗಿರುವದು ಅಷ್ಟೇ ಅಪೂರ್ಣ

ತೆಗಾಗಿ ಜನ್ಮ ತಾಳಲೇಬೇಕು. ಪರಮಾತ್ಮನಲ್ಲಿ ಪರಿಪೂರ್ಣತೆಗೆ ತವಕಿಸುತ್ತಿದೆ. ಈ ಅಂತರಾತ್ಮ! ಸಿದ್ಧಿಯವರೆಗೆ ಉಳಿದ ಸಾಧನೆಯನ್ನಾದರೂ ಮಾಡಲು ಶರೀರವು ತಕ್ಕಷ್ಟು ಬೆಳೆದು ಬಲಗೊಳ್ಳಬೇಕು. ಅದಕ್ಕಾಗಿ ವಿಕಾಸಗೊಂಡ ಆತ್ಮ ಅಂತರಾತ್ಮಾವಸ್ಥೆಯಲ್ಲಿ ತರಹರಿಸುವದರ ನಿದರ್ಶನಗಳು ಈ ಸೋಜಿಗದ ಲಕ್ಷಣಗಳು. ಎಂದು ನನಗನಿಸುತ್ತದೆ. ಇದು ಸಾಮಾನ್ಯವಾದುದಲ್ಲ ಈ ಚಿಕ್ಕ ಪಿಂಡವು. ಶಿವಸಾನಿಧ್ಯದಲ್ಲಿ ಇರುವಿರಿ ನೀವು ಅದನ್ನು ಹೊತ್ತು ಹೆತ್ತಿರುವ ದೊಡ್ಡಮ್ಮ ತಾಯಿ ನಿನ್ನ ಉದರದ ಪುಣ್ಯದ ಉನ್ನತಿಯನ್ನು ಅಳೆಯಲಾಗದು, ತಿಳಿಯಲಾಗದು, ನಿಮ್ಮಿಬ್ಬರ ಹೆಸರುಗಳ ಧರ್ಮೋನ್ನತಿಯ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯುವವು. ಕುತೂಹಲಕರವಾದ ಈ ಆಟ-ನೋಟಗಳ ನಿದರ್ಶನಗಳು ವಿಲಕ್ಷಣಗಳಲ್ಲಿ ಶುಭಲಕ್ಷಣಗಳು. ನೀವು ಗಾಬರಿಯಾಗಬೇಕಾಗಿಲ್ಲ. ಚಡಪಡಿಕೆ ಬೇಡ ನಿಮ್ಮ ಭಕ್ತಿ ಪಥ ಶುದ್ಧಿ ಕಾಯಕ, ತ್ರಿವಿಧ ದಾಸೋಹಗಳ ಪರಿಶುದ್ಧ ಜೀವನ ಶಿವನೊಲುಮೆಗೆ ತಕ್ಕದಾಗಿದೆ. ಆನಂದಕರವಾಗಿದೆ" ಮೌನವಾಗಿ ಕುಳಿತು ಎಲ್ಲವನ್ನು ಅವಧಾನಿಸಿ ಕೇಳಿ ಕೃತಾರ್ಥರಾಗಿ ಗೌಡ-ಗೌಡತಿಯರು ಶ್ರೀಗಳ ಅಡಿಗೆ ಪೊಡಮೊಟ್ಟು ಪುಣ್ಯಾತ್ಮನನ್ನು ನಮಸ್ಕಾರ ಮಾಡಿಸಿ ಕರಕೊಂಡು ಮನೆಗೆಬಂದರು.

ಬಾಲಕನಿಗೆ ಮೂರು ವರ್ಷ,ಮನೆಯಲ್ಲೆಲ್ಲ ಓಡಾಡುತ್ತಾನೆ. ಮನೆಯ ಕಾರ್ಯ ಚಟುವಟಿಕೆಗಳನ್ನು ನಿಂತುನೋಡುತ್ತಾನೆ. ಮಾತುಗಳನ್ನು ಆಲಿಸುತ್ತಾನೆ. ಅವುಗಳಿಗೆ ಅಣಕವಾಡಿ ಪ್ರತಿಭಟಿಸುತ್ತಾನೆ. ನಗುತ್ತಾನೆ. ಇದೇಕೇ ಅದೇಕೇ ಎಂದು ಕೇಳುತ್ತಾನೆ. ಜಳಕಮಾಡಿದ ಮೇಲೆ ಪೂಜಾ ಗೃಹದಲ್ಲಿ ಲಿಂಗವನ್ನು ಕೈಯಲ್ಲಿ ಹಿಡಿದು ಹೂ ಪತ್ರಿಗಳ ಹತ್ತಿರ ಕುಳಿತು ಪೂಜೆಯ ಆಟ ಆಡುತ್ತಾನೆ. ಈ ಆಟವೇ ಅವನು ಬೆಳೆದಂತೆ ದೀರ್ಘವಾದ ಲಿಂಗ ಪೂಜೆಗಾಗಿ ಪರಿಣಮಿಸುತ್ತದೆ. ಐದು ವರ್ಷ, ಈಗ ಲೋಕದಾಟವನ್ನು ನೋಡಲು ಬೇರೆ ಮಕ್ಕಳ ಜೊತೆಗೆ ಆಡಲೆಂದು ಓಣಿಗೂ ಬರುತ್ತಾನೆ. ಮಕ್ಕಳೊಡನೆ ಆಟಕ್ಕೆ ನಿಲ್ಲುತ್ತಾನೆ. ಮಾಯಾ ಪ್ರಪಂಚದ ಉದ್ವಿಗ್ನತೆಯು ವಿಕಾರ ರೂಪದ ದೃಷ್ಯಗಳ ಆಕರ್ಷಿಸಿದಾಗ ಆಟದಲ್ಲಿಯ ತನ್ನ ಪಾಲನ್ನು

ಬಿಟ್ಟು ಅವನ್ನು ನೋಡುತ್ತ, ಕೇಳುತ್ತಾ, ನಿಲ್ಲುತ್ತಾನೆ. ದ್ವೇಶದ ಬಿಗುವು, ರಾಗದ, ಭ್ರಮೆ ರೋಗಿಗಳ ನರಳು, ದುರ್ಮೋಹಿಗಳ ವಿರಹದ ಅಳಲು, ಅಹಂಕಾರದ ಭಾರ, ಕಳೆದುದರ ಕಷ್ಟ, ಆಶಾಭಂಗದ ಅನುತಾಪ, ವಿನಾಶದ ನೋವು, ಕೋಪದ ಆರ್ಭಟ ಇವುಗಳಲ್ಲಿಯ ಒಂದೊಂದರ ಹಗರಣವನ್ನು ಓಣಿಯಲ್ಲಿ ಕಂಡಾಗಲೇ ಕೈಯೊಳಗಿನ ಅವನಾಟವು ಅಲ್ಲಿಯೇ ಉಳಿಯು ತ್ತಿತ್ತು. ಸಾಕಿವೆ ಕಾಳಿನಷ್ಟು ಸುಖಕ್ಕಾಗಿ ಹಂಬಲಿಸುವ ಮಾನವರು ದುಃಖ ದಲ್ಲಿ ಮುಳುಗುತ್ತಾರಲ್ಲಾ ಎಂದು ಮರುಗುವಂತೆ ಮೈಮರೆತು ನಿಲ್ಲುತ್ತಿದ್ದನು. ಜೊತೆಯವರು ಅವನನ್ನು ಎಚ್ಚರಿಸಿ ಆದಕ್ಕೆ ಹಚ್ಚುವರು. ಅದೂ ಬಗಿಹರಿ ಯುದಾಗ ಅವರು "ನೀವು ಬ್ಯಾಡ್ರಿ ಗೌಡ್ರ ಕುಳಿತು ನೋಡ್ರಿ" ಎಂದು ಬಿಟ್ಟು ಆಡುವರು ಆಗ ಪಣ್ಣುಖಿನು ಒಬ್ಬನೇ ಕುಳಿತು ಮಳಲಲಿಂಗವ ಮಾಡಿ ಪೂಜೆಯು ಆಟವನ್ನು ಆಡುವನು. ಪತ್ರಿ ಪುಪ್ಪಗಳೆಲ್ಲ ಮಳಲೇ ! ನೆನಹಿನಲ್ಲಿ ನಿಜವಾದ ಲಿಂಗಪೂಜೆ ಆಟದ ಕೈಯಲ್ಲಿ ಮಳಲ ಲಿಂಗಪೂಜೆ ಈ ಆಟವನ್ನು ನೋಡಿ ಪ್ರೀತಿ ಪಟ್ಟ ಉಳಿದ ಮಕ್ಕಳು ಚಿಕ್ಕಗೌಡರನ್ನು ಆದರಿಸಿ ಕೈಹಿಡಿದು ಕರಕೊಳ್ಳುವರು. ಅಲ್ಲಲ್ಲಿ ಕುಳಿತು ನೋಡುವ ಹಿರಿಯರಿಗೆ ಇದೊಂದು ಮೋಜಿನ ನೋಟ

ಒಂದು ದಿನ ಗೌಡರ ಮನೆಯ ಬಾಗಿಲ ಮುಂದೆ ಗದ್ದಲ ನಡೆದಿತ್ತು. ಗೌಡನ ಹಿರಿಯ ಕವಲಿಗ ಸತ್ಯಪ್ಪನನ್ನು ಕೂಗಿ "ಏನು ಗದ್ದಲ" ಎಂದು ಕೇಳಿದನು.

"ಯಾರೋ ಜಗಳಾಡ್ತಾ ಗೌಡರ ಕಡೆಗೆ ಒಂದಾರ್ರಿ ಯಪ್ಪಾ. ಮುಂದಿ ಕೂಡ್ಯಾರ್ರೀ ಚೀರ್‍ಯಾಡತಾರ್ರೀ"

"ಗೌಡ್ರಿಲ್ಲೇನಲ್ಲಿ?"

"ಇದ್ದಾರೀ"

"ಹಂಗಾದರ್‍ಯ ಜನರ ಬಾಯಿ ನಡದೇ ಆದಲ್ಲಾ"

"ಇದ್ದವರು ದೊಡ್ಡ ಧನಿಯರಲ್ಲಿರೀ ಯಪ್ಪಾ ಸಣ್ಣ ಧನಿಯರು ಸಮ್ಮುಕಪ್ಪ"

"ಅಲ್ಲಿ ಏನು ಮಾಡ್ತಾರೋ ನಿನ್ನ ಸಣ್ಣ ಧನಿಯರು ?" "ಕಟ್ಟೆ ಮ್ಯಾಲೆ ಕೈಕಟ್ಟಿಗೊಂಡು ಸುಮ್ಮನೇ ನಿಂತಾರ್ರಿ ಕಣ್ಣಮುಚಗೊಂಡಾರ್ರಿ ನೋಡ್ತಾ ನಿಂತಾರಿಯವ್ವಾ"

ಚಿಕ್ಕೊಳುಗಳಿಗೆಲ್ಲಾ ನಗೆ, 'ಕಣ್ಣು ಮುಚ್ಚಾರಿ, ನೋಡತಾರ್ರಿ ಸತ್ಯಪ್ಪ ಕಾಕಾ ಮಜಾ ! ಎಂದು ಹಾಸ್ಯ ಮಾಡಿದರು ಕಣ್ಣುಮುಚ್ಚಿ ನೋಡುವದರಲ್ಲಿಯ ರಹಸ್ಯ ಅವರಿಗೆ ಗೊತ್ತಿದ್ದೀತೇ ವಿದ್ಯಾಭ್ಯಾಸಕ್ಕಾಗಿ ಷಣ್ಮುಖನನ್ನು ಮಠಕ್ಕೆ ಕಳುಹಿದರು. ಅಲ್ಲಿ ಅಯ್ಯನವರೊಬ್ಬರು ಪಾಠ ಶಾಲೆ ಸಾಗಿಸುತ್ತಿದ್ದರು. ಷಣ್ಮುಖನು ಅಕ್ಷರಜ್ಞಾನ ಮಾಡಿಕೊಂಡು ಓದು-ಬರಹಗಳನ್ನು ಬೇಗನೆ ಕಲಿತನು. ಶಿವಸ್ತೋತ್ರ, ಪ್ರಾರ್ಥನಾ ಪದ ಗಳನ್ನು ಕಂಠಪಾಠ ಮಾಡಿದನು. ಕೇಳಿದ ವಚನಗಳ ಅರ್ಥವನ್ನು ಮನನ ಮಾಡುತ್ತಿದ್ದನು. ಶಿವಾನುಭವ ಗೋಷ್ಠಿಯಲ್ಲಿಯೂ ಕೂಡ್ರುತ್ತಿದ್ದನು. ಇವನ ವಿದ್ಯಾಭ್ಯಾಸದ ತೀವ್ರಗತಿಯನ್ನು ಅಖಂಡೇಶ್ವರರು ಮೆಚ್ಚಿಕೊಂಡಿ ದ್ದರು. ಹತ್ತಿರ ಕರೆದು ಪರಾಮರ್ಶಿಸುತ್ತಿದ್ದರು.

ಷಣ್ಮುಖಪ್ಪ ಮನೆಯಲ್ಲಿರುವಾಗ ಒಳಗೊಳಗೇ ಇರುವನು. ಗೌಡರ ಮನೆಯ ಮುಂಭಾಗದಲ್ಲಿ, ಜಗಳ ಮಾಡಿ ನ್ಯಾಯ ನಿರ್ಣಯಕ್ಕೆ ಗೌಡರ ಹತ್ತಿರ ಬಂದವರೂ, ತಂಟೆಯ ವ್ಯವಹಾರಗಳನ್ನು ಪಂಚರ ವಿಚಾರಣೆಗೆ ತಂದವರೂ ಯಾವಾಗಲೂ ತುಂಬಿರುತ್ತಿದ್ದರು. ದೂರು ಕೊಟ್ಟವರು. ನಿರಾಕರಿಸುವವರು, ಭೀಕರವಾಗಿ ಬಾಯಿ ಬಿಡುತ್ತಿದ್ದರು. ನಿಂದೆ ಬಡಿದಾಟ ಕಳವು, ಅಪಹರಣ, ಮೋಸ, ವ್ಯಭಿಚಾರ, ದುರಾಚಾರ, ಅಪಮಾನ, ಹಲವಾರು ದುಷ್ಟತನಗಳ ಕತೆಗಳು ಅಲ್ಲಿ ವಿವರವಾಗಿ ಸ್ಫುಟವಾಗಿ ಬೆಳಕಿಗೆ ಬರುತ್ತಿದ್ದವು. ಮೇಲಿಂದ ಮೇಲೆ ಗೌಡರ ಮನೆಯಲ್ಲಿ ಊರ ಸಂಚಾರದ ಸಂಕಟಗಳ ಪ್ರದರ್ಶನವೇ ನಡೆಯುತ್ತಿತ್ತು. ಪುರಾಕೃತ ತಪಸ್ಸಿನ ಫಲವಾಗಿ ಹುಟ್ಟುವಾಗಲೇ ವೈರಾಗ್ಯದ ಕಿರಣವಾಗಿ ಮೂಡಿಬಂದ ಷಣ್ಮುಖನಿಗೆ ಇದನ್ನು ಕೇಳಿ ನೋಡಿ, ಮನಸ್ಸು ಜಿಗುಪ್ಸೆಗೊಂಡಿತ್ತು. ಹೊರಗೆ ಬೀದಿ

ಯಲ್ಲಿ ಬಂದರೆ ಬಹುಪಾಲು ಮನೆಗಳಲ್ಲಿ ಕಾಣುವದೇನನ್ನು ? ಪೋಷಣೆಗೊಳಗಾದ ದುರ್ಬಲರ ಬೇನೆ ಬಡತನಗಳಲ್ಲಿ ಬಳಲುವರ ಗೋಳಿನ ದಾರುಣ ಚಿತ್ರ. ಇವೆಲ್ಲವು ಪ್ರಬುದ್ಧನಾಗಿರುವ ಷಣ್ಮುಖನ ಕರುಳು ಕೊರೆಯುತ್ತಿದ್ದವು, ಇವರು ಭವತಾಪದಿಂದ ಹೇಗೆ ಮುಕ್ತರಾಗುವರು ? ಇದರ ಪರಿಹಾರದ ದಾರಿಯನ್ನು ತಿಳಿಯಲು ತಪಸ್ವಿಗಳ ಹತ್ತಿರ ಬರುವವರಾದರೂ ಎಷ್ಟು ಜನ ? ಅನಂತ ಕಷ್ಟಕಾರ್ಪಣ್ಯಗಳಿಂದ ತುಂಬಿದ ಈ ಸಂಸಾರವನ್ನು ಎಷ್ಟು ಹೇಳಿದರೂ ಅಪ್ಪಿಕೊಂಡಿರುವನು ಎಂಥ ಮೌಢ? ಎಷ್ಟದರ ಮೋಹ ? ಮಾಯಾ ಬಲ ಎಷ್ಟಿದ್ದೀತು ? ಅಂತೆಯೇ ಬಸವಣ್ಣನವರು ಹಾಡಿದ್ದಾರೆ. “ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ ಹುರುಳಿಲ್ಲ ! ಹುರುಳಿಲ್ಲ ! ಕಾಯಯ್ಯ” ಎಂದು ದೇವನನ್ನು ಬೇಡಿಕೊಂಡಿದ್ದಾರೆ.

ನಾನೊಂದು ನೆನಸಿದರೆ ತಾನೊಂದು ನೆನೆಯುವದು ತಾ ಬೇರೆ ಎನ್ನ ಅಳಲಿಸಿ, ಕಾಡಿತ್ತು. ಮುಂದುಗೆಡಿಸಿತ್ತು. ಎಂದು ಗೋಗರೆದಿದ್ದಾರೆ ಯೋಚನಾಪರರಾಗಿದ್ದಾರೆ.

ಹೀಗಿರುವ ಷಣ್ಮುಖನು ತಾನು ತನ್ನ ಮನೆಯೇನು ಬೇಸಾಯವೇನು. ಆಳುಮಕ್ಕಳ ಕೆಲಸಕಾರ್ಯವೇನು, ಎಂಬುವದನ್ನು ಕಣ್ಣೆತ್ತಿ ನೋಡಿಯಾನೇ ಊಂ ಹೂಂ ಮನೆಯಲ್ಲಿದ್ದರೆ ಪೂಜಾ ಮಂದಿರದಲ್ಲಿದ್ದಾನೆ. ಲಿಂಗಾರ್ಚನೆಯಲ್ಲಿ ದೀರ್ಘಕಾಲ ಕಳೆಯುತ್ತಿದ್ದಾನೆ ಲಿಂಗ-ಪರಿಜ್ಞಾನದಲ್ಲಿ ಮುಳುಗಿರುವನು. ಧ್ಯಾನದಲ್ಲಿ ಸಮರಸಗೊಂಡಿರುವನು. ಎಷ್ಟು ಹೊತ್ತಾದರು ಕೂಡ್ರುವನು. ಲಿಂಗಪೂಜಾ ಪ್ರೀತಿಯುಳ್ಳ ತಾಯಿ ಆತಂಕಮಾಡುತ್ತಿರಲಿಲ್ಲ. ಆದರೂ ಪ್ರಸಾದದ ಪರಿವೆಯೂ ಇಲ್ಲದೆ ಇರುವಾಗ ಅಕ್ಕರಿಯಿಂದ ತಮ್ಮಾ! ಪ್ರಸಾದಕ್ಕೆ ಬರಬೇಕಪ್ಪ, ಎಂದು ಕರೆಯುವಳು. ಕೆಲವು ಸಲ ಹೀಗೆ ನಡೆದಿರಲು ಒಮ್ಮೆ “ಅವ್ವಾ, ನನ್ನನ್ನು ಕಾಡಬೇಡ್ರವ್ವಾ” ನಾನು ಬೇಕಾದಾಗ ಬಂದು ಉಣ್ಣುವೆನು ತೀರ್ಥ ಪ್ರಸಾದ ಇಟ್ಟು ನೀವು ಊಟಮಾಡಿರಿ

ಎಂದು ನಿಷ್ಠುರವಾಗಿ ಹೇಳಿದ್ದನು. ಮಗನ ಜೀವನದ ಹಾದಿ ಬೇರೆಯಾಯಿತು. ನಾವಿನ್ನು ಮುಪ್ಪಿನವರು. ಮಗನು ದೊಡ್ಡವನಾಗಿ ಮನೆತನ ನೋಡಿಕೊಂಡು ಗೌಡರೇಕಾರ್ಯ ವಹಿಸಿಕೊಂಡು ವಂಶದ ಗೌರವವನ್ನು ಮುಂದುವರಿಸಬಹುದೇ? ಎಂದು ಸಂದೇಹಗೊಂಡು ಚಿಂತೆಗೊಳಗಾದಳು ಗೌಡತಿ. ಇದು ಅವಶ್ಯವೆಂದು ಗೌಡ ಎಂದೋ ನಿರ್ಧರಿಸಿ ಬಿಟ್ಟಿದ್ದನು.

ಷಣ್ಮುಖನು ಮನೆಯಲ್ಲಿ ಇಲ್ಲದಿದ್ದರೆ ಮಠದಲ್ಲಿಯೇ ಇರುವತನಕ ಗುರುಗಳ ಸೇವೆ ಮಾಡುವನು. ಗುರುಗಳು ನಡೆಸಿದ ಅನುಭಾವದ ಗೋಷ್ಠಿಯಲ್ಲಿಯ ವಿವರಗಳನ್ನು ಬರೆದಿಟ್ಟುಕೊಳ್ಳುವನು. ಊರಿಗೆ ಬರುವ ಸಂತ-ಮಹಂತರ ಸಹವಾಸ ಮಾಡಿ ಅದರಿಂದ ತಿಳಿದುಕೊಂಡು ಮಾಡಿರುವ ಟಿಪ್ಪಣಿಗಳನ್ನು ಹೊಂದಿಸಿ ಬರೆದಿಟ್ಟುಕೊಳ್ಳುವನು. ಸಮಯ ವಿದ್ದಾಗಲೆಲ್ಲ ಮಠದ ಹಿಂಭಾಗದ ಏಕಾಂತ ಸ್ಥಳದಲ್ಲಿ ಧ್ಯಾನ ಮಗ್ನನಾಗಿ ಕುಳ್ಳಿರುವನು. ಷಣ್ಮುಖನ ಹುಟ್ಟಿನೊಡನೆಯೇ ಅವನಲ್ಲಿ ಅಂಕುರಿಸಿದ ವೈರಾಗ್ಯ ಸಸಿ ಚಿಗಿತು ಪಲ್ಲವಿಸತೊಡಗಿತ್ತು. ಛೀ ಈ ಸಂಸಾರ ಎಂದಿಗೂ ಬೇಡಪ್ಪ! ಎಂದು ಕುಳಿತಲ್ಲಿಂದ ಎದ್ದೇಳುತ್ತಿದ್ದನು. ವೈರಾಗ್ಯ ವಿಚಾರವು ಅವನನ್ನು ಬಲವಾಗಿ ಸೆಳೆಯಿತು.

ಒಂದು ದಿನ ಸನ್ಯಾಸಿ ವೇಷದ ಉತ್ಕಟೇಚ್ಛೆಯಾಯಿತು. ಉಟ್ಟಿದ್ದ ಪಂಜೆಯನ್ನು ಹರಿದು ಕಾಪೀನ ಮಾಡಿ ಹಾಕಿಕೊಂಡು ಮೈಯಲ್ಲ ಭಸ್ಮ ಹೂಸಿಕೊಂಡನು. ಜಪಮಾಲೆ ಹಿಡಿದು ಕುಳಿತಿದ್ದನು. ಪತಿಯ ಊಟಕ್ಕೆ ಎಡೆಮಾಡಿ "ಷಣ್ಮುಖನ ಶಿವೋಪಾಸನೆ ಎಲ್ಲಿಗೆ ಬಂದಿದೆ. ಎಡೆಗೆ ಬರಬಹುದೆ" ಎಂದು ತಾಯಿ ಪೂಜಾ ಕೋಣೆಗೆ ಇಣುಕಿ ನೋಡಿವಳು ಅವನ ವೇಷವನ್ನು ಕಂಡು ಗಾಬರಿಯಾದಳು. ಬೆರಳು ಕಚ್ಚಿಕೊಂಡು ಕೇಳಿದಳು.

"ಏನಪ್ಪಾ ಇದು? ನೀನು ಏನಾಗಬೇಕೆಂದಿರುವೇ ? ಇದೇನು ನಿನ್ನ ಲೀಲೆ"?

"ಇದು ಸನ್ಯಾಸವವ್ವಾ! ನನಗಿದು ಒಳ್ಳೆಯದೆನಿಸುತ್ತದೆ." "ಊಹೂಂ ಸನ್ಯಾಸಿಯಾಗುವದು ಬೇಡ, ಹಿರಿಯರಂತೆ ಗೌಡಿಕೆ ಮಾಡು ಮನೆತನ ನಡೆಸು. ಗುರುಸೇವೆ, ದಾನ-ಧರ್ಮಾದಿಗಳಿಂದ ಪುನೀತನಾಗು."

"ಸನ್ಯಾಸಿಗಳನ್ನು ಕಂಡರೆ ಮಹೇಶ್ವರನಿಗೆ ಬಲು ಪ್ರೀತಿ ಎಂದು ಒಮ್ಮೆ ನೀನೆ ಹೇಳಿದೆಯಲ್ಲವ್ವ ಹಾಗೆ ಮಹೇಶ್ವರನು ನನಗೆ ದೊರೆಯ ಬಾರದೇನು?

"ಹೌದು ಹೇಳಿದ್ದೆ. ಸನ್ಯಾಸಿಗಳ ಪೂಜ್ಯತೆಯನ್ನು ನಿನಗೆ ತಿಳಿಸ ಬೇಕಾಗುತ್ತದೆ. ಗುರುಗಳು ಆಗಾಗ ಭಕ್ತರಿಗೆ ಹೇಳುವ ಬಸವಣ್ಣನವರ ಮಾತು ನಿನಗೆ ಗೊತ್ತಿರಬೇಕಲ್ಲ? ಕೃಷಿ, ಕೃತ್ಯ, "ಕಾಯಕವಾವುದಾ ದೊಡೇನು. ತನ ಮನ ಬಳಲಿಸಿ ತಂದು ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದವನು ಎನಗೆ ತೋರಯ್ಯ ಆತನ ಕೈಲಾಸವೆಂದು ಹೊಕ್ಕು ಲಿಂಗಾರ್ಚನೆ ಮಾಡುವ ಜಂಗಮ ಜಗತ್ ಪಾವನ. ಅಂತಹ ಸದ್ಭಕ್ತನು ಮಾಯಾ ಮೋಹಗಳಿಗೆ ಬಲಿಯಾಗದೆ ಮಾಡುವ ಸಂಸಾರ ತ್ಯಾಜವಲ್ಲ ಅಂದಮೇಲೆ ಕಾಯಕವಿಲ್ಲದ ಸನ್ಯಾಸಿಯದೇನು ದೊಡ್ಡಿತ್ತು?"

'ಹಾಂ! ತಡೆ ದೊಡ್ಡ-ಅವ್ವ ಸನ್ಯಾಸಿಗೂ ಕಾಯಕವಿದೆ ಅವ್ವಾ' ಇಬ್ಬರಲ್ಲಿ ನಸುನಗೆ ಮೂಡಿತ್ತು. ಮಾತು ಮುಂದುವರೆಸಿ ಷಣ್ಮುಖ "ಲೋಕೋದ್ಧಾರ ಅವನ ಕರ್ತವ್ಯ. ತನ್ನ ಆದರ್ಶ ವೃತ್ತಿಯಿಂದ ಲೋಕದ ಡೊಂಕು ದೂರ ಮಾಡುವನು. ಆತಂಕವಿಲ್ಲದೆ ತನ್ನ ಶಿವಯೋಗ ಸಾಧನೆ ಮಾಡಿಕೊಳ್ಳುವನು. ಆತ್ಮತೃಷೆಯ ಜಿಜ್ಞಾಸುಗಳಿಗೆ ಬೆಳಕು ನೀಡುವನು. ಇದೆಲ್ಲ ಅವನ ಕಾಯಕ ಗುರುಲಿಂಗ ಜಂಗಮವಾದರೂ ಕಾಯಕದೊಳು" ಎಂದು ಬಸವಣ್ಣನವರ ಮಾತನ್ನು ಗುರುಗಳೇ ಹೇಳಿದ್ದಾರೆ. ಅದನ್ನು ನೀನು ಹೇಳಲೊಲ್ಲೆ ಯಾಕವ್ವಾ?" ತಾಯಿಗೊಂದು ಅಮೋದ, ಭೋಜನ ಮಾಡುತ್ತಲೇ ಕೇಳುತ್ತಿದ್ದ ತಂದೆ ಷಣ್ಮುಖನು ಜೀವನದಲ್ಲಿ ಯಾವ ಧ್ಯೇಯೋದ್ದೇಶಗಳನ್ನು ಹೊಂದಿದ್ದಾನೆಂಬುದನ್ನು ತಿಳಿದುಕೊಂಡು ಬಿಟ್ಟನು.

ಶಿವನು ಮಾಡಿದ್ದೆಲ್ಲ ಒಳ್ಳೆಯದೇ ಎಂದು ಹೊರಗೆ ಹೊರಟನು. ತಾಯಿಗೆ ಏನು ತಿಳಿಯದೆ ದಂಗಾಗಿದ್ದಳು.

ಗೌಡರ ಬಂಧು ಬಳಗ ದೊಡ್ಡದು. ಅವರೆಲ್ಲ ಉದಾತ್ತ, ಉನ್ನತ ವಿಚಾರದವರೇ ಎಲ್ಲಿರುತ್ತಾರೆ ? ಸಾಮಾನ್ಯರಿಗೆ ವೈರಾಗ್ಯವೆಂದರೆ ವಿಪರೀತ ! ಅದೊಂದು ಹುಚ್ಚಾಟ ಎಂಬ ಭಾವನೆ. ಸನ್ಯಾಸ ಶಬ್ದವು ಕೂಡ ಬೈಗಳದಲ್ಲಿ ಬಳಸುವ ತಿರಸ್ಕೃತ ಶಬ್ದ. ಅವರು " ಷಣ್ಮುಖನಿಗೆ ಮದುವೆ ಮಾಡಿದರೆ ಅವನ ಒಲವು ಬದಲಾಗುತ್ತದೆ. ಪ್ರಪಂಚದತ್ತ ಬರುತ್ತಾನೆ" ಎಂದು ಗೊತ್ತು ಮಾಡಿದರು. ದೊಡ್ಡಮಾಂಬೆಯನ್ನು ಅವರತ್ತ ವಾಲಿಸಿದರು. ಮದುವೆಯೊಂದು ಮಾಯಾ ದೇವಿಗೆ ಮಹಾ ಅಸ್ತ್ರ. ಅದನ್ನೆಸೆದಾಗ ಉರುಳಿ ಬೀಳದ ನರರು ತೀರ-ತೀರ ವಿರಳ. ಈಗ ಆ ಬಾಣ ಬಿಲ್ಲಿಗೇರಿತು. ಆಗ ವಧೂವರರನ್ನು ಹಿರಿಯರೇ ನೋಡಿ, ವಿಚಾರಿಸಿ ಗೊತ್ತುಮಾಡುತ್ತಿದ್ದರು. ಮದುವೆಯಾಗುವ ಹುಡುಗ-ಹುಡುಗಿ ಯರು ಪರಸ್ಪರ ನೋಡುವದು ಮದುವೆಯ ಮಂಟಪದಲ್ಲಿಯೇ ಸಾಧಿಸಿ ದರೆ ಕಳ್ಳ ನೋಟದಿಂದ ಮಾತ್ರ. ನಮ್ಮ ಬಾಲಕನಿಗೆ ಹತ್ತು ಅಥವಾ ಹನ್ನೆರಡು ವರ್ಷ. ಅದು ಹಿರಿಯರಿಗೆ ಸಾಕಾಗಿತ್ತು. ಖ್ಯಾತಿವೆತ್ತ, ಜೇವರಗಿಯ ಮಲ್ಲಶೆಟ್ಟಿ ಗೌಡನ ಮನೆತನದ ಗುಣ-ಧನಗಳ ಸಂಪತ್ತನ್ನು ಕನ್ಯಾಪಿತರು ಪರಿಶೀಲಿಸಿ ನೋಡುವ ಅಗತ್ಯವೇ ಇರಲಿಲ್ಲ. ಮದುವೆಯ ದಿನ ನೇಮಿಸಲ್ಪಟ್ಟಿತ್ತು, ಸಿದ್ಧತೆ ನಡೆಯಿತು.

ಇದನ್ನು ತಿಳಿದ ಬಾಲಯೋಗಿ ಷಣ್ಮುಖನು ಮಠಕ್ಕೆ ಓಡಿ ಹೋದನು. ಗುರುಪಾದವಿಡಿದು ಗೋಗರೆದನು. ಅಖಂಡೇಶ್ವರ ಶಿವ ಯೋಗಿಗಳಿಗೆ ಸಮಾಚಾರ ತಿಳಿದಿತ್ತು.

"ಏಳು ಮಗು, ನೀನು ಹೀಗೆ ಅಳುವದೇ? ದುಃಖಕ್ಕೆ ಕಾರಣವೇನು ಪರಶಿವನು ನಿನ್ನನ್ನು ಕಾಪಾಡುವನು. ಕೈ ಹಿಡಿದು ಗುರುಗಳು ಮೈದಡವಿ ದಾಗ ಆತನು ಎದ್ದು ಕೈಮುಗಿದು ಗದ್ಗದಿತ ಕಂಠನಾಗಿ ನುಡಿದನು.

"ತಂದೆ-ತಾಯಿಗಳ ಕಾಮ ವಿಕೃತಿಯಿಂದ ಹುಟ್ಟಿದ ಶರೀರವನ್ನು ನಚ್ಚಿ ಅಜ್ಞಾನದಿಂದ ಮಾನವರು ಸಂಸಾರದ ನರಕ ಕೂಪದೊಳು ಬಿದ್ದು ತಾಪತ್ರಯಗಳ ಬೆಂಕಿಯಲ್ಲಿ ಬೆಂದು ನಿಜ ಸುಖವನರಿಯದೆ ಕೆಟ್ಟು ಹೋಗುವರು ತಾನಲ್ಲದ, ತನ್ನದಲ್ಲದ, ದೇಹದ ಅನಿತ್ಯ ಸುಖಕ್ಕಾಗಿ, ಮೋಹ ಪರವಶರಾಗಿ ಬಂಧನದಿ ಬಳಲುವರು. ಪಂಚೇಂದ್ರಿಯಗಳು ಶವಕ್ಕೆ ಮುತ್ತಿದ ನಾಯಿಗಳಂತೆ ವಿಷಯ ವಾಸನೆಗೆ ಅವನನ್ನು ಹರಿದು ಕಚ್ಚಾಡಿ ತಿನ್ನುತ್ತಿರುವವು. ನಿಜಲಿಂಗದ ನಿಲುವಿನಿಂದ ದೂರವಾಗಿಸುವ ಈ ಸಂಸಾರಕ್ಕೆ ನನ್ನ ಎಳೆಯಬೇಡ ? ಸಂಸಾರದಿಂದ ದೂರವಿರಿಸಿ ಈ ಪಾದಗಳು ಭವಚಕ್ರದಲ್ಲಿ ತಿರುಗುವದನ್ನು ತಪ್ಪಿಸಿ ನನ್ನನ್ನು ಕಾಪಾಡಲಾರವೇ ದೇವಾ?" ಮತ್ತೆ ಅವರ ಪಾದದ ಮೇಲೆ ತಲೆಯಿಟ್ಟು ಬಿಕ್ಕಳಿಸಿದನು.

ಶಿವಯೋಗಿಗಳು ಎಬ್ಬಿಸಿ "ಸಂಸಾರವನ್ನು ಸರಿಯಾಗಿ ತಿಳಿದು ಮಾಡಿದರೆ ಸಂಸಾರವು ಅಷ್ಟು ಘೋರತರವಾದುದಲ್ಲ"

ಸಂಸಾರ ಸಾಗರವು ಉರದುದ್ದವೆ ಹೇಳಾ, ಕೊರಳುದ್ದವೆ ಹೇಳಾ ಸಂಸಾರ ಸಾಗರವು ಶಿರದುದ್ದವಾದ ಬಳಿಕ ಏನು ಹೇಳುವೆನಯ್ಯಾ ಕೂಡಲ ಸಂಗಮದೇವಾ, ಏವೇನೇನಯ್ಯಾ" ಎಂದು ಗೋಳಾಡಿದ್ದಾರೆ ಬಸವಣ್ಣನವರು.

"ಹೌದು ಆ ಬಸವಣ್ಣನವರೇ ಇಬ್ಬರ ಸತಿಯರನ್ನು ಹೊಂದಿ ಸಂಸಾರ ಮಾಡಿದರು. ಅದರಲ್ಲಿಯೇ ಈಸಿ ಪಾರಾದರು. ಈಸಬಲ್ಲವರಿಗೆ ಸಂಸಾರದ ಉದ್ದ ಎಷ್ಟಿದ್ದರೇನು? ಅವರ ಲೌಕಿಕ ಪಾರಮಾರ್ಥವೆರಡನ್ನು ನಡೆಸಿದರು. ಅವರಂತೆ ಬಲ್ಲವರು ಲೌಕಿಕವನ್ನು ಪಾರಮಾರ್ಥಿಕ ಸಾಧನೆಗೆ ಸಾಧನ ಮಾಡಿಕೊಳ್ಳುತ್ತಾರೆ. ಸಂಸಾರಿಕರು ಶಿವಕಾರುಣ್ಯವನ್ನು, ಶಿವಸಾಮರಸ್ಯವನ್ನು ಹೇಗೆ ನಡೆದು ಪಡೆಯಬಹುದೆಂಬುದನ್ನು ಬಸವಣ್ಣನವರು ಸಂಸಾರಿಗಳಾದ ನಡೆದು ತೋರಿಸಿದರು. ಅಂತೆಯೇ ಯಶಸ್ವಿಯಾದವರು. ನಡೆಯಿಲ್ಲದ ನುಡಿಗೆ ಬಲವಿರುವದಿಲ್ಲ. ಹನುಮಂತ ಸಮುದ್ರ ಹಾರಿದಂತೆ

ಸಂಸಾರ ಸಮುದ್ರ ಹಾರಿ ಬಂದಿದ್ದೇವೆಂಬ ವಿರಾಗಿಗಳು ತೀರ ವಿರಳ. ಬಾಲ್ಯದಲ್ಲಿಯೇ ಇಂಥ ಶಿವಭಕ್ತಿ, ತಪಸ್ಸು ನಿನ್ನನ್ನು ಇದು ಇನ್ನಾರಿಗಿದೆ? ನಿನ್ನಲ್ಲಿ ವೈರಾಗ್ಯವೂ ಉದಯವಾಗುತ್ತಲಿದೆ. ನೀನು ಎರಡಕ್ಕು ಒಲ್ಲಿದನಾಗಿ ರುವೆ ನೀನು ಯಾವ ಮಾರ್ಗ ಹಿಡಿದರೂ ಎಲ್ಲಿ ಇದ್ದರೂ ನಾನು ನಿನ್ನ ಹಿಂದಿರುವೆ ಭಯಬೇಡ"

ಗುರು ಶಿಷ್ಯರ ಇಬ್ಬರ ಕಣ್ಣುಗಳೂ ತೇವವಾಗಿದ್ದವು ಷಣ್ಮುಖನು ಮತ್ತೆ ವಂದಿಸಿದನು. ಗುರುವಿನ ಅಭಯ ಹಸ್ತದ ಆಶ್ರಯದಲ್ಲಿ ತಾನೀಗ ಏನು ಮಾಡುವದು ಎಂದು ಯೋಚಿಸುತ್ತ ಮರಳಿದನು.

ಗೌಡರಿಗೆ ಅಷ್ಟು ಉತ್ಸಾಹ ಇರಲಿ ಇಲ್ಲದಿರಲಿ ಗೌಡರ ಆಪ್ತ ಮಿತ್ರರು ಮದುವೆಯ ಸರ್ವ ಸಿದ್ಧತೆ ಮಾಡಿಕೊಂಡು ಸಜ್ಜಾಗಿದ್ದರು. ಸಂಜೆಗೆ ನಿಬ್ಬಣ ಬಂದಿತು. ಆಮಂತ್ರಿತರೂ, ಅವರಿಗೆ ಹತ್ತಿ ಹೊಂದಿದವರೂ ಅತ್ಯಧಿಕವಾಗಿ ಬಂದಿಳಿದರು. ಎಲ್ಲರನ್ನು ಬರಮಾಡಿಕೊಂಡು ಉಪಚರಿ ಸಿದರು. ಮಧ್ಯರಾತ್ರಿಯಾಯಿತು. ವಿವಾಹದ ಅಂಗವಾಗಿರುವ ಕೆಲವು ಕಾರ್ಯಕ್ರಮಗಳು ವಧು-ವರರಿಗೆ ಸಂಬಂಧಿಸಿದ ಈಗ ನಡೆಯಬೇಕಾಗಿದ್ದವು "ಬರಲಿ ಷಣ್ಮುಖ ಗೌಡರು, ವಧು ಬರಲಿ ಕರೆಯಿರಿ, ಬರಲಿ ಕರೆಯಿರಿ" ಕೂಗಿದರು ಕಾರಭಾರಿಗಳು. ಎಲ್ಲಿ ಇದ್ದಾರೆ ಷಣ್ಮುಖ ಗೌಡ, ಇಲ್ಲ ಅವನಿಲ್ಲ ಕೂಡ್ರುವ ಸ್ಥಳಗಳನ್ನೆಲ್ಲ ನೋಡಿದರು ಮಠಕ್ಕೆ ಹೋದರು. ಅಲ್ಲಲ್ಲಿ ಬೆಳಗಿನ ಹೊತ್ತಿನಲ್ಲಿ ಬಂದು ಹೋದನೆಂದು ಗೊತ್ತಾಯಿತು ಶಿವಯೋಗಿ ಗಳು ಯೋಗ ನಿದ್ರೆಗೊಳಗಾಗಿದ್ದರು. ಅಲ್ಲಿಯೂ ಇಲ್ಲ ಎಂಬುದನ್ನು ತಿಳಿದ ದೊಡ್ಡಮಾಂಬೆ ದಂಗಾದಳು. ಮಲ್ಲಶೆಟ್ಟಿಗೌಡ ಮೌನವಾದನು. ಅಲ್ಲಲ್ಲಿ ಗುಜು ಗುಜು ನಡೆಯಿತು. ಮಾಡಲಿಲ್ಲ ಬೆಳಗುಬರುತ್ತಿರುವಾಗ ಹಲವು ತರುಣರು, ಸೇವಕರು. ಊರಿಗೆ ಹರಿಬಿದ್ದು ಹುಡುಕ ಹೋದರು. ಜನ ಸಂಚಾರಕ್ಕೆ ದೂರವಾಗಿರುವ ಒಂದು ತೋಟದ ಗಿಡದ ಬುಡದಲ್ಲಿ ಕುಳಿತ್ತಿ ದ್ದಾನೆಂದು ಒಬ್ಬ ದೂತ ಬಂದು ಹೇಳಿದನು. ಆಗ ಎರಡು ತಾಸು

ಹೊತ್ತೇರಿತ್ತು. ಕೆಲವು ಪ್ರಮುಖರು ತಂದೆ ತಾಯಿಗಳನ್ನು ಮುಂದು ಮಾಡಿಕೊಂಡು ಅಲ್ಲಿಗೆ ಹೋಗಿ ನೋಡುತ್ತಾರೆ. ಪದ್ಮಾಸನ ಹಾಕಿಕೊಂಡು ಮಾಯಾ ರಹಿತ ಯೋಗ ನಿದ್ರೆಯಲ್ಲಿ ಮೌನವಾಗಿ ಕುಳಿತಿದ್ದಾನೆ.

ಮುಂಜಾನೆಯ ಸೂರ್ಯ ಕಿರಣಗಳು ಅವರ ಕೆನ್ನೆಗೆ ತಾಕದಂತೆ ನಾಗರ ಹಾವೊಂದು ಹೆಡೆಯರಳಿಸಿ ಎತ್ತಿ ನೆರಳು ಮಾಡಿದೆ. ಬಂದವರು ಕಂಡು ಬೆರಗಾದರು. ಇವನು ಸಾಮಾನ್ಯನಲ್ಲ, ಪರಶಿವನ ಅವತಾರವೇ ಆಗಿರುತ್ತಾನೆ ಎಂದು ಉದ್ಗರಿಸಿದರು. ಭಯಗೊಂಡವರು ಹಿಂದೆ ಸರಿದರು. ತಾಯಿ ಬಾಯಿ ಮೇಲೆ ಕೈಯಿಟ್ಟು ಗಾಬರಿಗಣ್ಣಿಲಿ ಕಂಡಳು. ಇವರೆಲ್ಲರ ಗದ್ದಲಕ್ಕೆ ಹಾವು ಸರಿದು ಮಾಯವಾಯಿತು.

"ಹೀಗೆಕಪ್ಪ ಷಣ್ಮುಖ, ಮದುವೆ ಬೇಡಾಗಿ ಓಡಿ ಬಂದೆಯಾ? ತಾಯಿ ಹಟದಿಂದ ಸಂಸಾರದಲ್ಲಿ ಸೇರಿಸುವಳೆಂದು ಓಡಿ ಬಂದೆಯಾ?" ಹೀಗೆ ಅಲಿಸುತ್ತ ಮುಂದೆ ಸಾಗಿ ಅವನ ಕೈಹಿಡಿದಳು.

ಷಣ್ಮುಖನು ಕಣ್ತೆರದು ಎಲ್ಲರನ್ನು ಕಂಡನು. "ತಂದೆ-ತಾಯಿಗಳೇ ನೀರಮೇಲಿನ ಗುರುಳೆಯಂತಿರುವ ಸಂಸಾರದಲ್ಲಿ ನನ್ನನ್ನು ತೊಡಗಿಸುವಿರೇಕೆ? ಕರಣಂಗಳಿಗೆ ಮುತ್ತಿರುವ ಕತ್ತಲೆಯನ್ನು ಕಳೆಯುವ ಚಿಜ್ಯೋತಿ ಶ್ರೀಗುರುವಿನ ಚರಣ ಸೇವೆ ನನಗೆ ನಿಜಸುಖವನ್ನೀಯುವದು. ಮಾಯಾ ಪ್ರಪಂಚದ ಕೊರಗಿಸುವ ಹಟವೇಕೆ ನಿಮಗೆ? ನೀವು ಗುರು ಕೃಪೆಯಿಂದ ಎಲ್ಲವನ್ನು ತಿಳಿವವರಿದ್ದಿರಿ. ನಾನು ಬರುವದಿಲ್ಲ. ನೀವು ಮನೆಗೆ ಹೋಗಿರಿ ಹಿರಿಯರೇ ನೀವು ಅಖಂಡೇಶ್ವರರ ಸನ್ನಿಧಾನದಿಂದ ಪಾವನರಾದವರು. ಎಲ್ಲವೂ ನಿಮಗೆ ತಿಳಿಯುತ್ತದೆ. ಅಣ್ಣ ತಮ್ಮ ಹೆಂಡಿರು ಮಕ್ಕಳು ಹೊಲ, ಮನೆ, ಧನ, ಕನಕ ಎಲ್ಲವೂ ನನ್ನದೆಂದೂ ಅವಕ್ಕೇನಾದರೂ ಕುಂದಾಗಬಾರದೆಂದು ಯಾವಾಗಲೂ ಕುದಿಯುತ್ತ ಶಿವಚಿಂತನೆಗೆ ವೇಳೆ ಇಲ್ಲದ ಭವ ಭಾರಿಯಾಗಲು ನಾನೊಲ್ಲೆ. ದಯವಿಟ್ಟು ಮರಳಬೇಕು

ತನ್ನ ಸ್ವರೂಪದ ಅರವಿಗಾಗಿ ಆತ್ಮಾನುಸಂಧಾನ ಮಾಡುವದಕ್ಕೆ ತುಂಬ ಅವಕಾಶಬೇಕು. ನನಗೆ ಉದಾರವೃತ್ತಿಗಳು ನೀವು ನಡೆಯಿರಿ, ಎಂದು ಕೈಮುಗಿದನು.

ತಂದೆ ಮುಂದೆ ಬಂದು "ನಾನು ನಿನಗೆ" ಮದುವೆ ಮಾಡುವದಿಲ್ಲ ಬಿಟ್ಟೆವು ಗುರುಗಳ ಹತ್ತಿರ ಹೋಗೋಣ ಬಾ ! ಎಂದು ಕೈಹಿಡಿದಾಗ ತಟ್ಟನೆ ಎದ್ದು ಹೊರಟನು ಷಣ್ಮುಖನು. ಎಲ್ಲರೂ ಮಠಕ್ಕೆ ಬಂದರು ದಂಪತಿಗಳು ಗುರುಗಳ ಮುಂದೆ ಸಾಗರ ಬಿದ್ದು ಎರಗಿ ಎದ್ದು ಕೈಮುಗಿದು

"ಚಿನ್ಮಯ ಗುರುವೇ ಇವನನ್ನು ಪೊರೆಯುವದು ನಮ್ಮಿಂದವಾಗದು. ಇವನು ಕಾಡು ಗಿಡವಲ್ಲ, ಕಲ್ಪತರು, ಪಶುವಲ್ಲ ಕಾಮಧೇನು, ನಿಮ್ಮ ಕರುಣೆಯ ಮಗ ನಿಮ್ಮಲ್ಲಿರಲಿ" ಎಂದು ನುಡಿದ ಗೌಡ ಮತ್ತೆ ವಂದಿಸಿದ

"ಹೌದು ತಂದೆ" ಎಂದು ದೊಡ್ಡಮಾಂಬೆ ವಂದಿಸಿದಳು.

"ಹೌದು ಗೌಡರೇ ಸಹಿಸು ತಾಯೇ. ಈತ ದೇವಮಾನವ ವೀರ ವಿರಾಗಿಯಾಗಿ ಲೋಕ ಬೆಳಗುವ ಮಹಾಶಿವಯೋಗಿಯಾಗುವನು. ಇಷ್ಟೆಲ್ಲ ನಡೆದುದು ಶಿವಲೀಲೆ. ಚಿಂತಿಸದೆ ಮುನ್ನಡೆಯಿರಿ. ಶಿವನು ನಿಮಗೆ ಶಾಂತಿ-ಸುಖ ಕರುಣಿಸುವನು ನೀವು ಮುಕ್ತಿ ಸುಖವನ್ನು ಪಡೆಯುವಿರಿ."

ಗುರುವಿನ ಅಭಯ ವಾಣಿಯಿಂದ ಸಮಾಧಾನ ಹೊಂದಿ ಮುಪ್ಪಿನ ಗೌಡ ಗೌಡತಿಯರು ತಮ್ಮ ಹಿತಚಿಂತಕರೊಡನೆ ಮಗನನ್ನು ಗುರುಗಳಡಿಗೆ ಅರ್ಪಿಸಿ ಮನೆಗೆ ಬಂದರು.

ಮದುವೆ ನಿಂತು ಹೋಯಿತು ಕನ್ಯಾಪಿತರಿಗೆ ಹೇಗೋ ಆಗಿರಲಿ ಜೇವರಗಿ ಗೌಡರ ಇದ್ದೊಬ್ಬ ಮಗನ ಮದುವೆ ಎಂದು ನಾಲ್ಕು ನಿಟ್ಟಿನಿಂದ ಬಂದ ಅಪರಿಮಿತ ಜನರಿಗೆ ಭೋಜನ ಸುಖವಂತೂ ತಪ್ಪಲಿಲ್ಲ ಅವರು ಉಂಡು ಈ ಮಹಿಮಾತ್ಮಕವಾದ ಸುದ್ದಿಯನ್ನು ಸಾರುತ್ತ ತಮ್ಮೂರ ಕಡೆಗೆ ಹೋದರು.

ಅಖಂಡೇಶ್ವರ ಶಿವಯೋಗಿಗಳು ಷಣ್ಮುಖನಿಗೆ ೮ ನೆಯ ವಯಸ್ಸಿನಲ್ಲಿ ತಾವೇ ಸಾಧನ ದೀಕ್ಷೆ ಮಾಡಿದ್ದರು. ಈಗ ಅವನ ಭಕ್ತಿ, ಶ್ರದ್ಧೆ, ನಿಷ್ಠೆಗಳನ್ನು ಮೀರಿ ಅವಧಾನ, ಅನುಭವಗಳ ಹಂತಕ್ಕೇರಿದುದನ್ನು ಗಮನಿಸಿದ್ದರು. ಅವನ ಸೂಕ್ಷ್ಮವಾಗಿದ್ದ ಆತ್ಮಜ್ಞಾನವು ಉತ್ಕಟಾವಸ್ಥೆಗೆ ತವಕಿಸುತ್ತಿರುವದನ್ನು ಗುರುತಿಸಿದ್ದರು. ಆದರೂ ಈಗ ಸದ್ಯಕ್ಕೆ ಮಹೇಶ್ವರ ದೀಕ್ಷೆಯನ್ನಿತ್ತು ಮಠದ ವಟುವನ್ನಾಗಿ ಮಾಡಿಕೊಂಡರು. ಕಾವಿಯ ಅಂಗಿ ಧೋತರ ಕಿವಿಟೊಪ್ಪಿಗೆ ಧರಿಸಿದ ಷಣ್ಮುಖ ಶಿವತೇಜದಿಂದ ಕಂಗೊಳಿಸಿ ಮಠದ ಮರಿಸ್ವಾಮಿ ಆದನು.

ಷಣ್ಮುಖನ ವಿದ್ಯಾಭ್ಯಾಸಕ್ಕಾಗಿ ಬೆರೆ ಯಾವ ವಿದ್ಯಾಪೀಠಕ್ಕೂ ಕಳಿಸಬೇಕಾಗಿರಲಿಲ್ಲ. ಜೇವರಗಿಯಲ್ಲಿ ನೆಲೆಸಿದ ಬಳಿಕ ಸ್ವತಃ ಅಖಂಡೇಶರರು ತಮ್ಮ ತಪದೊಡನೆ ಸಾಧಿಸಿ ಅಳವಡಿಸಿಕೊಂಡ ಸಂಸ್ಕೃತ ಭಾಷೆ ತತ್ವ ಶಾಸ್ತ್ರಗಳ ಜ್ಞಾನ ಭಾಂಡಾರವಾಗಿದ್ದರು ತಾವೇ ತಮ್ಮ ಶಿಷ್ಯನಿಗೆ ಅವುಗಳ ಅಭ್ಯಾಸ ಮಾಡಿಸ ತೊಡಗಿದರು. ತನಗೆ ಹದಿನೈದು ವರ್ಷಗಳಾಗುವ ಮೊದಲೇ ಮರಿಸ್ವಾಮಿ ಸಂಸ್ಕೃತ ಭಾಷೆಯೊಡನೆ ಉಪನಿಷದ್ ಆಗಮಗಳನ್ನು ವಚನ ವಾಙ್ಮಯದೊಡನೆ ಷಟ-ಸ್ಥಲಶಾಸ್ತ್ರ ಸಿದ್ಧಾಂತವನ್ನು ಅಭ್ಯಸಿಸಿ ಮನನ ಮಾಡಿಕೊಂಡನು. ಅವನ ವಿದ್ಯಾವೃಕ್ಷ ಬೇಗನೆ ಪಲ್ಲವಿಸಿ, ಪೂತು ಫಲ ಧಾರಣ ಮಾಡಿತು. ಗುರುದೇವನ ಕರುಣೆ, ಪ್ರೇರಣೆ ಬೋಧನೆಗಳು ಅದನ್ನು ಬೆಳೆಸಿದವು. ಅದರೊಡನೆ ಅವನ ಗುರುಭಕ್ತಿ, ತತ್ವನಿಷ್ಠೆ, ವಿನಯ, ಸೇವಾಭಾವನೆ, ವಿರತಿಗಳೂ ಬೆಳೆದು ಬಂದವು. ಅನುಭಾವವು ವಿಕಾಸಗೊಳ್ಳುತ್ತ ವೈರಾಗ್ಯವು ಉಜ್ವಲವಾಯಿತು. ಪಂಜರದ ಬಂಧನದಿಂದ ತಪ್ಪಿಸಿಕೊಂಡ ಗಿಳಿಯಂತೆ ಬಂಡಾಡುವ ಆಸೆಯಿಂದ ಕಮಲ ದಳದಲ್ಲಿ ಸೆರೆಯಾಗಿಸಿಕ್ಕು ಬೆಳಗಿನಲ್ಲಿ ಬೈಲಿಗೆ ಬಂದ ತುಂಬಿಯಂತೆ, ಮಾಯಾ ಪ್ರಪಂಚದಿಂದ ದೂರವಾಗಿ ಸಂತಸಗೊಂಡು ಶ್ರೀ ಗುರೂತ್ತಮನ ಛಾಯಾನುವೃತ್ತಿಯಾಗಿ ನಲಿದಾಡಿದನು. ಈ ಪುಣ್ಯ ಮೂರ್ತಿಯ ದಿನಚರಿಯನ್ನು ಅರಿತು ನಮ್ಮ ಅಂತಃಕರಣವನ್ನು ಅರಳಿಸಿಕೊಳ್ಳೋಣ.

ಬೆಳಗಿನ ಜಾವದಲ್ಲಿ ಎದ್ದು ಪ್ರಾತರ್ವಿಧಿ ತೀರಿಸಿ ಕೈ-ಕಾಲು ಮುಖ ತೊಳೆದು, ಭಸ್ಮ ಧರಿಸಿ, ಕೆಲಹೊತ್ತು ತನ್ನ ಪಾಠ ನೋಡಿಕೊಳ್ಳುವನು. ಬಳಿಕ ಸ್ತೋತ್ರಗಳನ್ನು, ವಚನಗೀತಗಳನ್ನು ಪಠಿಸುತ್ತ ಪತ್ರೀವನಕ್ಕೆ ಹೋಗಿ ಎಳೆಯ ಬಿಲ್ವದಳಗಳನ್ನು ಸುಗಂಧಯುಕ್ತ ಪುಷ್ಪಗಳನ್ನು ಸಂಗ್ರಹಿಸಿ ಕರಂಡಕದಲ್ಲಿ ತುಂಬಿ ತಂದಿಡುವನು. ಗುರುಗಳನ್ನು ಬಹಿರ್ದೆಸೆಗೆ ಕರೆದುಕೊಂಡು ಹೋಗಿ ಬರುವನು. ತಾನು ಸ್ನಾನ ಮಾಡಿ ಗುರುಗಳ ಸ್ನಾನಕ್ಕೆ ಸಿದ್ಧತೆ ಮಾಡುವನು. ಅವರ ಪೂಜೆಗಾಗಿ ಆಸನಾದಿಗಳನ್ನು ಅಣಿಗೊಳಿಸುವನು. ಬಳಿಕ ಗುರುಗಳನ್ನು ಕರೆತಂದು ಪನ್ನೀರಿನಿಂದ ಮೃದುವಾದ ಮೈತಿಕ್ಕಿ ಜಳಕ ಮಾಡಿಸುವನು ಕೈಹಿಡಿದು ಪೂಜಾಗೃಹಕ್ಕೆ ಬರಿಸಿ ಸಿದ್ಧವಾಗಿದ್ದ ಆಸನದಲ್ಲಿ ಕೂಡ್ರಿಸುವನು. ಸಲಕರಣೆಗಳನ್ನು ಹೊಂದಿಸಿಕೊಡುವನು. ತಾನು ಶ್ರದ್ಧೆಯಿಂದ ಗುರುಗಳ ಸಮ್ಮುಖದಲ್ಲಿ ಕುಳಿತು ತೀವ್ರವಾಗಿ ತನ್ನ ಲಿಂಗಾರ್ಚನೆ ಮುಗಿಸುವರು.

ಸಚ್ಚಿದಾನಂದ-ನಿತ್ಯಪರಿಪೂರ್ಣ-ಅಖಂಡೇಶ ಸ್ವರೂಪನಾದ ಗುರು ಅಖಂಡೇಶ್ವರರ ಲಿಂಗೋಪಾಸನೆ ಸಮೃದ್ಧಿಗಾಗಿ ಪೂರ್ಣಗೊಳ್ಳುವವರೆಗೆ ಧ್ಯಾನಮಗ್ನನಾಗಿರುತ್ತಿದ್ದನು. ಅನಂತರ ಚಿದ್-ಭಸ್ಮದಿಂದ ಗಂಧ-ಪತ್ರಿ ಪುಷ್ಪಗಳಿಂದ ನಲಿನಲಿದು ಗುರುಪಾದವನ್ನು ಮನವಾರೆ ಅಲಂಕರಿಸಿ, ಧೂಪ-ದೀಪ ಬೆಳಗಿ ಪೂಜಿಸುವನು. ತೀರ್ಥ ಸ್ವೀಕರಿಸಿ, ಬಗೆದುಂಬಿ ಭಾವಿಸಿ ಮರ್ತ್ಯದೊಳು ಬಂದ ನನ್ನನ್ನು ಭವಗೆಡಿಸಿ ಕಾಪಾಡು ಸದ್ಗುರುವೇ ಎಂದು ಪ್ರಾರ್ಥಿಸುವನು. ಗುರುಗಳ ಲಿಂಗಾರ್ಪಿತ ಉಪಹಾರದ ಒಕ್ಕು ಮಿಕ್ಕಿದ್ದನ್ನು ಶಿವಭಾವದಿಂದ ಸ್ವೀಕರಿಸಿ ಹೊರಗೆ ಬಂದನು.

ಅಲ್ಲಿ ಗುರುಗಳಿಂದ ಪಾಠ ಕೇಳುವನು. ಇಲ್ಲವೆ ಗುರುಗಳು ಬಂದ ಭಕ್ತರಿಗೆ ಉಪದೇಶಿಸುವ ಅನುಭವ ವಾಣಿಗಳನ್ನು ಅರಗಿಸಿಕೊಳ್ಳುವನು. ಗುರುಗಳ ಆದೇಶವಾದರೆ ಕಾವ್ಯ, ಪುರಾಣ, ಪ್ರಮಥರ ವಚನ ಶಾಸ್ತ್ರಗಳ ಒಂದು ಭಾಗವನ್ನು ಓದಿ ವಿವರಿಸಿ ಹೇಳುವನು. ಇವಿಷ್ಟು ಪೂರ್ವಾಹ್ನದ

ಕಾರ್ಯಕ್ರಮಗಳು. ಮತ್ತೆ ಮಧ್ಯಾಹ್ನದ ಶಿವಾರ್ಚನೆ. ಅರ್ಪಣೆ. ಗುರುಗಳ ವಿಶ್ರಾಂತಿ ಕಾಲದಲ್ಲಿ ತನ್ನ ಅಭ್ಯಾಸ ಮಾಡಿಕೊಳ್ಳುವನು. ಸಾಯಂಕಾಲ ಜಿಜ್ಞಾಸು ಭಕ್ತರೊಡನೆ ಶಿವಯೋಗಿಗಳು ನಡೆಸುವ ಅನುಭವ ಗೋಷ್ಠಿಯಲ್ಲಿ ಭಾಗವಹಿಸುವನು. ಗುರುಗಳ ಬಯಲ ಅಲೆದಾಟದಲ್ಲಿ ಜೊತೆಗೆ ಹೋಗುವನು. ಸಂಜೆಗೆ ಅವರ ಪೂಜಾ-ಪ್ರಸಾದಗಳನ್ನು ನೆರವೇರಿಸಿ ಕೊನೆಗೆ ಅವರ ಪಾದಸೇವೆ ಮಾಡಿ ಮಲಗುವನು.

ಇದು ಸಾಮಾನ್ಯ ಮಠಗಳಲ್ಲಿಯ ವಟುಗಳು ಮಾಡುತ್ತಿರುವಂತೆಯೇ ಕಂಡರೂ ಷಣ್ಮುಖನ ಈ ಪ್ರತಿಯೊಂದು ಕಾರ್ಯಾರ್ಪಣ ಭಾವಪೂರಿತವಾಗಿರುತ್ತಿದ್ದವು. ಪರಶಿವಸ್ವರೂಪದ ಗುರುವಿನ ಅಡಿಗೆ ತನ್ನನ್ನೇ ಅರ್ಪಿಸಿಕೊಂಡು ಬಿಟ್ಟಿದ್ದನು. ಉಪನಿಷತ್ತು, ಶಿವಾಗಮ ವಚನಶಾಸ್ತ್ರಗಳನ್ನು ಅಭ್ಯಸಿಸುತ್ತಿರುವಾಗ ಅನ್ಯ ದಾರ್ಶನಿಕ ವಿಚಾರಗಳೊಡನೆ ಹೋಲಿಸಿ ಚೆನ್ನಾಗಿ ವಿಕ್ಷೀಸಿ ನೋಡುತ್ತಿದ್ದನು. ತನ್ನ ನಡೆನುಡಿಗಳನ್ನು ಅವುಗಳ ಒರೆಗೆ ಹಚ್ಚಿ ತಿದ್ದಿಕೊಳ್ಳುತ್ತಿದ್ದನು. ತರ್ಕ ವ್ಯಾಕರಣ ಶಾಸ್ತ್ರಗಳ ಅಭ್ಯಾಸ ಮಾಡಿದನು. ಷಟ್‌ಸ್ಥಲ ಮಾರ್ಗ ಮೈಗೂಡಿ ಹೋಗಿತ್ತು. ಆತನು ವಿದ್ಯೆ, ತಪ, ಅನುಭಾವಗಳ ಆಗರವಾದನು. ಲಿಂಗನಿಷ್ಠೆ, ಪೂಜಾ ಪ್ರೀತಿಗಳಲ್ಲಿ ತಾನು ತನ್ನನ್ನೇ ಮರೆಯುವನು. ಕ್ರಿಯಾಜ್ಞಾನಗಳ ರೆಕ್ಕೆಗಳಿಂದ ಭಕ್ತಿ, ಚೇತನದಿಂದ ವೈರಾಗ್ಯಕಾ ಸಾಗರದಲ್ಲಿ ಈಸುವ ಈ ರಾಜ ಹಂಸನನ್ನು ನೋಡುವದರಿಂದ ಗುರುವಿನ ಅರುವಿನ ಕಣ್ಣುಗಳಲ್ಲಿ ಆನಂದ ಜಲ ತುಂಬಿ ಬಂದಿರಬೇಕು? ಆತ್ಮ ವಿಕಾಸವು ಸಾಕಾರಗೊಂಡು ನಿಂತಂತಿರುವ ತಮ್ಮ ವಟೋತ್ತಮನನ್ನು ಗಳಗಳನೆ ಬೆಳೆದ ಹಚ್ಚಗಿನ ರಾಶಿಯನ್ನು ಕಣ್ತುಂಬ ನೋಡಿ ಅಖಂಡೇಶ್ವರರು ತಾವು ಧನ್ಯರೆಂದು ಭಾವಿಸಿಕೊಂಡಿರಬೇಕು.! ಈ ಶಿಷೋತ್ತಮನ ಪ್ರಖರ ಚೈತನ್ಯಕ್ಕೆ ಒಳಗೊಳಗೆ ತಲೆ ಬಾಗುತ್ತಿರಬೇಕು! ಹೀಗೆ ತಮ್ಮ ಗುರುಗಳಿಗೆ ಧನ್ಯತೆಯನ್ನು ತಂದು ಕೊಟ್ಟ ಷಣ್ಮುಖ ಮರಿದೇವರು ಆ ಪ್ರಾಂತಕ್ಕೆ ಹೊಸಬೆಳಕಾಗಿ ಮೂಡಿ ಬಂದರು.

ಸೂರ್ಯನಿಗೆ ಮಣ್ಣು ತೂರುವರು ಸಂದಿಗೊಂದಿಗಳಲ್ಲಾದರೂ ಕೆಲವರು ಇದ್ದೇ ಇರುವರು. ಒಂದು ದಿನ ಕೆಲ ಕುಜನರು ವೈರಾಗ್ಯಶೀಲ ಶಿವಯೋಗಿಗಳನ್ನು ಕುರಿತು " ಈ ಗತಿಗೇಡಿ ಪುರ ಪುಷ್ಟ ಮನುಷ್ಯರಿಗೆ ಪರತರ ಸುಖ ಎಂದಿಗಾದರೂ ದೊರತೀತೆ?" ಎಂದು ನಿಂದಿಸುವ ನುಡಿ ಎಲ್ಲಿಯೋ ಮರಿದೇವರ ಕಿವಿಗೆ ಬಿದ್ದಿತು. ಆತ್ಮ ತೇಜದಲ್ಲಿ ಗೂಗಿಯಂತೆ ಮುದುಡಿ ಅವರ ಮನದ ಮೂಲೆಯಲ್ಲಿ ನಿಷ್ಫಪ್ಪವಾಗಿ ಬಿದ್ದ ಜೀವ ಭಾವದ ಕಿನಿಸಿಗೆ ಇದು ತಾಗಿ ಮರುಕ ಬಂದು ಮನ ನೊಂದಿತು. ಏಕಾಂತ ದಲ್ಲಿ ಗುರುಗಳ ಹತ್ತಿರ ಬಂದು ಷಣ್ಮುಖ ದೇವರು ಈ ನಿಂದೆ ಮಾತನ್ನು ವಿವರಿಸಿ ಕಾಗೆ ಕೋಗಿಲೆಯ ದೂಷಿಸಿದಂತೆ ಇದಾಗಿದೆ, ಎಂದು ಅರಿಕೆ ಮಾಡಿಕೊಂಡರು ಗುರುಗಳು ಮುಂದಕ್ಕೆ ಕರೆದು "ಸುಕುಮಾರನೇ ಲೌಕಿಕದ ದುರ್ವಿಷಯಗಳ ಮಾತುಗಳನ್ನು ಲೆಕ್ಕಿಸುವದೇಕೆ? ವಿವೇಕದಿಂದ ಕಡೆಗಣಿಸಿ ನಡೆದು ಬಿಟ್ಟರಾಯಿತು. ಶಿವಯೋಗಿಗೆ ಹಾನಿ ಏನು ? ನೀನು ಇದನ್ನು ಮನಕ್ಕೆ ವೇದಿಸಿಕೊಳ್ಳಬೇಡ. ಪರರಿಗೆ ಅಹಿತವ ನೆನೆಯದೆ ಸತ್ಸಂಗವನ್ನು ಬಿಡದೆ, ಶಿವಶರಣರನ್ನು ಜರಿಯದೆ, ಅಂಗನೆಯರನ್ನು ಕಂಡು ಮನದೊಳ ಗಾದರೂ ನಗದೆ, ಪತಿತರನ್ನು ಹೀನಾಯವಾಗಿ ಕಾಣದೆ ಅವರಿಗಾಗಿ ಕರುಣೆ ತಾಳಿ, ಮರುಗಿ ನೆರವಾಗುವದು, ಪಾಪಕ್ಕಂಜಿರುವದು ಶಿವಯೋಗಿ ಗಳ ಲೌಕಿಕ ಸಂಬಂಧದ ಸದಾಚಾರವಾಗಿರುತ್ತದೆ" ನಿಃಸಂಗಯೋಗಿಗೆ ಸಧಿಚ್ಛೆಯುಳ್ಳವರಿಗೆ ತನ್ನ ತಾನರಿದ ಸುಜ್ಞಾನಿಗಳಿಗೆ ಯಾವ ಮಾತಿನ ಗೊಡವೆ ಏಕೆ? ಷಣ್ಮುಖಾರ್ಯನೇ, ಆ ಯಾವ ನಿಂದೆಯ ನುಡಿಯ ಹಂಗೂ ನಿನಗೆ ಬೇಡ, ಧರೆಯಲ್ಲಿ ಆರುವೈರಿಗಳ ಗೆಲಿದು ರಾಗದ್ವೇಷಗಳ ಬಲಿಗೆ ಬೀಳದೆ ಶಿವಯೋಗಿ ಸಾಮ್ರಾಜ್ಯದ ಪದವನ್ನು ನೀನು ಗಳಿಸು ಯೋಗದಿಂದ ಚಿತ್ತವೃತ್ತಿ ನಿರೋಧವಾಗಿ ಸುವಿವೇಕ ಮಾರ್ಗ ಲಭಿಸುವದು ಲೌಕಿಕ ಕಲ್ಮಷ ತೊಲಗಿ ಜಡತೆ ಅಳಿಯುವದು ಸ್ವಸ್ವರೂಪದ ಜ್ಞಾನ ವಾಗುವದು. ನಿತ್ಯನಿರಂಜನ ಪರಂಜ್ಯೋತಿ ಶಿವಯೋಗಿಗೆ ಲೋಕಶಕ್ತಿಗೆ ತಲೆ ಬಾಗುವದು. ಶಿವಕೃಪೆ ಸದ್ಗುರುವಿನ ಬ್ರಹ್ಮೋಪದೇಶ ನಿಜ ತತ್ವದ ಅರಿವು ಇವು ಸಾಧ್ಯವಾಗುವದಕ್ಕೆ ವೈರಾಗ್ಯ ಸರೋವರದ ಹಂಸಗಿನಾಗಿರುವೆ

ನೀನು, ಈಗಾಗಲೇ ಅರ್ಹನಾಗಿರುವೆ ಸಿದ್ಧಿಯ ಹಂತದಲ್ಲಿರುವೆ ಅನುಮಾನ ಬೇಡ" ಎಂದು ತಮ್ಮ ಕರಕಂಜಾತನ ಕಳವಳ ಕಳೆದರು.

ಷಣ್ಮುಖ ಶಿವಯೋಗಿ ಮತ್ತೊಂದು ದಿನ ಗುರುಸನ್ನಿಧಿಯಲ್ಲಿ ಕೈ ಮುಗಿದು " ಗುರುದೇವಾ ಸಮಯ ಸರಿದು ಹೋಗುತ್ತಿದೆ. ಮರೆಹೊಕ್ಕವರನ್ನು ಇನ್ನೂ ಮರೆತಿರಬೇಕೆ ? ನನಗೆ ನಿರಾಬಾರಿ ನಿರಂಜ ಸಂಸ್ಕಾರ ವಿತ್ತು ಉದ್ಧರಿಸಬೇಕು. ಈ ಆತ್ಮವು ಬಯಲೋಳಾಡಲು ಬಲಗೊಳಿಸಬೇಕು ತಂದೆ ಎಂದು ಬೇಡಿಕೊಂಡನು. ಶಿಷ್ಯನ ಈ ಪ್ರಾರ್ಥನೆಯನ್ನು ತಲೆದೂಗಿ ಒಪ್ಪಿದರು ಅಖಂಡೇಶ್ವರ ಶಿವಯೋಗಿಗಳು, ಕರುಣಾಕಟಾಕ್ಷದಿಂದ ನೋಡಿ ನನ್ನ ಯೋಜನೆಯಲ್ಲಿದೆ ಈ ಮಾತು ಚಿಂತಿಸಬೇಡ ಬೇಗನೆ ನೆರವೇರಿಸುವೆ ಎಂದು ಭಾಷೆ ಕೊಟ್ಟರು.

ಇತ್ತೀಚೆಗೆ ಅಖಂಡೇಶ್ವರರು ತಮ್ಮ ಸೇವೆಗೆ ಮರಿದೇವರನ್ನು ಬಹಳಷ್ಟು ಕರೆದು ಕೊಳ್ಳದೆ ಬೇರೆ ಅಧ್ಯಾಪನ ವಟುಗಳಿಂದ ಸೇವಕರಿಂದ ಅದನ್ನು ಪೂರೈಸಿಕೊಳ್ಳುತ್ತಿದ್ದರು. ಷಣ್ಮುಖರಿಗೆ ಲಿಂಗತಪಕ್ಕೆ ಹೆಚ್ಚು ಅವಕಾಶ ವಿರಲೆಂಬುದೇ ಅದಕ್ಕೆ ಉದ್ದೇಶ ಕಾರಣವಾಗಿತ್ತು. ಮೊದಲಿನಿಂದಲೇ ತಮ್ಮ ಶಿಷ್ಯನಿಗಿದ್ದ ಲಿಂಗರತಿ ಈಗ ಉನ್ನತವಾಗಿ ಉಜ್ವಲವಾಗಿ ಹೆಚ್ಚಿತ್ತು. ಅದಕ್ಕಾಗಿ ಅವನ ಲಿಂಗಾರ್ಚನೆಗೆ ಶಿವಯೋಗ ಲೋಲತೆಗೆ, ಬೇರೊಂದು ಸ್ಥಳವನ್ನು ಗೊತ್ತು ಮಾಡಿದ್ದರು. ಒಂದು ದಿನ ಅಖಂಡೇಶ್ವರ ಶಿವಯೋಗಿಗಳು ತಮ್ಮ ಅರ್ಚನೆ ಅರ್ಪಣೆ ಪ್ರಸಾದ ಭೋಗಗಳನ್ನು ನೆರವೇರಿಸಿಕೊಂಡು ಹೊರಗೆ ಬಂದರು. ಶತ-ಪಥ ನಡೆಸಿದ್ದರು. ಪಾಕದ ಪಾತ್ರೆ ತಕೊಂಡು ಮರಿದೇವರ ಕೋಣೆಗೆ ಹೋದ ಸೇವಾಧಾರಿ ಇದ್ದಕ್ಕಿದ್ದಂತೆ ಹಾಗೆಯೇ ಮರಳಿ ಬಂದುದನ್ನು ಕಂಡರು. ಯಾಕೆಂದು ಕೇಳಲು "ಅವರಿನ್ನು ಧ್ಯಾನಮಗ್ನರಾಗಿಯೇ ಇದ್ದಾರೆ ಬುದ್ಧಿ" ಎಂದು ಉತ್ತರ ಒಂದು ಗಳಿಗೆ ಕಳೆಯಿತು. ನೋಡಲು ಇನ್ನೂ ಪ್ರಕೃತಕ್ಕೆ ಬಂದಿಲ್ಲ. ಶ್ರೀಗಳಿಗೂ ಕುತೂಹಲ! ತಾವೇ ಸ್ವತಃ ಹೋದಿ ಅರೆ ಮುಚ್ಚಿದ

ಬಾಗಿಲ ಕದವನ್ನು ಇನ್ನಷ್ಟು ಸರಿಸಿ ನೋಡುತ್ತಾರೆ. ಪರಮಾನಂದದ ಪ್ರತೀಕವಾಗಿ ಕುಳಿತಿದ್ದಾನೆ. ತಮ್ಮ ಶಿಷ್ಯೋತ್ತಮ ಸಡಿಲಾದ ಸಂಪುಟ ದಾತಿರುವ ತುಟಿಗಳಲ್ಲಿ ಕಾಂತಿಯುಕ್ತ ಕೆನ್ನೆಗಳತ ಮೂಡಿದ ನಸುನಗೆಯೂ ಆನಂದ ಸೌರಭವೂ, ಎನ್ನುವಂತೆ ವದನದಲ್ಲಿ ಶಿವತೇಜ ಸ್ಫುರಿಸುತ್ತಿದೆ. ಅನಿಮಿಷ ದೃಷ್ಟಿ ಲಿಂಗದಲ್ಲಿ ನೆಲೆಯಾಗಿದೆ. ಶ್ವಾಸದ ಸುಳಿವು ಅಡಗಿದೆ. ಲಿಂಗಭಾವವೇ ಭಾವ, ಲಿಂಗಪ್ರಾಣವೇ ಪ್ರಾಣ, ಅಂಗವಾದಿ, ಲಿಂಗಸಂಗವೇ ಸ್ವಖವಾಗಿ ಸುಖಾನಂದವೇ ಸ್ವಯವಾಗಿದ್ದಾನೆ. ಈ ಆಂದದ ಫಲವನ್ನರಿತ ಮಹಾ ಶಿವಯೋಗಿಗಳು ಸಹಜವಾಗಿ ಆನಂದ ಪುಲಕಿತರಾದರು. ಶಿವ ಚೈತನ್ಯವನ್ನು ಅಭಿವೆಕ್ತ ಶಿವ ಚೈತ್ಯನವೇ ಗುರುತಿಸಬಲ್ಲದು ಸ್ಪರ್ಶಿಸಬಲ್ಲದು, ಸಂದಳಿದು ಸೆಳೆಯ ಬಲ್ಲದು ಅಭಾವ ಪರವಸತೆಯ ಬೆಳಕನ್ನು ಅನುಭವಿಸಿದ ಅಖಂಡೇಶ್ವರರು " ಗುರುಲಿಂಗ ಜಂಗಮ ಸಮುಚ್ಚಯದಲ್ಲಿ ಚಿಜ್ಯೋತಿ ಮೂಡಿತು " ಎಂಬ ಪ್ರಮಥರ ವಚನ ನೆನೆದು ಅಜ್ಯೋತಿಗೆ ತಲೆಬಾಗಿ ಕೈ ಮುಗಿದು ಹಿಂದೆ ಸರಿದರು. ಕೆಲ ಹೊತ್ತಿನ ಮೇಲೆ ಪ್ರಸಾದ ಅರ್ಪಿತವಾಗಿತ್ತು ಇನ್ನು ಶಿಷ್ಯನ ನಿರಾಭಾರಿ ಸುಸ್ಕಾರದ ಕೋರಿಕೆ ಪೂರೈಸಲು ತಡವಾಗ ಕೂಡದೆಂದು ಶ್ರೀಗಳು ನಿರ್ಧರಿಸಿದರು.

ಸಣ್ಣದಿರಲಿ ದೊಡ್ಡದಿರಲಿ ಮಠದ ಯಾವ ಕಾರ್ಯವನ್ನಾದರೂ ಅಖಂಡೇಶ್ವರ ಸ್ವಾಮಿಗಳು ತಮ್ಮ ಪ್ರಮುಖ ಭಕ್ತರನ್ನು ಕೂಡಿಕೊಂಡೇ ಅವರ ಅನುಮೋದನೆಯಿಂದ ಮಾಡುವರು ಶಿವಯೋಗಿಗಳ ಕರೆಯಂತೆ ಅಭಿಮಾನ ಭಕ್ತರೆಲ್ಲ ಬಂದು ಕೂಡಿದರು. ಮಲ್ಲಶೆಟ್ಟಿ ಗೌಡರು ವೀರಣ್ಣಾ ನಾಗಣ್ಣಾ ಭದ್ರಪ್ಪಾ ಎಲ್ಲರೂ ಮುಪ್ಪಾಗಿದ್ದರು. ಹೊಸ ತಲೆಮಾರಿನ ಅನೇಕ ಭಕ್ತರು ಅವರಲ್ಲಿದ್ದರು. ಮಲ್ಲಶೆಟ್ಟಿ ಗೌಡರು ಶರಣೆ ದೊಡ್ಡ ದೊಡ್ಡಮ್ಮ ಅಂಬೆವರೂ ಅಂದಂದಿಗೂ ಮಠದ ಮೇಲಿನ ತಮ್ಮ ನಿಷ್ಠೆ ಯನ್ನು ಸೇವಾಭಾವನೆಯನ್ನು ಚ್ಯುತಿಇಲ್ಲದೇ ಉಳಿಸಿಕೊಂಡು ಬಂದಿದ್ದರು ಶಿವಯೋಗಿಗಳ ಹತ್ತಿರ ಷಣ್ಮುಖದೇವನಿದ್ದರೆ ಅವನಿಗೂ ಸಂಕೋಚ

ವಿಲ್ಲದೇ ವಂದಿಸುವರು. ಅವನು ತಮ್ಮ ಮಗನೆಂಬ ಭಾವವೇ ಅವರಿಗಿರಲಿಲ್ಲ. ಅವನನ್ನು ಮಠಕ್ಕೆ ಅರ್ಪಿಸಿದುದು ಆಗಲೇ ಮರೆತು ಹೋಗಿತ್ತು.

ಈಗ ಶ್ರೀಗಳು ಬರಮಾಡಿಕೊಂಡ ಹಿರಿಯರೆದುರಿನಲ್ಲಿ ತಮ್ಮ ಶಿಷ್ಯನ ಆಧ್ಯಾತ್ಮಿಕ ಸಾಧನೆಯ ಔನ್ನತ್ಯವನ್ನು ವಿವರಿಸಿ ಆತನಿಗೆ ನಿರಾಭಾರಿ ನಿರಂಜನ ಜಂಗಮ ದೀಕ್ಷೆ ಸಮಾರಂಭ ನಡೆಯಬೇಕಾದುದನ್ನು ಪ್ರಸ್ತಾಪಿಸಿದರು. ಭಕ್ತರು ಸಹಕರಿಸಿದರು ನೆರವೇರಿಸಲು ಸಂತೋಷದಿಂದ ಸಮ್ಮತಿ ನೀಡಿದರು ಕಾರ್ಯಕ್ರಮ ಸಿದ್ಧವಾಯಿತು. ಶುಭದಿನ ಗೊತ್ತು ಮಾಡಲ್ಪಟ್ಟಿತು ಬೇರೆ ವಿರಕ್ತ ಮಹಾಸ್ವಾಮಿಗಳನ್ನು ಬರಮಾಡಿಕೊಂಡು ಅವರಿಂದ ಷಣ್ಮುಖ ದೇವನಿಗೆ ಲೋಕಕ್ಕಿಳಿದು ಬಂದ ಪರ ಶಿವನ ಸ್ವರೂಪದ ನಿರಂಜನ ಜಂಗಮದ ಸಂಸ್ಕಾರವನ್ನು ಕೊಡಿಸಲಾಯಿತು. ದಂಡ, ಕಮಂಡಲವನ್ನು ಕೊಟ್ಟು ಬಸವ ಚೆನ್ನಬಸವ ಪ್ರಭುದೇವರ ವಚನಗಳ ಕಟ್ಟುಗಳನ್ನು ಜೋಳಿಗೆಯಲ್ಲಿಟ್ಟು ಬಿಕ್ಷ ಮಾಡಿಸಲಾಯಿತು. ಷಣ್ಮುಖ ಮರಿ ಷಣ್ಮುಖ ಶಿವಯೋಗಿಯಾದನು. ಲೋಕವನ್ನುದ್ಧರಿಸಲು ಬಂದ ಪರಶಿವನಂತೆ ಕಂಗೊಳಿಸಿದನು. ಚೆನ್ನ ಬಸವಣ್ಣನು ಷಣ್ಮುಖನ ಅವತಾರವೆಂದು ಪ್ರತೀತ. ಈ ಷಣ್ಮುಖಸ್ವಾಮಿ ಆ ಚೆನ್ನ ಬಸವಣ್ಣನ ಪುನರಾವತಾರವೇ ಎಂಬ ಭಾವುಕರ ಭಾವನೆಗೆ ಸತ್ಯವಾಗಿ ತೋರಿದನು. ಅಲ್ಲಮಪ್ರಭು ದೇವರು ತಮ್ಮ ಉತ್ತರಾಧಿಕಾರಿ ಚೆನ್ನಬಸವಣ್ಣ ಎಂದು ಸಾರಿದಂತೆ ಈ ಸಂಧರ್ಭದಲ್ಲಿ ಅಖಂಡೇಶ್ವರ ಶಿವಯೋಗಿಗಳು ತಮ್ಮ ಉತ್ತರಾಧಿಕಾರಿ ಷಣ್ಮುಖಸ್ವಾಮಿ ಎಂದು ಸಾರಿದರು. ಆಗ ಷಣ್ಮುಖಯೋಗಿ “ ಗುರುವೇ ಬಾಲಕನ ಮೇಲೆ ಭಾರವೇಕೆ ? ” ಎಂದು ಚಡಪಡಿಸಿದನು. ಶಿವಯೋಗಿಗಳು “ ಪರ ಶಿವನು ತನ್ನ ಅಂಶಿಕರಾದ ಮಾನವರು ಅರಿವು ಮಾಡಿಸಿಕೊಂಡು ತನ್ನ ಸೇರಬೇಕೆಂಬ ಸಂಕಲ್ಪ ಹೊಂದಿದ್ದಾನೆ. ಪರಶಿವನ ಸ್ವರೂಪವೇ ಆದ ಗುರುಲಿಂಗ ಜಂಗಮರು

ಆ ಸಂಕಲ್ಪವನ್ನು ಈಡೇರಿಸಲು ರೂಪ ತಾಳಿದ್ದಾರೆ. ಕೊನೆಯದಾಗಿ ನಿರಾಭಾರ ಜಂಗಮ ಮೂರ್ತಿಗೆ ಇರುವ ಈ ಹೊಣೆ ಮಹತ್ತರವಾಗಿರುವದು. ಅಂತೆಯೇ ನೀವೂ ಈ ಮಣಿಹವನ್ನು ಇರಿಸಿಕೊಂಡಿದ್ದೀರಿ. ಅದಕ್ಕಾಗಿಯೇ ರೂಪತಾಳಿದ್ದೀರಿ, ಜಂಗಮವು ಮೂಬಗೆಯಾಗಿದ್ದಿರಿ, ಸ್ವಯಂ ಜಂಗಮರು ಮಠದಲ್ಲಿಯೇ ಇದ್ದು ಭಕ್ತರಿಗೆ ಭಕ್ತಿಮಾರ್ಗದಲ್ಲಿ ಸಲಹೆನೀಡುತ್ತ, ಸಮಾಜದಲ್ಲಿ ನೀತಿ ಸವತೆ, ಏಕ್ಯಗಳನ್ನು ಉಳಿಸಿ ಕಾಪಾಡುವದು ಆ ಜಂಗಮದ ಕ್ರೀಯೆ ಚರ ಜಂಗಮವು ಗ್ರಾಮಾಂತರಗಳಲ್ಲಿ ಸಂಚರಿಸುತ್ತ ಬೋಧೆ ಮಾಡುತ್ತ ಸಮಾಜ ಧರ್ಮದ ಉನ್ನತಿಗಾಗಿ ಅಗ್ರಪಾತ್ರ ವಹಿಸಬೇಕು. ಪರಿಪಕ್ವ ಅನುಭಾವಿಯೂ ಯೋಗಸಿದ್ಧನೂ ಆದ ಪರಜಂಗಮನು ವೈರಾಗ್ಯ ಮೂರ್ತಿ ತಪಸ್ ತೇಜೋಮೂರ್ತಿ ಯಾವ ಶಕ್ತಿಯೂ ಇಲ್ಲದೆ ತನ್ನ ಲೀಲೆಗಳಿಂದಲೇ ಭಕ್ತರು, ತಮ್ಮ ಲೋಪ ದೋಷಗಳನ್ನು ತಿದ್ದಿಕೊಳ್ಳುವಂತೆ ಮಾಡುವನು ಈ ಹುತದಲ್ಲಿ ನಿರಂಜನ ಜಂಗಮನಿಗೆ ಅನುವು ಆಗುವುದಕ್ಕಾಗಿ ಈ ಮಠ ಪೀಠಗಳಿರುತ್ತವೆ. ಅವುಗಳ ಉಪಯೋಗವನ್ನು ಭಕ್ತಜನನೋದ್ಧಾರದ ಉದ್ದೇಶ ಸಾಧನೆಗೆ ಮಾಡಿಕೊಳ್ಳುವುದು ಪಿಠಾಧೀಕಾರ. ಇದನ್ನು ಗಮನಿಸಿಯೇ ನಾನು ಈ ಪೀಠವನ್ನು ಹೊಂದಿ ನಡೆಯುತ್ತ ಬಂದಿದ್ದೇನೆ. ಇದರಲ್ಲಿ ಬಂಧನದ ಭಾವನೆಗೆ ಅವಕಾಶವಿಲ್ಲ. ಭಾಧೆ ಏನೂ ಇಲ್ಲ, ಎಂದು ಸಾಂತನಗೊಳಿಸಲು ಷಣ್ಮುಖ ಸ್ವಾಮಿಗಳು ಗುರುಪಾದಕ್ಕೆ ವಂದಿಸಿ ಸಮ್ಮತಿಸಿದರು.

ಷಣ್ಮುಖಸ್ವಾಮಿಗಳಿಗೆ ಸಂಚಾರದ ಆತುರ ಬಹಳವಾಯಿತು. ಪರಶಿವನು ಲೀಲಾ ಸೃಷ್ಟಿಯ ಎಲ್ಲ ಮುಖಗಳ ಕಾಣುವ ಕುತೂಹಲ ಹೆಚ್ಚಾಯಿತು ಮುಂದೆ ಬಹಳ ದಿನ ಹೋಗಲಿಲ್ಲ ಒಂದು ದಿನ ಷಣ್ಮುಖಸ್ವಾಮಿಗಳು ಗುರುಗಳ ಸನ್ನಿಧಿಯಲ್ಲಿ "ತಾವು ಈ ಮೊದಲು ಸೂಚಿಸಿದಂತೆ ಶರಣರಿಂದ ಪವಿತ್ರವಾದ ಪ್ರದೇಶಗಳನ್ನು ಶಿವಕ್ಷೇತ್ರಗಳನ್ನು, ಗ್ರಾಮಾಂತರಗಳಲ್ಲಿರುವ ಅನುಭಾವಿಗಳನ್ನು ಸದ್ಭಕ್ತರನ್ನು ಸಂದರ್ಶಿಸಲು, ದೇಶ ಸಂಚಾರಕ್ಕೆ ಅಪ್ಪಣೆ ಕೊಟ್ಟು ಆಶೀರ್ವಾದ ಮಾಡಬೇಕು" ಎಂದು ಬೇಡಿಕೊಂಡರು ಅಖಂಡೇ

ಶ್ವರರು “ ಆಗಲಿ ಕುಮಾರ ಹೋಗಿ ಬಾ” ಎಂದು ಅನುಮತಿಸಿ ಹತ್ತಿರ ಕೂಡ್ರಿಸಿಕೊಂಡು ವಿರಕ್ತ ಸ್ವಾಮಿಗಳು ಸಂಚಾರದಲ್ಲಿ ಪಾಲಿಸಬೇಕಾದ ನೀತಿ ನಿಯಮಗಳನ್ನು ಪ್ರೀತಿಯಿಂದ ಉಪದೇಶಿಸಿ ಮೈದಡವಿದರು.

ಷಣ್ಮುಖಸ್ವಾಮಿಗಳು ಮರುದಿನ ನಸುಕಿನಲ್ಲಿಯೇ ಲಿಂಗಾರ್ಚನೆ ಗುರುಪಾದ ಪೂಜೆ ನೆರವೇರಿಸಿಕೊಂಡರು ಗುರುಪ್ರಸಾದ ಸ್ವೀಕರಿಸಿ ಸಂಚಾರಕ್ಕೆ ಸಿದ್ಧರಾದರು ಕಂಬಳಿ ಒಂದು ಬಟ್ಟೆ, ವಚನ ಗ್ರಂಥಗಳ ಒಂದು ಗಂಟು ಜೋಳಿಗೆ ಬಗಲಲ್ಲಿ ದಂಡ ಕಮಂಡಲು ಕೈಯಲ್ಲಿ ಧರಿಸಿ ಹೊರಗೆ ಬಂದರು. ಹಿರಿಯ ಸ್ವಾಮಿಗಳು ಅಲ್ಲಿಯ ಜಲದ ಹತ್ತಿರ ನೆರೆದು ತಮ್ಮ ಹಲವು ಭಕ್ತರ ಮಧ್ಯದಲ್ಲಿ ಪಾದಕ್ಕೆರಗಿದ ಅವನನ್ನು ಆಶೀರ್ವದಿಸಿ ಬೀಳ್ಕೊಟ್ಟರು ಷಣ್ಮುಖಸ್ವಾಮಿಗಳು ತಮಗೆ ವಂದಿಸುತ್ತಿರುವ ಭಕ್ತರಿಗೆ ಕೈಮುಗಿದು ಅವರ ಹರಕೆಯ ಹೊತ್ತ ಹಾವುಗೆ ಮೆಟ್ಟಿ ಮುಂದಡಿ ಇಟ್ಟು ನಡೆದು ಬಿಟ್ಟರು.

ಷಣ್ಮುಖಸ್ವಾಮಿಗಳು ಪುಣ್ಯಕ್ಷೇತ್ರಗಳು. ಶಿವಾಲಯಗಳು, ನಾಡಿನ ಗತ ವೈಭವದ ಅವಶೇಷಗಳು, ನಿಸರ್ಗರಮಣೀಯ ಪ್ರದೇಶಗಳು ಇರುವ ಲ್ಲೆಲ್ಲ ಸಂಚರಿಸುತ್ತ, ಜೋಗೂರು ಎಂಬ ಗ್ರಾಮಕ್ಕೆ ಬಂದರು. ಆ ಗ್ರಾಮ ವಲಯದ ಸೌಂದರ್ಯಕ್ಕೆ ಆಕರ್ಷಿತರಾಗಿ ಒಂದು ಉದ್ಯಾನದಲ್ಲಿ ತಮ್ಮ ಶಿವವಸ್ತುಗಳನ್ನು ಕೆಳಗಿಟ್ಟರು. ತಿಳಿಗೊಳದಲ್ಲಿ ಜಳಕಮಾಡಿ ಶಿವಾರ್ಚನೆ ಗೈದು ಕಂಥೆಯ ಭಿಕ್ಷೆಗಾಗಿ ಗ್ರಾಮದಲ್ಲಿ ಬಂದರು. ತರುಣಯೋಗಿಯ ಪ್ರಭಾಮುದ್ರೆಯನ್ನು ಕಂಡು ಜನರು ಅವರನ್ನು ಸುತ್ತುವರೆದು ವಂದಿಸಿ ದರು, ಹಿರಿಯನೊಬ್ಬನು “ ಸ್ವಾಮಿಗಳೇ, ನಮ್ಮ ಗೃಹಕ್ಕೆ ಬಂದ್ರು ಪ್ರಸಾದ ಅರ್ಪಿತ ಮಾಡಬೇಕು. ಬಳಿಕ ನಮಗೆಲ್ಲ ನೀತಿ ಧರ್ಮಗಳ ವಿಚಾರ ಬೋಧಿಸಿ ಸಂತೋಷಗೊಳಿಸಬೇಕು. ಹಳೆಯ ಹೊತ್ತಿಗೆಯ ವಚನ ಗಳನ್ನು ಕೇಳಬೇಕೆಂದು ಆಶೆ ನಮಗೆ” ಕೈಮುಗಿದು ಬಿನ್ನವಿಸಿದನು.

"ಹಿರಿಯರೇ ನಾನು ಯಾರ ಮನೆಗೂ ಬರುವದಿಲ್ಲ, ಭಿಕ್ಷಾನ್ನದಿಂದಲೇ ನಾನು ಅರ್ಪಿತ ಮಾಡುವೆ. ಇನ್ನೆರಡು ಗಳಿಗೆಯ ಮೇಲೆ ತಾವೆಲ್ಲ ಕೆರೆಯ ದಂಡೆಯ ಉದ್ಯಾನಕ್ಕೆ ಬಂದರೆ ನಿಮ್ಮ ಇಷ್ಟದಂತೆ ಗೋಷ್ಠಿ ನಡೆಸಬಹುದು. ಎನಲು ಆಗಲಿ ಬರುವೆವು ಎಂದನು ಆ ಯಜಮಾನ. ಷಣ್ಮುಖಸ್ವಾಮಿ ಹರ್ಷಸೂಚಿಸಿ ಮುಂದೆ ನಡೆದರು. ಶಾಂತಿ-ಗಂಭೀರತೆಗಳಿಂದ ಜನರ ಮನ ಸೆಳೆಯುತ್ತ ಕಂಥೆ ಭಿಕ್ಷ ಮಾಡಿಕೊಂಡು ಮರಳಿದರು.

ಮಧ್ಯಾಹ್ನ ಮೀರಿದ ವೇಳೆಯಲ್ಲಿ ತರುಣ ಶಿವಯೋಗಿ ಮಾಮರದ ನೆಳಲಲ್ಲಿ ಓಲೆಯ ಪ್ರತಿ ಹಿಡಿದು ಓದುತ್ತ ಕುಳಿತಿದ್ದರು. ಒಬ್ಬರಿಂದೊಬ್ಬರು ಕೇಳಿ ಊರ ಜನರು ಗುಂಪುಗೂಡಿ ಬಹು ಜನರು ಬಂದು ನಮಸ್ಕಾರ ಮಾಡ ಹತ್ತಿದರು. "ಬನ್ನಿ ಅಪ್ಪಾ! ಬನ್ನಿ ಬನ್ನಿರಿ ಅಣ್ಣಾ! ಬನ್ನಿರಿ, ಮುಂದಕ್ಕೆ ನೆರಳಿಗೆ ಬನ್ನಿರಿ, ಕುಳಿತುಕೊಳ್ಳಿರಿ " ಎಂದು ಷಣ್ಮುಖಸ್ವಾಮಿ ಪ್ರೇಮದಿಂದ ಸ್ವಾಗತಿಸಿದರು. ಅವರ ವದನದಲ್ಲಿಯ ಶಿವಕಳೆಯಿಂದ ಆಕರ್ಷಿತರಾದ ಜನರು ಆತುರಾತುರವಾಗಿ ಮುಂದೆ ಮುಂದೆ ಬಂದು ಕುಳಿತರು. ಎಲ್ಲರ ದೃಷ್ಟಿ ಸ್ವಾಮಿಗಳ ವದನದಲ್ಲಿ ಕೇಂದ್ರಿಕೃತವಾಗಿದ್ದವು. ಅವರೇ ಮಾತಿಗಾರಂಭಿಸಿದರು.

"ನೀವೆಲ್ಲ ಸಜ್ಜನರಾಗಿ ಸಮ್ಮಿಲಿತರಾಗಿ ಬಂದುದು ಒಳ್ಳೆಯದು. ನೋಡಿರಿ, ಈ ಜಲ, ಈ ನೆಲ, ಈ ಗಿಡಬಳ್ಳಿಗಳು, ಹಸಿರು ಮೆರಿಯುವ ಹೊಲಗಳು, ಈ ಸೌಂದರ್ಯ ಇವೆಲ್ಲವು ಶಿವನ ಪ್ರಸಾದ. ನಮಗಾದಿ ಕರುಣಿಸಿದ್ದಾನೆ. ಅವನಿಗೆ ಕೃತಜ್ಞತೆ ಸಲ್ಲಿಸಲು ಅವನನ್ನು ಆರಾಧಿಸಬೇಕು, ಸ್ತುತಿಸಬೇಕು, ಕೃತಾರ್ಥರಾಗಬೇಕು. ಇವು ನನ್ನವು ತನ್ನವು ಎಂದು ಕಲಹ ಮಾಡಿ ಮನುಷ್ಯರು ಕೆಡಬಾರದು. ಮಾನವನ ಅಧೋಗತಿಗೆ ಕಾರಣವಾದ ಎರಡು ದುರ್ಗುಣಗಳನ್ನು ಮೊದಲು ತ್ಯಜಿಸಬೇಕು. ಪರಸ್ತ್ರೀಮೋಹ, ಪರಧನಾಪಹಾರ ಇವು ಆ ದುರ್ಗುಣಗಳು. " ಹರಿವ ಹಾವಿಂಗಂಜೆ

ಉಳಿಯುವ ನಾಲಗೆಗಂಜೆ, ಸುರಗಿಯ ಮೊನೆಗಂಜೆ, ಒಂದಕ್ಕಂಜುವೆ· ಒಂದಕ್ಕಳಕುವೆ ಪರಸ್ತ್ರೀ ಪರಧನವೆಂಬ ಜೂಜಿಗಂಜುವೆ" ಎಂದು ಬಸವಣ್ಣನವರು ಹೇಳಿ ಇವುಗಳ ಅಪಾಯುವನ್ನು, ಭಯುವನ್ನು ಸ್ಪಷ್ಟಪಡಿಸಿದ್ದಾರೆ· ಈ ದುರ್ಬುದ್ಧಿ-ದುರ್ಮೋಹಗಳಿಂದ ಮಾನವನು ಕೀಳಾಗಿ ಕೆಟ್ಟು ಹೋಗುತ್ತಾನೆ ಅಲ್ಲದೆ ಸಾಮಾಜಿಕ ವಿನಾಶಕ್ಕೂ ಕಾರಣನಾಗುತ್ತಾನೆ. ಇದನ್ನು, ತಿಳಿದು ಸದಾಚಾರಿಗಳಾಗಿ ಶಿವಭಕ್ತಿಪರಾಯಣರಾಗಬೇಕು. ಲಿಂಗಪೂಜೆ ಲಿಂಗಕ್ರಿಯೆಗಳತ್ತ ಹೋಗಗೊಡದ ಪಂಚೇಂದ್ರಿಯುಗಳು ನಮ್ಮನ್ನು ವಿಷಯುಗಳತ್ತ ಜಗ್ಗುವವು. ಅವುಗಳನ್ನು ನಮ್ಮ ಅಂಕಿತದಲ್ಲಿಡಬೇಕು. ವಿಷಯು ವ್ಯಾಮೋಹದಿಂದ ಬಂಧಿತರಾಗದವರನ್ನು ಕಾಣುವದು ಅಪರೂಪ ಒಂದೊಂದು ಇಂದ್ರಿಯ ವಿಷಯು, ಜೀವನ ಆಹುತಿಗೊಳ್ಳಲು ಸಾಕಾಗಿರುವದು. ವಾಸನೆಗೆ ಮರುಳಾದ ಭ್ರಮರ ಸಂಪಿಗೆಯ ಹೂವಲ್ಲಿ ಸೆರೆಯಾಯಿತು. ರುಚಿಗೆ ಎಳಿಸಿ ಮೀನ ಮೀನಗಾರನ ಬಲೆಗೆ ಬಿದ್ದಿತು. ಹೊಳೆಯುವ ರೂಪವನ್ನು ಮೋಹಿಸಿ ಪತಂಗ ಬೆಂಕಿಯುಲ್ಲಿ ಸತ್ತಿತು. ಸ್ಪರ್ಶಸುಖ ದಾಸೆಗಾಗಿ ಆನೆ ಕೃತಕ ವಿಹಾರದಲ್ಲಿ ಸಿಕ್ಕು ಸ್ವಾತಂತ್ರ್ಯ ಕಳೆದುಕೊಂಡಿತು· ನಾದಕ್ಕೆ ಮರುಳಾಗಿ ಎರಳೆ ಶಬರನ ಬಾಣಕ್ಕೆ ಗುರಿಯಾಯಿತು. ಈ ಐದು ಇಂದ್ರಿಯ ವಿಷಯುಗಳೂ ಮನುಷ್ಯನನ್ನು ಒಟ್ಟಾಗಿ ಎಳೆಯುತ್ತಿರುವಾಗ ಅವನ ಗತಿ ಏನಾಗಬೇಕು? ಅಧೋಗತಿ ಮತ್ತೇನು ? ಶಿವಭಕ್ತಿ, ಶಿವಪೂಜೆ ಶಿವಜ್ಞಾನಗಳಿಂದ ಭವದ ಕಷ್ಟ ನೀಗುವದು ಮನುಷ್ಯ ಜನ್ಮದಲ್ಲಿಯೇ ಸಾಧ್ಯ" ಹೀಗೆ ಈ ಮಾತುಗಳನ್ನು ವಿವರವಾಗಿ ಬೋಧಿಸಿದರು, ರಾತ್ರಿಯ ಚಳಿಯಲ್ಲಿ ಬಯುಲಲ್ಲಿರುವದಕ್ಕಿಂತ ಆ ಕಡೆ ಇರುವ ದೇವಾಲಯಕ್ಕೆ ಬರಬೇಕೆಂದು ಬಿನ್ನವಿಸಿದ ಆ ಭಕ್ತರ ಕೋರಿಕೆಯಂತೆ ಅಂದು ಅಲ್ಲಿ ಉಳಿದು ಮರುದಿನ ಮುಂದಕ್ಕೆ ಹೊರಟರು.

ನಿರ್ಭಯದಿಂದ ನಿಜಾನಂದದ ಬೆಳಕಿನಲ್ಲಿ ಸಂಚರಿಸುತ್ತ ಷಣ್ಮುಖಯೋಗಿ ತೋಳ್ಮಡು ಎಂಬ ಅರಣ್ಯದಲ್ಲಿ ಬಂದರು. ಅದು ಅರಣ್ಯವಾದರೂ

ರಮ್ಯವಾದ ವನಪ್ರದೇಶ. ಸಾಧು, ಅಸಾಧು ಮೃಗಗಳು ವಾಸವಾಗಿದ್ದವು. ಕಾಡು ಮರಗಳೊಡನೆ ಹಿರಿ-ಕಿರಿಯ ಫಲವೃಕ್ಷಗಳು ವಿಪುಲವಾಗಿದ್ದವು. ಹೂಬಳ್ಳಿಗಳು ಲತಾಕುಂಜಗಳು ಮಳಲರಾಶಿ-ಹಾಸುಗಲ್ಲುಗಳು, ತಿಳಿ ನೀರಿನ ಝರಿಗಳು ಮನಸೆಳೆಯುವಂತಿದ್ದವು ಇದನ್ನು ದಾಟಿ ಹೋಗಿದ್ದರೆ ಹಿರಿಯಕೌಲಗಿ ಎಂಬ ಊರು. ಆದರೆ ಶಿವಶಕ್ತಿ ನಿರ್ಮಿಸಿದ ಈ ನಿಸರ್ಗ ರಮಣೀಯತೆ ಶಿವಯೋಗಿಯನ್ನು ಮುಂದೆ ಹೋಗಗೊಡಲಿಲ್ಲ, ಅಲ್ಲಿ ಲಿಂಗಾನುಷ್ಠಾನಗೈಯುವದಕ್ಕೆ ಮನಸೋತು ಒಂದೆಡೆ ಇಳಿದು ಬಿಟ್ಟರು ಸ್ನಾನಕ್ಕೆ. ಪ್ರಸಾದಕ್ಕೆ ತುಂಬ ಅನುಕೂಲ. ಪ್ರಾಕೃತಿಕ ವೈಭವಕ್ಕೆ ಕೊರತೆ ಇರಲಿಲ್ಲ- ಜಳಕ ಮಾಡಿ ಬಟ್ಟೆ ತೊಳೆದು ಹಾಕಿದನು. ಪತ್ರಿ, ಫಲ, ಪುಷ್ಪಗಳನ್ನು ತಂದಿಟ್ಟು. ಎಳೆದಳಿರ ಗದ್ದುಗೆಯ ಮೇಲೆ ಸಿದ್ಧಾಸನದಲ್ಲಿ ಕುಳಿತು, ಲಿಂಗಾರ್ಚನೆ ಗೈದರು. ಲಿಂಗದಲ್ಲಿ ನೋಟವನ್ನು ನಿಲ್ಲಿಸಿ ಶ್ವಾಸವನ್ನು ನಿಗಹಿಸಿ ಅನಿರ್ವಚನೀಯ ಅನುಭವದಲ್ಲಿ ಅವಿರಳಾನಂದದಲ್ಲಿ ಬೆರೆತು ಸಾಮರಸ್ಯ ಸುಖವನ್ನು ಅನುಭವಿಸಿದನು. ಹಣ್ಣುಗಳನ್ನು ಲಿಂಗಾರ್ಪಿತ ಮಾಡಿ ಪಾದೋದಕ ಸ್ವೀಕರಿಸಿ ನಿಜಸುಖಾನುಭವದಲ್ಲಿದ್ದರು ಹಿಂಸು ಪಶುಗಳ ಗರ್ಜನೆ ಅತ್ತ ನಡೆದಿತ್ತು ಶಿವಯೋಗಿಗೆ ಅತ್ತಗಮನವಿಲ್ಲ. ಆದರೆ ಸನಿಹದಲ್ಲಿ ಹುಲಿಯೊಂದು ಗುಡುಗಿತು. ಗೋವೊಂದು ಪ್ರಾಣಭಯದಿಂದ ಗಾಬರಿಯಾಗಿ ಓಡಿ ಬಂದು ಈ ತಾಪಸಿಯ ಆಶ್ರಯ ಬಯಸಿ ಅವರ ಹಿಂದೆ ನಿಂತಿತು. ಅದನ್ನು ಹಿಡಿಯಲು ಹಾರುತ್ತ ಬಂದ ಹುಲಿ ಷಣ್ಮುಖಯೋಗಿಯ ತಪೋವಲಯದಾಚೆ ತಡೆದು ನಿಂತಿತು. ಶಿವಯೋಗಿಯಿಂದ ನಿರ್ಮಿತವಾದ ಶಿವಪ್ರಭೆಯಲ್ಲಿ ನುಗ್ಗುವದಕ್ಕೆ ಹುಲಿಗಾಗಲಿಲ್ಲ. ಅವರೆದುರಿನಲ್ಲಿ ಕೆಲವಂತರದಲ್ಲಿ ನಾಲ್ಕೂ ಕಾಲೂ ಮಡಚಿಕೊಂಡು ಗೋಣುಚಾಚಿ ಕುಳಿತುಕೊಂಡಿತು. ಸ್ವಾಮಿಶ್ರೇಷ್ಠನ ಭೂತಾನುಕಂಪೆಯ ಮುಖವನ್ನು ನೋಡುತ್ತಿದ್ದಂತೆ ಹುಲಿಯ ಶೌರ್ಯದ ಒಡ್ಡು ಒಡೆದು ಹೋಯಿತು. ಸತ್ವವು ತಾಮಸವನ್ನು ಕರಗಿಸಿತ್ತು, ಹುಲಿ ಮೆಮವಾದಿತ್ತು.

ಸ್ವಾಮಿಗಳು ಮಗಮಗಿಸುವ ಎರಡು ಸೌತೇಹಣ್ಣುಗಳನ್ನು ಎರಡೂ

ಕೈಯಲ್ಲಿ ತಕ್ಕೊಂಡು ಒಂದನ್ನು ಬಲಬದಿಗೆ ಆಕಳಕಡೆಗೆ ಚಾಚಿದರು. ಅದು ಒಂದು ಹೆಜ್ಜೆ ಮುಂದೆ ಬಂದು ಬಾಯಲ್ಲಿ ತಕ್ಕೊಂಡಿತು. ಹುಲಿಯು ಕಡೆಗೆ ಚಾಚಿದ ಕೈಯಲ್ಲಿಯ ಹಣ್ಣನ್ನು ಹುಲಿ ಪಿಳಪಿಳನೆ ನೋಡುತ್ತಿತ್ತು. "ಬಾಪ್ಪಾ"! ಬಾ ಮಗು, ಶಿವಪ್ರಸಾದ ತಕ್ಕೋ ಸ್ವಾಮಿ ಕರೆಯಲು ಹುಲಿ ಬಾಲಅಲ್ಲಾಡಿಸುತ್ತ ತಲೆತಗ್ಗಿಸಿ ಮಡಿಚುಗಾಲಿನಲ್ಲಿ ಮೆಲ್ಲಗೆ ನಡೆದು ಬಂದು ಮುಂಗಾಲುಗಳಿಂದ ಹಣ್ಣನ್ನು ತಕ್ಕೊಂಡಿತು. ಶಿವಯೋಗಿಗಳ ಎಡದ ಹಸ್ತವು ಹುಲಿಯ ತಲೆ-ಕುತ್ತಿಗೆಗಳನ್ನು ಸವರಿ ಸಂತೈಸುತ್ತಿತ್ತು. ಬಲದ ಕೈ ಬೆರಳು ಹಸುವಿನ ಕೊಂಬುಗಳ ನಡುವೆ ತಲೆಯು ತೀಟೆ ತುರಿಸುತ್ತಿದ್ದವು. ಘನಕ್ಕೆ ಘನವಾದ ಲಿಂಗವನ್ನು ಎತ್ತಿದ ಎಡಹಸ್ತ! ಆ ಘನವನ್ನು ಸ್ಪರ್ಶಿಸಿ ಅಪ್ಪವಿಧವಾಗಿ ಅರ್ಚಿಸಿದ ಜಲಹಸ್ತಾಂಗುಲಿಗಳು! ಆವೆರಡು ಪ್ರಾಣಿಗಳು ಭವ ಹಿಂಗಿ ಹೋಗಿರಬೇಕು! ಶಿವಯೋಗಿಗಳ ಸಂಕೇತವರಿತ ಅವು ತಮ ತಮ್ಮ ಮಾರ್ಗ ಹಿಡಿದು ಹೊರಟು ಹೋದವು. ಮಹಿಮಾತ್ಮರ ದರ್ಶನ, ಸ್ಪರ್ಶನ, ಸಂಭಾಷಣೆಗಳಿಂದ ನಿಜ ಸುಖ ಪ್ರಾಪ್ತಿಯೆಂಬುದು ಸತ್ಯೋಕ್ತಿ.

ಸೊಗಸಾದ ಸೊಂಪು ಬೀರಿ ತುಷ್ಟಿಯನೀವ ಆ ವನಪ್ರದೇಶವನ್ನು ತೊರೆದು ಹೋಗಲು ನಮ್ಮ ತರುಣವಿರತರಿಗೆ ಮನಸ್ಸಾಗಲಿಲ್ಲ. ಚಿಕ್ಕದೊಂದು ಎಲೆಯ ಗೂಡು ಮಾಡಿಕೊಂಡು ಒಣಕಟ್ಟಿಗೆಗಳಿಂದ ಬೆಂಕಿಯನ್ನು ಹೊತ್ತಿಸಿಕೊಂಡು ತನ್ನ ಲಿಂಗ ತಪವನ್ನು ಮುಂದುವರೆಸಿದರು. ಯೋಗ ಸುಖಸಾಮ್ರಾಜ್ಯದಲ್ಲಿ ಮೆರೆಯಹತ್ತಿದರು.

ಆ ಅರಣ್ಯದಲ್ಲಿ ಜನರು ಹಾದು ಹೋಗುವ ಕಾಲುದಾರಿಯೊಂದು ಆ ಸ್ಥಳದ ಸಮೀಪದಲ್ಲಿತ್ತು. ಒಂದು ದಿನ ಕೆಲವರು ಕೂಡಿ ಅಲ್ಲಿ ಹಾಯಿದು ಹಿರಿಯ ಕೌಲಗಿಗೆ ಹೊರಟಿದ್ದರು ಅವರು ಆ ತಪಸ್ವಿಯ ಮುಂದಿನ ಅಗ್ನಿಕುಂಡದ ಹತ್ತಿರ ಹಾವು ಮುಂಗಲಿಗಳೆರಡೂ ಒಂದನ್ನೊಂದು ಅಪ್ಪಿ ಚೆನ್ನಾಟವಾಡುತ್ತಿದ್ದುದನ್ನು ಕಂಡರು. ಆದರಿಗೆ ಅತ್ಯಾಶ್ಚರ್ಯವಾಯಿತು. ಊರಲ್ಲಿ ಬಂದು ಪ್ರಮುಖರಿಗೆ ಈ ಸೋಜಿಗದ ಸಂಗತಿ ತಿಳಿಸಿ

ದರು. ಈ ಮಹಾತ್ಮರ ದರ್ಶನ ಪಡೆದು ಪುನೀತರಾಗಬೇಕೆಂದು ಬಗೆದ ಹಿರೆಕೌಲಗಿಯ ಕೆಲವರು ಹಣ್ಣು-ಹೂ-ಕಾಯಿಗಳನ್ನು ತಕ್ಕೊಂಡು ಬಂದು ಮುಂದಿಟ್ಟು ಸಾಷ್ಟಾಂಗ ಪ್ರಣಾಮಗೈದರು. "ಬನ್ನಿರಪ್ಪಾ" ಎಂದು ಆದ ರಿಸಿ ಕರೆದರು ಷಣ್ಮುಖಸ್ವಾಮಿಗಳು. ಅವರು ಪೂಜ್ಯರೇ ನಾವು ಸಂಸಾರದ ಹುದುಲಲ್ಲಿ ಸಿಕ್ಕು ಬಿದ್ದು ಬಳಲುತ್ತಿರುವೆವು. ತಾವು ನಮ್ಮಲ್ಲಿಗೆ ಬಂದು ಜ್ಞಾನದ ಹೊರಬು ತಿಳಿಸಿ ಬೆಳಕು ತೋರಿ ಕಾಪಾಡಬೇಕು. ನಮ್ಮಲ್ಲಿ ತಮಗೆ ಸರಿಯೆನಿಸುವ ಒಂದು ಮನೆಯಲ್ಲಿ ತಾವು ಬೀಡಾರಮಾಡಿ ತಮ್ಮ ತಪೋ ನುಷ್ಠಾನ ನಡಿಸಬೇಕು. ನಾವು ಸೇವೆ ಮಾಡುತ್ತೇವೆ, ನಮಗೆ ಭಕ್ತಿ, ಕ್ರಿಯಾ, ಜ್ಞಾನಗಳ ಉಪದೇಶ ಮಾಡಬೇಕು. ಎಂದು ಬೇಡಿಕೊಂಡರು. ಸ್ವಾಮಿಗಳು ಎಂದಿನಂತೆ ಸಂಸಾರಿಗಳ ಹತ್ತಿರ ಇರಲು ನಿರಾಕರಿಸಿದರು. ಆ ಭಕ್ತರು ಊರ ಹತ್ತಿರ ಒಂದು ಆಶ್ರಮ ರಚಿಸಿಕೊಡುವೆವು ದಯಮಾ ಡಿಸಬೇಕು" ಎನಲು ಭಕ್ತಜನೋದ್ಧಾರ ತಮ್ಮ ಮಣಿಹವೆಂದು ಒಪ್ಪಿ ಕೊಂಡರು.

ಹಿರಿಯಕೌಲಗಿ ಹತ್ತಿರ ನಿರ್ಮಲವಾದ ಸ್ಥಳದಲ್ಲಿ ಚಿಕ್ಕ ಆಶ್ರಮ ಒಂದು ರಚಿತವಾಯಿತು. ಯತಿಶ್ರೇಷ್ಠ ಷಣ್ಮುಖರು ಅಲ್ಲಿಗೆ ದಯಮಾಡಿ ಸಿದರು. ಬೆಳಗಿನ ಜಾವದಲ್ಲಿಯೇ ಜಲಾಶಯದಲ್ಲಿ ಜಳಕಮಾಡಿ ಬಂದು ತಮ್ಮ ಜಪ-ತಪ, ಅರ್ಚನಾದಿಗಳನ್ನು ನೆರವೇರಿಸುವರು. ಎರಡುಗಳಿಗೆ ಹೊತ್ತೇರಿದಾಗ ಬರುವ ಕೆಲವು ಆತ್ಮಜಿಜ್ಞಾಸುಗಳಿಗೆ ತತ್ವಜ್ಞಾನ ಬೋಧೆ ಮಾಡುವರು. ಬಳಿಕ ಕಂತೆಯ ಭಿಕ್ಷಮಾಡಿ ಅರ್ಚನೆ ಅರ್ಪಿತ ಮಾಡುವರು. ಸಾಯಂಕಾಲ ಬರುವ ಮುಮುಕ್ಷಗಳಿಗೆ, ಭಕ್ತಿ ನಿಷ್ಠರಿಗೆ ನೀತಿ ಧರ್ಮಾಚಾ ರಗಳ ಕುರಿತ ಪ್ರವಚನ ನೀಡುವರು. ಕೇಳುಗರು ಹೆಚ್ಚು ಹೆಚ್ಚಾಗಿ ಬರು ತ್ತಿದ್ದಂತೆ ಪ್ರವಚನ ಕುಟೀರವನ್ನು ವಿಸ್ತರಿಸಿದರು. ಕೆಲವು ಶ್ರದ್ಧಾಳುಗಳು ಅದರ ಓರಣ ವ್ಯವಸ್ಥೆ ಮಾಡಹತ್ತಿದರು. ಕುಷ್ಟರೋಗವುಳ್ಳ ಭಕ್ತನೊಬ್ಬ ಶ್ರೀಗಳ ಅಮೃತವಾಣಿಯನ್ನು ಆಲಿಸಲು ಬರಹತ್ತಿದ್ದನು. ವಿಕಾರಗೊಂಡ

ಅವನ ದೇಹ ನೋಡುವದಕ್ಕೆ ಅಸಹ್ಯವೆಂದು ಕೆಲವು ಭುಂಡರು ನ್ಯಾಯ ತೆಗೆದರು. "ಈ ಭ್ರಷ್ಟನೇಕೆ ನಮ್ಮ ಹತ್ತಿರ ಕೂಡ್ರಬೇಕು" ಎಂದು ಕೋಪ ಬೀರಿದರು. ಕನಿಕರಪಟ್ಟು ಶಿವಯೋಗಿ ಮರುಗಿದರು. ಶಿವನಿಗೇನು ಸಹ್ಯ ಅಸಹ್ಯಗಳುಂಟೇ? ಆಗ ಅವರು ಧೂರ್ತರೇ ನಮಗೇನು ಹೇಳಿದರೂ ಅಷ್ಟೆ! ನಿಮ್ಮಂತೆ ಅವನೂ ಶಿವಾನುಭವಕ್ಕಾಗಿ ಬರುತ್ತಿದ್ದಾನೆ. ಕೊರತೆಯಾರಿಗಿಲ್ಲಿ? ಆಪತ್ತಿಗೊಳಗಾದ ಅವನಿಗಾಗಿ ಕರುಣೆ ತಾಳಬೇಕು. ನಿಮಗೆ ಹೃದಯವಿಲ್ಲವೆ? ದಯಬಾರದೆ? ದಯವಿಲ್ಲದಿದ್ದರೆ ಧರ್ಮವೆಲ್ಲಿ? " ಎಂದು ಕಟ್ಟಾಗಿ ಕೇಳಿದರು. ಕಲಹ ಕೆದರಿದ ಆ ಜನರು ಶಿವಯೋಗಿಗಳ ಪಾದಕ್ಕೆ ಬಿದ್ದು "ತಮ್ಮದು ತಪ್ಪಾಯಿತು ಕ್ಷಮಿಸಬೇಕೆಂದು" ಬೇಡಿಕೊಂಡರು ಶ್ರೀಗಳು 'ಆಗಲಿ, ಹೃದಯಹಸನ ಮಾಡಿಕೊಂಡಿರಿ, ಕುಳಿತುಕೊಳ್ಳಿರಿ' ಎಂದು ಸಂತೈಸಿದರು.

ಶ್ರೀಗಳು ಕೆಲವು ದಿವಸ, ಸದ್ಭಕ್ತಿ-ಸದಾಚಾರಗಳ ವಿಷಯ ವಿವೇಚಿಸುತ್ತ ವೀರಶೈವರ ಆಚಾರ ಹೇಗಿರಬೇಕೆಂಬುದನ್ನು ಬೋಧಿಸಿದರು. ತರುಣ ಯೋಗಿ, ವಿರತಿಯ ತೇಜ, ಅನುಭಾವದ ಅಗ್ಗಳಿಕೆ ಹಂಗಿಲ್ಲದ ಸ್ಪಷ್ಟ ನಿಷ್ಠುರವಾದ ಸರಳವಾದ ಸರಳ ಮಾತು! ಭಕ್ತಿಯಿಂದ ಆಲಿಸಿದರು ಆಸಕ್ತ ಭಕ್ತರು. ಅವರು ತಿಳಿದುಕೊಂಡಿದ್ದು ಹೀಗೆ;

"ಸದ್ಭಕ್ತಿಯು ಭಕ್ತರ ಅಂತರಂಗದ ಭಾವವು ಅದರ ಪ್ರೇರಣೆಯಿಂದ ಸದಾಚಾರವು ಬಹಿರಂಗವಾಗಿ ಬೆಳಗುವದು. ಹಾಗು ಅಂತರಂಗವನ್ನು ಶುಚಿಗೊಳಿಸಿ ಆ ಭಕ್ತಿಗೆ ನೆಲೆಯನ್ನು ಸಿದ್ಧಗೊಳಿಸುವದು. ಜೀವವನ್ನು ಮೇಲೆತ್ತುವದಕ್ಕೆ ಸದ್ಭಕ್ತಿ ಶಕ್ತಿಯಾಗಿದೆ. ಸದಾಚಾರವು ಏಣಿಯಂತೆ ಸಾಧನವಾದಿದೆ. ಸದ್ಭಕ್ತಿಯೇ ಮುಖ್ಯವಾಗಿ ಪಾರಮಾರ್ಥಿಕವಾದಿದೆ. ಸದಾಚಾರವು ಇಹ ಪರಗಳೆರಡನ್ನು ಸಮನ್ವಯಗೊಳಿಸಿ ಆ ಭಕ್ತಿಯ ಆಧಾರದಲ್ಲಿ ಸಾಮರಸ್ಯವನ್ನು ಸಾಧಿಸುವ ಬಲ ಹೊಂದಿದೆ. ಸದ್ಭಕ್ತಿಯ ವಿಕಾಸಕ್ಕೆ,

ಅಭಿವ್ಯಕ್ತಿಗೆ, ಸದಾಚಾರವು ಭೂಮಿಕೆಯಾಗಿದೆ. ವೀರಶೈವರ ಪಂಚಾಚಾರಗಳಲ್ಲಿ ಸದಾಚಾರಕ್ಕೆ ವಿಶೇಷ ಸ್ಥಾನವಿದೆ.

"ಶಿವಭಕ್ತನೂ ಸಜ್ಜನನೂ ಆದವನು ತಾನು ಸಂತುಷ್ಟನಾಗುವಂತೆ ತನ್ನಿಂದ ಇತರರೂ ಸಂತೋಷಪಡುವಂತೆ ನಡೆದುಕೊಳ್ಳುವದು ಸದಾಚಾರವು. ಸದಾಚಾರಿಯು ಷಟ್‌ಸ್ಥಲ ಸಿದ್ಧಾಂತದಂತೆ, ನೀತಿಯುತವಾಗಿ ತಾನು ನಡೆಯುವದಲ್ಲದೆ ತನ್ನ ಮನೆಯವರೂ ನಡೆಯುವಂತೆ ಮಾಡಬೇಕು ಸದಾ ಉದ್ಯೋಗಶೀಲನಾಗಿರಬೇಕು. ಆ ಉದ್ಯೋಗದಲ್ಲಿ ನಿಷ್ಠೆಯಿರಬೇಕು. ಪ್ರಾಮಾಣಿಕತೆ ಇರಬೇಕು.

"ಸದಾಚಾರವು ಶರಣರ ಬಾಳಿನ ಉಸಿರಾದಿತ್ತು. ಎಲ್ಲ ಶರಣರು ತಮ್ಮ ವಚನಗಳಲ್ಲಿ ಸದಾಚಾರದ ಹಿರಿಮೆಯನ್ನು ವಿಸ್ತಾರವಾಗಿ ಹೇಳಿದ್ದಾರೆ

ಬಸವಣ್ಣನವರು, "ಕಳಬೇಡ, ಕೊಲಬೇಡ. ಹುಸಿಯ ನುಡಿಯಲು ಬೇಡ ಮುನಿಯ ಬೇಡ ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸಬೇಡ ಇದಿರು ಹಳಿಯಲುಬೇಡ...........ಈ ವಚನದಲ್ಲಿ ಅಂತರಂಗ ಶುದ್ಧಿಗೆ ಮತ್ತು ಬಹಿರಂಗ ಶುದ್ಧಿಗೆ ಸದಾಚಾರವೇ ಮೂಲಾಧಾರವೆಂದಿದ್ದಾರೆ. ಸದಾಚಾರದಿಂದ ಅಂತರ್ ಬಾಹ್ಯರಂಗಗಳೆರಡೂ ಶುದ್ಧವಾದರೆ ಲೌಕಿಕದಲ್ಲಿ ಸಮಾಧಾನ ಸನ್ಮಾನಗಳು ದೊರಕುವವು. ದಿವ್ಯಜ್ಞಾನ ಸಾಧನೆಗೆ ತಕ್ಕ ಮನೋಭೂಮಿಕೆ ಸಿದ್ಧವಾಗಿ ಆತ್ಮಸಾಕ್ಷಾತ್ಕಾರವು ತನ್ನಿಂದ ತಾನೇ ಲಭಿಸುವದು. ಸದಾಚಾರವು ನೀತಿಪ್ರಧಾನವಾಗಿದೆ. ಲಿಂಗಾಚಾರದಲ್ಲಿ ನೈತಿಕಾಚರಣೆ ಸಮರಸಗೊಂಡರೆ ಸದಾಚಾರವಾಗುವದು ಅಣ್ಣನವರು.

ದಿಟವ ನುಡಿ, ನುಡಿದಂತೆ ನಡೆ. ಸತ್ಯವ ನುಡಿಯುವದೇ ಸ್ವರ್ಗಲೋಕ, ಮಿಥ್ಯವನುಡಿಯುವದೇ ಮರ್ತ್ಯಲೋಕ ನುಡಿಯಲ್ಲಿ ಎಚ್ಚತ್ತು ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗ ಘಟಸರ್ಪ. ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ ದಯವೇ ಧರ್ಮದ ಮೂಲ.

ಈ ಮೊದಲಾದ ನುಡಿಮುತ್ತುಗಳಲ್ಲಿ ನೀತಿ ಪ್ರಮುಖವಾದ ವಿವಿಧ

ಮುಖಗಳನ್ನು ತೋರಿಸಿದ್ದಾರೆ ಎಂದು ಹೇಳಿದ್ದುದು ಸದಾಚಾರದ ಘನತೆಯನ್ನು ಎತ್ತಿ ತೋರಿಸುತ್ತಿದೆ. ಇಹ ಪರಗಳೆರಡಕ್ಕೂ ಪ್ರತಿಭಾವಂತೆ ಎನಿಸಿದ ಅಕ್ಕನಾಗಮ್ಮನವರು:

ಶ್ರೀ ಗುರುವೇ ತಂದೆ-ತಾಯಿಯಾಗಿ, ಲಿಂಗವೇ ಪತಿಯಾಗಿ
ಜಂಗಮವೇ ಅತ್ತೆ-ಮಾವಂದಿರಾಗಿ ಶಿವಭಕ್ತರೇ ಬಾಂಧವರಾಗಿ
ಸತ್ಯ-ಸದಾಚಾರ ಎಂಬ ಮನೆಗೆ ಕಳಿಸಿದರಾಗಿ
ಶರಣಸತಿ ಎಂಬ ನಾಮ ನಿಜವಾಯಿತ್ತು ....

ಹೀಗೆ ಲಿಂಗದ ಸಾಕ್ಷಾತ್ಕಾರಕ್ಕೆ ಸದಾಚಾರದ ಮನೆಯೇ ಆಗಬೇಕು· ಅಲ್ಲಿಯೇ ಅಂಗ ಲಿಂಗಗಳ ಸಾಮರಸ್ಯ. ಆ ಸದಾಚಾರದಿಂದ ಭಕ್ತ ಅಗಲಿದರೆ "ಗರತೆ ಗಂಡನ ಮನೆಯನ್ನು ತೊರೆದು ಹೋದಂತಾಗುವದು" ಆ ಮೇಲೆ ಗಂಡನಗಲಿದ ಆಕೆ ನಿರ್ಗತಿಕಳಾಗುವಂತೆ ಲಿಂಗವನ್ನಗಲಿದ ಅಂಗ ಭವಭವದಗಳಲ್ಲಿ ತಿರುಗಬೇಕಾದೀತು. ಚೆನ್ನಬಸವಣ್ಣನವರ ತತ್ವ ಆಚಾರಗಳ ವಿವರದಿಂದ ಧರ್ಮವೆಲ್ಲ ಸದಾಚಾರದಲ್ಲಿಯೇ ನಿರೂಪಿತ ಎಂಬುದು ನಿಸ್ಸಂದೇಹ! ಈ ರೀತಿ ಸದಾಚಾರದಿಂದ, ಸದ್ಭಕ್ತಿಯಿಂದ ಯುಕ್ತನಾದ ಭಕ್ತನ ಜೀವನದ ಮಹತ್ವದ ಅಂಗವಾಗಿ, ಮುಕ್ತಿಗೆ ದಿವ್ಯ ಸಾಧನವಾಗುವದು ಸದಾಚಾರ."

ಹಲವು ದಿವಸ ಇಂತಹ ಉಕ್ತಿಗಳ ಉಪದೇಶವನ್ನು ಕೇಳಿ ಮನಗಾಣಿಸಿಕೊಂಡು ಹಿರೇಕೌಲಗಿಯ ಜನರು ಧನ್ಯರೆನಿಸಿದರು. ಈ ಶಿವಾನುಭವ ಅಮೃತವನ್ನು ನಿಷ್ಠೆಯಿಂದ ಪಾನ ಮಾಡಿ ಮಾಡಿದಂತೆ ಆ ಕುಷ್ಠರೋಗಿಯ ವಿಕೃತರೂಪ ಮಾಯವಾಗಿ ಆತನು ಆರೋಗ್ಯವಂತನಾದನು. ಸುರೂಪಿಯಾದನು. ಹೀಗೆ ಪುನೀತನಾದ ಆ ಸಜ್ಜನನು ಷಣ್ಮುಖ ಶಿವಯೋಗಿಗಳ ಅಡಿಗಳಲ್ಲಿ ಹೊರಳಿ "ಗುರುದೇವ ಹಿಂದೆ ಮಾಡಿದ ದುಷ್ಕರ್ಮಗಳ ಫಲದಿಂದ ಬಂದ ದುರ್ಘಟ ರೋಗವು ನಿಮ್ಮ ಕೃಪೆಯಿಂದ ತೊಲಗಿ ಹೋಯಿತು. ಮಲಿನತೆ ಅಳಿದು ನಿರ್ಮಲನಾದೆ. ಭವರೋಗ ವೈದ್ಯ ದೈಹಿಕರೋಗವೆಂಬುದು ಅಂದಳವೇ ನಾನು ಪುನರ್ಜನ್ಮವನ್ನು ಪಡೆದೆ

ನನ್ನನ್ನು ಪಾದಸೇವಕನನ್ನಾಗಿ ಇರಿಸಿಕೊಳ್ಳು, ದೇವಾ! ನನಗಿರುವ ಧನದಿಂದ ತಮಗೊಂದು ಮಠವನ್ನು ನಿರ್ಮಿಸಲು ಅಪ್ಪಣೆಯಾಗಬೇಕು" ಎಂದು ಬಗೆಬಗೆಯಾಗಿ ಸ್ತುತಿಸಿ ಬೇಡಿಕೊಂಡನು. ಶಿವಯೋಗಿ ಅವನ ಕೈಂಕರ್ಯ ವನ್ನು ಸ್ವೀಕರಿಸಿ ಕೃತಾರ್ಥನನ್ನಾಗಿ ಮಾಡಿದರು. ಅವನ ಧನದಿಂದ ಆ ಜನರ ನೆರವಿನಿಂದ ಒಂದು ಮಠವಾಯಿತು.

ಚಿಕ್ಕಕೌಲಗಿಯ ಜನರು ಒಬ್ಬ ಬ್ರಹ್ಮರಾಕ್ಷಸಿಯ ಪೀಡೆಯಿಂದ ಬಹಳ ಬಳಲಿದ್ದರು. ಇದರ ವಿಧ್ವಂಸಕ ಕೃತಿಗಳನ್ನು ತಾಳಲಾರದೆ ಅದರೊ ಡನೆ ಮಾಡಿಕೊಂಡ ಒಡಂಬಡಿಕೆಯಂತೆ ದಿನವೂ ಪಕ್ವಾನ್ನದಡಿಗೆಯೊಡನೆ ಒಂದು ಪಶುವನ್ನು ಆಹುತಿಯಾಗಿ ಕೊಡುತ್ತ ಬಂದಿದ್ದರು. ಹೀಗೆ ಎಷ್ಟು ದಿನ ಕಳೆಯಲು ಸಾಧ್ಯ ಇದರ ಭಯನಿವಾರಣೆ ಹೇಗಾದರೂ ಆದೀತು? ಎಂದು ಕೊರಗುತ್ತಿದ್ದರು. ಕಷ್ಟಕಳೆಗುವ ಕಾಲಬಂದಿತು. ಹಿರೇಕೌಲಗಿಯ ತಪಸ್ವಿ ತೇಜೋ ಮೂರ್ತಿ, ಷಣ್ಮುಖ ಶಿವಯೋಗಿಗಳಿಂದ ಕಷ್ಟ ತೊಲಗ ಬಹುದೆಂದು ಉತ್ತಮರೊಬ್ಬರು ಹೇಳಿದರು. ನೆರೆಯ ನೀರಪಾಲಾದ ಭಯಭೀತಿಗೆ ಸನಿಹದಲ್ಲಿ ನೌಕೆಯೊಂದನ್ನು ಕಂಡಂತಾಗಿ ಆ ಊರ ಹಿರಿ ಯರು ಒಂದುಗೂಡಿ ಹಿರೇಕೌಲಗಿಗೆ ಬಂದರು. ಶಿವಯೋಗಿಗಳ ಪಾದಗ ಳಿಗೆ ವಂದಿಸಿ ರಾಕ್ಷಸಿಯ ಚಿತ್ರಹಿಂಸೆಯನ್ನು ವಿವರಿಸಿ ತಮ್ಮ ಕಷ್ಟವನ್ನು ನಿವೇದಿಸಿದರು. ಅದನ್ನು ಪರಿಹರಿಸಿ ಕಾಪಾಡಬೇಕೆಂದು ಮೊರೆಹೊಕ್ಕರು. ಅವರ ದೈನ್ಯವನ್ನು ಕಂಡು ಶಿವಯೋಗಿಗೆ ತುಂಬಾ ಕರುಣೆಯಾಯಿತು. "ಅಗಲ್ರೆಪ್ಪಾ ಬರುವೆವು ನಡೆಯಿರಿ" ಎಂದು ಹಿರಿಕೌಲಗಿ ಭಕ್ತರನ್ನು ಆಶೀ ರ್ವದಿಸಿ ಗುರು ಅಖಂಡೇಶ್ವರರನ್ನು ನೆನೆಯುತ್ತ ಆ ಜನರನ್ನು ಹಿಂಬಾಲಿ ಸಿದರು.

ದುಷ್ಟಶಕ್ತಿಯಿಂದ ಆಪತ್ತಿಗೊಳಗಾದ ಆ ಜನರು ಮಹಾಶಿವಯೋ ಗಿಗಳನ್ನು ಒಡಗೊಂಡು ಚಿಕ್ಕಕೌಲಗಿಯ ಹತ್ತಿರಕ್ಕೆ ಬಂದರು. ಕಾಡಿನಲ್ಲಿ ರುದ್ರಭೂಮಿ ಮಸಣಗಟ್ಟೆ, ಸುತ್ತಲೆಲ್ಲಾ ಹರಡಿವೆ. ದಿಕ್ಕುದಿಕ್ಕಿಗೆ ಟೊಂಗೆಗ

ಳನ್ನು ಚಾಚಿ ಶತಮಾನಗಳನ್ನು ಕಳೆದು ಬೆಳೆದ ಮಹಾವೃಕ್ಷದ ಬುಡದಲ್ಲಿ ತಾವು ಆಹುತಿ ಇಡುವ ಸ್ಥಳವನ್ನು ತೋರಿದರು. " ಆಗಲಿ ಚೆನ್ನಾಗಿದೆ ಎಂದರು ಷಣ್ಮುಖಶಿವಯೋಗಿಗಳು ಶಿವನಿಗೆ ಸ್ಮಶಾನ ಪ್ರಿಯಕರವಷ್ಟೆ! 'ನಾವಿಲ್ಲಿ ಜಪ-ತಪಾನುಷ್ಠಾನ ಮಾಡಿಕೊಂಡಿರ್ಪೆವು. ಪಿಶಾಚಿಯ ಸ್ವರೂಪವನ್ನು ಬೈಲಿಗೆಳೆದು ನಿಗ್ರಹಿಸುವೆವು. ಚಿಂತಿಸಬೇಡಿರಿ. ಆ ದುಶ್ಶಕ್ತಿಯ ಮರ್ದನವಾದಾಗ ಈ ಗಿಡದ ತುದಿಯಲ್ಲಿ ಕಾವಿ ನಿಶಾನೆ ಕಂಗೊಳಿಸುವದು ಆಗ ಬನ್ನಿರಿ' ಎಂದು ಹೇಳಿ ಕಳಿಸಿದರು.

ಸಂಜೆಯ ಮುಂದೆ ಹತ್ತಿರದ ಹಳ್ಳದಲ್ಲಿ ಸ್ನಾನಮಾಡಿ ಅಗ್ಗವಣಿ ಪತ್ರಿ-ಪುಷ್ಪ ತಂದು ಬೆಂಕಿ ಮಾಡಿಟ್ಟುಕೊಂಡು, ಚಿತ್ರಾಸನಹಾಕಿ ಹಟ ಯೋಗದೊಳು ಕುಳಿತರು. ಮಂತ್ರಜಪದಲ್ಲಿ ಮಗ್ನರಾಗಿ ಬ್ರಹ್ಮತೇಜವನ್ನು ಅಭಿವ್ಯಕ್ತಗೊಳಿಸಲು ಆ ಬೆಳಕು ಗೂಗೆಗಳಂತಿರುವ ಪಾಪಿಗಳ ಕಣ್ಣುಗಳನ್ನು ಇರಿಯಿತು. ಯೋಗದ ಬಿಸಿ ಹರಡಿತು.

"ನನ್ನ ಸುಖವಾಸದ ಮೇಲೆ ಇದೇನು ದಾಳಿ" ಎಂದು ಆ ರಾಕ್ಷಸಿ ಅರಚಿಕೊಂಡು ಬಯಲಿಗೆ ಬಂದಿತು. ಇವನ್ಯಾವ ಖೋಡಿ ಸನ್ಯಾಸಿ ಎಂದು ಹೆದರಿಸಿ ಓಡಿಸಲು ವಿಕೃತರೂಪ ತಾಳಿತು. ಕೋರೆ ಹಲ್ಲು, ಕೆಂಗಣ್ಣು, ಜೊಲ್ಲುನಾಲಿಗೆ ಕೆದರಿದ ಕೂದಲು ಮೊಂಡಗೈ ಡೊಂಕಕಾಲು ಎಲುವಿನ ಆಯುಧ ಎತ್ತಿ ಭೀಕರವಾಗಿ ಆರ್ದು ಎರಗಿತು. ಮುಟ್ಟಲಾಗಲಿಲ್ಲ. ಅನಿಮಿಷಯೋಗಿ ಅಲುಗಲಿಲ್ಲ. ಬಿಡುಗಣ್ಣ ಮುಚ್ಚಲಿಲ್ಲ. ಚಿರಿಚಿರಿಯುತ್ತ ಹಿಂದೆ ಸರಿದು ನಿಂತಿತು ರಕ್ಕಸಿ.

ನಿಮಿಷಗಳು ಸರಿದವು. ಗಳಿಗೆಯೂ ಕಳೆಯಿತು. ತಪದ ಪ್ರಖರ ತೇಜದ ಪರಿಣಾಮ ಉಂಟಾಗಹತ್ತಿತು. ಅವನ ಧೃತಿಗೆಡಿಸುತ್ತೆನೆಂದು ಯತ್ನಿಸಿದ ಭೂತ ತಾನೇ ಧೃತಿಗೆಟ್ಟಿತು. ಬೇಸಿಗೆಯ ಹುಲ್ಲೊಣಗಿದಂತೆ ಸೂರ್ಯನ ಉದಯಕ್ಕೆ ತಾರೆಗಳಡಗಿದಂತೆ ರಕ್ಕಸಿಯ ಸೊಕ್ಕು ಅಡಗಿ

ಹೋಯಿತು. ಗಾಬರಿಯಿಂದ ಮೈಯಲ್ಲಿ ನಡುಕು ಹುಟ್ಟಿತು. ಮೈಬೆವರಿತು ಆದರೆ ಬಾಯಿಯ ಬಲ ಕುಗ್ಗಿರಲಿಲ್ಲ. ದೂಷಿಸಿತು 'ಖೂಳ, ದುಷ್ಟಸನ್ಯಾಸಿ ಪರದೇಶಿ, ಎಲ್ಲಿಂದ ಬಂದೆ? ಊರವರಿಂದ ನಾನಾಭಕ್ಷ್ಯಭೋಜ್ಯಗಳನ್ನು ಪಡೆದು ನನ್ನ ಪರಿಚಾರಕರೊಡನೆ ಸುಖವಾಸಿಯಾಗಿದ್ದೆನು. ಹೋಗು ಇಲ್ಲಿಂದ ಖೂಳ........" ಬೊಗಳಿತು. ಆಶ ವಿಸುಕದ್ದರಿಂದ ಅಳಲೂ ಆರಂಭಿಸಿತು. ಬಾಲಯತಿ ನಸುನಕ್ಕು ಕೇಳಿದ.

"ನೀನು ಯಾರು? ನಿನಗೆ ಈ ಆವಸ್ಥೆ ಯಾಕೆ ಬಂದಿತು"?

"ಅದೆಲ್ಲ ನಿನಗೇಕೆ ನೀನು ಇಲ್ಲಿಂದ ಹೋದರೆ ಸಾಕು"

"ಹೇಳದೆ ಇದ್ದರೆ ನಾನು ಹೋಗುವದಿಲ್ಲ " ಎನ್ನುತ್ತ ಶಿವಯೋಗಿ ಅದನ್ನು ಕರುಣೆಯಿಂದ ನೋಡಿ ಪೂರ್ವಜನ್ಮದ ನೆನಹು ಮೂಡಿಸಿದ ಅಲೆ ಅಲೆಯಾಗಿ ಬರುವ ಶಿವನಾಮದ ನಾದವು ರಕ್ಕಸಿಯ ಕರಣಕ್ಕೆ ಕೇಳಹತ್ತಿತು ಧೂಪದ ನರುಗಂಪು ಅದರ ನಾಶಿಕವನ್ನು ಪ್ರವೇಶಿಸಿತು. ಯತಿಯ ಮಂಗಲರೂಪ ಕಾಣಿಸಿತು. ಹಿಂದಿನ ಕತೆ ಕಣ್ಮುಂದೆ ನಿಂತಿತು. ಶಿವಯೋಗಿಯ ಪಾದಕ್ಕೆ ಬಿದ್ದು ಅಳಹತ್ತಿದಳು ಆ ರಕ್ಕಸಿಯು.

"ಈಗಲಾದರೂ ಹೇಳುವೆಯಾ ನೀನು ಯಾರೆಂದು"? ಶಿವಯೋಗಿ ಕೇಳಿದ.

" ಹೇಳುವೆ ತಂದೆ ನನ್ನ ಪಾಪದ ಕತೆಯನ್ನು ಹಿಂದೆ ನಾನ ಒಬ್ಬ ಗುರುಲಿಂಗ ಜಂಗಮ ಪ್ರೇಮಿಯಾದ ಸದ್ಭಕ್ತ ಸಜ್ಜನನ ಸತಿಯಾಗಿದ್ದೆ. ಗಂಡನ ಮೇಲೆ ಪ್ರೀತಿ ಬಹಳ ಒಂದು ದಿನ ವೃದ್ಧನಾದ ಸುಜ್ಞಾನಿ ಜಂಗಮ ಪ್ರಸಾದಕ್ಕೆ ಬಂದಿದ್ದ. ಪಂಕ್ತಿ ಭೇದ ಮಾಡಿದೆ. ಮೋಹದ ಗಂಡನಿಗೆ ಒಳ್ಳೆಯದನ್ನು ಜಂಗಮನಿಗೆ ಅಂಥಿಂಥದನ್ನು ಎಡೆ ಮಾಡಿದೆ. ಮನಸ್ಸಿನಲ್ಲಿ ಆ ಶಿವಮೂರ್ತಿ ಶಾಪಕೊಟ್ಟಿರಬಹುದು. ಆ ಪಾಪದ ಫಲವಾಗಿ ಈ ಜನ್ಮ ಬಂದಿದೆ. ನೀನೇ ಕರುಣಿಸಿ ದುಷ್ಕರ್ಮದ ಫಲವಾದ ಈ ಜನ

ದಿಂದ ಮುಕ್ತಗೊಳಿಸಬೇಕು" ಎಂದು ಪರಿಪರಿಯಾಗಿ ಬೇಡಿಕೊಂಡಳು ದಯಾಸಾಗರ ಶಿವಯೋಗಿ ಅದರ ಪಶ್ಚಾತಾಪದ ಪರಿಶುದ್ಧತೆಗೆ ಒಲಿದು ಇನ್ನು ನೀನೂ ನಿನ್ನ ಸಹಚರಿಗಳೂ ಅಲ್ಲಿ ಆ ಕಡೆ ಬಿಲ್ವಸಸಿಗಳಾಗಿ ಹುಟ್ಟಿ ಗಿಡವಾಗಿ ಮರವಾಗಿ ಬೆಳೆಯಿರಿ. ನಳನಳಿಸುವ ಬಿಲ್ವದಳಗಳನ್ನು ಸಜ್ಜನ ಭಕ್ತರ ಶಿವಾರ್ಚನೆಗೆ ನೀಡಿ ಸವೆಯಿರಿ. ಆಗ ನಿಮಗೆ ಮುಕ್ತಿಯಾಗು ವದು. ಈ ಕ್ಷಣದಲ್ಲಿ ಈ ಜನ್ಮ ಅಳಿಯಿತು. ಹೋಗು" ಎಂದರು. ರಕ್ಕಸಿ "ಧನ್ಯಳಾದೆ ಗುರುವೆ" ಎಂದು ನಮಸ್ಕರಿಸುತ್ತ ಮಾಯವಾದಳು.

ಬೆಳಗಿನಲ್ಲಿ ಆ ಮರದ ಮೇಲೆ ಕಾವಿ ಶಾಟೀ ಧ್ವಜ ಹಾರಿತ್ತು ಊರವರು ಕಂಡು ಓಡಿ ಬಂದರು. ಶಿವಯೋಗಿಯ ಅಡಿಗೆರಗಿ ಜಯ ಘೋಷ ಮಾಡಿದರು. ಸುತ್ತುವರಿದು ಕುಣಿದರು. ಷಣ್ಮುಖ ಶಿವಯೋಗಿ ಅವರ ಹರ್ಷಾತಿರೇಕವನ್ನು ಕಂಡು ಮೋದಿಸಿ ಹರಸಿ ಕೂಡ್ರಿಸಿಕೊಂಡು ರಕ್ಕಸಿಯ ಪೂರ್ವಜನ್ಮದ ಕಥೆ ಹೇಳಿದರು. ಲಿಂಗಮುಖ ಜಂಗಮದ ಆರಾ ಧನೆಯ ವಿಧಾನಗಳನ್ನು ತಿಳಿಸಿದರು. ಸ್ವಾಮಿಗಳಿಗಾಗಿ ಆ ಜನರು ಒಂದು ಮಠ ಕಟ್ಟಿಸಲು ಬಯಸಿದರು. ಭಕ್ತರ ಬಲವಾದ ಇಚ್ಛೆಯನ್ನು ಮೀರಲಾ ರದೆ ಶಿವಯೋಗಿ ಒಪ್ಪಿದರು. ಕೆಲದಿನ ಅಲ್ಲಿದ್ದರು ಆ ಮಠ, ಆ ಜನ ಸಂಪರ್ಕ ತಮ್ಮ ವೈರಾಗ್ಯಕ್ಕೆ ವಿಶಾಲ ಭಾವನೆಗೆ ಆತಂಕವಾಗುವಂತೆ ಕಾಣಲು ಅಲ್ಲಿಂದ ಹೊರಟುಬಿಟ್ಟರು. ಚಿಕ್ಕಕೌಲಗೆಯಲ್ಲಿ ಷಣ್ಮುಖಸ್ವಾಮಿ ಗಳ ಬೆಳೆದ ಆ ಮಠವಿದೆ. ಆ ಪತ್ರೀವನವಿದೆ.

ಕಲಬುರ್ಗಿಯಲ್ಲಿ ಅಂದಿಗೆ ಮುನ್ನೂರು ವರ್ಷಗಳ ಆಚೆಯಿಂದ ಕಲಬುರ್ಗಿ ಪ್ರಾಂತವು ಮಹಮ್ಮದೀಯರ ಆಳ್ವಿಕೆಗೆ ಒಳಗಾಗಿತ್ತು. ಹಿಂದೂ ಧರ್ಮ ಮತ ತತ್ವಗಳ ಏಳ್ಗೆಗೆ ಉಳಿವಿಗೆ ಪ್ರೋತ್ಸಾಹವಿರಲಿಲ್ಲ. ಆದರೂ ವೀರಶೈವ ಮತಮಾನ್ಯಗಳು ಕಲ್ಯಾಣ ಶರಣರ ಪ್ರಭಾವಯುತ ವಚನಗಳ ಪ್ರಚಾರದಿಂದ ವೀರಶೈವ ಆಚಾರ ವಿಚಾರಗಳನ್ನು ಕಾಪಾಡಿಕೊಂಡು

ಬಂದಿದ್ದವು. ಕಲಬುರ್ಗಿಯ (ಗುರಬಸವ) ವಿರಕ್ತಮಠದಲ್ಲಿ ಬಸವಪುರಾಣ ಪ್ರವಚನ ನಡೆಯುತ್ತಲಿತ್ತು. ಒಂದು ದಿನದಗಣಾರಾಧನೆಯ ಸಮಯದಲ್ಲಿ ಮಠಾಧೀಶರಾದ ಶ್ರೀ ಬಸವಲಿಂಗಾಚಾರ್ಯರು, ಕುಳಿತ ಭಕ್ತರ ಮುಂದೆ ಸಾಷ್ಟಾಂಗವಾಗಿ ಎರಗಿದರು. ಚಕಿತರಾದ ಭಕ್ತರು ' ಇದೇನು ಮಹಾ ಸ್ವಾಮೀ ವಿಚಿತ್ರಕ್ರಮ?" ಎಂದರು. ಸ್ವಾಮಿಗಳು " ಮಹಾಶಿವಯೋಗಿ ಯೊಬ್ಬರು ಆಗಮಿಸುತ್ತಿದ್ದಾರೆ ಅವರಿಗೆ ಪ್ರಣಾಮಗೈದೆ'' ಎಂದರು. ದೇಶ ಸಂಚಾರದಲ್ಲಿದ್ದ ಷಣ್ಮುಖ ಶಿವಯೋಗಿಗಳು ಕಲಬುರ್ಗಿಗೆ ಬಂದು ಲಿಂಗಾರ್ಚನೆಗೆ ಸ್ಥಳವನ್ನು ಹುಡುಕುತ್ತ ಸ್ವಲ್ಪ ಹೊತ್ತಿನಲ್ಲಿ ಮಠದ ಬಾಗಿ ಲಿಗೆ ಬಂದರು. ಬಸವಲಿಂಗಾರ್ಯರು ಭಕ್ತರೊಡನೆ ಇದಿರೆದ್ದು ಹೋಗಿ ಅವರನ್ನು ಸನ್ಮಾನಿಸಿ ಬಿಜಂಗೈಸಿಕೊಂಡರು. ಜ್ಞಾನದೃಷ್ಟಿಯ ಉಭಯ ಶ್ರೀಗಳ ದರ್ಶನದಿಂದ ಆ ಭಕ್ತರು ಹರ್ಷತಾಳಿದರು. ಬಸವಲಿಂಗಾರ್ಯರು ನಮ್ಮ ಬಾಲಯಾತಿಯ ಸ್ನಾನ ಪೂಜೆ ಮಾಡಿಸಿ ಉಚಿತವಾದ ಆಸನದಲ್ಲಿ ಕೂಡ್ರಿಸಿದರು. ಲಿಂಗಾನಂದನ ವಾರ್ತೆಗಳ ಅನಂತರ ಅಲ್ಲಿ ನಡೆದಿರುವ ಬಸವಪುರಾಣವು ಪ್ರಸ್ತಾಪಕ್ಕೆ ಬಂದಿತು. ಪರಿಣಿತ ತರುಣಯೋಗಿಗಳೂ ವಾಗ್ಮಿಗಳೂ ಆಗಿರುವ ಷಣ್ಮುಖ ಶಿವಯೋಗಿಗಳಿಗೆ ಬಸವಲಿಂಗ ಸ್ವಾಮಿ ಗಳು; ಇಂದು ತಮ್ಮಿಂದ ಬಸವತತ್ವ ಕುರಿತು ಪ್ರವಚನ ಆಗಬೇಕು" ಎಂದು ಭಿನ್ನವಿಸಿದರು. ಬಸವವಾಣಿಯೇ ಪ್ರಾಣವಾಗಿರುವ ತರುಣ ಶಿವಯೋಗಿ ಒಪ್ಪಿಕೊಂಡರು. ಸಾಯಂಕಾಲ ಅತ್ಯಧಿಕ ಸಂಖ್ಯೆಯಲ್ಲಿ ಭಕ್ತಶ್ರೋತೃಗಳು ಆಗಮಿಸಿದರು. ಷಣ್ಮುಖ ಶಿವಯೋಗಿಗಳು ಪ್ರವಚನ ಪೀಠದಲ್ಲಿ ಮಂಡಿಸಿ ಚೆನ್ನಬಸವಣ್ಣನವರ ಈ ವಚನ ಹಾಡಿದರು.

> ಅಂತರಂಗದಲ್ಲಿ ಅರಿವು ಪರಿಪೂರ್ಣ ಬಹಿರಂಗದಲ್ಲಿ ದಾಸೋಹ ಸಂಪನ್ನ
> ಮನೋವಾಕ್ಕಾಯ ಕರ್ಮಗಳಲ್ಲಿ ಸದ್ಭಕ್ತಿಸಂಪನ್ನ ಎಡೆದೆರಹಿಲ್ಲದ
> ಲಿಂಗಸಂಪನ್ನ
> ಇಂತಿಪ್ಪನಾಗಿ ಕೂಡಲ ಚೆನ್ನಸಂಗಮ ದೇವನಲ್ಲಿ ಬೆರೆದು ಬೇರಾಗದಿಪ್ಪ
> ಸಂಗನ ಬಸವಣ್ಣನ ಸಂಪ್ರದಾಯದ ಕಂದ ನೋಡಾ ನಾನು.

ಶ್ರೀಗುರು ಬಸವಾ ಜಯತು ! ಬಸವ ತಂದೆ ಜಯತು.

ಬಳಿಕ ಕೈಮುಗಿದು ಭಕ್ತಮಹನೀಯರೆ, ನಿಶ್ಶಬ್ದವೇದ್ಯ ಪರಶಿವ ಸ್ವರೂಪನಾದ ಬಸವಣ್ಣನವರನ್ನು ಅರಿಯುವದು ಸಾಮಾನ್ಯವಲ್ಲ.

ಬಸವನಮಾಡಿದಡಾಯ್ತು ಬುವಿಗೆ ಭಕ್ತಿಯು ಬೆಳಕು
ಬಸವನಮಾಡಿದಡಾಯ್ತು ಗುರುಲಿಂಗ ಜಂಗಮ ಪೂಜೆ
ಬಸವನಮಾಡಿದಡಾಯ್ತು ಲಿಂಗಾಂಗ ಸಾಮರಸ್ಯದ ಸುಧೆಯು
ಬಸವನಮಾಡಿದಡಾಯ್ತು ಭಕ್ತ-ಭಕ್ತರಲಿ ಸಮಭಾವ

ಎಂಬ ಅರ್ಥವತ್ತಾದ ಸೂಕ್ತಿಗಳಿಂದ ವರ್ಣಿಸಿ ಬಸವಣ್ಣನವರು ವಚನಸುಧಾ ಝರಿಯನ್ನು ಲೋಕದೊಳಗೆ ಹರಿಸಿ ಎಂದೆಂದೂ ಮಾನವರು ಸೇವಿಸಿ ತಣಿಯಲೆಂದು ಹಾರೈಸಿದ್ದಾರೆ. ಅದರಲ್ಲಿ ಮಿಂದು ಆನಂದ ಹೊಂದದ ಮಾನವರಿಲ್ಲ. ಸತ್ಯ-ಸಮಾಚಾರದ ಭಕ್ತಿಭಾಂಡಾರಿ ಅವರು! ಸುಜ್ಞಾನ ಮೂರ್ತಿ ಅವರು! ಶಿವಭಕ್ತರಲ್ಲಿ ಕುಲಜಾತಿಗಳಿಲ್ಲ ಭಕ್ತ-ಭಕ್ತರಲ್ಲಿ ಸಮಭಾವ ಇರಬೇಕು. ಶಿವನ ಒಲಿಸಲು ಬಂದ ದೇಹ ಕೀಳಲ್ಲ ಸತ್ಯಶುದ್ಧ ಕಾಯಕದಿಂದ ದಾಸೋಹ ಮಾಡಬೇಕು. ಸ್ತ್ರೀಪುರುಷರಲ್ಲಿ ಆತ್ಮ ಒಂದೇ ಸತ್ಯ ನುಡಿಯುವದೇ ಸ್ವರ್ಗಲೋಕ ಮುಂತಾದ ಸಾಮಾಜಿಕ ತತ್ವಗಳನ್ನು ಸಾರಿ ಸುಧಾರಿಸಿದ ಮಹಾತ್ಮರು! ಷಟಸ್ಥಲ ತತ್ವ ಸಿದ್ಧಾಂತಕ್ಕೆ ಅವರ ನಡೆಯೇ ನಿದರ್ಶನ ಅವರ ನುಡಿಗಡಣವೇ ಪರಮ ವೇದವು.

"ಬಸವಣ್ಣನವರು ಮಾನವತೆ ಅಳಿಯುವದನ್ನು ತಡೆದು ಉಳಿಸಿದ ಮಹಾನುಭಾವರು! ಸಿರಿ-ಬಡತನಗಳು ನೆರೆನೆರೆಯಲ್ಲಿ ಅಣಕವಾಡುತ್ತಿರುವದನ್ನು ವಿದ್ಯಾ-ಜ್ಞಾನಗಳು ಕೆಲವರಿಗೆ ಸೊತ್ತಾಗಿರುವದನ್ನು, ಹಲವರನ್ನು ಕಾಲ್ಗಸಮಾಡಿ ಶೋಷಿಸಿ ಕೆಲವರೇ ಕೊಬ್ಬಿರುವದನ್ನು ನಿಗ್ರಹಿಸಿದ ವೀರರು! ಕುಲಗಳ ಕೋಲಾಹಲದಲ್ಲಿ ದೇಗುಲ ಪೂಜಾ ವಿಧಾನಗಳಲ್ಲಿ ನಡೆವ ಶೋಷಣೆ ತಡೆದ ಪರಮ ಕರುಣಾಳು! ಸಮತೆಯ ನೀತಿಯ ನಿರ್ಮಿಸಿ, ಶಾಂತಿ-ಸುಖ ಸಂತಸಗಳನ್ನು ಸರ್ವರಿಗೂ ಒದಗಿಸಿದ ಮಹಾತ್ಮರು.

ದೀನ ದರಿದ್ರರ ಕಣ್ಣೊರಿಸಿದ ಪರಮಾಂತಃ ಕರುಣಿ
ಸೋದರಿಯರಿಗೂ ಜ್ಞಾನಸ್ವತಂತ್ರತೆ ನೀಡಿದ ವೀರಮಣಿ
ಭಕುತರ ಪಾಪವ ಕ್ಷಾಲನಗೊಳಿಸಿದ ವರಗಂಗಾಧಾರಿ
ಇಹ-ಪರಗಳನೊಂದಾಗಿಸಿ ಬೆಳಗಿದ ಪರತರ ಸಂಸಾರಿ
ಶ್ರೀ ಬಸವೇಶಂ, ಪ್ರಥಮವರೇಣ್ಯಂ, ಶ್ರೀ ಬಸವೇಶಂ ಪರಮಾಚಾರ್ಯಂ
ಶ್ರೀ ಬಸವೇಶಂ ಪ್ರಣವಾಕಾರಂ, ಶ್ರೀ ಬಸವೇಶಂ ಶಿವಮತಸಾರಂ
ಶ್ರೀ ಬಸವೇಶನ ನಡೆನುಡಿ ಜೀವನ, ತತ್ವನಿದರ್ಶನ.

ಬಸವಣ್ಣ ಕರಸ್ಥಲದ ಬ್ರಹ್ಮ ಬಸವಣ್ಣ ಸರ್ವಾಚಾರ ಸಂಪನ್ನ ಬಸವಣ್ಣನ ಹಾಸಿಕೊಂಡು, ಬಸವಣ್ಣನ ಹೊದ್ದುಕೊಂಡು, ಬಸವಣ್ಣನ ಸುತ್ತಿಕೊಂಡು, ಬಸವಣ್ಣನ ಧರಿಸಿಕೊಂಡು ಬಸವಣ್ಣನ ಚಿದ್‌ಗರ್ಭದಲ್ಲಿ ಕುಳ್ಳಿರ್ದ್ದನಾಮು ಬಸವ,ಬಸವ, ಬಸವಾ! ಎನುತಿರ್ದೆನಯ್ಯಾ ಅಖಂಡೇಶ್ವರಾ

ಹೀಗೆ ಬಸವ ಭಾವದ ಆವೇಗದಿಂದ ಬಸವ ಮಹಿಮೆಯನ್ನು ಅರುಹಿ ಗುರು ಸ್ಮರಣೆಯಿಂದ ಮುಕ್ತಾಯಗೊಳಿಸಿ ಮಂಗಲಪಾಠ ಉದ್ಗರಿಸಿದಾಗ ಅದೇ ಭಾವದಲ್ಲಿ ಮೈಮರೆತು ಕುಳಿತಿದ್ದ ಆ ಮಹಾಜನ ಎಚ್ಚತ್ತು ಅವನೊಡನೆ ಜಯ ಘೋಷ ಮಾಡಿತು. ಬಸವ ಮೂರಕ್ಷರ ಅವರ ತನುತ್ರಯದಲ್ಲಿ ಬೆರೆದ ಯೋಗಮುದ್ರೆಯಲ್ಲಿ ಕ್ಷಣ ಹೊತ್ತು ಕಣ್ಮುಚ್ಚಿ ಕುಳಿತು, ಬಳಿಕ ಬಸವ ಲಿಂಗಾರ್ಯರಿಗೆ ನಮಸ್ಕರಿಸಿ ಭಕ್ತಸಮುದಾಯಕ್ಕೆ ತಲೆಬಾಗಿ ಕೈಮುಗಿದರು.


ನಿರುಪಮ ಬಸವಣ್ಣನವರ ನಿರಾಳ ಬೆಳಗಿನಲ್ಲಿ ನಿರಂತರ ಬೆಳಗುತ್ತಿರ್ಪ ಶ್ರೀ ಷಣ್ಮುಖಶಿವಯೋಗಿಗಳೇ ಬಸವಣ್ಣನವರ ಕುರಿತು ಹೇಳಬೇಕು ಮತ್ತಾರೂ ಅಲ್ಲ! ಎಂದು ಬಸವಲಿಂಗಾರ್ಯರು ಉದ್ಗಾರ ತಗೆದು ಪ್ರತಿ ವಂದನೆಗಳಿಂದ ಅವರನ್ನು ಸನ್ಮಾನಿಸಿದರು. ತರುಣಯೋಗಿಯ ಶಿವತೇಜವನ್ನು ಕಂಡು ಅಮೋಘವಾಣಿಯನ್ನು ಕೇಳಿ, ಬೆರಗಾದ ಭಕ್ತಜನರು ಉಭಯ ಶ್ರೀಗಳನ್ನು ವಂದಿಸಿ ನಡೆದರು.

ಷಣ್ಮುಖ ಶಿವಯೋಗಿ ತಮ್ಮ ಸಂಚಾರವನ್ನು ಮುಂದುವರೆಸಿದರು. ಕಲ್ಯಾಣಕ್ಕೆಂದು ಹೊರಟರು. ಕಲ್ಯಾಣದ ದಯಾಹೀನ ಕೃತಿಗಳ ಅಸಹ್ಯ ನೋಟದ ಕತೆ ತಮ್ಮ ಗುರುಗಳನ್ನು ಹಿಂದೆಗಿಸಿದುದನ್ನು ಸ್ಮರಿಸಿ ಅಲ್ಲಿಯ ಜನರಿಗೆ ಶಿವಬೆಳಕೇ ಇಲ್ಲವೇ? ಅದನ್ನು ತೋರುವವರೇ ಇಲ್ಲವೇ? ತಿಳಿಯಬೇಕು ಇದನ್ನು? ಎಂದು ಗಟ್ಟಿಮನಸ್ಸಿನಿಂದ ಅತ್ತ ನಡೆದರು.


ಕೆಂಪು ಮೊರಡಿಗಳ ಪ್ರದೇಶದಲ್ಲಿ ಹರಡಿಕೊಂಡಿರುವ ಶರಣರ ಬಾಳಿನ ಪುಣ್ಯಾವಶೇಷಗಳನ್ನು ನೋಡಿ ಭಾವ ಪರವಶರಾದರು. ಅವೆಲ್ಲ ಕಾಡಾಗಿದ್ದವು. ಹಾಳಾಗಿದ್ದವು ಕೆಲವು ಅಳಿಸಿಯೂ ಹೋಗಿದ್ದವು ಆದರೂ ಅಲ್ಲಿಯ ಕಲ್ಲು ಮಣ್ಣುಗಳು ಐನೂರು ವರ್ಷಗಳ ಹಿಂದಿನ ಕತೆಯನ್ನು ಮೌನ ಮಾತಿನಿಂದ ಹೇಳುತ್ತಿದ್ದವು. ಮದಾಂಧರಾದ ಯವನರು ಧರ್ಮ ದ್ವೇಷದಿಂದ ಹಾಳುಗೆಡವಿದ ಪವಿತ್ರಸ್ಥಳಗಳಾದ ಗವಿಗಳನ್ನು ಮಠ-ಮಂಟಪಗಳನ್ನು ನೋಡುತ್ತ ಹಿಂದಿನದನ್ನು ನೆನೆಸಿ, ಧ್ಯಾನಿಸಿ, ಭಾವಿಸಿ ದುಃಖಾನಂದಗಳ ಮಿಶ್ರಾನುಭವದಲ್ಲಿ ಮೂಕರಾಗಿ ನಿಲ್ಲುತ್ತ ಕೆಲವೇದಿನ ಅಲ್ಲಿದ್ದರು. ಹಾಳು ನಗರದಲ್ಲಿ ಅಳಿದುಳಿದು ಶಿವಭಕ್ತರ ಮನೆತನಗಳು ಕೆಲವು ಮಾತ್ರ ಇದ್ದವು. ಬೇರೆ ಕಡೆಯಿಂದ ಬರುವ ಜಂಗಮ ದರ್ಶನ ಅವರಿಗೆ ಅಪರೂಪ. ಷಣ್ಮುಖ ಶಿವಯೋಗಿಗಳನ್ನು ಕಂಡು ಶಿವನೆಂದೇ ಭಾವಿಸಿ, ಪೂಜಿಸಿ, ಕಂತೆ ಬಿಕ್ಷೆ ಮಾಡಿ ಆಭಕ್ತರ ಧರ್ಮಾಚಾರದ ಮೇಲೆ ಮುಸುಕಿದ ಅಜ್ಞಾನದ ಧೂಳ ಝಾಡಿಸಿ ಅವರ ಶಿವಕ್ರಿಯೆ-ಶಿವಜ್ಞಾನಗಳನ್ನು ಉಜ್ವಲಗೊಳಿಸಿದರು. ಆ ಪ್ರಾಂತದ ಉಳಿದ ಗ್ರಾಮಗಳಿಗೆ ದರ್ಶನ ನೀಯಲು ಹೊರಟರು. ಅಲ್ಲಲ್ಲಿ ಮಹಮ್ಮದೀಯರದೇ ಪ್ರಭುತ್ವ.

ತಾಂಬಾಳದಲ್ಲಿ

ಕಲ್ಯಾಣದಿಂದ ಐದುಮೈಲುಗಳಂತರದಲ್ಲಿ ತಾಂಬಾಳ ಎಂಬ ಗ್ರಾಮ. ಆ ಊರು ಜಹಾಗೀರದಾರ ನಿಜಾಮ ಅಲಿಬುವಾ ಎಂಬವನು. ತಾಂಬಾಳದ ಪಕ್ಕದಲ್ಲಿ ಕಲ್ಲುಕುಟುಕ ಹಳ್ಳಿಯ ಸುಂದರ ದಿಬ್ಬದ ಮೇಲೆ ವನದ ಮಧ್ಯದಲ್ಲಿ ಶಿವಯೋಗಿ ತಮ್ಮ ಲಿಂಗೋಪಾಸನ ಗೈಯುತ್ತ ನಿಂತರು.



ಶ್ರೀ ಷಣ್ಮುಖ ಶಿವಯೋಗೀಶ್ವರ ಹೈಸ್ಕೂಲ ತಾಂಬಾಳ (ಮಹಾರಾಷ್ಟ್ರ)



ಶ್ರೀ ಷಣ್ಮುಖ ಶಿವಯೋಗಿಗಳ ಶಿವಯೋಗಾಶ್ರಮ (ಕೆರೆಮಧ್ಯದಲ್ಲಿ ತಾಂಬಾಳ ಮಹಾರಾಷ್ಟ್ರ)



ಶ್ರೀ ಮ. ನಿ. ಪ್ರ. ಶಾಂತಲಿಂಗ ಮಹಾಸ್ವಾಮಿಗಳು ತಾಂಬಾಳದ
ಶ್ರೀ ಷಣ್ಮುಖ ಶಿವಯೋಗಿ ಶ್ರೀ ಮಠದ ಭಕ್ತರೊಡನೆ

ಮುಸ್ಲೀಮರು ಸಹಿತ ಬಹುಜನರು ದರ್ಶನಕ್ಕೆ ಬರುತ್ತಿದ್ದರು. ನಿಜಾಮ ಅಲಿಗೆ ಇದು ಸಹನವಾಗಲಿಲ್ಲ. ಶಿವಯೋಗಿಯ ವಿಷಯದಲ್ಲಿ ವಿಷ ಭಾವನೆ ತುಂಬಿಕೊಂಡು ಹಿಂದೂ ಮುಸ್ಲೀಮ ಭೇದದ ಗಾಳಿಯನ್ನೆಬ್ಬಿಸಿ ಮುಸ್ಲಿಮರ ಮನಸ್ಸು ಕೆಡಿಸಿದನು. ಶಿವಯೋಗಿಯನ್ನು ಓಡಿಸುವ ಹುಚಿಕೆ ಹಾಕಿದನು. ತನ್ನ ಬಾಲಬುಡಕ ಲಿಂಗಾಯತ ಗೆಳೆಯನೊಬ್ಬನ ಕೈಯಲ್ಲಿ ಮುಚ್ಚಿ ಮಾಂಸವನ್ನು ಕೊಟ್ಟು ಸ್ವಾಮಿಗಳ ಲಿಂಗ ನೈವೇದ್ಯಕ್ಕೆ ಕಳುಹಿಸಿದನು. ಸ್ವಾಮಿಗಳು ಅದನ್ನು ತೆರೆದಾಗ ಅದು ದಾಸಾಳದ ಹೂವಾಗಿತ್ತು. ಇದನ್ನು ಕೇಳಿ ಅಲಿಬುವಾನ ಮನಸ್ಸು ಮತ್ತಿಷ್ಟು ಮತ್ಸರದಿಂದ ಕುದಿಯಿತು. ಇದೆನೋ ಮೋಸವೆಂದು ಸ್ವಜಾತಿಯವರಿಗೆ ಹೇಳಿದನು. ಮತ್ತೆ ಸ್ವಾಮಿಯ ಮುಖಭಂಗ ಮಾಡುವ ಸಮಯಕ್ಕೆ ಕಾದು ಕುಳಿತನು. ಒಮ್ಮೆ ಕೆರೆಯ ದಂಡೆಯ ಮೇಲೆ ಒಂದು ಆಕಳು ಸತ್ತು ಬಿದ್ದಿತ್ತು. ಅಲಿಗೆ ಒಂದು ಉಪಾಯ ಹೊಳೆಯಿತು. ಶಿವಯೋಗಿ ಸ್ನಾನಕ್ಕೆಂದು ಕೆರೆಗೆ ಬರುವ ಸಮಯಕ್ಕೆ ಅಲ್ಲಿ ಹೋಗಿ ನಿಂತನು. ಅವರನ್ನು ಕಂಡು "ಸ್ವಾಮಿಜೀ ನಿಮ್ಮಲ್ಲಿ ಖುದಾ ಇದ್ದರೆ ಈ ಆಕಳನ್ನು ಬದುಕಿಸಿರಿ ಎಂದು ಆಥ್ಯತೆಯಿಂದ ನುಡಿದನು. ಅವನ ಇಂಗಿತ ಅರ್ಥವಾಯಿತು. ಸ್ವಾಮಿಗಳಿಗೆ ಕ್ಷಣಹೊತ್ತು ಕಣ್ಣು ಮುಚ್ಚಿ ಗುರುಪಾದ ಸ್ಮರಿಸಿ ಲಿಂಗಕ್ಕೆ ನಮಿಸಿ ಸದ್ಭಾವದ ಸತ್ಯವನ್ನು ಹಣಕೆ ಹಬ್ಬಿ ಕಮಂಡಲದ ಮಂತ್ರೋದಕವನ್ನು ಗೋವಿನ ಮೇಲೆ ಚಿಮುಕಿಸಿ ಗೋಣು ಹೊರಳಿಸಿ ಬಾಯಿಯಲ್ಲಿ ಹಾಕಿದರು. "ಏಳಮ್ಮಾ" ಎಂದು ಕೈ ಎಳೆದರು. ಆಕಳು ಕಾಲೆಳೆದು ಮಡಚಿ ಎದ್ದು ನಿಂತಿತು, ಅಲಿಬುವಾ ಬೆಪ್ಪಾಗಿ ನಿಂತನು. ಅವನ ಮದ ಇಳಿದು ಹೋಗಿತ್ತು. ಬಾಗಿ ಕುರ್ನಿಸಾತ ಮಾಡಿ ಕ್ಷಮೆ ಕೇಳಿಕೊಂಡನು. ಪ್ರಸನ್ನ ಶಿವಯೋಗಿ

ಒಳಗೆ ಕುಟಿಲ, ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬವರ
ಒಲ್ಲನೊಲ್ಲನಯ್ಯ, ಲಿಂಗವು!
ಅವರು ಸತ್‌ಪಥಕ್ಕೆ ಸಲ್ಲರು ಸಲ್ಲರಯ್ಯಾ
ಒಳಹೊರಗೊಂದಾಗದವರಿಗೆ ಅಳಿಯಾಸೆದೋರಿ
ಬೀಸಾಡುವನವರ ಜಗದೀಶ ಕೂಡಲ ಸಂಗಮದೇವ!

ವಚನ ಪಠಿಸುತ್ತ ಸ್ನಾನಕ್ಕೆ ಹೋದರು. ಅಲಿಬುವಾ ಮನೆಗೆ ಬಂದನು. ಅವನು ಇರುಳೆಲ್ಲಾ ಯೋಚಿಸಿ ಒಂದು ನಿರ್ಣಯಕ್ಕ ಬಂದನು. ಮರುದಿನ ಶಿವಯೋಗಿಗಳ ಅಡಿಗೆ ಪೊಡವಿಟ್ಟು ತನಗೂ ತನ್ನ ಕುಟುಂಬಕ್ಕೂ ಶಿವದೀಕ್ಷೆ ಮಾಡಿ ಲಿಂಗಧಾರಣೆ ಮಾಡಬೇಕೆಂದು ಪ್ರಾರ್ಥಿಸಿ ಅವನ ಹೃದಯ ಶುದ್ಧಿವಾದುದನ್ನು ಆತ್ಮತೃಷೆಯ ತೀವ್ರತೆಯನ್ನೂ ಅರಿತು ಶಿವಯೋಗಿಗಳು ಅವನ ಇಚ್ಛೆಯನ್ನು ಪೂರೈಸಿದರು.

ತಾಂಬಾಳದಲ್ಲಿ ತುಕಾರಾಮ ಪರಸು ಸಜ್ಜನ ಭಕ್ತ ಬಡವ ಅವನ ಹೆಂಡತಿ ಪರಮ ಶಿವಭಕ್ತೆ ! ಶ್ರೀಗಳು ಅವರ ಮನೆಗೆ ಕಂತೆ ಭಿಕ್ಷೆಗೆ ಬಂದರು. ಸತಿ ಇದ್ದದ್ದೊಂದು ರೊಟ್ಟಿಯನ್ನು ಮಕ್ಕಳ ಹಸಿವೆಯ ಪರಿವೆ ಇಲ್ಲದೆ ಜಂಗಮವರನ ಜೋಳಿಗೆಗೆ ನೀಡಿ ನಮಿಸಿದಳು. ಒಳಗೆ ನೋಡಲು ಬುಟ್ಟಿಯಲ್ಲಿ ರೊಟ್ಟಿ ಇತ್ತು. ಮತ್ತೆ ಅದನ್ನು ತಂದು ನೀಡಿದಳು. ತಿರುಗಿ ನೋಡಿದಾಗ ಮತ್ತೂ ಇತ್ತು. ಆಶ್ಚರ್ಯವಾದರೂ ಶಿವನ ಪ್ರಸಾದ ಶಿವನಿಗೆ ಸಲ್ಲಲಿ ಎಂದು ಅದನ್ನು ತಂದು ಅರ್ಪಿಸಿದಳು ಆದಾದರೂ ಮಕ್ಕಳಿಗಿರಲಿ ಎಂದು ನೆನೆಸಲಿಲ್ಲ. ಹಾಗೆಯೇ ನಾಲ್ಕನೆಯ ಸಲ ನೀಡಿದಾಗ ಶಿವಯೋಗಿ "ಅಮ್ಮಾ! ಶಿವನಿಗೆ ನಿನ್ನ ಭಕ್ತಿಯಿಂದ ತೃಪ್ತಿಯಾಗಿದೆ ಇದೋ ಇದು ಶಿವನ ಕರುಣೆಯ ಪ್ರಸಾದ ಎಂದು ಜೋಳಿಗೆಯಿಂದ ಒಂದು ರೊಟ್ಟಿಯನ್ನು ತೆಗೆದು ಆ ತಾಯಿಯ ಉಡಿಗೆ ನೀಡಿದರು. ಬುಟ್ಟಿಯಲ್ಲಿ ಅವರೆಲ್ಲರಿಗೂ ಸಾಲುವಷ್ಟು ರೊಟ್ಟಿಗಳಿದ್ದವು. ಈ ವಾರ್ತೆ ಕೇಳಿದ ಜನ ಆಶ್ಚರ್ಯಗೊಂಡರು. ಅದೇನೋ ಶಿವನ ಲೀಲೆ ಅದರಗೊಡವೆ ನಮಗೇಕೆ?" ಎಂದು ತುಕಾರಾಮ ಪರಸುಗೆ ನಿರಹಂಕಾರಯಾಗಿಯೇ ಇದ್ದನು.

ಪುನರ್ಜನ್ಮ ಪಡೆದ ಆ ಹಸು ಶಿವಯೋಗಿಗಳ ಹತ್ತಿರ ಬಂದು ಕರೆದ ಹಾಲು ಅವರ ಲಿಂಗಾರ್ಪಿತಕ್ಕೆ ಸಲ್ಲುತ್ತಿತ್ತು. ಶಿವಯೋಗಿ ಸ್ನಾನ ಮಾಡುತ್ತಿದ್ದ ಕೆರೆಗೆ

ಹೀಗೆ ತಾಂಬಾಳದಲ್ಲಿ ಕೆಲವು ದಿವಸ ಇದ್ದು ಷಣ್ಮುಖಸ್ವಾಮಿ ಅಲ್ಲಿಯ

ಭಕ್ತರಿಗೆ ಅಂಧಶ್ರದ್ಧೆಯ ಆಚಾರವನ್ನು ಬಿಡಿಸಿ ಒಳ್ಳೆಯ ಶೀಲವನ್ನು ಭೋದಿಸುತ್ತ.

ಶಿವನೇ ಗುರುವೆಂದು, ಗುರುವಿಂಗೆ ತನುವನರ್ಪಿಸಿ
ಶಿವನೇ ಲಿಂಗವೆಂದು, ಲಿಂಗಕ್ಕೆ ಮನವರ್ಪಿಸಿ
ಶಿವನೇ ಜಂಗಮನೆಂದು, ಜಂಗಮಕ್ಕೆ ಧನವನರ್ಪಿಸಿ

ಆ ಗುರುಲಿಂಗ ಜಂಗಮದ ಘನ ಪ್ರಸಾದವ ಪಡೆದು ನಿಜಮುಕ್ತಿಯು ನೈದಲರಿಯದ ನನ್ನ ಶೀಲ ಹೆಚ್ಚು ತನ್ನ ಶೀಲ ಹೆಚ್ಚೆಂದು, ಕುಲಸೂತಕ ಛಲಸೂತಕದಿಂದ ಒಬ್ಬರನೊಬ್ಬರು ಹಳಿದಾಡುವ ದುಶ್ಶೀಲವಂತರ ಮೆಚ್ಚುವನೇ ನಮ್ಮ ಅಖಂಡೇಶ್ವರ" ಎಂದು ಎಚ್ಚರಿಸಿದರು.

ಅವರ ಜಲಾಶಯ ಸಲ್ಲದು. ಈ ನೀರು ಪವಿತ್ರ ಎಂಬುದು ಅರ್ಪಿತಕ್ಕೆ ಆ ಬೆಳಸು ಸಲ್ಲದು ಇದು ಬೇಕು ಎಂಬುದು ಭವಿ ಕಾಣಬಾರದೆಂಬುದು ಇವೆಲ್ಲ ಶೀಲವೇ? ಅಂತರಂಗದ ಆರು ವೈರಿಗಳೆಂಬ ಭವಿಗಳು ಕಳೆಯಬೇಕು, ಅಷ್ಟಮದಗಳ ತ್ಯಜಿಸಬೇಕು ಮನವೆಂಬ ಕೊಡಕ್ಕೆ ಮಂತ್ರದ ಪಾವಡ ಮುಚ್ಚಿ ಬೆಜ್ಜಲವ ತಂದು ಚಿನ್ಮಯ ಲಿಂಗಕ್ಕೆ ಅಭಿಷೇಕವ ಮಾಡಬೇಕು. ಇದು ಶಿವನಿಗೆ ಸಲ್ಲುವ ಶೀಲವಾದೀತು.

ಗುರುವಿಗೆ ಅರ್ಪಿಸಿದ, ತನು ಗುರುವಾದುದೇ ಶೀಲ
ಲಿಂಗಕ್ಕೆ ಅರ್ಪಿಸಿದ, ಮನ ಲಿಂಗವಾದುದೇ ಶೀಲ
ಜಂಗಮಕ್ಕೆ ಅರ್ಪಿಸಿದುಧನ ಜಂಗಮವಾದುದೇ ಶೀಲ

ಅಖಂಡೇಶ್ವರನೆಂಟ ಪರಶಿವನು ತಾನೇ ಆಗಿ ಸುಳಿಯದೇ ಮಹಾಶೀಲ ನೋಡಿರಣ್ಣಾ ! ಹೀಗೆ ಅವರ ಬಾಹ್ಯಾ ವ್ಯವಹಾರ ನಿಷ್ಠೆಯನ್ನು ತೊಲಗಿಸಿ ಶುದ್ಧಾಂತರಂಗದ ಶಿವಾಚಾರಗಳನ್ನು ನೆಲೆಗೊಳಿಸಿದರು. ತಾಂಬಾಳದ ಜನರು ಈ ಲೀಲಾಮೂರ್ತಿಯ ಜ್ಞಾನ ಗುರುವೂ, ಆದ ಶಿವಯೋಗಿಗೆ ಕೃತಜ್ಞರಾಗಿ ಅವರಿಗೆ ಒಂದು ಮಹಾಮಂದಿರ ನಿರ್ಮಿಸಿ

ಅರ್ಪಿಸಿದರು. ಶಿವಯೋಗಿ ಅಲ್ಲಿ ನಿಲ್ಲಲಿಲ್ಲ. ಅದು ಈಗ ಅವರ ಹೆಸರಿನ ಅವ ರವಾಗಿದೆ. ಮಹಾರಾಷ್ಟ್ರದ ಗಡಿಯಲ್ಲಿ ಕನ್ನಡಿಗರ ಮಧ್ಯದಲ್ಲಿ ಕನ್ನಡ ನಾಡಿನ ಸಂತರ ಸ್ಮಾರಕವಾಗಿ ಧ್ವಜವೆತ್ತಿದೆ.

ಷಣ್ಮುಖ ಶಿವಯೋಗಿಗಳು ಕಲ್ಯಾಣ ನಾಡಿಗೆ ಇನ್ನೂ ಹಲವು ಗ್ರಾಮಗಳಲ್ಲಿ ಸಂಚರಿಸಿ ದರ್ಶನವಿತ್ತುದರ ಕುರುಹುಗಳು ಕಂಡುಬರುತ್ತಿವೆ. ಅಲ್ಲೆಲ್ಲ ತಾವು ದೊರಕಿಸಿದ ಸಂಗತಿಗಳನ್ನು ಪಡೆದ ಅನುಭವಗಳನ್ನು ಹೊರ ಹೊಮ್ಮಿದ ಶಿವನ ಆಟಗಳನ್ನು ಮನದಲ್ಲಿ ಅರಗಿಸಿಕೊಳ್ಳುತ್ತ ನಡೆದಂತೆ ಈ ಸಂಸ್ಕಾರವು ಸಾಹಿತ್ಯ ರಚನೆಗೆ ಪ್ರೇರಣೆಯನ್ನುಂಟು ಮಾಡುತ್ತಿತ್ತು. ಈಗಾಗಲೇ ಸ್ವಾಮಿಗಳು ಲೌಕಿಕ, ಪಾರಮಾರ್ಥಿಕ ವಿಚಾರಗಳ ವಚನಗ ಳನ್ನು ಅಖಂಡೇಶ್ವರ ಅಂಕಿತದಲ್ಲಿ, ರಚಿಸತೊಡಗಿದ್ದರು. ತಮ್ಮ ಉಪದೇಶ ದಲ್ಲಿ ಪೂರ್ವದ ಶರಣರ ವಚನಗಳೊಡನೆ ತಮ್ಮ ವಚನಗಳನ್ನೂ ಬಳಸಿ ಹೇಳುತ್ತಿದ್ದರು. ಹುಮನಾಬಾದದ ವಸಂತ ಮಾಣಿಕ ಪ್ರಭುವಿನ ಇಚ್ಛೆ ಯಂತೆ ತಮ್ಮ ನೂತನ ವಚನ ರಸದಿಂದ ಅವರನ್ನು ತೃಪ್ತಿ ಪಡಿಸಿದರು. ಅಲ್ಲಿಂದ ಜೇವರಗಿಗೆ ಬಂದು ಗುರುಸನ್ನಿಧಿಗೆ ಪೊಡಮೊಟ್ಟು ತಮ್ಮ ಸಂಚಾ ರದ ವಿವರ ಅರಿಕೆಗೊಳಿಸಿದರು. ಗುರುಗಳ ನಿತ್ಯ ಲಿಂಗಾನಂದದ ಯೋಗ ಕ್ಷೇಮ ತಿಳಿದು ಸಂತೋಷಪಟ್ಟರು. ಮತ್ತೆ ಅವರ ಆಶೀರ್ವಾದ ಪಡೆದು ದಕ್ಷಿಣಕ್ಕೆ ದೂರದ ಪ್ರಯಾಣ ಕೈಕೊಂಡರು. ಕ್ಷೇತ್ರ ಯಾತ್ರೆ ಮಾಡುತ್ತ ಹಲವಾರು ತಿಂಗಳಿಗೆ ರಾಮೇಶ್ವರಕ್ಕೆ ಬಂದರು. ಅಲ್ಲಿ ಅನುಷ್ಠಾನ ಗೈದರು. ರಾಮೇಶ್ವರದಲ್ಲಿ ಇರುವವರೆಲ್ಲ ಶೈವ ಮತಾನುಯಾಯಿಗಳು. ಅರ್ಥವಿಲ್ಲದ ವೈಭವದ ಶಿವಪೂಜಕರು. ಈ ವೀರಶೈವ ಸಲಕ್ಷಣದ ಶಿವ ಯೋಗಿಗೆ ಮಾರು ಹೋದರು. ಅವರ ಕ್ರಿಯಾ ಜ್ಞಾನಗಳ ಪ್ರಭೆಗೆ ಒಲಿದು ಗುಂಪು ಗುಂಪಾಗಿ ಬಂದು ವಂದಿಸಿ ದರ್ಶನ ಪಡೆದು ಶಿವಗೋಷ್ಠಿ ಗಳನ್ನು ನಡೆಸಿದರು. ತಮ್ಮ ಆಚಾರ ವಿಚಾರಗಳಲ್ಲಿಯ ಲೋಪದೋಷಗ ಳನ್ನು ತಿಳಿದುಕೊಂಡರು. ಸ್ವಾಮಿಗಳವರಿಗೆ

ಧರ್ಮಾರ್ಥವಾಗಿ ದೀಕ್ಷೆಯ ಮಾಡಬೇಕಲ್ಲದೆ,
ಆಶಾರ್ಥವಾಗಿ ದೀಕ್ಷೆಯ ಮಾಡಲಾಗದಯ್ಯಾ
ಜ್ಞಾನಾರ್ಥವಾಗಿ ಶಾಸ್ತ್ರವನ್ನೋದಬೇಕಲ್ಲದೆ
ವಾದಾರ್ಥವಾಗಿ ಶಾಸ್ತ್ರವನೋದಲಾಗದಯ್ಯಾ,
ಮೋಕ್ಷಾರ್ಥವಾಗಿ ಶಿವಪೂಜೆಯ ಮಾಡಬೇಕಲ್ಲದೆ,
ಡಂಭಾರ್ಥವಾಗಿ ಶಿವಪೂಜೆಯ ಮಾಡಲಾಗದಯ್ಯಾ
ಶಿವನೊಲಿಸುವ ಭಾವನರಿಯದೆ ಸಂತೆಯ ಪಸಾರದಂತೆ ಸರ್ವರೂ
ಮೆಚ್ಚಲೆಂದು ಹಾರೈಸಿ, ಹರಹಿಕೊಂಡು ಮಾಡುವ ಡಂಭಕನ ಪೂಜೆ
ಶಿವನಿಗೆ ಮುಟ್ಟಲರಿಯದು ನೋಡಾ

ಮುಂತಾಗಿ ಸಾಧನ ರಹಸ್ಯವನ್ನು ಅರುಹಿದರು. ಆ ಎಲ್ಲ ಶೈವರು ಸ್ವಾಮಿಗಳ ಪಾದಕ್ಕೆ ಮಣಿದು ಅವರಿಂದ ವೀರಶೈವ ದೀಕ್ಷೆ ಪಡೆದು ಇಷ್ಟ ಲಿಂಗಧಾರಿಗಳಾದರು.

ಸ್ವಾಮಿಗಳು ಮಧುರೆಗೆ ಬಂದು ಮೀನಾಕ್ಷಿಯ ಭವ್ಯ ದೇವಾಲಯದ ಭಾಗದಲ್ಲಿ ತಪೋನುಷ್ಠಾನ ಗೈಯುತ್ತಿದ್ದರು. ಒಂದು ದಿನ ದೇವಿಯ ಮೇಲಿನ ರತ್ನಾಭರಣಗಳನ್ನು ಪೂಜಾರಿಯೇ ಕದ್ದು ಅಪರಾಧವನ್ನು ಈ ಶಿವಯೋಗಿಯ ಮೇಲೆ ಹೊರಸಿದನು. ಆಡಳಿತಗಾರರು ಬಂದು ನಿಜವನ್ನರಿಯದೇ ಈ ಸ್ವಾಮಿಯನ್ನು ಒಂದು ಕೋಣೆಯಲ್ಲಿ ಸೆರೆ ಹಾಕಿದರು. ಶಿವಯೋಗಿ ಶಾಂತಚಿತ್ತದಿಂದ ಷಡಕ್ಷರ ಮಂತ್ರ ಜಪದಲ್ಲಿದ್ದರು. ಈ ಪೂಜಾರಿಯ ಕಣ್ಣು ಕುರುಡಾದವು ಕಾಲು ಹೋದವು ಅವನ ಬಳಗವೆಲ್ಲ ನೆರೆದಿತ್ತು ಆಗ ಮಿನಾಕ್ಷಿದೇವಿ ಆ ಎಲ್ಲ ಆಭರಣಗಳನ್ನು ಧರಿಸಿಕೊಂಡು ಎದ್ದು ಬಂದು ಸೆರೆಯ ಬಾಗಿಲು ತೆಗೆದು ಲಿಂಗಾರ್ಚನೆಯಲ್ಲಿದ್ದ ಶಿವಯೋಗಿಯ ಸೇವೆ ಮಾಡಿ ತಾನೂ ತೀರ್ಥಪ್ರಸಾದ ಸ್ವೀಕರಿಸಿದಳು. ತಮಗೆ ನೋವು ಮಾಡತಿಳಿಸಿದವರನ್ನೆಲ್ಲ ಕ್ಷಮಿಸಿ ಷಣ್ಮುಖ ಸ್ವಾಮಿಗಳು ಅಲ್ಲಿಂದ ಮುಂದೆ ಪ್ರಯಾಣ ಮಾಡಿದರು.

ಅವರು ಕನ್ಯಾಕುಮಾರಿಯ ವರೆಗೆ ಹೋಗಿ ಮರಳಿ ಕುಂಭಕೋಣ, ಕಂಚಿ. ಬೇಲೂರು, ಹಳೆಬೀಡ-ಗಳಲ್ಲಿ ಸುಂದರ ಕಲಾದೃಷ್ಟಿಯನ್ನು ಕಂಡು ಆನಂದಿಸುತ್ತ ಶ್ರೀಶೈಲಕ್ಕೆ ಬಂದರು, ಅಖಂಡೇಶ್ವರನ ಧ್ಯಾನ, ಜ್ಞಾನ, ಯೋಗದಲ್ಲಿ ತೃಪ್ತಿಪಡೆದು ಹಂಪಿಗೆ ಬಂದರು. ಅಲ್ಲಿ ವಿರುಪಾಕ್ಷನ ಮಹಾ ಮಂದಿರದಲ್ಲಿ ಅನುಷ್ಠಾನಗೈಯುತ್ತ ಶಿವಯೋಗಲೋಲರಾಗಿದ್ದರು ಈ ಅಖಂಡ ಅನುಭವವನ್ನು ವಚನದಲ್ಲಿ ಎರಕ-ಗೊಳಿಸುವ ಆಶೆ ತವಕಗೊಳ್ಳು ತ್ತಿತ್ತು. ಒಂದು ದಿನ ಸ್ವಪ್ನದಲ್ಲಿ ವಿರುಪಾಕ್ಷನು ಪಾವನ ಜಂಗಮ ಮೂರ್ತಿ ಯಾಗಿ ಸಮ್ಮುಖದಲ್ಲಿ ನಿಂತನು.

"ಅಯ್ಯಾ ಷಣ್ಮುಖಾರ್ಯ, ನಿನ್ನ ಅನುಭವವನ್ನು ವಾಙ್ಮಯದಲ್ಲಿ ರೂಪಿಸುವ ಭಾಷಾಶಕ್ತಿ ನಿನಗಿದೆ, ಬಲವಿದೆ, ಈಗಾಗಲೇ ಅದರತ್ತ ಹೆಜ್ಜೆ ಇಟ್ಟಿರುವೆ ಅನುಮಾನಿಸಬೇಡ, ಹಿಂಜರಿಯಬೇಡ, ಮಾನವರ ಉದ್ಧಾರಕ್ಕೆ ಅನುಭವದ ಆಶ್ರಯದಲ್ಲಿ ಮೂಡಿಕೊಂಡ ಅರಿವನ್ನು ಕ್ರಿಯಾ ಜ್ಞಾನ ಸಾಧನೆಯ ಸ್ವರೂಪವನ್ನು ಸಹಿತ ವಚನಗಳಲ್ಲಿರಿಸಿ ನಿನ್ನ ಗುರುವಿಗೆ ಮುಡುಪಾಗಿಸು ಆವಚನ ಸಂಗ್ರಹ ಶತಶತಮಾನಗಳಲ್ಲಿ ಜನಜೀವನವನ್ನು ಬೆಳಗುವದು. ನೀನು ಇದರಿಂದ ಮರ್ತ್ಯಕ್ಕೆ ಬಂದ ಮಣಿಹಮೂರ್ತಿಯಾಗಿ ಪೂರೈಸುವದು"ಎಂದು ಹರಕೆಯ ಹಸ್ತ ಎತ್ತಿ ಹರಸಿ ಮರೆಯಾದನು. ಷಣ್ಮುಖದೇವರಿಗೆ ಎಚ್ಚರಾಯಿತು. ತನು ಮೃದುವಾಗಿ ಮಾರ್ದವಗೊಂಡಿ ತ್ತು ಮನ ಆನಂದ ಜಲದಲ್ಲಿ ಮಿಂದತ್ತಿತ್ತು ಭಾವ ಅರಳಿ ಬೆಳಗಿತ್ತು ಕನಸಿನ ಆದೇಶವನ್ನು ಸ್ಮರಿಸಿದರು. ಗುರುವರ ಅಖಂಡೇಶ್ವರರ ಕೃಪೆಯಿಂದ ದೇಹ ಇರುವ ವರೆಗೂ ಲೋಕೋದ್ಧಾರವನ್ನೇ ಮಾಡೇನು, ವಚನಗಳನ್ನು ರಚಿ ಸೇನು ಇದು ಸತ್ಯ ಸಂಕಲ್ಪ ಎನ್ನುತ್ತ ತುಂಗಭದ್ರಾ ತೀರದಲ್ಲಿ ಸ್ನಾನ ಶಿವಾ ರ್ಚನೆಗೈದು ಮಳಲ ರಾಶಿಯಲ್ಲಿ ಕುಳಿತರು. ಮುಂದೆಋಶ್ಯ ಸೃಂಗದ ಶಿಖರ ಬುಡದಲ್ಲಿ ತುಂಗಭದ್ರ ಧಾವಿಸುತ್ತಿದ್ದಾಳೆ ಅಲ್ಲಿಯೇ ಚಕ್ರತೀರ್ಥ ಹತ್ತಿರ ಮಾತಂಗ ಶಿಖರ ಹಿಂದೆ ವಿರುಪಾಕ್ಷನ ಮಹಾಮಂದಿರ ಮೇಲೆ ಗಗನಾಂಬರ ನೋಡಿದತ್ತೆಲ್ಲ ಬಗೆದರೆ ಅಗಾಧ. ಅಗಮ್ಯ ಅನಂತಗಳು ನಮ್ಮನ್ನು

ಎಲ್ಲಿಯೂ ಬಯ್ದುಬಿಡುವ ಭಾವತುಂಬಿ ಬರುತ್ತಿದೆ ಈ ಭಾವದ ಆವೇಗದಲ್ಲಿ ಅನುಸಂಧಾನಗೈದು ಹೊಳೆದ ಮೊದಲ ವಚನ ಬರೆದದ್ದು ಹೀಗೆ

ನೀವು ನಿಮ್ಮ ಸ್ವಲೀಲೆಯಿಂದ
ಜಗದ ಲೀಲಾ ವೈಬವಂಗಳ ನಟಸಬೇಕೆಂದು ನಿಮ್ಮಲಿ ನೆನಹು ದೋರಲು
ಆನೆನಹು ನಿರ್ಧರಿಸಿ ಚಿತ್ತೆನಿಸಿತ್ತು
ಆ ಚಿತ್ ನಿಂದೆ ಚಿತ್‌ನಾದ ಚಿತ್ ಬಿಂದು ಚಿತ್ ಕಳೆಗಳೊಗೆದವು
ಆ ಚಿತ್‌ನಾದ ಚಿತ್ ಬಿಂದು ಚಿತ್ ಕಳೆ
ಆ ಮೂಲಚಿತ್ ಸಹಜವಾಗಿ ಗಟ್ಟಿಗೊಂಡು
ಅಖಂಡ ಗೋಳಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು.
ಆ ಮಹಾಲಿಂಗವೇ ಪಂಚಮುಖವ ನೈದಿಹ ಸದಾಶಿವನೆಂದೆನಿಸಿತ್ತು
ಆ ಸದಾಶಿವನಿಂದೆ ಬ್ರಹ್ಮ-ವಿಷ್ಣು-ರುದ್ರರೆಂಬ ತ್ರೈಮೂರ್ತಿಗಳುದಿಸಿದರು
ಆ ತ್ರೈಮೂರ್ತಿಗಳಿಂದ ಸ್ವರ್ಗ-ಮರ್ತ್ಯ-ಪಾತಾಳಂಗಳೆಂಬ
ತ್ರೈಲೋಕಂಗಳು ಜನಿಸಿದವು
ಆ ತ್ರೈಲೋಕಂಗಳ ಮದ್ಯದಲ್ಲಿ ಸಚರಾಚರ ಹೆಣ್ಣು-ಗಂಡು
ನಾಮರೂಪಕ್ರಿಯಾದಿ ಸಕಲ ವಿಸ್ತಾರವಾಯಿತ್ತು
ಇಂತಿವೆಲ್ಲವೂ ನಿಮ್ಮ ನೆನಹು ಮಾತ್ರದಿಂದಾದವಯ್ಯಾ ಅಖಂಡೇಶ್ವರಾ"

ಅಂದಿನ ದಿನವೆಲ್ಲ ಮೌನವಾಗಿ ಕುಳಿತು ವಿಚಾರಿಸುವದರಲ್ಲಿ ಕಳೆದರು. ಸ್ವಪ್ನದ ಮೂಲಕ ಬಂದ ಅಂತರಾತ್ಮನ ಆದೇಶದಲ್ಲಿ ಮಹತ್ತಾದ ಅರ್ಥ ವಿದೆ ನಾನು ಇದುವರೆಗೆ ನೂರಾರು ಕಡೆಗಳಲ್ಲಿ ಜೀವ ಪರಮರ ಅನು ಬಂಧ ಐಕ್ಯಗಳನ್ನು ಆದಕ್ಕೆ ಅನುಕೂಲವಾಗುವಂತೆ ಸಂಸಾರವ ಪರಿವರ್ತಿ ಸುವ ರೀತಿಯನ್ನು ಪ್ರಮಥರ ವಾಣಿಗಳ ನೆರವಿನಿಂದ ಭೋದಿಸುತ್ತ ಬಂದಿದ್ದೇನೆ. ಎಷ್ಟು ಅರಿವು ಉಂಟಾದೀತು ಅಲ್ಲಿಷ್ಟು ಆಗಿಷ್ಟು ಕೇಳಿದ್ದು ಮನದಲ್ಲಿ ಕರಿಗೊಂಡು ಉಳಿದೀತೆ! ಅಂಥವರಿಗೆ ಆಧ್ಯಾತ್ಮ ಸಾಹಿತ್ಯ ನಿರಂ ತರ ಸನ್ನಿಹಿತವಾಗಿರಬೇಕು. ಕಲ್ಯಾಣ ಶರಣರ ಕಾಲದಲ್ಲಿ ಆ ಮೇಲೆ

ನೂರೊಂದು ವಿರಕ್ತರ, ಬಳಿಕ ತೋಂಟದಾರ್ಯರ, ಕಾಲದಲ್ಲಿ ರಚಿತವಾದ ಧರ್ಮ ನೀತಿ-ತತ್ವಗಳನ್ನು ಪ್ರತಿಪಾದಿಸುವ ವಚನಗಳೇ ಇಂದು ನಮ್ಮ ಧಾರ್ಮಿಕ ಮುನ್ನಡೆಗೆ ಮಾರ್ಗವಾಗಿವೆ, ಬಲವಾಗಿವೆ, ಬೆಳಕಾಗಿವೆ. ಶ್ರೀಗುರು ಕೃಪೆಯಿಂದ ಲೋಕಾನುಭವದಿಂದ ಪಡೆದ ಜ್ಞಾನದ ತಿರುಳನ್ನು ವಚನಗಳಲ್ಲಿ ಪಿಂಗಡಿಸಿ ರಚಿಸಿ ಬರೆದ ಮುಮುಕ್ಷುಗಳ ಮುಂದಿಟ್ಟರೆ ಮಾನವ ಕುಲದ ಕಲ್ಯಾಣದ ಕಾರ್ಯದಲ್ಲಿ ಕಿಂಚಿತ್ತಾದರೂ ಸೇವೆ ನನ್ನಿಂದ ಸಲ್ಲಿದಂತಾದೀತು ಅಖಂಡೇಶ್ವರರ ಕೃಪೆಯ ವಲಯದಲ್ಲಿ ಪ್ರಶಾಂತವಾದ ಪ್ರತ್ಯೇಕ ಸ್ಥಳವಂದರಲ್ಲಿ ಇದ್ದು ಹೀಗೆ ವಚನಗಳನ್ನು ಕೈಕೊಳ್ಳಬೇಕು ಗುರುಗಳ ಆಶೀರ್ವಾದಕ್ಕಾಗಿ ಮೊದಲು ಜೇವರಿಗಿಗೆ ಹೋಗುವಾ !" ಎಂದು ನಿರ್ಧರಿಸಿದರು. ಮರುದಿನ ಜೇವರ್ಗಿಯನ್ನು ಕುರಿತು ಪ್ರಯಾಣ ಮಾಡಿದರು. ದಾರಿಯಲ್ಲಿ ಅವರ ಅನುಭವಾಮೃತ ಬಿಂದುಗಳು ಸಾಹಿತ್ಯದ ಸಾಲುಗಳಾಗಿ ಮನದಿನ ಮೂಡಿಬರುತ್ತಿದ್ದವು

ಓಂಕಾರವೆಂಬ ಮರಕ್ಕೆ ಷಟ್ ಕೃತಿ ಎಂಬ ಶಾಖೆ ಪಸರಿಸಿ,
ಷಡಕ್ಷರಗಳೆಂಬ ತಳಿರುಕೊನರಿ, ಷಟ್‌ಸ್ಥಳ ಸ್ಥಳಗಳೆಂಬ ಕುಸುಮ ಗಳಾಗಿ
ಷಡುಲಿಂಗಗಳೆಂಬ ಮೋಕ್ಷದ ಮಧುರ ಫಲಂಗಳ ತಳೆದಿರ್ಪುದು ನೋಡಾ
ಇದನು ನಾಮಸ್ಮೃತಿ ಗುರುಬಸವ ಸ್ವಾನುಭಾವಂಗಳಿಂದರಿದು
ಆ ಓಂಕಾರವೆಂಬ ವೃಕ್ಷವನೇರಿ
ಓಂ ನಮಃಶಿವಾಯ ಓಂ ನಮಃ ಶಿವಾಯ ಓಂ ನಮಃ ಶಿವಾಯ ಎಂದು
ಆ ಷಡುಲಿಂಗಗಳೆಂಬ ಮೋಕ್ಷದ ಮಧುರ ಫಲಂಗಳನು ಸವಿದು
ನಿತ್ಯ ತೃಪ್ತನಾದೆನಯ್ಯಾ ಅಖಂಡೇಶ್ವರಾ !

ಯೋಗಿ (ಜೋಗಿ) ಯ ಕೊಳ್ಳದಲ್ಲಿ

ವರಶಿಷ್ಯ ಷಣ್ಮುಖ ಯೋಗಿಯ ಸಂಚಾರ ವೃತ್ತಾಂತ ಕೇಳಿ ಪರಮ ಗುರು ಅಖಂಡೇಶ್ವರರ ಹೃದಯ ತುಂಬಿ ಬಂದಿತು. ಹೆಮ್ಮೆ ಎನಿಸಿತು.

ವಚನ ರಚನೆಯ ಸಂಕಲ್ಪ ತಿಳಿದು ಅವರ ಹರ್ಷ ಉಕ್ಕೇರಿತು. ಪಾದದಡೆಯಲ್ಲಿ ಕುಳಿತ ಶಿಷ್ಯೋತ್ತಮನನ್ನು ಭಾವುಗಳಿಂದ ಸೆಳೆದಪ್ಪಿ ಮುಂದೆಲೆಯ ನೇವರಿಸಿದರು. "ಕುಮಾರ ನಾನು ಮರ್ತ್ಯಕ್ಕೆ ಬಂದು ಯಾವ ಶಿವಕಾರ್ಯವನ್ನು ಉದ್ದೇಶಿಸಿದ್ದೇನೂ ಅದನ್ನು ನೀನು ಮೇರೆ ಮೀರಿ ಪೂರೈಸುವೆ ಲೌಕಿಕದಲ್ಲಿ ನನಗೆ ಕೀರ್ತಿ ತಂದೆ ಪಾರಮಾರ್ಥಿಕವಾಗಿ ಪರಮಾರ್ಥಿಕವಾಗಿ ಪರಮಾನಂದದಲ್ಲಿ ಮುಳುಗುವಂತೆ ಮಾಡಿದೆ ನಿನ್ನ ಶಿವಯೋಗ ಪರಿಣಿತ ಅಗಾಧವಾಗಿದೆ. ನಿನಗಿನ್ನು ನನ್ನ ಸಲಹೆ ಸೂಚನೆಗಳು ಅಗತ್ಯವಾಗಿಲ್ಲ. ನಿನಗೆ ಅರಿಕೆಯಾದಂತೆ ಮಾಡು ನಿನ್ನ ನುಡಿಯಲ್ಲಿ ಶಿವನನುಡಿ ಮಾಡಿದುದೆಲ್ಲ ಶಿವಕ್ರಿಯು. ನಿನ್ನ ವಾಣಿ ಪರಿಸ್ಫುಟವಾಗಿ ನೀನು ವಚನಗಳನ್ನು ರಚಿಸು ಅವು ಮುಂದಿನ ಮಾನವರಿಗೆ ನಿರಂತರ ದಾರಿದೀಪವಾಗುವವು. ಸಾಹಿತ್ಯ ಭಾಂಡಾರಗಳಲ್ಲಿ ರತ್ನಗಳಾಗುವವು ನಿನಗೆ ಎಲ್ಲಪ್ರಸನ್ನತೆಯೂ ಅಲ್ಲಿ ಇದ್ದು ಈ ಲಿಂಗ ತಪ ಮಾಡು ನನ್ನ ಅಂತಃಕರುಣಪೂರಕ ಆಶೀರ್ವಾದವಿದೆ" ಕಣ್ತುಂಬಿದ ಹರ್ಷಬಿಂದು ಉದುರುತ್ತಿದ್ದವು. ಗುರುಗಳ ಅಪ್ಪುಗೆಯಿಂದ ಎದ್ದು ಸಾಷ್ಟಾಂಗವಾಗಿ ಎರಗಿದರು.ಅವರ ಕಣ್ಣಲ್ಲೂ ಹರ್ಷಾಶ್ರು ಕೆಲಹೊತ್ತ ಗುರುಶಿಷ್ಯರು ಆನಂದದಲ್ಲಿ ಮೌನವಾಗಿದ್ದರು.

ಭೀಮಾನದಿಯ ಬಳಿಯಲ್ಲಿ ಒಂದು ಕೊಳ್ಳವಿದೆ. ಅದು ಜೇವರಗಿಗೆ ಆರು ಮೈಲು ದೂರ. ಅಲ್ಲಿ ಹರಿಯುವ ಚಿಕ್ಕಹಳ್ಳ ಭೀಮೆಯನ್ನು ಸೇರುತ್ತದೆ. ಕೊಳ್ಳದ ಎರಡೂ ಬದಿಗಳಲ್ಲಿ ಮೆದುಗಲ್ಲುಗಳ ಎತ್ತರ ವಲ್ಲದ ಗುಡ್ಡಗಳಿವೆ, ಹಸಿರು ಹುಲ್ಲಿನ ಹೊದಿಕೆ, ಕಾಡು ಹೂ ಬಳ್ಳಿಗಳು ಬಿಲ್ವ ಗಿಡಗಳು ಇತರ ಮರಗಳು ಇವುಗಳ ಶೋಭೆ ಮನೋಹರವಾಗಿತ್ತು. ಸಂಚಾರದ ಮೊದಲು ಷಣ್ಮುಖ ದೇವರು ಗುರುಸೇವೆಯಲ್ಲಿದ್ದಾಗ ಆಗಾಗ ಒಬ್ಬರೇ ಈ ಗಹನ ಸ್ಥಳಕ್ಕೆ ಬಂದು ನಿಸರ್ಗ ಸೌಂದರ್ಯವನ್ನು ಸ್ವಲ್ಪಹೊತ್ತು ಅನುಭವಿಸಿ ಆನಂದಿಸಿ ಮರುಳುತ್ತಿದ್ದರು, ಇದುಶಿವ ಚಿಂತನೆಗೆ ಅನುಕೂಲ ಸ್ಥಳವೆಂದು ಆಗಲೇ ಅರಿತುಕೊಂಡಿದ್ದರು ಸುಗಮವಾಗಿ ಅಡ್ಡಾಡಲು ಬರುವ ದಾರಿಯಿಲ್ಲದ್ದರಿಂದ ಜನಸಂಪರ್ಕ ತೀರಕಡಿಮೆ

ಈಗ ಈ ಕೊಳ್ಳವನ್ನೇ ಷಣ್ಮುಖ ಶಿವಯೋಗಿ ತಮ್ಮ ಏಕಾಂತ ವಿಪಿನವಾಗಿ ಆಯ್ದುಕೊಂಡರು. ತಾವೇ ಸ್ವಲ್ಪ ನೆಲ ಬಯಲು ಮಾಡಿಕೊಂಡು ಗುಡಿಸಲು ಹಾಕಿಕೊಂಡರು. ಅರ್ಧ ಮೈಲಿಗೆ ನದಿ ಅಲ್ಲಿಗೆ ಹೋಗಿ ಸ್ನಾನ ಮಾಡಿ ಬರುವರು, ಒಂದು ಮೈಲು ದೂರದಲ್ಲಿ ಕೋಳಕೂರು ಎಂಬ ಹಿರಿಯ ಗ್ರಾಮ ಅಲ್ಲಿಗೆ ಹೋಗಿ ಕಂತೆಯ ಭಿಕ್ಷೆ ಮಾಡಿಕೊಂಡು ಬರುವರು ಕೊಳ್ಳದಾಶ್ರಯದಲ್ಲಿ ಲಿಂಗಾನುಷ್ಠಾನ ಗೈದು ವಚನ ರಚನೆಗೆ ತೊಡಗಿದರು.

ಕಾಡಿನಲ್ಲಿ ಹಾಯ್ದು ಶಿವಯೋಗಿ ಸ್ನಾನಕ್ಕೆ ಬರುವದನ್ನು ನೋಡಿ ಕೊರಗಿದ ಭೀಮೆ ಅವರ ಸ್ವಪ್ನದಲ್ಲಿ ಕಾಣಿಸಿಕೊಂಡಳು " ಸ್ವಾಮಿ ಕಂಟಿ ಕಲ್ಲು ಮುಳ್ಳುಗಳಲ್ಲಿ ಹಾಯ್ದು ನನ್ನಲ್ಲಿಗೆ ಬರುವದೇಕೆ. ನಾಳೆ ಮುಂಜಾನೆ ಪಶ್ಚಿಮ ದಿಕ್ಕಿನ ಗುಡ್ಡ ದೊರೆಯ ಬಂಡೆಗಲ್ಲಿನ ಮೇಲೆ ನಿಲ್ಲು ನಿನ್ನ ಪಾದದ ಕೆಳಗೆ ಬಂಡಿ ಬಿರಿದು ನೀರಿನ ಸೆಲೆ ಹೊರಬರುವದು. ಅದಕ್ಕೂ ನನಗೂ ಭೇದವಿಲ್ಲ ಅದರಿಂದ ನಿನ್ನ ಸ್ನಾನ ಶಿವಕ್ರಿಯೆಗಳು ನೆರವೇರಲಿ " ಎಂದು ಬಯಲಾದಳು. ಹಾಗೆ ಶಿವಯೋಗಿಗೆ ಪ್ರತ್ಯಕ್ಷವಾದಳು ಆಶೆಲೆಗೆ ಮುಂದೆ ಗೋಮುಖವನ್ನು ಜೋಡಿಸಿದ್ದಾರೆ.

ನುಡಿಯಬೇಕು ಸತ್ಯ-ಸದಾಚಾರ ಉಳ್ಳವರೊಡನೆ ಅನುಭಾವವ,
ನುಡಿಯಬೇಕು ಭಕ್ತಿ-ಯುಕ್ತಿ-ಮುಕ್ತಿಯುಳ್ಳವರೊಡನೆ ಅನುಭಾವವ
ನುಡಿಯಬೇಕು ಸಾಧು ಸಜ್ಜನ ಸದ್ಭಕ್ತ ಶರಣರೊಡನೆ ಅನುಭಾವವ
ನುಡಿಯಬೇಕು ನಮ್ಮ ಅಖಂಡೇಶ್ವರ ಲಿಂಗವ
ಕೂಡಬೇಕೆಂಬ ಬಯಕೆಯುಳ್ಳವರೊಡನೆ ಶಿವಾನುಭಾವವ.

ಕೋಳಕೂರದಲ್ಲಿ ಬಸವಗೌಡ ಪ್ರಮುಖರಲ್ಲಿ ಮುಖ್ಯನು. ಔದಾರ್ಯ ಅತಿಥಿ ಸತ್ಕಾರಗಳಲ್ಲಿ ಹೆಸರಾಗಿದ್ದನು. ಶಿವಭಕ್ತಿ ಸಜ್ಜನತೆ ಜಾಣ್ಮೆ ಇವೆಲ್ಲ ಆವನ ಲೋಕ ಪ್ರೀಯತೆಗೆ ಕಾರಣವಾಗಿದ್ದವು. ನೀಲಮ್ಮ ಆವನ ನೆಚ್ಚಿನ ಮಡದಿ ಆಕೆ ಚೊಚ್ಚಿಲ ಗರ್ಭಧಾರಣೆಯಾಗಿದ್ದಳು. ಸಂಸಾರ ಏರಿಕೆಯ

ಲ್ಲಿತ್ತು. ಒಮ್ಮೆ ಬಾಗಿಲಲ್ಲಿ "ಗುರುಕಂಥಾಭಿಕ್ಷೆ" ಎಂಬದನಿ ಕೇಳಿತು, ತುಂಬ ಗರ್ಭಿಣಿ ಏಳಲಾರದುದಕ್ಕೆ ತಡೆದು ಒನ್ನಿರಿ ಎಂದಳು. ನೀಲಮ್ಮ ಗೌಡತಿ ಮುಂದಕ್ಕೆ ಬಂದು ಅವರು ಷಣ್ಮುಖಸ್ವಾಮಿ ಎಂಬುದನ್ನು ಗುರುತಿಸಲಿಲ್ಲ. "ಈ ಮನೆಯಲ್ಲಿ ಈ ಶಬ್ದವೇಕೆ ಬಂದಿತು ?" ಎಂದು ಸ್ವಾಮಿ ನೊಂದಾ ಶಾಂತ ಮನದಿಂದ ಮರಳಿ ಬಂದರು. ಈ ಜನರ ಹಂಗು ಬೇಡ ಎಂದು ಆ ಆಶ್ರಮದಿಂದ ಹೊರಟು ಮುದೆನೂರಿಗೆ ಹೋದರು.

ಮುದೆನೂರು ಕನ್ನಡ ಸಾಹಿತ್ಯದ ವಿಶೇಷಪ್ರಕಾರವಾದ ವಚನ ವಾಙ್ಮಯಕ್ಕೆ ಆದಿಪುರುಷ ದೇವರ ದಾಸಿಮಯ್ಯನ ಊರು. ಅವನ ಉನ್ನತಮಟ್ಟದ ವಚನಗಳು ಅಲ್ಲಿಯ ಮಠ ಮಾನ್ಯಗಳಲ್ಲಿ ಆಗೊಮ್ಮೆ ಈಗೊಮ್ಮೆ ಸಲ್ಲಿಸಲ್ಪಡುವದು. ಕಂಡುಬರುತ್ತಿತ್ತು ಆ ಶರಣರ ಅಧಿದೇವ ರಾಮನಾಥೇಶ ದೇವಾಲಯದಲ್ಲಿ ಷಣ್ಮುಖಶಿವಯೋಗಿ ಉಳಕೊಂಡರು ಇತ್ತ ಕೋಳಕೂರದಲ್ಲಿ ನೀಲಮ್ಮನ ಗರ್ಭ ತಡೆದು ನಿಂತಿತು. ಹೆರಿಗೆ ಆಗಲೇ ಇಲ್ಲ. ದಿನ ತುಂಬಿ ಎರಡು ತಿಂಗಳಾಯಿತು, ನಾಲ್ಕು ಆರು ತಿಂಗಳಾದವು, ವರ್ಷವೂ ಆಯಿತು. ಆ ಭಾರ ತಾಳಿ ತಾಳಿ ಮಹಿಳೆ ನರಳಬೇಕಾಯಿತು. ಗೌಡರಿಗೆ ತುಂಬಾ ಚಿಂತೆ ಜನರೂ ಏನೇನೊ ಆಡಹತ್ತಿದರು 'ಶಾಪ' ವಿರ ಬೇಕೆಂದರು. ಗರ್ಭದಲ್ಲಿ ಭೂತವಿರಬೇಕೆಂದು ಅವರಲ್ಲಿಯೇ ಒಳ್ಳೆಯವರು ಶಿವದ್ರೋಹವು ಉಂಟಾಗಿರಬೇಕೆಂದು ನುಡಿದರು. ಸಾಮಾನ್ಯನ ಸಂಸಾರ ತಪ್ಪಿದರೆ ಮಹತ್ವವಿಲ್ಲ. ಸುಶೀಲ ಭಕ್ತ ಸ್ವಲ್ಪ ತಪ್ಪಿದರೂ ದೊಡ್ಡ ಆಘಾತವಾಗುವದು. ವಿಚಾರಿಸಿರಿ ಎಂದು ಬಸವಗೌಡರಿಗೆ ಸಲಹೆ ನೀಡಿ ದರು. ಗೌಡ ಬುದ್ಧಿವಂತರಿರುವಲೆಲ್ಲ ಹೋಗಿ ಕೇಳಿದನು. ಹಲವು ಪೂಜ್ಯರ ಪಾದಗಳಿಗೆರಗಿ ಅರಿಕೆ ಮಾಡಿದನು. ಅವಳ ದೈವ ಯಾರಿಗೂ ತಿಳಿಯಲಿಲ್ಲ ಕೊನೆಗೆ ತನ್ನ ಸತಿಯನ್ನು ಏಕಾಂತದಲ್ಲಿ ಕರೆದು " ಸೃಷ್ಟಿಯ ನಿಯಮಕ್ಕೆ ಹೊರತು ನಿನ್ನ ಗರ್ಭ ತಡೆದುದೇಕೆ?" ಎನಲು ಮೊದಲೇ ಘಾಸಿಯಾಗಿದ್ದ ಮಡದಿ ಏನೂ ತಿಳಿಯದೇ ನಿಂತಳು "ಹೇಳು ಇದರ ಮೂಲವೇನು?"

"ಪತಿವ್ರತೆಯರ" ಮನನೋಡಿದೆಯಾ? ಗುರುಜಂಗಮರ ದೋಷಣೆಯು ಮಾಡಿದೆಯಾ? ಬಿಕ್ಷೆಗೆ ಬಂದ ಜಂಗಮರನ್ನು ನೀಡದೆ ಕಳಿಸಿದೆಯಾ? ಯಾವ ಪಾಪಕ್ಕಾಗಿ ಈ ಅವಸ್ಥೆ ಬಂದಿದೆ? ಪ್ರಶ್ನೆಗಳ ಸುರಿಮಳಿ ಮಾಡಿ ಕೇಳಿದ ಗಂಡ. ಕಡೆಯು ಪ್ರಶ್ನೆಯಲ್ಲಿ ಹಿಂದೆ ನಡೆದ ಪ್ರಸಂಗವಂದು ಅಡಗಿತ್ತು ಥಟ್ಟನೆ ನೆನಪಾಯಿತು ಆಕೆ ಹೌದು ಸ್ವಾಮಿ ಅಂಥದೊಂದು ಘಟನೆ ನಡೆದದ್ದು ನೀವು ಅಂದಾಗ ನೆನಪಿಗೆ ಬರುತ್ತದೆ. ಒಂದು ದಿನ ಜಂಗಮರೊಬ್ಬರು ಬಾಗಿಲಲ್ಲಿ ಗುರುಕಂತೆ ಭಿಕ್ಷೆ ಎಂದರು ನಾನು ದೇಹದ ಆಯಾಸದಿಂದ ಏಳಲಾರದೆ ತಡೆದು ಬನ್ನಿರಿ ಎಂದೆ ಹೋದವರು ತಿರುಗಿ ಬರಲೇ ಇಲ್ಲ. ಅವರು ಕೊಳ್ಳದ ಸ್ವಾಮಿ ಎಂದು ಹಿಂದಿನಿಂದ ಗೊತ್ತಾಯಿತು. ನನಗೆ ದುಃಖವಾಯಿತು. ಏನು ಮಾಡಲಿ ಮರೆತು ಬಿಟ್ಟೆ"

"ಛೀ! ದುಷ್ಟಿ! ಗುರುದ್ರೋಹಿ, ಶಿವದ್ರೋಹಿ, ಮಾಡಬಾರದ್ದನ್ನೇ ಮಾಡಿದೆ"

"ಹೌದು ನನ್ನ ದೇವರೆ, ನಾನೆಂದೂ ಭಿಕ್ಷೆ ಕೊಡದೆ ಯಾವ ಜಂಗಮರನ್ನು ಮರಳಿ ಕಳಿಸಿದವಳಲ್ಲ. ಅಂದು ದುರ್ವಿಧಿ ಬಂದು ಆತುಕೊಂಡಿತು" ಅಳ ಹತ್ತಿದಳು.

ಗೌಡ ಕುಸಿದು ಕುಳಿತ ಕಪೋಲಗಳಿಗೆ ಕೈಯಾಡಿಸಿ ಚಿಂತಿಸಿದ "ನೀನಾದರೂ ಏನು ಮಾಡಿ ನಮ್ಮ ದುಷ್ಕರ್ಮದ ಫಲ ಶಿವ ಶಿವಾ! ಶಿವಯೋಗಿ! ಈಗ ಕೊಳ್ಳದಲ್ಲಿ ಇಲ್ಲ. ಗುರುದೇವಾ ಷಣ್ಮುಖೇಶ್ವರಾ ಕ್ಷಮಿಸಲಾರೆಯಾ? ನೀನು ಕರುಣಿಸಿದುದಲ್ಲದೇ ನಾವೀ ಆಪತ್ತನ್ನು ನೀಗುವದು ಸಾಧ್ಯವೆ ? ಎದ್ದು ನಿಂತು ಬಸವಗೌಡ ನೀಲಾ, ಶಾಂತಳಾಗು ಆ ಶಿವಯೋಗಿಗಳು ಎಲ್ಲಿರುವರೊ ! ಹುಡುಕಿ ಪ್ರಾರ್ಥಿಸಿ ಕರೆಕೊಂಡು ಬರುವೆನು. ಕೊಲ್ಲುವವರೂ ಅವರೆ ಕಾಯುವವರೂ ಅವರೆ ಭಕ್ತಜನ ಪರಿಪಾಲಕಾ, ದಯಾಳು ಶಿವಯೋಗಿಗಳ ಅತ:ಕರುಣ ಕರಗದಿರಲಾರದು. ನೀನು ಮನ ಭಾವಗಳಲ್ಲಿ

ಅವರ ಪಾದ ಸ್ಮರಿಸು ಅವರಿಗೆ ಮೊರೆಹೋಗು " ಎನ್ನುತ್ತ ಗೌಡ ನಿಂತ ಕಾಲಮೇಲೆ ಹೊರಟು ಬಿಟ್ಟನು.

" ಷಣ್ಮುಖ ಶಿವಯೋಗಿ ಎಲ್ಲಿದ್ದಾರೆಂಬುದು ನಿಮಗೆ ಗೊತ್ತಿದೆಯೆ? ಯಾವಕಡೆ ಹೋಗಿದ್ದಾರೆಂಬುದನ್ನು ಕೇಳಿದ್ದೀರಾ? ನೋಡಿದ್ದಿರಾ " ಎಂದು ಗೌಡನು ಕಂಡ ಕಂಡವರನ್ನು ಕೇಳಿದನು. ಸುತ್ತಲಿನ ಹಳ್ಳಿಗಳಿಗೂ ಹೋಗಿನೋಡಿದನು; ವಿಚಾರಿಸಿದನು. ಗೊತ್ತಿಲ್ಲ ಯಾರಿಗೂ! ಗುರುದೇವಾ, ಶಿವಯೋಗಿಶಾ! ಇಷ್ಟು ಕಠೋರನೇ ನೀನು ಭಕ್ತರಲ್ಲಿ ಕರುಣೆ ಇಲ್ಲವೇ? ಹೀಗೆ ಗೋಳಾಡಿಸಬೇಕೆ? ದರುಶನ ಕೊಡಬಾರದೆ? ಏನಾದರಾಗಲಿ ನಿನ್ನ ಅಡಿದಾವರೆಗಳನ್ನು ಕಾಣದೆ ಮನೆಗೆ ಮರಳುವದಿಲ್ಲ " ಹೀಗೆನ್ನುತ್ತ ದೃಡ ನಿರ್ಧಾರದಿಂದ ತಿರುಗುತ್ತಿದ್ದನು. ದಾರಿಗುಂಟ ಮನದಲ್ಲಿ ಯೋಜನೆಗಳು ಬಾರದಿರುತ್ತದೆಯೇ? ನನ್ನ ವಂಶದ ಬಳ್ಳಿಗೆ ಕುಡಿಯೊಡೆಯುವದಿದೆ. ಮೂರ್ಖ ಹೆಂಡತಿಯಿಂದಾಗಿ ಆಪತ್ತು ಆತು ಬಂದಿದೆ ಪತಿಯ ಮನಕ್ಕೆ ಅನುತಾಪ ನೀಡುವ ಸತಿ ಇದ್ದು ಫಲವೇನು ? ಪಿತನ ಸೇವಿಪರ ಸುತ ನಿದ್ದು ಫಲವೇನು? ಸಂಪತ್ತಿನಲ್ಲಿಯೂ ಆಪತ್ತಿನಲ್ಲಿಯೂ ಸಮನಾಗಿ ಕಾಣದ ಗೆಳೆಯನಿದ್ದೇನು? ಎಂಬ ಗಾದೆ ಇದೆ. ಮಾಯೆಯು ಆಳಿವಿನಲ್ಲಿ ಸಿಕ್ಕ ಭ್ರಷ್ಟನಾರಿ ಮಹಿಮರ ಶಾಪಕ್ಕೆ ಒಳಗಾದಳು ಇನ್ನೇನು .... ಓ ಮನಸ್ಸೇ! ದುಸಂಸಾರದ ಆಲೋಚನೆಗಳೇಕೆ ಮಾಯಾಭ್ರಾಂತಿಯನು ಬಿಡು ನೋಡು ಯೋಗಿಯ ಹುಡುಕಲು ಹೊರಟಿರುವ ವಿವೇಕ ತಾಳು

ಅರಸು ಮುನಿದರೆ ನಾಡೊಳು ಇರಬಾರದಯ್ಯಾ
ಗಂಡ ಮುನಿದರೆ ಹೆಂಡತಿಗೆ ಇರಲು ಬಾರದಯ್ಯಾ
ಕೂಡಲ ಸಂಗಮದೇವಾ ಜಂಗಮ ಮುನಿದರೆ
ನಾನೆಂತು ಬದುಕುವೆನಯ್ಯಾ
ಅಣ್ಣನವರು ಅಂದಂತೆ ಇದೀಗ ನಾನೆಂತು ಬದುಕುವೆನಯ್ಯಾ "

ಒಂದು ದಿನ ಇಂತಹವೇ ಸಂಕಲ್ಪ ವಿಕಲ್ಪ ಮಾಡುತ್ತ ಮತ್ತೆ ಶಿವ ಯೋಗಿಯ ಶ್ರೀ ಚರಣ ನೆನೆಯುತ್ತ ಹೊರಟಾಗ ದಾರಿತಪ್ಪಿ ಕಾಡಿನ ಕಾಲು

ದಾರಿ ಹಿಡಿದನು ನಡೆದೇ ನಡೆದನು. ಯಾವ ಊರೂ ಕಾಣದು ಯಾರೂ ಎದುರು ಬಾರರು ಇವನ ಸಂಕಟ ನೋಡದೇ ಸೂರ್ಯ ಮುಳುಗಿ ಹೋದ ಕತ್ತಲಾಯಿತು. ದಾರಿ ಮಸುಕಾಗಿ ಕಾಣುತ್ತಿತ್ತು. ಎಡಬಲದಲ್ಲಿ ಕಾಡು ಮೃಗಗಳ ಸುಳಿವು ಗೋಚರವಾಯಿತು. ಶಿವಯೋಗಿಯು ಕಾಣುವ ನಿಶ್ಚಯವೇ ಅವನ ಕಾಲಬಲ ಕಣ್ಣಬಲ ಉಳಿದುದನ್ನು ಲೆಕ್ಕಿಸದೆ ರಾತ್ರಿ ಬಹು ದೂರ ನಡೆದನು. ಆ ದಾರಿ ಅಡವಿಯಲ್ಲಿ ಒಂದು ತೋಟಕ್ಕೆ ಹೋಯಿತು. ಬೇಲಿಯ ಬಾಗಿಲಿಗೆ ಬಂದಾಗ ನಾಲ್ಕು ನಾಯಿಗಳು ಗರ್ಜಿಸುತ್ತ ಓಡಿ ಬಂದವು. ಇನ್ನೇನು ಹಿಡಿದು ಹರಿಯುವಂತೆ ಕಡವು. ಅಷ್ಟರಲ್ಲಿ ತೋಟಿಗನು ಬಂದು ನಾಯಿಗಳನ್ನು ಹಿಂದೆ ಸರಿಸಿ ಯಾವನು ನೀನು? ಮದಾಂಧಾ ಕಳ್ಳತನಕ್ಕೆ ಬಂದೆಯಾ? ಸುಮ್ಮನೇಕೆ ನಿಂತೆ ಬಾ ನಿನ್ನ ನೋಡತೀನಿ ಎನ್ನುತ್ತ ಕೊಲೇತ್ತಿ ಬಂದನು. “ ಬಲವಿಲ್ಲದಾಗ ನೆಲವೆದ್ದು ಬಡಿಯಿತು ” ಎಂಬ ನಾಣ್ಣುಡಿ ನೆನಪಾಗಿ ಗೌಡನಿಗೆ ಬೇದವಾಯಿತು, ಆತನು ವಿನಯದಿಂದ “ಅಯ್ಯಾ ನಾನೊಬ್ಬ ಹಾದಿಕಾರ ದಾರಿತಪ್ಪಿ ರಾತ್ರಿಯಲ್ಲಿ ತಿರುಗುತ್ತ ಇಲ್ಲಿಗೆ ಬಂದಿದ್ದೇನೆ ಕೈಮುಗಿಯುತ್ತೇನೆ. ಬೆಳಗಿನ ವರೆಗೆ ಸ್ವಲ್ಪ ಸ್ಥಳ ಕೊಡು ನನ್ನ ವಿಚಾರ ಹೇಳುತ್ತೇನೆ, ಅಂಗಲಾಚಿ ಕೇಳಿಕೊಂಡ. ಈ ಆಗಂತುಕ ಸಜ್ಜನನೆಂದು ತೋಟಿಗನು ತಿಳಿದು ಒಳಗೆ ಕರಕೊಂಡು ಗುಡಿಸಿಲಿಗೆ ಬಂದು ಮುಖ ಮಾರ್ಜನ ಮಾಡಿಸಿ ಲಿಂಗಾರ್ಚನೆ ಗೈಯಿಸಿ ಹಣ್ಣು ಕಾಯಿಕೊಟ್ಟು ಉಪಚರಿಸಿದನು. ಹಾದಿಕಾರನು ಏನೋ ಚಿಂತಿಸುತ್ತ ಕಾತರ ಪಡುವದನ್ನು ಆ ಕೃಷಿರಾಜ ಗುರುತಿಸಿದನು.

“ಅಣ್ಣಾ ನೀನು ಯಾಕೊ ತಲ್ಲಣಿಸುತ್ತಿಯಲ್ಲ ? ಏನು ನಿನಗೆ ? ಎಲ್ಲರ ಚಿಂತೆ ಮಾಡುವ ಶಿವಯೋಗಿ ಇರಲು ನೀನೇಕೆ ಚಿಂತಿಸಬೇಕು ? ಚಿಂತಿಸುವದು ಭ್ರಾಂತಿಗಾಗಿ ಅದನ್ನು ಬಿಟ್ಟು ಸ್ವಾಂತದಲ್ಲಿ ಶಾಂತನಾಗಿ ಮಲಗು ಹಿಂದಿನ ಕರ್ಮಗಳು ಕಾಡುತ್ತಿರುತ್ತವೆ. ಶಿವನೂ ಅದರಲ್ಲಿಯೇ ಭಕ್ತನ ಸತ್ವಪರೀಕ್ಷೆ ಮಾಡುತ್ತಾನೆ.

ಹರ ತನ್ನ ಭಕ್ತರ ಖರಿವಂತೆ ನೋಡುವ ಪರೆದು ನೋಡುವ ಚಿನ್ನದಂತೆ
ಅರೆದು ನೋಡುವ ಬಂದನದಂತ ಅರೆದು ನೋಡುವ ಕಬ್ಬಿನ
ಕೋಲಿನಂತೆ
ಬೆಚ್ಚದೆ ಬೆದರದೆ ಇದ್ದರೆ ಕರಸಿಡಿದೆತ್ತಿಕೊಂಬ ನಮ್ಮ ರಾಮನಾಥಾ।

ಎಂದಿದ್ದಾರೆ ಹಿರಿಯ ಶರಣ ದೇವರ ದಾಸಿಮಯ್ಯನವರು ಕಷ್ಟ ವಿರಲಿ ಸುಖವಿರಲಿ ಶಾಂತ ಮನದಿಂದ ಪ್ರಪಂಚ ಸಾಗರ ದಾಟಿದರಾಯಿತು

ಗೌಡರು ಕೈಮುಗಿದು ಅಯ್ಯಾ ! ನೀನು ಸಾಮಾನ್ಯನಲ್ಲ. ನಿನ್ನ ಸತ್ಕಾರ ನಿನ್ನ ಉಪದೇಶ ನೋಡಿದರೆ ನೀನು ಅರಿವಿನ ಮೂರ್ತಿಯಾಗಿ ರುವೆ ಯಾವಾಗಲೂ ಹೊಲಗೆಲಸ ಮಾಡುವ ನಿನ್ನಲ್ಲಿ ಮನದುನ್ನತಿಯ ನ್ನುಂಟು ಮಾಡಿದ ಗುರುವಾರು? ಊರಾವುದು?

“ ದೇವರ ದಾಸಿಮಾರ್ಯರು ಆಗಿ ಹೋದ ಮುದೆನೂರೆ ನಮ್ಮ ಊರು ಆ ಶರಣರು ಶ್ರೇಷ್ಠ ವಚನಗಳನ್ನು ರಚಿಸಿದ ಸ್ಥಳವದು. ರಾಮ ನಾಥ ಮಂದಿರ ಮನೋಹರವಾಗಿದೆ. ಮಹಾತ್ಮರ ಸ್ಥಾನ ಮಹಾತ್ಮರನ್ನು ಆಕರ್ಷಿಸಿದಂತೆ ಅಲ್ಲಿ ತರುಣ ಶಿವಯೋಗಿಯೊಬ್ಬರು ಬಂದು ತಪ ಮಾಡು ತ್ತಿದ್ದಾರೆ. ಅವರ ತಪಸ್ಸಿಗೆ ನಾವೆಲ್ಲ ಅಂಜಿರುವೆವು ಆದರೂ ಶಿವಯೋಗಿ ಮೃದುಹೃದಯದ ಮಹಾಜ್ಞಾನಿ ಸಾಯಂಕಾಲ ತಮ್ಮ ಹತ್ತಿರ ಬರುವ ಜನರಿಗೆ ನೀತಿ ನಡತೆಗಳನ್ನು ಶಿವಜ್ಞಾನವನ್ನು ಬೋಧಿಸುತ್ತಾರೆ. ಅಣ್ಣಾ ಅಡವಿಯಲ್ಲಿ ಈಗೇನು ಹೋಗುತ್ತಿರಿ? ಬೆಳಗಾಗಿ ಹೋಗಿರಂತೆ ಕೂಡ್ರಿ ಮಲಗಿರಿ ” ಕೈ ಹಿಡಿದು ಜಗ್ಗಿ ಕೂಡ್ರಿಸಿದನು. ಆ ಸದ್ಭಾವಿ ತೋಟಿಗ ತಾನು ಮಲಗಿ ನಿದ್ರೆಹೋದ.

ಗೌಡನಿಗೆ ನಿದ್ರೆ ಬರಲಿಲ್ಲ ಹೇಗೆ ಬರಬೇಕು? ಗುರುದರ್ಶನದ ಹಂಬಲ ಮನಸ್ಸು ಗುರುಪಾದ ಸೇರಿತ್ತು. ಹೊರಳಾಡಿ ಕಾಲಕಳೆದ. ಬೆಳಗಿನ

ಜಾವದಲ್ಲಿ ಚಂದ್ರೋದಯವಾಯಿತು. ಎದ್ದು ಹೊರಟುಬಿಟ್ಟ ಬೇಲಿಯ ಬಾಗಿಲ ಹೊಂದಿಗೆ ನುರಿತ ದಾರಿ ಇತ್ತು. ಹಿಡಿದು ನಡೆದ ಗೌಡ ಆತುರ ದಿಂದ ದಿನ್ನೆ ಏರಿ ಇಳಿಯಿತು ದಾರಿ. ಅರುಣೋದಯವೂ ಆಯಿತು. ಕೋಳಿ ಕೂಗಿದವು. ಗಿಡಗಳ ಮಧ್ಯದಲ್ಲಿ ರಾಮನಾಥ ದೇವಾಲಯ ಕಂಡಿತು ಕೈಮುಗಿದು ಅವಸರದ ಹೆಜ್ಜೆ ಹಾಕಿದ. ಶಿವಯೋಗಿಗಳ ಬೆಳಗಿನ ಪೂಜೆಯ ಘಂಟಾನಾದವು ಕರಣಾನಂದಕರವಾಗಿ ಕೇಳಿತು. ಅರಗು ಧೂಪಗಳ ನರ ಗಂಪು ತಂಗಾಳಿಯಲ್ಲಿ ತೇಲಿಬಂದಿತು. ಶ್ರೀಗಳು ಆನಂದತಗಲಿ ಹಾಡಿದ ವಚನವೂ ಕೇಳಿಸಿತು

ಗುರುಸೇವೆಯಲ್ಲಿ ತನು ಸವೆದು ಲಿಂಗ ಪೂಜೆಯಲ್ಲಿ ಮನ ಸವೆದು
ಜಂಗಮದಾಸೋಹದಲ್ಲಿ ಧನ ಸವೆದು
ಇಂತೀ ತ್ರಿವಿಧ ಸಂಪತ್ತು ನೆಲೆಗೊಂಡ ಸದ್ಭಕ್ತಂಗೆ
ನಮೋನಮೋ ಎನುಲರ್ಧನೆಯ್ಯಾ ಅಖಂಡೇಶ್ವರಾ

ತನು-ಮನಗಳಿಗೆ ಸುಖಕರವಾದ ಬೆಳಗಿನ ವಾತಾವರಣ ಗುರುದಳು ಶನದ ಇಚ್ಛೆ ನೆರವೇರಲಿರುವ ಸಮಯ ಶ್ರೀಗಳ ಈ ವಚನ ಸದ್ಭಕ್ತ ಬಸವ ಗೌಡನ ಮನಸ್ಸಿನಲ್ಲಿ ಅದಾವದೋ ಔದಾರ್ಯದ ಕ್ರಿಯೆಗಳಿಗೆ ಪ್ರೇರಣೆ ನೀಡುತ್ತಿತ್ತು.

ಮಂಗಲ ಮೂರ್ತಿಯಾಗಿ ಕಂಗೊಳಿಸುವ ಗಂಭೀರ ಮುಖ ಮುದ್ರೆಯ ಶಿವಯೋಗಿಯನ್ನು ಕಂಡು ಎರಗಿ ಅವರ ಅಡಿದಾವರೆಗಳ ಮೇಲೆ ಬಿದ್ದು ಕಂಬನಿಗರೆದನು. ಷಣ್ಮುಖ ಶಿವಯೋಗಿ ನೋಡಿ " ಏಳು ಭಕ್ತಾ? ನಿನ್ನ ಕಷ್ಟವೇನು? ಅಖಂಡೇಶ್ವರನು ಪರಿಹರಿಸುವನು ಏಳು "

"ಮಹಾ ಗುರುವೆ ನಮ್ಮ ಅಪರಾಧವ ಕ್ಷಮಿಸಬೇಕು. ನಮ್ಮಲ್ಲಿಗೆ ಬಿಜಯಂಗೈದು ನನ್ನ ವಂಶ ವೃಕ್ಷವು ಚಿಗುರುವಂತೆ ಮಾಡಬೇಕು. ಪಾಪಿ ಗಳನ್ನು ಪವಿತ್ರರನ್ನಾಗಿಸಲು ನೀವಲ್ಲದೇ ಇನ್ನಾರು? ಗದ್ಗದ ಕಂಠದಿಂದ ತಡೆತಡೆದು ಬೇಡಿಕೊಂಡನು.

"ಆಗಲಪ್ಪಾ! ಸದ್ಭಕ್ತ ದಣಿದು ಬಂದಿರುವೆ, ಮೊದಲು ನಿನ್ನ ಶಿವಾರ್ಚನೆಯಾಗಲಿ ಹೊರಡೋಣ" ಸಿದ್ಧರಾದರು.

ದರ್ಶನಕ್ಕೆ ಬಂದು ಹೋಗುವ ಜನರು ಈ ದೃಷ್ಯ ಕಂಡು ಚಕಿತರಾದರು. ಕ್ರಿಯಾಸಿದ್ಧಿ - ಸತ್ವವುಳ್ಳ ಪ್ರಭು ಸ್ವಾಮಿಯನ್ನು ಕೋಳಕೂರ ಗೌಡರು ಕರೆದುಕೊಂಡು ಹೊರಟುದುದನ್ನು ಕಂಡು ನೆರೆದ ಭಕ್ತರು ನಮಿಸಿ ಕಣ್ಣೀರ ಕರೆದರು. ಪ್ರಸನ್ನ ವದನದಿಂದ ಅವರನ್ನು ಆಶೀರ್ವಧಿಸಿ ಸ್ವಾಮಿಗಳು ವೆಥೆಪಡಬೇಡಿರಿ ನಾವಿರುವದು ಒಂದೇ ಕಡೆಗಲ್ಲ ನೀವೆಲ್ಲ ಸಜ್ಜನ ಶಿವಭಕ್ತರು ಜ್ಞಾನಿಗಳ ಸಹವಾಸ ಮಾಡಿರಿ ಮಾನವಂತರ ಕೂಡ ಮಾತನಾಡಿರಿ ಒಳ್ಳೆಯದನ್ನೇ ಆಲೋಚಿಸಿರಿ. ಅಖಂಡೇಶ್ವರರ ಕರುಣೆ ನಿಮ್ಮ ಮೇಲಿದೆ ಶುಭವಾಗಲಿ " ಎಂದು ನಡೆದು ಬಿಟ್ಟರು. ಇಬ್ಬರೂ ಕೋಳಕೂರಿಗೆ ಬಂದರು. ಸಪ್ಪೆಬಸವನ ಕ್ಷೇತ್ರದಲ್ಲಿ ಕೂಡಿದ ಜನವೆಲ್ಲ ಶಿವ ಯೋಗಿಗಳನ್ನು ಕಂಡು ಹಿಗ್ಗಿ ನುಗ್ಗಾಡುತ್ತ ಬಂದು ನಮಸ್ಕರಿಸಿದರು. ನೆಟ್ಟಗೆ ಗೌಡರ ಮನೆಗೆ ಬಂದರು. ಸ್ವಾಮಿಗಳು ಗಂಡನೊಡನೆ ಬಂದ ಗುರುದೇವನನ್ನು ಕಂಡು ನೀಲಮ್ಮ ಎದ್ದು ಬಂದು ಅತ್ಯಾಯಾಸವಾದರೂ ಮಣಿದು ಅವರ ಪಾದದ ಮೇಲೆ ತಲೆ ಇಟ್ಟು ಅಂಗುಷ್ಟಕ್ಕೆ ನೇತ್ರಜಲದ ಅಭಿಷೇಕ ಮಾಡಿದಳು. ಹೊರಳಿ ಕುಳಿತು ತಲೆಎತ್ತಿ ನೀರ್ಗಣ್ಣಿನಿಂದ ಚಿನ್ಮಯ ಗುರುದೇವನ ಮುಖವನ್ನು ನೋಡುತ್ತಾ ಕೈ ಮುಗಿದು "ಅಪ್ಪಾ! ತಿಳಿಯದೇ ನಾನು ಮಾಡಿದ ಅಪರಾಧವನ್ನು ಕ್ಷಮಿಸಿ ಕಾಪಾಡಬೇಕು " ನನ್ನಪ್ಪಾ ಈ ಗರ್ಭಸಂತಾಪವನ್ನು ದೂರಿಕರಿಸಿ ರಕ್ಷಿಸಬೇಕು " ಎನಲು ಶ್ರೀಗಳು ಆಕೆಯ ತಲೆಯ ಮೇಲೆ ಕೈ ಇಟ್ಟು ಆಶೀರ್ವದಿಸಿ ' ಆದದ್ದು ಆಯಿತು ' ಚಿಂತಿಸಬೇಡಮ್ಮ, ಈ ನಿನ್ನ ಗರ್ಭದಿಂದ ಬೇಗನೆ ಕನ್ಯಾರತ್ನ ಹುಟ್ಟುವದು ಸತ್ಪುತ್ರಿ ಪ್ರಭುದ್ಧಳಾಗುವಳು. ವಿದ್ಯಾಜ್ಞಾನ ಧನಸಂಪನ್ನ ತರುಣನೊಡನೆ ಮದುವೆಯಾಗುವದು ಅವರ ಉದರದಿಂದ ಹುಟ್ಟುವ ಮಗನು ಸತ್ಪುರುಷನಾಗುವನು. ಲೋಕ ಕಲ್ಯಾಣ ಕಾರ್ಯಗಳಿಂದ ಹೆಸರು ಪಡೆಯುವನು.

"ನಿಮ್ಮ ಕರುಣೆ ನಿಮ್ಮ ಆಶೀರ್ವಾದ ತಂದೆ" ಎಂದ ಮತ್ತೆ ಪಾದವ ಸ್ಪರ್ಶಿಸಿ ನಮಿಸಿದಳು. ಗೌಡರು ಶ್ರೀಗಳನ್ನು ಮೇಲಕ್ಕೆ ಬಿಜಯಂಗೈಸಿ ಉಚ್ಚಾಸನದಲ್ಲಿ ಕುಳ್ಳಿರಿಸಿದರು. ಬಂದು ಕೂಡಿದ ಆಪ್ತಮಿತ್ರರೊಡನೆ ಪಾದಪೂಜೆ ಮಾಡಿ ಮಂಗಲ ಪಾಡಿದರು. ಅಂದಿನ ಶಿವಾರ್ಚನೆ ಪ್ರಸಾದ ಗಳು ಗೌಡರ ಮನೆಯಲ್ಲಿಯೇ ನೆರವೇರಿದವು. ಮರುದಿನ ಷಣ್ಮುಖ ಶಿವ ಯೋಗಿ ಒಂದು ವರ್ಷ ಬಿಟ್ಟು ಹೋಗಿದ್ದ ಕೊಳ್ಳದ ಆಶ್ರಮಕ್ಕೆ ದಯ ಮಾಡಿಸಿದನು. ಕಂಥೆಯು ಭಿಕ್ಷೆಗೆ ಕೋಳಕೂರಿಗೆ ಬರುತ್ತಲಿದ್ದರು.

ಬಸವಗೌಡರು ಮುಂದೆ ಕೊಳ್ಳಕ್ಕೆ ಬಂದು ಹೋಗುತ್ತ ಸ್ವಾಮಿಗಳ ಏಕಾಂತಕ್ಕೆ ಆತಂಕವಾಗದಂತೆ ಅವರ ಸೇವಾ ಕಾರ್ಯ ಕೈಕೊಂಡರು. ತಮ್ಮ ಧನದ ಬಹುಭಾಗವನ್ನು ವೆಚ್ಚಮಾಡಿ ಗುಡ್ಡರನ್ನು ಉಪ್ಪಾರರನ್ನು ನಿಯೋಗಿಸಿ ಮೂರು ಕಲ್ಲು ಮಂಟಪಗಳನ್ನು ನಿರ್ಮಾಣ ಮಾಡಿಸಿದರು. ಕ್ರಮವಾಗಿ ಅವು ಶಿವಯೋಗಿಗಳ ಲಿಂಗೋಪಾಸನೆ ಯೋಗ ನಿದ್ರೆಗೆ ವಚನ ರಚನೆಗೆ ಉಪಯೋಗಿಸುವದಕ್ಕೆಂದಿದ್ದವು. ಬಂಡೆಯ ಬಿರುಕಿನಲ್ಲಿ ಹರಿದು ಬರುವ ನೀರಝರಿ ಇರುವಲ್ಲಿ ಜಾಣ ಶಿಲ್ಪಿಗಳಿಂದ ಗೋಮುಖ ಮಾಡಿ ಅದರ ಬಾಯೊಳಗಿಂದ ನೀರು ಬರುವಂತೆ ಮಾಡಿದರು. ಅಲ್ಲದೇ ಕೋಳ ಕೂರದ ಪೂರ್ವಭಾಗಕ್ಕೆ ಭೀಮಾ ದಡದಲ್ಲಿ ಭೀಮ ಬಂಧುರವಾಗಿ ತಾವೂ ಹಾಗೂ ಊರ ಹಿರಿಕಿರಿಯರ ನೆರವಿನಿಂದ ಶಿವಯೋಗಕ್ಕಾಗಿ ಮಠವನ್ನು ಕೂಡಾ ಕಟ್ಟಿಸಿದರು.

ಶಿವಯೋಗಿಗಳ ತಪಃಪ್ರಭಾವ ಪಸರಿಸುತ್ತಿದ್ದಂತೆ ಸುತ್ತಲಿನ ಗ್ರಾಮ ಗಳ ಆಸ್ತಿಕ ಜನರು ಶಿವಯೋಗಿ ದರ್ಶನಕ್ಕೆಂದು "ಯೋಗಿ (ಜೋಗಿ) ಯ ಕೊಳ್ಳಕ್ಕೆ ಬರಹತ್ತಿದರು.

ನವೋದಯ

ಯೋಗಿ ಕೊಳ್ಳದಲ್ಲಿ ಗಾನದನಿ ಕೇಳಿ ಬರುತ್ತಿತ್ತು. ಲಿಂಗಾರ್ಪಿತ ಪ್ರಸಾದ ಪೂರೈಸಿಕೊಂಡು ಷಣ್ಮುಖದೇವರು ಈ ವಚನ ಹಾಡುತ್ತ ವಚನ ಮಂಟಪ ಕಡೆಗೆ ಬರುತ್ತಿದ್ದರು.

ಲಿಂಗಕ್ಕೆ ಸಮರ್ಪಿಸಿದ ಸಕಲ ದ್ರವ್ಯಂಗಳನ್ನು ಲಿಂಗಸಹಿತವಾಗಿ
ಭೋಗಿಸಬೇಕು
ಆ ಅನರ್ಪಿತವ ಮುಟ್ಟದಿರಬೇಕು.
ಲಿಂಗದಲ್ಲಿ ಅತಿ ಸಾವಧಾನ ಭಕ್ತಿ ನೆಲೆಗೊಂಡಿರಬೇಕು
ಇಂತಪ್ಪ ಪರಮ ಪ್ರಸಾದಿಗಳ ಶ್ರೀ ಚರಣಕ್ಕೆ
ನಮೋ ನಮೋ ಎನುತಿರ್ದೆನಯ್ಯ ಅಖಂಡೇಶ್ವರಾ

ವ್ಯವಸನಂಗಳಿಲ್ಲ ಸುಪ್ರಸನ್ನತೆ ತುಂಬಿ ಪ್ರಸಾದ ಕಾಯರಾದ ಶಿವಯೋಗಿ ಓಲೆ ಕಟ್ಟು ಮಣೆಯ ಮೇಲೆ ಇಟ್ಟುಕೊಂಡು ಕುಳಿತರು ಒಂದು ಕ್ಷಣಹೊತ್ತು ಕಳೆದಿರಬಹುದು ಮಂಟಪದ ಬಾಗ್ಗಿಲಿನ ಗಿಡಗಳ ಸಂದಿನಿಂದ ಬಂದ ಜೀವರಿಗಿಯ ಭಕ್ತರು ಸಾಷ್ಟಾಂಗವಾಗಿ ಎರಗಿದರು. ಬಹುಜನರು ಸ್ವಾಮಿಗಳಿಗೆ ಪರಿಚಿತರು.

"ಓಹೋ! ಬನ್ನಿ ಬನ್ನಿರಿ ಶ್ರೀಶೈಲಪ್ಪ, ಬಸವಣ್ಣ, ಪರಮಪ್ಪ, ಶಿವಪ್ಪ, ಸಿದ್ದೇಶ ಬನ್ನಿರಿ ನೀವು ಬಂದು ದರ್ಶನವಿತ್ತು ನನ್ನನ್ನು ಧನ್ಯನನ್ನಾಗಿ ಮಾಡಿದಿರಿ ಕುಳಿತುಕೊಳ್ಳಿರಿ"

"ತಮ್ಮ ದರ್ಶನದಿಂದ ನಾವು ಪುನೀತರಾದೇವು ಗುರುವೇ"

"ನೀವೆಲ್ಲಾ ಸಜ್ಜನ ಸದ್ಭಕ್ತರು ಸದ್ಭಕ್ತನ ಮುಖದ ದರ್ಪಣದಲ್ಲಿ ಲಿಂಗವನ್ನೇ ಕಾಣಬಹುದು" ಎಂದಿದ್ದಾನೆ, ಬಸವಣ್ಣನವರು ನೀವು ಬಂದುದರಿಂದ ನನಗೆ ಲಿಂಗದರ್ಶನವೇ ಆಯಿತು " ತಲೆಬಾಗಿ ಕೈಮುಗಿದು "ತಾವು ಎಲ್ಲೆಲ್ಲಿಯೂ ಲಿಂಗವನ್ನೇ ಕಾಣುತ್ತಿರಿ. ನಾವೇನು ಮಹಾ ? " ಎಂದನು ಶಿವಪ್ಪ

ಬಸವಣ್ಣಪ್ಪ ಎದ್ದು ಕೈಮುಗಿದು ಪೂಜ್ಯರೇ ಅಖಂಡೇಶ್ವರ ಅಜ್ಜನವರ ದೇಹ ತೀರ ಹಣ್ಣಾಗಿದೆ. ಅಶಕ್ತಿ ಹೆಚ್ಚಿದೆ, ಮಲಗಿದವರು ತಾವೇ ಎದ್ದು ಕೂಡ್ರುವದಿಲ್ಲ. ಬಹಳ ಹೊತ್ತು ಅಂತರ್ಮುಖರಾಗಿರುತ್ತಾರೆ.

ಶಿವನ ಕರೆ ಸಮೀಪಿಸಿದೆ ಎಂದು ನುಡಿಯುತ್ತಿದ್ದಾರೆ. ಇಂದು ಮಠದಲ್ಲಿ ಹಿರಿಯರೆಲ್ಲರೂ ಕೂಡಿದ್ದರು. ಅವರ ಮಧ್ಯದಲ್ಲಿ ಮಹಾಸ್ವಾಮಿಗಳು ತಮ್ಮನ್ನು ಬರಮಾಡಿಕೊಳ್ಳಲು ಬಯಸಿದರು. ಕರೆದುಕೊಂಡು ಬರಲು ನನಗೆ ಅಪ್ಪಣೆಮಾಡಿದರು. ತಾವು ಕೂಡಲೇ ಜೇವರಗಿಗೆ ದಯಮಾಡಿಸ ಬೇಕು ಎಂದನು.

ಕೇಳ ಕೇಳುತ್ತ ಷಣ್ಮುಖಸ್ವಾಮಿಗಳು ಓಲೆ ಪತ್ರಗಳನ್ನು ಸಾವ ರಿಸಿ ಗಂಟುಕಟ್ಟಿದರು. ಅಣ್ಣಗಳಿರಾ ಬರುತ್ತೇನೆ ಹೋಗಿಬಿಡೋಣ ನಡೆ ಯಿರಿ ಗುರುದೇವರ ವಾರ್ಧಿಕ್ಯಕಷ್ಟ ಕೇಳಿ ನನಗೆ ಕಳವಳವಾಗುತ್ತಿದೆ. ತತ್‌ಕ್ಷಣ ಜೋಳಿಗೆ ಕಮಂಡಲ ತಕ್ಕೊಂಡು ಎದ್ದು ಬಿಟ್ಟರು. ಸಂಜೆಯೊಳ ಗಾಗಿ ಎಲ್ಲರೂ ಜೇವರಗಿಯ ಮಠಕ್ಕೆ ಬಂದರು. ಹಿರಿಯ ಶಿವಯೋಗಿಗಳು ಮಂಚದ ಮೇಲೆ ದಿಂಬಿಗೆ ಆತು ಕುಳಿತಿದ್ದರು. ಷಣ್ಮುಖದೇವರು ಬಂದು ಅವರ ಪಾದದ ಮೇಲೆ ತಲೆಯಿಟ್ಟು ವಂದಿಸಿ ಸಿದ್ಧವಾದಷ್ಟು ವಚನಗಳ ಕಟ್ಟನ್ನು ಅವರ ಹಸ್ತದಲ್ಲಿರಿಸಿ ಪುನಹ ವಂದಿಸಿದರು. ಅಖಂಡೇಶ್ವರರು ಆ ಆತ್ಮಸಾಹಿತ್ಯವನ್ನು ತಲೆಯ ಮೇಲಿಟ್ಟು ನಮಿಸಿ ಮಗ್ಗುಲಲ್ಲಿಟ್ಟು ಕೊಂಡರು ವರಶಿಷ್ಯನ ಮೈದಡವಿ ಅಪ್ಪಿದರು ಹತ್ತಿರವೇ ಮಂಚದ ಮೇಲೆ ಕೂಡ್ರಿಸಿಕೊಂಡರು. ಯೋಜಿತ ಕ್ರಮದಂತೆ ಊರ ಹಿರಿಯರು ಮತ್ತೆ ಬಂದು ಉಭಯ ಶ್ರೀಗಳಿಗೆ ನಮಸ್ಕರಿಸಿ ಕುಳಿತರು. ಅವರೆಲ್ಲರನ್ನು ನೋಡಿ ಅಖಂಡೇಶ್ವರರು ಶಿಷ್ಯನನ್ನು ಕುರಿತು.

"ಕುಮಾರ, ಷಣ್ಮುಖಾರ್ಯ ನನ್ನ ಈ ದೇಹ ಇನ್ನು ಬಾಳದು ಶಿವ ನಾಜ್ಞೆ ಸನ್ನಿಹಿತವಾಗಿದೆ. ನೀನು ಈ ನಿರಂಜನ ಪೀಠಾರೋಹಣಮಾಡಿ ಪೀಠಾಧಿಪತಿಯ ಕಾರ್ಯ ನಿರ್ವಹಿಸಬೇಕು.

ಕೂಡಲೇ ಷಣ್ಮುಖದೇವನು ಎದ್ದು ಕೈಮುಗಿದು "ಗುರುದೇವಾ ಈ ಅಧಿಕಾರದ ಆಸೆ ನನಗಿಲ್ಲ. ಅದೊಂದು ಬಂಧನಕಾರಿ, ಸ್ವಾರ್ಥಿಗಳು ದುಶ್ಶೀ

ಲರು ಆದ ಜನರೇ ಈ ಭೂಮಿಯಲ್ಲಿ ಬಹುಜನರು ಅವರ ಸಂಗವೇಕೆ ? ಲೌಕಿಕದ ಪ್ರಬಲ ಆಕರ್ಷಣೆಗಳತ್ತ ಇಂದ್ರಿಯಗಳು ಎಳೆದು ಘಾಸಿಗೊಳಿಸ ಬಹುದು ಯಾವದೂ ಬೇಡ ಗುರುವರೇಣ್ಯ ಎಲ್ಲವನ್ನೂ ತ್ಯಾಗ ಮಾಡಿ ವಿರಕ್ತನಾಗಿ ಆನಂದಾಕಾಶದಲ್ಲಿ ವಿಹರಿಸುವ ಆಸೆ ನನಗೆ! ಈ ಕಷ್ಟ ಬೇಡ ಗುರುವೇ ಕಾಪಾಡಬೇಕು"

"ಆನಂದ ಆಕಾಶದಲ್ಲಿ ವಿಹರಿಸುವ ವಿರಕ್ತನಿಗೆ ಇಲ್ಲಿ ಯಾವುದೂ ಅಡ್ಡ ಬಾರದು. ಶಿವಯೋಗ ಸಿದ್ಧಿಗೆ ಹೊಂದಬೇಕಾದ ವೈರಾಗ್ಯಭಾವದ ಪರಿ ಬೇರೆಯೇ ಇರುವದು. ಪ್ರಕೃತಿ ಜನ್ಯ ಮನುಷ್ಯನು ವಾಸನಾ ಬಲದಿಂದ ಪ್ರಪಂಚದಲ್ಲಿ ಶಕ್ತಿಯುಳ್ಳವನಾಗಿ ಅರಿವಿಗೆ ಎರವಾಗುತ್ತಾನೆ. ಆದ್ದರಿಂದ ಸಾಧಕರು ವಿರಕ್ತಿಯನ್ನು ಆಶ್ರಯಿಸುತ್ತಾರೆ. ಆದರೆ ರಕ್ತಿ-ವಿರಕ್ತಿಗಳೆರಡೂ ನಿರ್ದಿಷ್ಟ ಸ್ವರೂಪದಲ್ಲಿ, ಭಕ್ತಿಯೊಡನೆ ಯೋಜಿಸಲ್ಪಟ್ಟರೆ ಅದು ಶಿವ ಯೋಗಕ್ಕೆ ಬುನಾದಿಯಾಗುವದು. ರಕ್ತಿಯು ವಿಕೃತಿಗೊಳಗಾಗಬಾರದು. ಅದು ಅಪಾಯಕಾರಿ ಅಧೋಗತಿಗೆ ಒಯ್ಯುವದು! ವಿರಕ್ತಿಯು ಶುಷ್ಕವಾಗ ಬಾರದು, ಅದು ನಿಷ್ಪ್ರಯೋಜಕವಾಗುವದು! ಶರಣರ ನುಡಿಗಳಲ್ಲಿ ಶಿವಕ್ರಿ ಯೆಯಲ್ಲಿ ಶಿವಜ್ಞಾನದಲ್ಲಿ ಅನುರಕ್ತಿ ಇರಬೇಕು. ಶಿವಚೈತನ್ಯವುಳ್ಳ ಸಕಲ ಜೀವಾತ್ಮರ ಕಲ್ಯಾಣದ ಕರ್ತವ್ಯಕ್ಕಾಗಿ ಲೌಕಿಕದಲ್ಲಿದ್ದರೂ ಮನಭಾವಗ ಳಲ್ಲಿ ವಿರಕ್ತಿ ಇರಬೇಕು. ಅದು ಸಾಧಕನಿಗೆ ಸಹಾಯಕವಾದ ವೈರಾಗ್ಯ! ಇದು ಗಟ್ಟಿಯಾಗಿದ್ದರೆ ಯಾವ ಬಾಹ್ಯ ತೊಂದರೆಗಳೂ ಬಾಧಿಸಲಾರವು. ಮನೆ ಮಠಗಳನ್ನು ಲೋಕವ್ಯವಹಾರಗಳನ್ನು ಬಿಟ್ಟು ಅಡವಿಯಲ್ಲಿ ಪಶು ಪಕ್ಷಿಗಳೊಡನೆ ಫಲಮೂಲಗಳನ್ನು ತಿನ್ನುತ್ತ ಇರುವದೇ ವೈರಾಗ್ಯವೆಂದಲ್ಲ. ವೈರಾಗ್ಯದ ಕ್ರಿಯಾ-ಸ್ವರೂಪವೆಂದರೆ ತ್ಯಾಗವಷ್ಟೆ! ನಾನು ಎಲ್ಲವನ್ನು ತ್ಯಾಗ ಮಾಡಿದವನು. ನಾನು ವಿರಕ್ತನು ಎಂದು ಭಾವಿಸಿಕೊಂಡಿದ್ದರೆ ಅದೂ ಒಂದು ರಕ್ತಿಯೇ ಆದೀತು"

"ಹೌದು ಅದೂ ಒಂದು ಅಹಂಕಾರವೇ! ಗುರುವೇ ನಾನು ತಪ್ಪು ತ್ತಿದ್ದೇನೆ"

"ಊರಾಗಲೀ ಅಡವಿಯಾಗಲೀ, ಜನನಿಬಿಡವಿರಲಿ, ನಿಸರ್ಗವಿರಲಿ ಎಲ್ಲವೂ ವಿಶ್ವಾತ್ಮನ, ವಿಶ್ವಸ್ವರೂಪದ ವಿವಿಧ ಮುಖವೆಂದು ಭಾವಿಸಿ ಎಲ್ಲೆಲ್ಲಿಯೂ ಪರ ಶಿವ ಸ್ವರೂಪವನ್ನೇ ಕಾಣುವದು ಶಿವಯೋಗದ ನಿಲುವಾಗಿರುವದು ಶರಣರ ಶಿವಾನುಭವವಾಗಿರುವುದು. ಇದು ಭಕ್ತಿಯಲ್ಲಿಯ ನಿರ್ದಿಷ್ಟ ರಕ್ತಿ-ವಿರಕ್ತಿಗಳ ಸಂಯೋಜನೆ. ಇದರಿಂದಲೇ ಶಿವಯೋಗಿಗೆ ಲೋಕೋದ್ಧಾರ ಸಾಧ್ಯ. ತನ್ನ ಅಂಶಿಕನಾದ ಮಾನವನು ತನ್ನನ್ನೇ ಸೇರಬೇಕೆಂಬುದು ಪರಶಿವನ ಸಂಕಲ್ಪ. ಆ ಗುರಿಗಾಗಿಯೇ ಗುರು-ಲಿಂಗ-ಜಂಗಮನಾಗಿದ್ದಾನೆ ಶಿವನು. ಆದ್ದರಿಂದ ಆನಂದಾನುಭೂತಿಯಲ್ಲಿಯೇ ಪರವಶರಾಗಿ ಬಿಡುವದೇ ಶಿವಾನುಭಾವಿಗಳ ಶಿವಯೋಗಿಗಳ ಧ್ಯೇಯವಲ್ಲ. ಆ ಅನುಭೂತಿಯಿಂದ ಪ್ರಕೃತಕ್ಕೆ ಮರಳಿ ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸಿ ಲೋಕ ಸಂಗ್ರಹಮಾಡಿ, ಲೋಕಕಲ್ಯಾಣ ಮಾಡುವದು ಗುರಿಯಾಗಿವದು. ವೀರವಿರಾಗಿ, ಪರಮನಿರಂಜನ ಪ್ರಭು ಅಲ್ಲಮದೇವನು ಮಹಮನೆಯ ಲ್ಲಿ ನಿಂತು ಶೂನ್ಯ ಸಿಂಹಾಸನ ಆರೋಹಣ ಮಾಡಿ ಅನುಭವ ಮಂಟಪದ ನಿರ್ದೇಶಕನಾಗಿ ಕಾರ್ಯ ಮಾಡಿದನು. ದೇಶ ಕಾಲಮಾನದಂತೆ ಆ ಕರ್ತವ್ಯದ ವ್ಯಾಪ್ತಿ ಭಿನ್ನವಾದರೂ ಸ್ವರೂಪ ಒಂದೇ! ಆ ಕರ್ತವ್ಯವೇ ಈಗ ನಿನ್ನ ಮುಂದಿರುವದು."

"ನಾನು ಸರ್ವಸಂಗ ತ್ಯಾಗಿಯಾಗುವ ಆಸೆಗೆ ಮೋಹಿಸಿ ತಪ್ಪಿದೆ ಗುರುವೇ

ಆಸೆವಿಡಿದು ಹಲವು ದೇಶಕ್ಕೆ ಹರಿದಾಡಿದೆನಲ್ಲದೆ
ನಿರಾಸೆವಿಡಿದು ನಿಜವಿರಕ್ತನಾಗಿ ಚರಿಸಲಿಲ್ಲವಯ್ಯಾ ನಾನು,
ವೇಷಾಡಂಬರದಲ್ಲಿ ಅಧಿಕನೆನಿಸಿ ಲೌಕಿಕ ಮೆಚ್ಚನಡೆದೆನಲ್ಲದೆ
ಭಾಷೆಯಲ್ಲಿ ಅಧಿಕನೆನಿಸಿ ಲಿಂಗಮೆಚ್ಚ ನಡೆಯಲಿಲ್ಲವಯ್ಯಾ ನಾನು
ಮಾತಿನಲ್ಲಿ ವಿರಕ್ತನೆಂದು
ಠಕ್ಕುತನದ ಕಾಳುಗಾರಿಕೆಯ ಸುಳ್ಳನೇ ನುಡಿದೆನಲ್ಲದೆ
ಮನದಲ್ಲಿ ಸರ್ವಸಂಗ ಪರಿತ್ಯಾಗಿಯಾದ ಪರಮ
ವಿರಕ್ತನಲ್ಲವಯ್ಯಾ ನಾನು

ಕ್ಷಮಿಸಬೇಕು ತಂದೆ ನನ್ನ ತಪ್ಪು ತಿದ್ದಿ ಉದ್ಧರಿಸುವ ಭಾರ ಈ ಅಡಿಗಳ ಮೇಲಿದೆ '' ಈ ಷಣ್ಮುಖದೇವರ ಕಂಠ ಬಿಗಿದಿತ್ತು ಕಣ್ಣು ತೇವಾಗಿದ್ದವು.

“ಕುಮಾರ ಹುಟ್ಟಿನಿಂದಲೂ ನೀನು ಪರಮ ವಿರಾಗಿ ಅಲ್ಲದೆ ಎಲ್ಲವನ್ನು ಅರಿತವನು ಪರಿಪಕ್ವಮತಿಯಾಗಿರುವೆ. ಅಂತೆಯೇ ಈ ಶಿವಕಾರ್ಯ ಭಾರ ನಿರ್ವಹಿಸಬೇಕೆಂದು ನನ್ನ ಅಪೇಕ್ಷೆ” ಅಶಕ್ತತನದಲ್ಲಿಯೂ ಆಯಾಸವನ್ನು ಲಕ್ಷಿಸದೆ ಮಾತನಾಡಿದರು ಅಖಂಡೇಶ್ವರ ಶಿವಯೋಗಿಗಳು.

''ಗುರುವೇ ನಿಮ್ಮ ಆಜ್ಞೆಯ ಮೀರಲಾರೆ ನಿಮ್ಮ ಇಚ್ಛೆಯ ಪೂರೈಸುವದೇ ನನಗೆ ಪರಮ ಶ್ರೇಯಸ್ಕರ ಎಂದು ಸಾಷ್ಟಾಂಗವಾಗಿ ನಮಸ್ಕರಿಸಿದರು. ಭಕ್ತವೃಂದ “ಉಘೇ, ಹರಹರ ಮಹದೇವ' ಎಂದು ಜಯಧ್ವನಿಗೈದಿತು. ಷಣ್ಮುಖಸ್ವಾಮಿಗಳ ಶೂನ್ಯ ಸಿಂಹಾಸನಾರೋಹಣದ ಸುದ್ದಿ ಸುತ್ತಲೂ ಪಸರಿಸಿತು.

ಗ್ರಾಮದ ಪ್ರಮುಖ ವರ್ತಕರು, ಕೃಷಿಕರು, ಅಧಿಕಾರಿಗಳು, ಉದ್ದಿಮೆದಾರರು ಮತ್ತೊಮ್ಮೆ ಸಭೆ ಸೇರಿದರು. ಪೀಠಾರೋಹಣ ಸಮಾರಂಭದ ವಿವಿಧ ಕಾರ್ಯಗಳ ನಿರ್ವಹಣೆಗಾಗಿ ಬೇರೆ ಬೇರೆ ಸಮಿತಿಗಳನ್ನು ರಚಿಸಿಕೊಂಡು ಕಾರ್ಯೋನ್ಮುಖರಾದರು. ಸಮಾರಂಭದ ದಿನ ಗೊತ್ತುಮಾಡಲ್ಪಟ್ಟಿತು. ಆಯಾ ಕಾರ್ಯ ವಿಭಾಗಕ್ಕೆ ತಕ್ಕ ಮಂಟಪಗಳು. ಸಿದ್ಧವಾದವು. ಮಠದ ಪಟಾಂಗಣದಲ್ಲಿ ವಿಧಿವಿಧಾನಗಳಿಗೆಂದು ಶಿವಮಂಟಪ, ಹೊರಗೆ ಸಾರ್ವಜನಿಕ ಸಭೆಗಾಗಿ ಬೃಹದ್ ಮಂಟಪ ರಚಿತವಾದವು. ಕಲಾಕುಶಲರು ಬಣ್ಣದ ಬಟ್ಟೆಗಳ ತೋರಣದಿಂದ ಅವುಗಳನ್ನು ಅಲಂಕರಿಸಿದರು ತತ್ವ ವಾಕ್ಯಗಳನ್ನು ಬರೆದರು. ಮಠವು ಮಹದ ಮನೆಯಂತೆ ಶೋಭಿಸಿತು ನೆರೆಯ ಗ್ರಾಮಗಳಿಂದಲೂ ಉದಾರಿಗಳಾದ ಭಕ್ತರು ಅದೆಷ್ಟೋ ಧನ-ಧಾನ್ಯ ಎಣ್ಣೆ, ಬೆಲ್ಲ ಕಳಿಸಿದರು. ಉಳಿದ ಸಾಮಗ್ರಿಗಳೂ ಹೇರಳವಾಗಿ

ಬಂದವು. ನೆರೆನಾಡ ಗುರುಚರಮೂರ್ತಿಗಳಿಗೆ ಗೌರವ ಪೂರ್ವಕ ಬಿನ್ನಹ ಮಾಡಿದರು. ಶಾಸ್ತ್ರಿಗಳು, ಕವಿಗಳು, ಕೀರ್ತನಕಾರರು, ಸಂಗೀತ ಕಲೆಯುವರು ಇವರೆಲ್ಲರಿಗೂ ಆಮಂತ್ರಣ ಕಳಿಸಿದರು.

ಆ ಶುಭ ದಿನ ಬಂದಿತು. ಬೆಳಗಿನ ಜಾವದಲ್ಲಿ ಮಹಾದ್ವಾರದ ಮೇಲಿನ ಮಂಗಳವಾದ್ಯಗಳು ಮೊಳಗಿದವು. ಸುಪ್ರಭಾತದಲ್ಲಿ ಶಿವಭಜನೆಯ ಮೇಳಗಳು ಗ್ರಾಮದಲ್ಲಿ ಸುತ್ತುವರೆದವು. ರವಿಉದಯದ ಹೊತ್ತಿಗೆ ಷಣ್ಮುಖದೇವರಿಗೆ ದಿವ್ಯಔಷಧಿಗಳಿಂದ ಕೂಡಿದ ಪಂಚ ನದಿಗಳ ಜಲದಿಂದ ಅಭಿಷೇಕ ಮಾಡಿದರು. ಲಿಂಗಾರ್ಚನೆಗೈಯಿಸಿ ಕಾಷ್ಷಾಯಾಂಬರ ಹೊದಿಸಿ ಗುರು ಅಖಂಡೇಶ್ವರರು ಇರುವಲ್ಲಿ ಕರೆತಂದರು. ಅಲ್ಲಿ ಪಂಚ ಕೋಣಾಕೃತಿಯ ರಂಗವಲ್ಲಿಯನ್ನು ಹಾಕಿ, ಮಧ್ಯರಂಗದಲ್ಲಿ ಪ್ರಣವವನ್ನು ಐದುಕೋನಗಳಲ್ಲಿ ಪಂಚಾಕ್ಷರಗಳನ್ನು, ಹೀಗೆ ಷಡಕ್ಷರಗಳನ್ನು ಬರೆದು ಅಲ್ಲಿ ಷಡ್‌ಕಲಶಗಳನ್ನು ಸ್ಥಾಪಿಸಿ ಸುರಗಿ ಸುತ್ತಿದರು. ಅದರ ಸೂತ್ರ ಹಿಡಿದು ಅಖಂಡೇಶ್ವರ ಶಿವಯೋಗಿಗಳು ಪೂರ್ವಾಭಿಮುಖವಾಗಿ ಕುಳಿತಿದ್ದರು. ತಮ್ಮ ಮುಂದೆ ಬಂದು ಎರಗಿದ ಮರಿದೇವ ಷಣ್ಮುಖಾರ್ಯನನ್ನು ತಮ್ಮ ಬಲಗಡೆಗೆ ಉತ್ತರಾಭಿಮುಖವಾಗಿ ಕೂಡ್ರಿಸಿಕೊಂಡರು. ಮಸ್ತಕದ ಮೇಲೆ ಹಸ್ತವನ್ನಿರಿಸಿ ಆಹ್ವಾನಿಸಿ ತ್ರಿವಿಧ ದೀಕ್ಷಾಕ್ರಮವನ್ನು ಸಂಕ್ಷೇಪವಾಗಿ ನೆರವೇರಿಸಿ ಮಲತ್ರಯವನ್ನು ನಿವಾರಿಸಿದರು, ಬಳಿಕ ಶಿಷ್ಯನ ಮಹಾ ಮಸ್ತಕವನ್ನು ಮತ್ತೆ ಪೂಜಿಸಿ ಈ ಮುಖ್ಯ ಮಾತುಗಳನ್ನು ಹೇಳಿದರು.

"ಇಷ್ಟ, ಪ್ರಾಣ, ಭಾವ, ತ್ರಿವಿಧ ಲಿಂಗ ಒಂದಾಗಿ ಜಂಗಮ ತತ್ವವಾಗಿದೆ. ಅದು ಪರಶಿವ ಸ್ವರೂಪ ಈ ಘನಪದವನ್ನು ಧಾರಣಮಾಡುವ ನಿರಂಜನ ಜಂಗಮ ಮೂರ್ತಿಯು ಈ ತತ್ವದ ಘನತೆಗೂ, ಪಾವಿತ್ರ್ಯಕ್ಕೂ ತನ್ನ ಕರ್ತವ್ಯಕ್ಕೂ ಚ್ಯುತಿ ಬಾರದಂತಿರಬೇಕು. ಸ್ವಯಂ ಜಂಗಮದ ಭಕ್ತಾಚರಣೆಯಲ್ಲಿ ಭಕ್ತರಿಗೆ ಮಾರ್ಗದರ್ಶಕರಾಗಿ ಚರ ಜಂಗಮದ ಆಚರಣೆಯಲ್ಲಿ ದೇಶಸಂಚಾರಗೈದು ಜ್ಞಾನ, ಬೋಧೆ, ಮಾಡುವ ನಿಮ್ಮ ಕರ್ತವ್ಯ

ಪೂರೈಸಿರುವಿರಿ. ಇನ್ನು ಪರಜಂಗಮದಲ್ಲಿ ಅಂತರಂಗದ ವೈರಾಗ್ಯ ಮುಖ್ಯ. ಯಾರಿಗೂ ಬೇಡದೆ ತಾನಾಗಿಯೇ ಬಂದುದನ್ನು ಸ್ವೀಕರಿಸುತ್ತ, ಪ್ರಸಾದ ವಾಗಿ ಕೊಡುತ್ತ ಲೀಲಾಜಾಲವಾಗಿ ಲೋಕದ ಡೊಂಕು ತಿದ್ದುವದು ಕರ್ತವ್ಯವಾಗುವದು. ಸ್ವಯ-ಚರ ಆಚರಣೆಗಳು ಇದರಲ್ಲಿ ಸಮುಸಮಾಚ್ಚ ಯವಾಗಿ ಅಡಕವಾಗಿಯೇ ಇರುವವು. ಶಿವನು ಲೋಕದ ಉದ್ಧಾರಕ್ಕಾಗಿ ಗುರು-ಲಿಂಗ ಜಂಗಮ ರೂಪದಲ್ಲಿ ಸಾಕಾರವಾಗಿ ಪ್ರಕಟವಾಗಿದ್ದಾನೆ. ಗುರು ಧರ್ಮ ಬೋಧಕನಾದರೆ ಜಂಗಮ ಧರ್ಮರಕ್ಷಕ. ಭಕ್ತರಲ್ಲಿಯ ಭಕ್ತ ಚರ್ಯೆಯನ್ನು ನೋಡಿ ಕಲಂಕಗಳನ್ನು ಕಳೆದು ನಿರ್ಮಲಗೊಳಿಸಿ ಉದ್ಧರಿ ಸುವದು ಜಂಗಮದ ಕರ್ತವ್ಯವಾಗಿದೆ. ನೀವು ಇದರ ಭಿನ್ನಾಣಕ್ಕೆ ಭಂಗೆ ಬಾರದಂತೆ ಇರಬೇಕು. ಲೋಕವಂದ್ಯನಾಗಬೇಕು. ಇದು ನಮ್ಮ ಹಾರೈಕೆ."

"ಅದರಂತೆಯೇ ವರ್ತಿಸುವೆನು" ಷಣ್ಮುಖದೇವರು ಗುರು ಪಾದಕ್ಕೆ ವಂದಿಸಿ ನುಡಿದರು. ಗುರುಗಳು ಪ್ರಭುದೇವ, ಬಸವೇಶ, ಚೆನ್ನಬಸವೇಶ, ಸಿದ್ಧರಾಮ, ಅಕ್ಕಮಹಾದೇವಿಯರಂತೆ ಮರ್ತ್ಯದಲ್ಲಿ ಮಹವ ನೆಲೆಗೊಳಿಸು ವಲ್ಲಿ ಯಶಸ್ವಿಯಾಗೆಂದು ಆಶೀರ್ವದಿಸಿದರು

ಕಾವಿಯ ಕಪನಿ, ಟೊಪ್ಪಿಗೆ, ರುದ್ರಾಕ್ಷಿಮಾಲೆ, ಕಂಬಳದ ಟೊಪ್ಪರ ಜೋಳಿಗೆ ಮುಂತಾದ ಜಂಗಮ ಲಾಂಛನಗಳನ್ನು ಧಾರಣ ಮಾಡಿಸಿದರು. ಸೂತ್ರಾಂಗವಾಗಿ ಕರಣಹಸಿಗೆ, ಮಿಶ್ರಾರ್ಪಣ, ಬಸವಣ್ಣನವರ ವಚನ ಗ್ರಂಥಗಳನ್ನು ಕೊಟ್ಟರು. ಬಳಿಕ ಕೈಹಿಡಿದು ಶಿವಮಂಟಪಕ್ಕೆ ಕರೆದುಕೊಂಡು ಬಂದರು.

ಶಿವಮಂಟಪದಲ್ಲಿ ಷಟ್‌ಸ್ಥಲಯುಕ್ತ ಶೂನ್ಯ ಸಿಂಹಾಸನವನ್ನು ರಚಿ ಸಲಾಗಿತ್ತು ಅದರ ಮೇಲೆ ಪರಮ ನಿರಂಜನದ ಪ್ರತೀಕವಾದ ಶಿವಯೋಗಿ ಮಂಡಿಸಿದ್ದರು, ತಮ್ಮ ಲಿಂಗಾನುಷ್ಠಾನ ನೆರವೇರಿಸಿಕೊಂಡು ಬಂದ ಗುರು ಚರಮೂರ್ತಿಗಳು ಎಡಬಲದಲ್ಲಿ ಆಸೀನರಾಗಿದ್ದರು. ಸಹಸ್ರಾರು ಸದ್ಭಕ್ತ ಶರಣ-ಶರಣೆಯರು ಮುಂಭಾಗದಲ್ಲಿ ಶಿಸ್ತಿನಿಂದ ಕುಳಿತಿದ್ದರು. ಸಿಂಹಾಸ

ನದ ಮುಂದೆ ಬಂದು ಷಣ್ಮುಖದೇವರು ಸಾಷ್ಟಾಂಗ ಹಾಕಿದರು. ಮೇಲಿನ ಪರಶಿವನ ಮೂರ್ತಿ ಅಖಂಡೇಶ್ವರರು ಅವರಿಗೆ ಏಳಲಿಕ್ಕೆ ಹೇಳಿ ಅವರ ಬಿನ್ನಪವನ್ನು ಲಾಲಿಸಿದರು. ಪೀಠಾರೋಹಣಕ್ಕೆ ಅನುಮತಿ ನೀಡುವ ಮೊದಲು ಷಟ್‌ಸ್ಥಲಸಾಧನೆಯ ಹಂತಗಳನ್ನು ಸಾಧಿಸಿ ಶೂನ್ಯ ಪೀಠಕ್ಕೆ ಬರುವ ಅವರ ಸಾಮರ್ಥ್ಯವನ್ನು, ಪ್ರತಿಯೊಂದು ಸ್ಥಲಕ್ಕೆ ಪ್ರಶ್ನೆಮಾಡಿ ಉತ್ತರ ಪಡೆದು ಪ್ರಚುರ ಪಡಿಸುತ್ತಿದ್ದರು. ಕೊನೆಗೆ ಅವರ ನಿರಾಲಂಬ ಭಾವದಲ್ಲಿ ನೆಲೆಗೊಂಡ ಐಕ್ಯಸ್ಥಲವನ್ನು ಒಪ್ಪಿ ಅದನ್ನು ಸಾರಿದರು. ತಾವು ಕೆಳಗಿಳಿದು ಷಣ್ಮುಖಸ್ವಾಮಿಗಳನ್ನು ಕೈಹಿಡಿದು ಆ ನಿರಂಜನ ಪೀಠದ ಮೇಲೆ ಕೂಡ್ರಿಸಿದರು ಬಳಿಕ ಅಖಂಡೇಶ್ವರರು, ಹಾಗೂ ಉಳಿದ ಚರಮೂರ್ತಿಗಳು ಸಾಷ್ಟಾಂಗ ವೆರಗಿದರು. ಷಣ್ಮುಖಸ್ವಾಮಿಗಳ ಪಾದಪೂಜೆ ಮಾಡಿದರು. ಆಗ ವಾದ ಮಂತ್ರಗಳ ಪಠನವಾದವು. ಮಂಗಲ ವಾದ್ಯ ಮೊಳಗಿದವು. ಭಕ್ತರಿಂದ ಕಾಯಿಕರ್ಪುರಾರತಿಗಳಾದವು. ನಗರದಲ್ಲಿ ನೂತನ ಶಿವಯೋಗಿಗಳ ಅಡ್ಡ ಪಲ್ಲಕ್ಕಿ ಮಹೋತ್ಸವ ಹೊರಟಿತು. ಷಟಸ್ಥಲಧ್ವಜ ಮುಂದಿತ್ತು ಗ್ರಾಮಾಂತರಗಳಿಂದಲೂ ಬಂದ ವಿವಿಧ ವಾದ್ಯಗಳು ಭೋರ್ಗರೆಯುತ್ತಿದ್ದವು. ಜಯ ಜಯಕಾರ ಉಗ್ಗಡಣೆ ಆಗುತ್ತಿತ್ತು. ಮಂಗಲಪಾಠಗಳು ವಚನಗೀತೆಗಳು ಭಜನೆಗಳು ಸದ್ಭಾವನೆಗಳನ್ನು ಉದ್ದೀಪನಗೊಳಿಸುತ್ತಿದ್ದವು ಮನೆ ಮನೆಗಳ ಮುಂದೆ ಅರ್ಪಣೆ ಆಗುತ್ತಿದ್ದವು. ಸುಂದರ ರೂಪದ ಬ್ರಹ್ಮತೇಜದ ಮಹಾಸ್ವಾಮಿಗೆ ಎಡಬಲದಲ್ಲಿಯ ಜನರು ನುಗ್ಗಿ ಮುಂದೆ ಬಂದು ನೋಡಿ ಕೈ ಮುಗಿಯುತ್ತಿದ್ದರು. ದಂಡಧಾರಿಗಳು ಪ್ರಯಾಸದಿಂದ ಪಲ್ಲಕ್ಕಿಯನ್ನು ಮುಂದೆ ಸಾಗಿಸಬೇಕಾಗುತ್ತಿತ್ತು. ಉತ್ಸವವು ಮರಳಿ ಮಠಕ್ಕೆ ಬಂದ ಬಳಿಕ ಹೊರಾಂಗಣದ ವಿಶಾಲ ಸಭಾ ಮಂಟಪದಲ್ಲಿ ರಾಜಿಸಿದ ಸಿಂಹಾಸನದಲ್ಲಿ ಸ್ವಾಮಿಗಳನ್ನು ಆರೋಹಣ ಮಾಡಿಸಿದರು.

ಷಣ್ಮುಖ ಸ್ವಾಮಿಗಳನ್ನು ಕುರಿತು ಪೀಠಾರೋಹಣ ಕುರಿತು ವಿದ್ವಜ್ಜನರು ಪ್ರಶಂಸನೀಯ ಭಾಷಣ ಮಾಡಿದರು. ಕಿಕ್ಕಿರಿದು ತುಂಬಿದ ಸಭೆಯ ಮಧ್ಯದಲ್ಲಿ ಶೂನ್ಯಸಿಂಹಾಸನಾರೋಹಣ ಮಾಡಿದ ಷಣ್ಮುಖ

ಸ್ವಾಮಿಗಳು ದಯಪಾಲಿಸಿದ ಅಭಯ ವಚನದ ಮುಖ್ಯ ವಾಕ್ಯಗಳು ಇವು. "ಸದ್ಗುರು ಅಖಂಡೇಶ್ವರ ಶಿವಯೋಗಿಗಳ ಪಾದಕೃಪೆಯಿಂದ ತಮ್ಮೆಲ್ಲರ ಹೃದಯದಲ್ಲಿ ಜ್ಯೋತಿಸ್ವರೂಪನಾಗಿರುವ ಅಂತರಾತ್ಮನ ಕೃಪೆಯಿಂದ ನನ್ನ ಜೀವನದಲ್ಲಿ ನಿಜ ಜಂಗಮನ ಕಾಯಕ ಅಖಂಡವಾಗಿರಲೆಂದು ಬಯಸುತ್ತೇನೆ. ಸ್ವಯ-ಚರ ಜಂಗಮ ತ್ರಯಗಳನ್ನೊಳಗೊಂಡ ಚರ ಜಂಗಮದ ತತ್ವದಂತೆ ಮಠದಲ್ಲಿದ್ದು ಸದಾ ಭಕ್ತರ ಸದಾಚಾರ, ಆತ್ಮೋನ್ನತಿಯ ಸಾಧನೆಗಳಿಗೆ ನೆರವಾಗುವೆನೆಂದು ಭಾಷೆ ಕೊಡುತ್ತೇನೆ" ಸಭೆ ಹರ್ಷೋದ್ಗಾರ ಕರತಾಡನಗಳಿಂದ ಸ್ವಾಗತಿಸಿತು.

ಶಿವಯೋಗಿ ಪಾದಕ್ಕೆ ಸರ್ವರಿಂದಲೂ ಕಾಣಿಕೆಗಳು ಬಂದವು. ಪ್ರವಚನ ಕೀರ್ತನ, ವಚನಗಾಯನಗಳನ್ನು ನಡೆಸಿದ ಪಂಡಿತರಿಗೂ ಶಾಸ್ತ್ರಿಗಳಿಗೂ ಸಂಗೀತಗಾರರಿಗೂ ಸಂಭಾವನೆ ಕೊಟ್ಟು ನೂತನಸ್ವಾಮಿಗಳು ಆಶೀರ್ವಾದ ಮಾಡಿದರು. ಅಷ್ಟರಲ್ಲಿ ಅಪರಾಹ್ನವಾಗಿತ್ತು. ಅನೇಕ ಸಹಸ್ರಜನರಿಗೆ ಪ್ರಸಾದ ಸಂತರ್ಪಣೆಯಾಯಿತು. ಮರುದಿವಸ ಪರಸ್ಥಳದ ಎಲ್ಲ ಮೂರ್ತಿಗಳು ಗೌರವ ಕಾಣಿಕೆಗಳೊಡನೆ ಬೀಳ್ಕೊಂಡು ನಿರ್ಗಮಿಸಿದರು.

ತೀರ ಮುಪ್ಪಾಗಿದ್ದ ಅಖಂಡೇಶ್ವರ ಸ್ವಾಮಿಗಳ ಆರೈಕೆಯನ್ನು ಷಣ್ಮುಖ ಶಿವಯೋಗಿಗಳು ಸ್ವತಃ ಕೈಕೊಂಡರು. ಅವರ ಲಿಂಗಕ್ರಿಯೆಗಳು ತಪ್ಪದೆ ನಡೆಯುವಂತೆ ನೋಡಿಕೊಂಡರು. ತಾವು ಈ ಪರಶಿವಮೂರ್ತಿ ಒರಗಿರುವ ಮಂಚದ ಹತ್ತಿರವೇ ಬೇರೊಂದು ಪೀಠದಲ್ಲಿ ಕುಳಿತು ತಮ್ಮ ಉಭಯರ ದರ್ಶನಕ್ಕೆ ಬರುವ ಭಕ್ತರಿಗೆ ಆಶೀರ್ವಾದ ಮಾಡುವರು ಅವರ ಸಂಕಟಗಳ ಪರಿಹಾರಕ್ಕೆ ಸೂಕ್ತ ಸಲಹೆ ನೀಡುವರು. ಅನುಭವಾಮೃತದ ತೃಷೆಯುಳ್ಳವರಿಗೆ ಅಪ್ಯಾಯನವಾಗುವಂತೆ ಬೋಧೆ ಮಾಡುವರು. ಅದಕ್ಕೆ ಸಮವಾಗಿ ತಮ್ಮ ವಚನ ರಚನೆಯನ್ನು ಮುಂದುವರೆಸಿ ಕೃತಕೃತ್ಯರಾಗುವರು ಆ ವಚನಗಳನ್ನು ಪಠಿಸಿ ಗುರುವಿಗೆ ಕರ್ಣಾನಂದವನ್ನು ಒದಗಿಸುವರು. ಹೊಸತನದ ಸುಲಭ ಶೈಲಿಯಲ್ಲಿ ಮತ-ತತ್ವಗಳ ವಿವರಣೆ ಕೇಳಿ

ಮದಗೊಂಡು ಮರಳುತ್ತಿದ್ದರು. ಒಂದು ದಿನ ಷಣ್ಮುಖ ಸ್ವಾಮಿಗಳು ಪಠಿಸಿ ವಿವರಿಸಿದ ವಚನ ಇದು

ಸಕಲೇಂದ್ರಿಯಂಗಳ ಪ್ರಪಂಚುನಾಸ್ತಿಯಾಗಿರಬಲ್ಲರೆ
ಕಕ್ಷದಲ್ಲಿ ಧರಿಸುವುದಯ್ಯಾ ಶಿವಲಿಂಗವ
ಕಾಂಚನಕ್ಕೆ ಕೈಯಾಸದಿದ್ದರೆ
ಕರಸ್ಥಲದಲ್ಲಿ ಧರಿಸುವದಯ್ಯಾ ಶಿವಲಿಂಗವ
ಪರಸ್ತ್ರೀಯರ ಅಪ್ಪುಗೆ ಇಲ್ಲದಿರ್ದಡೆ
ಉರಸ್ಥಲದಲ್ಲಿ ಧರಿಸುವುದಯ್ಯಾ ಶಿವಲಿಂಗವ
ಎಂದೆಂದು ಹುಸಿಯ ನಾಡದಿರ್ದಡೆ
ಜಿಹ್ವೆಯ ಪೀಠದಲ್ಲಿ ಧರಿಸುವುದಯ್ಯಾ ಶಿವಲಿಂಗವ
ಅನ್ನಪಾನಂಗಳಿಗೆ ಬಾಯ್ ತೆರೆಯದಿರ್ದಡೆ
ಅಮಳೈಕ್ಯದಲ್ಲಿ ಧರಿಸುವುದಯ್ಯಾ ಶಿವಲಿಂಗವ
ಅನ್ಯರಾಜರಿಗೆ ತಲೆವಾಗದಿರ್ದಡೆ
ಉತ್ತಮಾಂಗದಲ್ಲಿ ಧರಿಸುವುದಯ್ಯಾ ಶಿವಲಿಂಗವ
ಇಂತೀ ಷಡ್ವಿಧಾಚಾರ ನೆಲೆಗೊಂಡು
ಷಡ್ವಿಧಸ್ಥಾನದಲ್ಲಿ ಶಿವಲಿಂಗವ ಧರಿಸಬಲ್ಲರೆ
ಭಕ್ತನೆಂಬೆನು, ಮಹೇಶ್ವರನೆಂಬೆನು, ಪ್ರಸಾದಿಯೆಂಬೆನು
ಪ್ರಾಣಲಿಂಗಿಯೆಂಬೆನು, ಶರಣನೆಂಬೆನು, ಐಕ್ಯನೆಂಬೆನು
ಇಂತೀ ಭೇದವನರಿಯದೆ ಲಿಂಗವ ಧರಿಸಿದರೆ
ಉಡಿಯಲ್ಲಿ ಕಲ್ಲಕಟ್ಟಿಕೊಂಡು ಕಡಲ ಬಿದ್ದಂತಾಯಿತ್ತು
ಕಾಣಾ ಅಖಂಡೇಶ್ವರಾ

ಇದರ ವಿವರಣೆ ಕೇಳಿ ಶ್ರೋತೃಗಳ ಕಣ್ಣಿನ ಕೊನೆಯಲ್ಲಿ ಮೂಡಿದ ಬೆಳಕನ್ನು ಕಂಡು ಷಣ್ಮುಖಸ್ವಾಮಿಗಳು ತಾವು ಧನ್ಯರೆಂದು ಭಾವಿಸಿ ಕೊಂಡರು.

ಕೆಲವು ತಿಂಗಳು ಕಳೆದವು. ಅಖಂಡೇಶ್ವರರು ಬರಬರುತ್ತ ಅಂತ ರ್ಮುಖರಾಗಿಯೇ ಇರುವರು. ಲಿಂಗಕ್ರಿಯೆಗಳೆಲ್ಲ ಭಾವದಲ್ಲಿ ನಡೆಯುವವು.

ಒಂದು ದಿನ ಷಣ್ಮುಖಸ್ವಾಮಿಗಳನ್ನು ಹತ್ತಿರಕ್ಕೆ ಕರೆದು ನಾವಿನ್ನು ಲಿಂಗೆದೊಳಗಾಗುವೆವು. ಸಮಾಧಿ ಸಿದ್ಧವಾಗಲಿ ಎಂದು ಮೆಲ್ಲಗೆ ನುಡಿದರು. ಷಣ್ಮುಖ ಶಿವಯೋಗಿಗಳಿಗೆ ಕಣ್ತುಂಬ ನೀರು ಬಂದವು. ಕೈಮುಗಿದು ಕಂಠ ಬಿಗಿದು ಏನೋ ಮಾತನಾಡಬೇಕೆನ್ನುವಷ್ಟರಲ್ಲಿ ಹಿರಿಯ ಶಿವಯೋಗಿಗಳೇ ಮತ್ತೆ.

"ಕಳವಳ ಪಡದಿರು ಮಗನೇ, ನೀನು ಸುಜ್ಞಾನಿ ಹುಟ್ಟಿದ ದೇಹ ಅಳಿಯಲೇ ಬೇಕು. ಆತ್ಮ ಅಳಿಯುವದೇ? ಬಸವಣ್ಣನವರ ವಚನ ಸ್ಮರಣೆಗೆ ಬರಲಿ. ಎಮ್ಮವರಿಗೆ ಸಾವಿಲ್ಲ ಈ ವಚನ ಹೇಳು ಅಖಂಡ ನಿತ್ಯ ತತ್ವ ಇದೆ. ಇದರಲ್ಲಿ! ಮತ್ತೆ ಕೇಳಿ ನನ್ನ ಶ್ರೋತ್ರ ಸುಖಿಸಲಿ" ಷಣ್ಮುಖ ಸ್ವಾಮಿ ಕಣ್ಣೊರೆಸಿಕೊಂಡು ಮಂಚದ ಮೇಲೆಯೇ ಕುಳಿತು ಅವರ ಮುಖದ ಹತ್ತಿರ ಈ ವಚನ ಹಾಡಿದರು.

ಎಮ್ಮವರಿಗೆ ಸಾವಿಲ್ಲ ಎಮ್ಮವರು ಸಾವರಿಯರು;
ಸಾವೆಂಬುದು ಸ್ವಯವಲ್ಲ
ಲಿಂಗದಲ್ಲಿ ಉದಯವಾದ ಲಿಂಗೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇರೆ ಮತ್ತೊಂದೆಡೆಯುಂಟೆ
ಕೂಡಲ ಸಂಗಮದೇವಾ ?

ಮುಖವರಳಿಸಿ ಹಿರಿಯ ಸ್ವಾಮಿಗಳು ಅವರ ಬೆನ್ನ ಮೇಲೆ ಕೈಯಾಡಿಸಿ "ದೇಹವಳಿದರೂ ನಾನು ನಿನ್ನ ಬೆನ್ನಮೇಲಿರುವೆ ಚಿಂತೆ ಬೇಡ ಹೋಗು ಸಮಾಧಿಕಾರ್ಯ ಆರಂಭವಾಗಲಿ" ಎಂದರು. ಷಣ್ಮುಖಸ್ವಾಮಿಗಳು ಮೆಲ್ಲನೆ ಸರಿದರು.

ತಾವು ಸಂಕಲ್ಪಿಸಿದದಿನ ಭಕ್ತರನ್ನು ಬರಮಾಡಿಕೊಂಡು ಹೊಸಸ್ವಾಮಿಗಳನ್ನು ಒಪ್ಪೈಸಿಕೊಂಡು ಚೆನ್ನಾಗಿರುವಂತೆ ಕೊನೆಯ ಸಂದೇಶ ನೀಡಿದರು. ಮರುದಿನ ಉದಯದಲ್ಲಿ ಶಿಷ್ಯನ ಆಸರದಿಂದ ಸ್ನಾನ ಮಾಡಿ ಶಿವಾರ್ಚನೆಗೆ

ಕುಳಿತು ಭಾವದಿಂದಲೇ ಅರ್ಪಿಸಿ ಕರದಲಿಂಗವ ನೋಡುತ್ತ ಆದರಲ್ಲಿ ಐಕ್ಯ ವಾದರು. ಶ್ರೀಗಳು ಲಿಂಗೈಕ್ಯದ ಸುದ್ದಿ ಸುತ್ತಲೂ ಹರಡಿತು. ಅಸಂಖ್ಯ ಜನರು ಬಂದು ಅಂತ್ಯದರ್ಶನ ಪಡೆದರು. ಯಥಾವಿಧಿ ಸಮಾಧಿ ಕಾರ್ಯ ನೆರವೇರಿತು.

ಕೆಲವು ಕಾಲ ಷಣ್ಮುಖ ಶಿವಯೋಗಿಗಳ ಮನಸ್ಸು ರೆಕ್ಕೆ ಮುರಿದ ಹಕ್ಕಿಯಂತಾಯಿತು. ಕಳೆದ ದಿನಗಳ ನೆನಹು, ಗುರುಗಳ ಅಗಲಿಕೆಯು ಅಳಲನ್ನು ಪುನಃ ಪುನಃ ಎಬ್ಬಿಸುತ್ತಿತ್ತು ಆದರೂ ತನ್ನ ಪೊರೆದ ಗುರು,ತಂದೆ ತೊಲಗಿ ಹೋದರೆಂಬ ಮಾಸರೆದ ಮಾಯಾ ದೃಷ್ಟಿಯು ಅಳಲನ್ನು ಬೇಗನೆ ಬದಿಗೊತ್ತಿ ಪರಮ ಶಿವಯೋಗಿ ಅಖಂಡೇಶ್ವರರ ಶಿವರೂಪವನ್ನು ವಾಣಿಯನ್ನು ವಿಶಾಲ ಹೃದಯುವನ್ನು ಕರುಣೆಯನ್ನು ಹಾಗೂ ಜ್ಞಾನವನ್ನು ತಮ್ಮ ಹೃದಯದಲ್ಲಿ ವಿಧಿಯಾಗಿ ವಿಕ್ಷೇಪಗೊಳಿಸಿಕೊಂಡರು. ಆ ಬೆಳಕಿನಲ್ಲಿ ಚೇತರಿಸಿಕೊಂಡು ಹೊಸ ಚೈತನ್ಯದಿಂದ ಲಿಂಗ ಜೀವನದಲ್ಲಿ ಮುಂದಡಿಯಿಟ್ಟರು.

ವಿಶ್ವವು ಶಿವಸ್ವರೂಪ

ಷಣ್ಮುಖ ಶಿವಯೋಗಿಗಳ ಅನುಭವಗೋಷ್ಠಿಗೆ ಹೊಸ ಹೊಸ ಜನರು ಬರಹತ್ತಿ ಅದು ದೊಡ್ಡದಾಗುತ್ತ ನಡೆದಿತ್ತು. ಅವರು ಬೋಧಿಸುವ ಕಲೆ ಅಷ್ಟು ಆಕರ್ಷಕವಾಗಿತ್ತು. ಗೋಷ್ಠಿ ಮುಂಜಾನೆ ಸಂಜೆ ಎರಡು ಹೊತ್ತು ನಡೆಯುತ್ತಿತ್ತು. ಅಲ್ಲಿ ಮಾನವತೆಯು ಎಲ್ಲ ರಂಗಗಳಿಗೂ ಸಂಬಂಧಿಸಿದ ಚರ್ಚೆಗಳಿಗೂ ಶಿವಯೋಗಿಗಳು ಉತ್ತರ ಕೊಡಬೇಕಾಗುತ್ತಿತ್ತು. ಅವರು ತಾವು ತಿಳಿದು ಮನನ ಮಾಡಿಕೊಳ್ಳದ ವಿಷಯಗಳೇ ಇರಲಿಲ್ಲ. ಒಂದು ದಿನ ಅವರ ಕುತುಹಲಕಾರಿಯಾದ ಭಕ್ತನು ಕೇಳಿದನು.

"ಅಪ್ಪನವರೇ, ಜಾತಿ ಕುಲಗಳಲ್ಲಿ ಮೇಲು ಕೀಳು ಎಂದರೇನು" ಸ್ವಾಮಿಗಳು ಮಂದಸ್ಮಿತರಾಗುತ್ತ ತಮ್ಮ ಓಲೆಯು ಕಟ್ಟಿನ ಗಂಟು ಬಿಚ್ಚುತ್ತ

"ಕೇಳಿರಿ ಜಾತಿ-ಕುಲ-ಮತ-ಧರ್ಮಗಳು ಜನರಲ್ಲಿ ವಿಂಗಡನೆಗೆ ವಿಶಿಷ್ಟ ಗುಂಪುಗಳಿಗೆ ಕಾರಣವಾಗಿವೆ ಇವುಗಳಲ್ಲಿ ಜಾತಿ-ಕುಲಗಳಿಗೆ ಯಾವ ತಾತ್ವಿಕ ಹಿನ್ನೆಲೆಯೂ ಇಲ್ಲ. ಇವು ಕೃತ್ರಿಮವಾಗಿವೆ. ಇವುಗಳ ಸ್ವಭಾವವು ತಾಮಸಿಕ ದುರಭಿಮಾನಕ್ಕೂ ದ್ವೇಷ ಅಸೂಯೆಗಳಿಗೂ ಆಸ್ಪದ ಕೊಡುವ ಇವು ಕಲಹಕ್ಕೆ ಮೂಲವಾಗಿವೆ. ಇವು ತ್ಯಾಜ್ಯವಾದವುಗಳು. ಜೀವನೋಪಾಯಕ್ಕೆ ಕೈಕೊಂಡ ಉದ್ಯೋಗದ ಮೇಲಿಂದ ಇವು ಉಂಟಾಗಿವೆ. ಆದರೆ ಉದ್ಯೋಗ ಬದಲಾದಾಗ್ಯೂ ಮೊದಲಿನ ಹೆಸರು ಬದಲಾಗುವುದಿಲ್ಲ; ಅದರ ಅಭಿಮಾನ ತೊಲಗುವದಿಲ್ಲ. ಇದಕ್ಕೆ ಸಾಂಪ್ರದಾಯಿಕ ಮೂಢತನ ಕಾರಣವಾಗಿದೆ. ಈ ವಚನ ಕೇಳಿರಿ.

ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ
ಆವ ಜಾತಿಯಲಿ ಹುಟ್ಟಿದವನಾಗದಡಾಗಲಿ
ಗುರು ಕಾರುಣ್ಯವ ಪಡೆದು ಅಂಗದಮೇಲೆ ಲಿಂಗಧಾರಿಯಾಗಿ
ಆಚಾರ ಕ್ರಿಯಾ ಸಂಪನ್ನನಾದ ಮಹತ್ಮನೇ ಮೂರು ಲೋಕಕ್ಕಧಿಕ ನೋಡಾ
ಇಂತಪ್ಪ ಪರಮ ಶಿವಭಕ್ತನು ಶಿವನೇ ನೋಡಾ ಅಖಂಡೇಶ್ವರಾ।

ಈ ಉತ್ತರ ಸಾಕಾದೀತು ಆದರೂ ಇನ್ನೊಂದು ವಚನ ಕೇಳಿರಿ,

ಕುಂಭ ಸಹಸ್ರ ಉದಕದೊಳಗೆ
ಬಿಂಬಿಸಿ ತೋರುವ ಸೂರ್ಯನೊಬ್ಬನಲ್ಲದೆ
ಮತ್ತೆಹಲವರುಂಟೆ ಆಯ್ಯಾ?
ಸಕಲ ದೇಹಗಳೊಳಗೆ ಸಂಭ್ರಮಿಸಿ ತುಂಬಿರ್ಪ
ಪರವಸ್ತು ನೀನೊಬ್ಬನಲ್ಲದೆ ಮತ್ತಾರನು ಕಾಣೆನಯ್ಯ
ಅಖಂಡೇಶ್ವರಾ" ।

"ಮತ ಧರ್ಮಗಳು ವಿಂಗಡನೆಗೆ ಕಾರಣವೆಂದಿರಲ್ಲಾ, ಅವು ಸಹಜವಾದವುಗಳೇ"

"ಮತ ಧರ್ಮಗಳು ಅನುಸಂಧಾನದಿಂದ ಮೂಡಿಬಂದ ಸಹಜವೆನಿಸಿವೆ. ಅನುಭವಾತೀತವಾದರೂ ಅವುಕೂಡ ಒಂದರಲ್ಲಿಯೇ ಅಡಗಿಕೊಳ್ಳುತ್ತವೆ"

“ ಅಂದರೆ ಹೀಗೆ?”

“ ಈ ವ್ಯಾಪಕವಾದ ವಿಶ್ವ ಹಾಗೂ ವಿಶ್ವಚೇತನದ ಮೂಲವೇನು? ಎಂಬುದನ್ನು ತಿಳಿಯಲು ಪ್ರಾಚೀನ ಋಷಿಗಳು ಮುಂತಾದವರು ಜಿಜ್ಞಾಸೆಯಿಂದ ಚಿಂತನ ನಡೆಸಿದರು. ಅವರು ತಮ್ಮತಮ್ಮಷ್ಟಕ್ಕೆ ಒಂದು ಅಭಿಪ್ರಾಯಕ್ಕೆ ಬಂದರು. ಈ ಅಭಿಪ್ರಾಯಗಳಲ್ಲಿ ವ್ಯತ್ಯಾಸಗಳಿದ್ದವು. ವಿಶ್ವವು ಜಡವೆಂದು, ಚೇತನಾತ್ಮಕವೆಂದು ಜಡಚೇತನಾತ್ಮಕವೆಂದು, ಹೀಗೆ ಬೇರೆ ಬೇರೆಯಾಗಿ ನಿರ್ಧರಿಸಿಕೊಂಡರು. ಹಾಗೆಯೇ ಮೂಲ ಕಾರಣವು ಕಾರ್ಯರೂಪವಾದ ಸೃಷ್ಟಿಗೆ ಭಿನ್ನವೆಂದು ಅಭಿನ್ನವೆಂದು ಭಿನ್ನಾಭಿನ್ನವೆಂದು ಬೇರೆ ಬೇರೆಯಾಗಿ ನಿರ್ಧರಿಸಿಕೊಂಡರು. ಈ ಭಿನ್ನಾಭಿಪ್ರಾಯಗಳೇ ಮತಗಳೆನಿಸಿದವು. ಮತ ಎಂದರೆ ಅಭಿಪ್ರಾಯ! ಈ ಅಭಿಮತಗಳಿಗೆ ಆಯಾ ಋಷಿ ಮಹಾತ್ಮರು ದಾರ್ಶನಿಸಿದರು. ಇಲ್ಲಿ ಗಮನಿಸಬೇಕಾದ ಅವಶ್ಯಕ ಸಂಗತಿಯೊಂದಿದೆ. ಈ ಎಲ್ಲ ಮತಗಳ ಗಮ್ಯಸ್ಥಾನ ಒಂದೇ! ಅದು ದೇವರು ಪರಮಾತ್ಮ ಆಗಿದೆ. ಇವರೆಲ್ಲರಿಗೂ ಅತ್ಯಂತಿಕ ಶಾಂತಿ ಸುಖದ ಬಯಕೆ ಇದೆ. ಮತಗಳು ಈ ಗುರಿಯತ್ತ ಸಾಗುವ [ಕ್ರಮಿಸುವ] ಮಾರ್ಗಗಳು. ಈ ಮಾರ್ಗಗಳು ಒಂದು ವಸ್ತುವಿಗೆ ಅಭಿಮುಖವಾಗಿ ಸಾಗುತ್ತಿವೆ. ಆ ಮಾರ್ಗಗಳಲ್ಲಿಯ ಮಾರ್ಗಕ್ರಮಣವೆಂಬ ಕ್ರಿಯೆಯಲ್ಲಿ ಭಿನ್ನತೆ ಇದ್ದರೂ ಆ ಎಲ್ಲರ ಕ್ರಿಯೆಗಳು ನಿಷ್ಟೆ ಹಾಗೂ ನೈತಿಕ ಆಚಾರಗಳಿಂದಲೇ ಬಲಪಡುತ್ತಿವೆ. ಇದಲ್ಲದೆ ಆ ಎಲ್ಲರ ಏಕೈಕ ಗುರಿಯ ಧ್ಯಾನಜ್ಞಾನಗಳ ಸಾಧನೆಯು ಭಾವನೆಯಲ್ಲಿ ಐಕ್ಯವಿದೆ. ಈ ಒಂದೇ ಉದ್ದೇಶದಲ್ಲಿ, ಒಂದೇ ಸಿದ್ಧಿಯಲ್ಲಿ ಪರ್ಯಾವಸಾನಗೊಳ್ಳುವ ಮತಗಳಲ್ಲಿ ಇದು ಶ್ರೇಷ್ಠ ಅದು ಕನಿಷ್ಠ ಎಂಬುದಿರುವದಿಲ್ಲ. ಪರಸ್ಪರ ವಿರೋಧಗಳಿಲ್ಲ. ಇದನ್ನು ನಾವು ಲಕ್ಷಿಸದಿದ್ದರೆ ಮೂಢಳಿಸುತ್ತೇವೆ. ಅಲಕ್ಷಿಸಿದಾಗಲೆಲ್ಲ ಕೋಲಾಹಲ ಕಟ್ಟಿಟ್ಟದ್ದಾಗಿದೆ. ಹಾಗೆ ಮಾಡದೆ ತಾನು ಯಾವ ಮತ ಮಾರ್ಗಗಳ ಪರಿಸರದಲ್ಲಿ ಹುಟ್ಟಿ ಬೆಳೆಯುತ್ತಿರುವನೋ ಆ ಮತ ಮಾರ್ಗದ ಪೂರ್ಣ ಜ್ಞಾನ ಪಡೆದು ನಿಷ್ಠೆ ಇರಿಸಿ, ಬೇರೆ ಮತಗಳನ್ನು, ಅಲ್ಲಿನ ಸಂತಮಹಂತರನ್ನು ಗೌರವಿಸಿ, ಅವರವರ ಮಾರ್ಗಕ್ರಮ

ಣಕ್ಕೂ ನೆರವಾಗಿ ನಡೆಯುವದು ಸಜ್ಜನ ಸದಾಚಾರಿಯ ಕರ್ತವ್ಯ!"

"ತಿಳಿಯಿತು ಈ ವಿವೇಚನೆಯ ಪ್ರಕಾರ ವೀರಶೈವವೂ ಒಂದು ಮತ ಹಾಗೂ ಧರ್ಮ"

"ಹೌದು ಷಟಸ್ಥಲವು ವೀರಶೈವರ ಸಾಧನ ಮಾರ್ಗವು ?"

"ವೀರಶೈವ ಮತಕ್ಕೂ ಇನ್ನುಳಿದ ಪ್ರಮುಖ ಮತಗಳಿಗೂ ತಾತ್ವಿಕ ಭಿನ್ನಾಭಿಪ್ರಾಯ ಇರುವ ಮೂಲ ಯಾವುದು ಅಪ್ಪನವರೇ? "

"ಒಳ್ಳೆಯ ಪ್ರಶ್ನೆ ಕೇಳಿದೆ ಪರಮಪ್ಪ ಶರಣ ನೀನು. ಚೆನ್ನಾಗಿ ವ್ಯಾಸಂಗ ಮಾಡುತ್ತಿರುವ ಗಡಚು ವಿಷಯ ನೀನು ತಿಳಿದುಕೊಳ್ಳಬಲ್ಲೆ. ವಿಶ್ವ ಹಾಗು ವಿಶ್ವಚೇತನಗಳಿಗೆ ಮೂಲವನ್ನು ಕಂಡು ಹಿಡಿದ ದಾರ್ಶನಿಕ ರಲ್ಲಿ ಮುಖ್ಯವಾಗಿ ಮೂರು ಭಿನ್ನಾಭಿಪ್ರಾಯಗಳಾದವು. ದೇವನು (ಪರಬ್ರಹ್ಮ) ಸತ್ಯ. ಜಗತ್ತು ಮಿಥ್ಯ, ಸಂಸಾರ ತ್ಯಾಜ್ಯ, ತಿರಸ್ಕೃತ ಆದ್ದ ರಿಂದ ಜೀವನು ತನ್ನನ್ನು ಆವರಿಸಿದ ಘಟಕಗಳನ್ನೆಲ್ಲ ನೀತಿಗಳೆದು ಕಳಚಿ ಪರಮಾತ್ಮನಲ್ಲಿ ಬೆರೆಯುವದು. ಇದು ಮುಕ್ತಿ ಎಂಬುದೊಂದು ಎರಡನೆ ಯದು ದೇವ ಜೀವರಲ್ಲಿ ಭೇದವಿದೆ. ಜೀವ ಜಡಗಳಲ್ಲಿ ಭೇದವಿದೆ ಸಾಧಕ ಜೀವನು ದೇವನನ್ನು ಸಾಕ್ಷಾತ್ಕರಿಸಿಕೊಂಡು ಅವನ ಸನ್ನಿಧಿಯಲ್ಲಿ ಶಾಶ್ವತ ವಾಗಿ ಇದ್ದು ಸುಖ ಭೋಗಿಸುವದು. ಇದಕ್ಕೆ ಭುಕ್ತಿ ಎನ್ನಬಹುದು. ಇದ ರಲ್ಲಿ ದೇವ ಜೀವರ ಐಕ್ಯ ಇಲ್ಲವೇ ಇಲ್ಲ. ಮೂರನೆಯದು ಪರಶಿವ [ಪರಬ್ರಹ್ಮ] ಸತ್ಯ ವಿಶ್ವವೂ ಅವನ ಸ್ವರೂಪ ಆದ್ದರಿಂದ ಅದೂ ಸತ್ಯ. ಜೀವರೂ ಪ್ರಪಂಚದ ಎಲ್ಲ ವಸ್ತುಗಳೂ ಸತ್ಯ ಶಿವಸ್ವರೂಪ, ಜೀವನು ತನ್ನನ್ನು ಆವರಿಸಿದ ಘಟಕಗಳನ್ನು ಮಾತ್ರ ತಿಳಿದು ಶಿವನನ್ನು ಹಾಗೂ ಅವ ನೊಡನೆ ತನ್ನ ಸಂಬಂಧವನ್ನು ತಿಳಿಯದೆ ದುಃಖ ಪಡುವನು ಆದ್ದರಿಂದ ಸಾಧನೆಯಿಂದ ಅದನ್ನು ತಿಳಿದು ಜ್ಞಾನ ಪಡೆದು ಶಿವನು, ತಾನು. ಘಟಕ ಗಳು ಬರಿದೆಂಬ ಸಿದ್ಧಿಯನ್ನು ಪಡೆದು ಒಂದಾಗಿ ಬಿಡುವದು. ವೀರಶೈವನು ಯಾವದನ್ನೂ ಬಿಟ್ಟುಕೊಡಬೇಕಾಗಿಲ್ಲ. ಎಲ್ಲದಕ್ಕೂ ಪರಶಿವ ಪ್ರಸಾದ

ಎಂದು ಸಿದ್ಧಿ ಪಡಿಸುವದು ಇವನ ಮೋಕ್ಷ. ಆದ್ದರಿಂದ ಇದಕ್ಕೆ ಸಿದ್ಧಾಂತ ಮತವೆನ್ನುವರು. ಮೊದಲನೆಯದು ಕೇವಲಾದ್ವೈತವೆನಿಸುವದು ಎರಡನೆಯದು ದ್ವೈತವೆನಿಸುವದು. (ಕೊನೆಗೂ ಭೇದ. ಒಂದಲ್ಲ ಎರಡು) ವೀರಶೈವವು ದ್ವೈತಾದ್ವೈತವು ಅಂದರೆ ಸಾಧನೆಯಲ್ಲಿ ಭೇದ, ಸಿದ್ಧಿಯಲ್ಲಿ ಅಭೇದ! ಶಕ್ತಿವಿಶಿಷ್ಟಾದ್ವೈತವೆಂತಲೂ ಅನ್ನಬಹುದು"

ಬಸವಣ್ಣ ಕೇಳಿದ "ಅಪ್ಪಾವರೆ ವೀರಶೈವದ ಮೂಲದ ಕಲ್ಪನೆಯಾಯಿತು. ಅದರಂತೆ ಸಿದ್ಧಿ ಪಡೆಯುವದಕ್ಕೆ ಷಟಸ್ಥಲವು ಸಾಧನ ಮಾರ್ಗವಾಗಿ ಹೇಗೆ ರೂಪುಗೊಂಡಿತು? ನೀವು ಅನೇಕ ಸಲ ಹೇಳಿರಬಹುದು ಆದರೆ........ನಮಗೇ........"

"ಮತ್ತೆ ಹೇಳೋಣ ಕೇಳಿರಿ ಶಕ್ತಿ ವಿಶಿಷ್ಟನಾದ ಶಿವನು ತನಗೆ ಅಭಿನ್ನವಾದ ಶಕ್ತಿಯ ಮೂಲಕ ಈ ಪ್ರಪಂಚಕ್ಕೆ ಕಾರಣನಾಗಿದ್ದಾನೆ. ಕಾರ್ಯರೂಪ ವಿಶ್ವವೂ ಆಗಿದ್ದಾನೆ. ಇದು ಅವನ ಲೀಲೆಗಾಗಿ ಉಂಟಾದುದು. ಪರವಸ್ತು, "ಸ್ಥಲ" ಎನಿಸುವ ಅವನು ಪೂಜ್ಯ-ಪೂಜಕ ಲೀಲೆಗಾಗಿ ಲಿಂಗ ಅಂಗ ಎಂದು ಎರಡಾದನು. ಲಿಂಗನು ಆರು ಲಿಂಗವಾಗಿ ಪೂಜೆಗೊಳ್ಳುವನು. ಅಂಗನು ಆರು ಅಂಗವಾಗಿ ಪೂಜಿಸುವನು. ಷಡಂಗಗಳಲ್ಲಿ ಷಡ್ಲಿಂಗಗಳನ್ನು ಅನುಗೊಳಿಸಿ, ಒಂದಾಗಿ ಬೆರಸಿ, ಬೇರಿಲ್ಲನಿಪ್ಪುದೇ ಲಿಂಗಾಂಗ ಸಾಮರಸ್ಯ ಸಿದ್ಧಿ ಅದುವೇ ವೀರಶೈವರ ಮೋಕ್ಷ ಸ್ವರೂಪ. ಜೀವನು ಈ ಸಾಧನೆಯ ಬಗೆಗಿನ ಕ್ರಿಯಾ-ಜ್ಞಾನಗಳನ್ನು ಗುರುವಿನಿಂದ ಸಂಸ್ಕಾರ ಮುಖಾಂತರ ತಿಳಿದಾಗ ಅಂಗನೆನಿಸುವನು. ಅಂಗನು ಶುದ್ಧ ಜೀವನು. ಅವನು ಲಿಂಗ ಸಮರಸಕ್ಕೆ ಅರ್ಹನಾಗುವನು. ಈ ಸಾಮರಸ್ಯ ಸಿದ್ಧಿಗೆ ಷಟ್‌ಸ್ಥಲವು ಮಾರ್ಗವಾಗಿದೆ. ಅಷ್ಟಾವರಣವು ಅದರಲ್ಲಿ 'ನಡೆ' ಯಾಗಿದೆ ನೈತಿಕ ಬಲವೇ ಪ್ರಾಣವಾಗಿವುಳ್ಳ ಪಂಚಾಚಾರಗಳು ಆ ನಡೆಗೆ ಪ್ರಾಣ ಶಕ್ತಿಯಾಗಿವೆ. ಆತ್ಮನನ್ನು ವಿಕಾಸಗೊಳಿಸಿ ಪರಮಾತ್ಮನಾಗಿಸುವದೇ ಷಟ್

ಸ್ಥಲ. ವೀರಶೈವ ಸಿದ್ಧಾಂತಗಳಲ್ಲಿ ಅಷ್ಟಾವರಣ ಅಂಗ, ಪಂಚಾಚಾರ ಪ್ರಾಣವಾಗಿದ್ದರೆ ಷಟಸ್ಥಲವು ಆತ್ಮವಾಗಿದೆ."

"ಷಟ್‌ಸ್ಥಲ ಮಾರ್ಗದಲ್ಲಿ ಅಷ್ಟಾವರಣ 'ನಡೆ' ಯಾಗಿದೆ ಎಂದು ಅಪ್ಪಣೆಕೊಡಿಸಿದಿರಿ, ಹಾಗಾದರೆ ನಮ್ಮ ನಡವಳಿಕೆಯಲ್ಲಿ ಅಷ್ಟಾವರಣದ ತಿಳುವಳಿಕೆಯೇ ಮೊದಲು ಬೇಕಲ್ಲವೇ ಗುರುದೇವಾ?"

" ಅದು ನಿಜ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ. ವಿಭೂತಿ, ರುದ್ರಾಕ್ಷಿ, ಮಂತ್ರ ಅಷ್ಟಾವರಣಗಳು ಪರಶಿವನ ಅಧಿಷ್ಠಾನದಲ್ಲಿ ರುವ ವಿಮರ್ಶಾಶಕ್ತಿಯು ಜ್ಞಾನಕ್ರಿಯಾರೂಪದಲ್ಲಿರುವದು. ಅಷ್ಟಾವರಣಗಳ ಮೂಲಕ ನಡೆಯುವ ಸಾಧನೆಯು ಕ್ರಿಯಾಜ್ಞಾನಾತ್ಮಕವಾಗಿಯೇ ನಡೆದು ಸಾಮರಸ್ಯ ಸಿದ್ಧಿಯಾಗಬೇಕು. ಆದ್ದರಿಂದ ಈ ಆವರಣಗಳು ಕ್ರಿಯಾ ಷ್ಟಾವರಣಗಳು, ಜ್ಞಾನಷ್ಟಾವರಣಗಳು ಎಂದು ಎರಡು ವಿಧ. ಕ್ರಿಯಾವರಣ ಗಳು ಬಹಿರಂಗವಾದುದರಿಂದ ಅವು ಸಾಮಾಜಿಕವಾಗಿರುವವು, ಪ್ರತ್ಯಕ್ಷ ವಾದ ಈ ಬಹಿರಂಗ ಆವರಣಗಳ ಆಚರಣೆಯು ಅಂತರಂಗದಲ್ಲಿಯು ಜ್ಞಾನಾಷ್ಟಾವರಣಗಳಾಗಿ ಪರಿವರ್ತನೆ ಹೊಂದಬೇಕು. ಅಂದರೆ ಗುರುವಿ ನಿಂದ ಅರಿವು ಲಿಂಗದಿಂದ ಅನುಭವವು ಜಂಗಮದಿಂದ ಆನಂದವು, ಪಾದೋ ದಕದಿಂದ ಚಿದ್ರಸವು ಪ್ರಸಾದದಿಂದ ಪ್ರಸನ್ನತೆಯು (ತೃಪ್ತಿಯು) ವಿಭೂತಿ ಯಿಂದ ಶಿವಪ್ರಕಾಶ, ರುದ್ರಾಕ್ಷಿಯಿಂದ ಜ್ಞಾನದೃಷ್ಟಿಯು, ಮಂತ್ರದಿಂದ ಏಕತ್ವವು ಉಂಟಾಗಬೇಕು. ಹೀಗೆ ಪರಿಣಾಮವು ಉಂಟಾಗದಿದ್ದರೆ ಬಹಿ ರಂಗದಲ್ಲಿಯ ಅಷ್ಟಾವರಣಗಳ ಕ್ರಿಯಾಚರಣೆಯು ನಿರರ್ಥಕವಾಗುವದು. ಕೇವಲ ಡಾಂಭಿಕವಾಗುವದು. ಪರಶಿವನು ಲಿಂಗವಾಗಿ ಅಂಗನಿಂದ ಪೂಜೆ ಗೊಳ್ಳುವದರೊಡನೆ ಅಂಗನ ಉದ್ಧಾರಕ್ಕಾಗಿ ಕ್ರಿಯಾ ಭೇದದಿಂದ ಗುರು ಲಿಂಗ, ಇಷ್ಟಲಿಂಗ. ಜಂಗಮಲಿಂಗ ಎಂಬ ಮೂರು ರೂಪದಲ್ಲಿ ಪೂಜೆಗೊ ಳ್ಳುವನು. "ಹರ ತನ್ನ ರೂಪವ ತೋರಲೆಂದು ಗುರುರೂಪದಿಂದ ಮರ್ತ್ಯಕ್ಕೆ ಬಂದು ಕರಸ್ಥಲಕ್ಕೆ ಲಿಂಗವಾಗಿ, ಪ್ರಾಣಸ್ಥಲಕ್ಕೆ ಜಂಗಮನಾಗಿ. ಸಾಹಿತ

ವಾದನಯ್ಯ ಎಂದು ಚೆನ್ನಬಸವಣ್ಣನವರು ಹೇಳುತ್ತಾರೆ. ಈ ಮೂರು ರೂಪಗಳ ಪೂಜೆಯಲ್ಲಿ ಶಿವನು ಭಕ್ತರು ಬೇರೆ ಬೇರೆ ಯಾಗಿರುತ್ತಾರೆ. ಆದರೆ ಸಾಧನೆಯು ದೇವ-ಭಕ್ತರ ಸಾಮರಸ್ಯಕ್ಕಾಗಿ ಇರುವದಿಲ್ಲವೆ ? ಪಾದೋದಕ ಪ್ರಸಾದಗಳ ಕ್ರಿಯೆಗಳಲ್ಲಿ ಸಾಧಕರು ಶಿವಸಾಮರಸ್ಯವನ್ನು ಆಚರಿಸಿ, ಅನುಭವಿಸುತ್ತ, ಆ ಭಾವನೆಯನ್ನು ಬಲಪಡಿಸಿಕೊಳ್ಳುತ್ತಿರುವವರು. ವಿಭೂತಿ, ರುದ್ರಾಕ್ಷಿ, ಮಂತ್ರಗಳು ಉಪಾಸನಾ ಕ್ರಿಯೆಯಲ್ಲಿ ಸಾಧನೆಗಳಾಗಿವೆ. ಹೀಗೆ ಮೊದಲಿನ ಮೂರು ಪೂಜಾಮೂರ್ತಿಗಳು ಎರಡು ಪೂಜಾಫಲಗಳು, ಮುಂದಿನ ಮೂರು ಪೂಜಾ ಸಾಧನೆಗಳು ಪ್ರತಿಯೊಂದರ ವಿವರ ಮತ್ತೆ ಹೇಳುವೆ."

"ಇವುಗಳ ವಿವರವನ್ನು ಹೇಳಬೇಕು ಹಾಗೆಯೇ ಪಂಚಾಚಾರ ಷಟ್ ಸ್ಥಲಗಳ ವಿಷಯವನ್ನು ತಾವು ಮತ್ತೆ ಹೇಳಬೇಕು ತಿಳಿಸಬೇಕು."

"ಆಗಲಿ ಹೇಳೋಣ ನೀವು ಕೇಳುವದಾದರೆ ಹೇಳುವದೇ ನಮ್ಮ ಕೆಲಸ" ನಗುತ್ತ ನುಡಿದರು ಷಣ್ಮುಖ ಶಿವಯೋಗಿಗಳು ಮಧ್ಯಾಹ್ನದ ಶಿವಾರ್ಚನೆಗೆ ಎದ್ದು ತೆರಳಲನುವಾದರು. ಶ್ರೋತೃಗಳೂ ಎದ್ದು ನಿಂತು ಒಬ್ಬೊಬ್ಬರೇ ಅವರ ಅಡಿಗಳಿಗೆ ಪೊಡಮಾಡುತ್ತಿದ್ದರು. ಆ ಮಠದ ಆವರಣದಲ್ಲಿಯ ದೊಡ್ಡಮರದ ತುದಿಯಲ್ಲಿ ಅಡಗಿ ಕುಳಿತ ಗೂಗೆ ಘೂಕ್ ಘೂಕ್ ಎಂದು ಒದರಿತು.

"ಅಯ್ಯ ಅಪವೇಳೆಯಲ್ಲಿ ಗೂಗೆ ಕೂಗಿತಲ್ಲ! ಎಂದನೊಬ್ಬ ಮೂಢ ಭಾವಿಕ ಭಕ್ತ.

"ಯಾಕಪ್ಪಾ ಏನಾಯಿತು"? ಎಂದರು ಶಿವಯೋಗಿಗಳು.

" ಹಗಲು ಗೂಗೆ ಕೂಗುವದು ಅಶುಭ ಎನ್ನುವರು ಅಪ್ಪಾವರೆ " ನಗುತ್ತ ಸ್ವಾಮಿಗಳು "ಅನ್ನುವವರು ಅನ್ನಲಿ ನೀನು ಇದುವರೆಗೂ ಕೇಳಿದೆಯಲ್ಲಾ, ಸೃಷ್ಟಿಯೆಲ್ಲ ಶಿವಸ್ವರೂಪವೆಂದು. ನಾವು, ಗೂಗೆ, ಎಲ್ಲ ಶಿವ

ಸ್ವರೂಪ ಗೂಗೆಯಂತೆ ನಾವು" ಎಲ್ಲರೂ ಆತನ ಮುಖ ನೋಡಿದರು. ಪಾಪ ಅವನು ನಾಚಿಕೊಂಡ.

" ಬಹು ಜನ್ಮಗಳ ಜಿಗಿ ಬೇಗನೆ ಹೇಗೆ ಹೋದಿತು ಆ ಜಿಡ್ಡು ? ಕೇಳಿ ಕೇಳಿ ಮನನ ಮಾಡಿ ನಡೆದು ನಡೆದು ತೀಡಿ ತೆಗೆಯಬೇಕು " ಎಂದನು ಪರಮಪ್ಪ.

"ನಿಜ ಶರಣ, ಗೂಗೆಗಳ ಕಣ್ಣಿಗೆ ಸೂರ್ಯಪ್ರಕಾಶ ಸಹಿಸಲಾಗುವದಿಲ್ಲ ಆದ್ದರಿಂದ ಅವು ರಾತ್ರಿಯಲ್ಲಿ ಕ್ರಿಯಾನಿರತವಾಗಿರುತ್ತವೆ. ಹಗಲು ಕಣ್ಣು ಮುಚ್ಚಿ ಶಿವಧ್ಯಾನ ಮಾಡುತ್ತವೆ, ಒದರುವದಿಲ್ಲ ಆದರೆ ಇಂದು ಆದಕ್ಕೆ ಅನಾರೋಗ್ಯದ ಭಾದೆ ಏನಾದರೂ ಆಗಿರಬಹುದು. ಅರಚಿತು, ಇದರಲ್ಲಿ ಅಚ್ಚರಿ ಏನು? ಇದರಿಂದ ಮನುಷ್ಯರಿಗೇಕೆ ಶುಭಾಶುಭದ ಪ್ರಶ್ನೆಯುಂಟಾಗಬೇಕು? ಎಲ್ಲ ಪಕ್ಷಿಗಳೂ, ಪಶುಗಳೂ, ತಮ್ಮ ತಮ್ಮ ಸುಖ-ದುಃಖ ಇಚ್ಛೆ ವ್ಯಕ್ತ ಪಡಿಸಲು ವಿವಿಧ ಧ್ವನಿ ಮಾಡುತ್ತವೆ .... "ಹೀಗೆ ಶ್ರೀಗಳು ಎನ್ನುತ್ತಿರುವ ಕ್ಷಣದಲ್ಲಿಯೇ ಗಿಡದ ಮೇಲಿನ ಗೂಗೆ ಧೊಪ್ಪನೆ ಅಂಗಳದತ್ತ ಬಿದ್ದಿತು. ಅತ್ತ ನೋಡಿದರು ಪ್ರಾಣವಿರಲಿಲ್ಲ. ಸ್ವಾಮಿಗಳು "ಸರಿ" ಎಂದು ಕಣ್ಣರಳಿಸಿ ಸುತ್ತಲೂ ನೋಡಿದರು. ನಿಂತವರ ಹಿಂದೆ ಸ್ವಲ್ಪದೂರ ಗೋಡೆಗೆ ಹೊಂದಿ ಇಳಿವಯಸ್ಸಿನ ಬಸವಪ್ಪ ನಿಂತಿದ್ದನು. ಅವನಿಗೆ ಮಕ್ಕಳಾಗಿರಲಿಲ್ಲ. ಆತ ಶಿವಭಕ್ತ ಸದಾಚಾರಿ. ಆದರೆ ಫಲಾಪೇಕ್ಷೆಯಿಂದ ನಿತ್ಯವೂ ಗೋಷ್ಠಿಗೆ ಬರುತ್ತಿದ್ದನು. ಇದು ಸ್ವಾಮಿಗಳಿಗೆ ಗೊತ್ತಿತ್ತು ಅವರು ಅವನನ್ನು ಮುಂದಕ್ಕೆ ಕರೆದು ಬನ್ನಿರಿ ಹಿರಿಯರೆ, ನಿಮಗೆ ಸಂತಾನವಿಲ್ಲ, ಅಖಂಡೇಶ್ವರರಲ್ಲಿ ಮೊರೆ ಇಡುತ್ತಿದ್ದಿರಿ. ಅವರ ಅನುಭಾವಮೃತವ ನಿತ್ಯವೂ ಸೇವಿಸುತ್ತ ಬಂದಿದ್ದೀರಿ. ಮಹಾ ಶಿವಯೋಗಿಯ ಕರುಣೆಯಾಗಿದೆ. ಈಗ ನಿಮಗೆ ಇದು ನೋಡಿ ಈ ಪ್ರಾಣಿ ಅಸುನೀಗಿ ಪುಣ್ಯಯುತವಾಗಿದೆ. ಈ ಜೀವಿಯ ಪುನರ್ಜನ್ಮದಲ್ಲಿ ನಿಮಗೆ ಮಗನಾಗಿ ಜನಿಸಲಿದೆ. ಬೇಗನೆ ನಿಮಗೆ ಗಂಡು ಮಗು ಹುಟ್ಟುವದು. ಅವನಿಗೆ

ಶಿವಣ್ಣನೆಂದು ಹೆಸರಿಡಿರಿ ಅದೇ ನಿಮ್ಮ ಮನೆಯ ಹೆಸರೂ ಆಗುವದು ಎಂದು ಆಶಿರ್ವದಿಸಿ ಅಪ್ಪಣೆಮಾಡಿದರು.

"ಹಸಿದವನಿಗೆ ಅಮೃತದ ಎಡೆ ದೊರೆತಂತೆ" ಬಸವಪ್ಪನು ಇಚ್ಛಿತ ಸಿದ್ಧಿಯ ಆಶೀರ್ವಚನ ಕೇಳಿ ಸಂತುಷ್ಟ ಮನಸಿನವನಾಗಿ ನಮಸ್ಕರಿಸಿದನು.

ಕಡೆಯಲ್ಲಿ ಕುಳಿತ್ತಿದ್ದ ಆದಿ ಜನ ಮಲ್ಲಪ್ಪ "ನಮ್ಮ ಅಪ್ಪನವರ ಕರುಣಾಕಟಾಕ್ಷ ಕಾಮಧೇನು, ವರದಹಸ್ತ ಕಲ್ಪವೃಕ್ಷ ಅಡಿದಾವರೆ ಚಿಂತಾಮಣಿ, ಮುಖೊದ್ಗತವಾಣಿ ಪರುಷದ ಮೇರು" ಅವರ ಜ್ಞಾನ ಬೋಧೆಯ ಪವಿತ್ರ ಕಾಲದಲ್ಲಿ ಅವರ ಅಡಿಯ ಅಂಗಳದಲ್ಲಿ ಬಿದ್ದು ಅಸು ನೀಗಿದ. ಈ ಶಬ್ದ ಸೂತಕ ಹೊತ್ತ ಪ್ರಾಣಿ ಗೂಗೆ ಪಾವನವಾಗದೆ ಉಳಿದೀತೆ? ಗುರುಕೃಪೆಯೊಳೇನುಂಟು, ಏನಿಲ್ಲ ಗುರುಪಾದ ತೀರ್ಥವೇ ಸಂಜೀವಿನಿ ಗುರುವೆ ನಂಬಿದರೆ ಇಲ್ಲಿ ಭವದ ಭೀತಿ-ಗುರುವೆ ಷಣ್ಮುಖ ಯೋಗಿ ನಮೋ ನಮೋ ಎಂದು ಹಾಡಿ ಕುಣಿದು ಕೈಮುಗಿಯುತ್ತಿದ್ದಾನೆ, ಹೀಗೆಲ್ಲ ನನ್ನನ್ನು ಹೊಗಳಬಾರದು ಮಲ್ಲಪ್ಪ. ನಾನೊಬ್ಬ ಕಿಂಕರ" ಎನ್ನುತ್ತ ಸ್ವಾಮಿಗಳು ಒಳಗೆ ನಡೆದರು. ಅವನ ಭಾವೋನ್ಮಾದವನ್ನು ಆಗಾಗ ಕಾಣುತ್ತಿದ್ದವರಿಗೆ ಆಶ್ಚರ್ಯವೇನು ಆಗಲಿಲ್ಲ. ಅವರೆಲ್ಲ ತಮ್ಮ ಮನೆಗೆ ತೆರಳಿದರು.

ಅನುಭವ ಗೋಷ್ಠಿಗೆ ಬರುವವರೆಲ್ಲ ಆತ್ಮೋನ್ನತಿಗಾಗಿಯೇ ಬರುತ್ತಿರಲಿಲ್ಲ. ಕೆಲವರು ಡಂಬಾಚಾರಕ್ಕಾಗಿಯೂ ಬರುತ್ತಿದ್ದರು. ಹೊರಗೆ ಹೋದಬಳಿಕ ಅಂಥವರು. ಈ ತಪಸ್ವಿ ಹೇಳುತ್ತಾರಂತೆ, ವಯಸ್ಸು ಮೀರಿದ ಬಸಪ್ಪನಿಗೆ ಮಗ ಹುಟ್ಟುತ್ತಾನಂತೆ, ಇಷ್ಟು ದಿವಸ ಹಡೆಯಲಿಕ್ಕೆ ಏನು ತಡೆಯಾಗಿತ್ತು? ಎಂದು ಹಾಸ್ಯ ಮಾಡುತ್ತ ನಡೆದರು. ಆದರೆ ಶಿವಕೃಪೆಯ ಫಲಿತಾಂಶವನ್ನು ತಡೆಯಲು ಯಾರಿಗೆ ಸಾಧ್ಯ?

ಬಸವಪ್ಪ ಮನೆಗೆ ಬಂದು ಮಡದಿಗೆ ಶಿವಯೋಗಿಗಳು ತಮಗೆ ಮಗ ಜನಿಸುವನೆಂದು ಆಶೀರ್ವದಿಸಿ ಅಪ್ಪಣೆ ಕೊಡಿಸಿದ ಸಂದೇಶವನ್ನು ತಿಳಿಸಿ

ದನು. ಆ ಸತಿ ಶಿವಯೋಗಿಗಳ ನುಡಿಗಳಲ್ಲಿ ನಂಬಿಗೆಯುಳ್ಳವಳು ನಿಶ್ಚಿತವಾಗಿಯೂ ತಮ್ಮಿಷ್ಟ ನೆರವೇರುವದೆಂದು ಭಾವಿಸಿ ಮನಸ್ಸಿನಲ್ಲಿಯೇ ಅವರ ಪಾದಕ್ಕೆ ಪ್ರಣಾಮಸಲ್ಲಿಸಿ ಪತಿಯ ಉಪಚಾರ ಕೈಕೊಂಡಳು. ಮತ್ತು ಭಕ್ತಿಯಿಂದ ನಿತ್ಯವು ಶ್ರೀ ಅಖಂಡೇಶ್ವರ ಗದ್ದುಗೆ ದರ್ಶನ ಪಡೆಯುತ್ತಿದ್ದಳು,

ಬಸವಪ್ಪನ ಹೆಂಡತಿಗೆ ಋತುಕಾಲ ಮೀರಿರಲಿಲ್ಲ. ಗುರುವಚನದಂತೆ ಆಕೆ ಗರ್ಭಿಣಿಯಾದಳು. ದಿನ ತುಂಬಿ ಯೋಗ್ಯಕಾಲದಲ್ಲಿ ಗಂಡು ಮಗುವನ್ನು ಹೆತ್ತಳು. ಬಸವಪ್ಪನು ಮಠಕ್ಕ ಹೋಗಿ ಶಿವಯೋಗಿಗಳ ಸನ್ನಿಧಿಗೆ ಈ ಸಂತಸದ ಸುದ್ದಿಯನ್ನು ಅರಿಕೆ ಮಾಡಿ ಬಂದನು. ಸಕ್ಕರೆ ಹಂಚಿದನು. ಮನೆಯ ಕುಲಗುರುಗಳನ್ನು ಬರಮಾಡಿಕೊಂಡು ಕೂಸಿಗೆ ಲಿಂಗಧಾರಣ ಮಾಡಿಸಿದನು. ಆನಂದದ ಸಂಭ್ರಮ! ಅಪಹಾಸ್ಯಕಾರರ ಬಾಯಿ ಕಟ್ಟಿ ಹೋಯಿತು. ಅಸೂಯಾ ಪರರ ಅಸೂಯೆ ಹೆಚ್ಚಾಯಿತು. ನಾಮಕರಣದ ದಿನ ಗೊತ್ತು ಮಾಡಲ್ಪಟ್ಟಿತು. ಈ ತೊಟ್ಟಿಲ ಕಾರ್ಯವನ್ನು ಸಡಗರದಿಂದ ಮಾಡುವ ಹುಮ್ಮಸ ಉಂಟಾಯಿತು. ಸ್ನೇಹಿತರೆಲ್ಲ ಸಹಕರಿಸಿ ಅಭಿಮಾನದಿಂದ ಜರುಗಿಸಲು ಸಿದ್ಧರಾದರು. ಷಣ್ಮುಖ ಶಿವಯೋಗಿಗಳನ್ನು ಅಂದು ವೈಭವದಿಂದ ಮನೆಗೆ ಬಿಜಯಂಗೈಸಿ ಕೊಳ್ಳುವ ನಿರ್ಣಯವಾಯಿತು.

ಅಂದಿನ ಹಿಂದಿನ ದಿನ ಬಸವಪ್ಪನು ಕಾಯಿ ತಕ್ಕೊಂಡು ಶಿವಯೋಗಿಗಳಿಗೆ ಬಿನ್ನಹ ಮಾಡಲು ಮಠಕ್ಕೆ ಹೋದನು. ಶಿವಯೋಗಿಗಳು ಮಲ್ಲಪ್ಪನೊಡನೆ ಮಾತನಾಡುತ್ತಲೇ ಕುಳಿತಿದ್ದರು. ಬಸವಪ್ಪನು ಬಂದು ತೆಂಗು ಇಟ್ಟು ಸಾಷ್ಟಾಂಗ ಹಾಕಿ "ನಾಳೆ ಮನೆಗೆ ದಯಮಾಡಿಸಬೇಕು. ಅಲ್ಲಿ ಲಿಂಗಾರ್ಚನೆಯಾಗಿ ತೀರ್ಥಪ್ರಸಾದ ಕರುಣಿಸಬೇಕು. ಎಂದು ಭಿನ್ನವಿಸುತ್ತೇನೆ. ತಮ್ಮ ಕೃಪೆಯಿಂದ ನಾಮಕರಣ ಮಹೋತ್ಸವ ಹಮ್ಮಿಕೊಂಡಿದ್ದೇನೆ ತಮ್ಮ ಮೊಮ್ಮಗನನ್ನು ಆಶೀರ್ವದಿಸಿ ಕಾಪಾಡಬೇಕು............." ಎಂದು ಬೇಡಿಕೊಂಡನು. ಯಾವ ಯೋಚನೆಮಾಡದೆ ಬರುವೆವು ಏಳಪ್ಪ ಭಕ್ತ" ಎಂದರು. ಬಸವಪ್ಪ ಮತ್ತು ಬಂದವರು ಪಾದಕ್ಕೆ ವಂದಿಸಿ ಕುಳಿತರು. ಮತ್ತೆ

ಶ್ರೀಗಳು, ಬಸವಪ್ಪಾ ಈ ಮಲ್ಲಪ್ಪನಿಗೂ ಊಟಕ್ಕೆ ಹೇಳಬೇಕು ಎನ್ನಲು ಆಗಲಿ ಬುದ್ಧೀ ಎಂದು ಬಸವಪ್ಪನು ಮಲ್ಲಪ್ಪನಿಗೂ ಊಟದ ಆಮಂತ್ರಣ ವಿತ್ತನು. ಕೆಲಸ ಕಾರ್ಯಗಳನ್ನು ನೆನಸಿ ಅಪ್ಪಣೆ ಪಡೆದು ನಡೆದರು.

ಮರುದಿನ ಬೆಳಗಿನ ಜಾವದಲ್ಲಿ ಷಣ್ಮುಖ ಶಿವಯೋಗಿಗಳು ಎದ್ದಂತೆ ಪ್ರಾತಃವಿಧಿಗಳನ್ನು ತೀರಿಸಿ ಸ್ನಾನ ಶಿವಾರ್ಚನೆ ನೆರವೇರಿಸಿಕೊಂಡು ಬಂದು ಅಖಂಡೇಶ್ವರ ಗದ್ದುಗೆ ದರ್ಶನ ಮಾಡಿ ಶಿವಾನುಭವ ಮಂಟಪ ದಲ್ಲಿ ಸಿಂಹಾಸನದ ಮೇಲೆ ಮಂಡಿಸಿದ್ದರು. ಕಾಷಾಯಾಂಬರ ತೊಟ್ಟು ಭಸ್ಮರುದ್ರಾಕ್ಷಿಧಾರಣ ಕಾಂತಿ ಕಳೆಯು ಮುಖಾರವಿಂದದಲ್ಲಿ ಸುಪ್ರಸನ್ನತೆಯು ಸೌರಭ ಸೂಸುತ್ತಿರುವ ಅವರ ದರ್ಶನಕ್ಕೆ ಭಕ್ತರೂ ಬಂದರು. ಬರ ತೊಡಗಿದ್ದರು. ನಿತ್ಯದ ಗೋಷ್ಠಿಯಲ್ಲಿ ಆಸಕ್ತಿಯುಳ್ಳ ಭಕ್ತರೂ ಬಂದರು ಇಂದು ಗೋಷ್ಠಿಯಲ್ಲಿ ಪಂಚಾಚಾರಗಳ ಪ್ರಸ್ತಾಪವಾಯಿತು. ದೇಹ ಆತ್ಮಗಳ ನಡುವೆ ಅವೆರಡರ ಸಂಬಂಧವನ್ನುಂಟು ಮಾಡುವ ಪ್ರಾಣವಿದ್ದಂತೆ, ಷಟ್‌ಸ್ಥಲ ಮಾರ್ಗದಲ್ಲಿ ಅಷ್ಟಾವರಣದ ಕಡೆಗೆ ಪಂಚಾಚಾರಗಳು ನೈತಿಕ ಬಲದ ಪ್ರಾಣಶಕ್ತಿಯಾಗಿವೆ. ಎಂಬುದರಿಂದ ಆರಂಭಿಸಿ ಲಿಂಗಾಚಾರ ಸದಾಚಾರ, ಶಿವಾಚಾರ, ಭೃತ್ಯಾಚಾರ, ಗಣಾಚಾರಗಳನ್ನು ಬೋಧಿಸುತ್ತಿದ್ದರು ಅಷ್ಟರಲ್ಲಿ ಬಸವಪ್ಪನು ಹಲವಾರು ಪ್ರಮುಖರನ್ನೊಳಗೊಂಡು ವೈಭವದೊಡನೆ ಕರೆಯು ಬಂದರು, ಅತೀತೋತ್ಸಾಹದಿಂದ ಉತ್ಸವದಲ್ಲಿ ಕೂಡ್ರಿಸಿದನು. ಪರಿವಾರವೆಲ್ಲ ಬಂದು ನಮಿಸಿದರು. ಮಲ್ಲಪ್ಪನನ್ನು ಕರೆಯಿಸಬೇಕೆಂದು ಬಸವಪ್ಪನಿಗೆ ಸ್ವಾಮಿಗಳು ಸೂಚಿಸಿದರು. ತತ್‌ಕ್ಷಣ ಬಸವಪ್ಪ ಕರೆಯು ಹೋಗಿದ್ದಾರೆ ಬುದ್ಧೀ! ಎಂದನು. ಅವನ ಉತ್ತರ ರೀತಿಯನ್ನು ನೋಡಿ ಸ್ವಾಮಿಗಳು, ಮಲ್ಲಪ್ಪ ಆದಿವಾಸಿ ಆದ್ದರಿಂದ ಈ ಜನ ತಮ್ಮಲ್ಲಿ ಕೂಡಿಸಿಕೊಳ್ಳಲು ಸಿದ್ಧರಿಲ್ಲವೆಂದು ಕೊರಗಿದರು.

ಶಿವಯೋಗಿಗಳ ಸ್ನಾನ ಮಾಡಿಸಿದರು. ಸಂಭ್ರಮದಿಂದ ಪಾದಪೂಜೆ ಜರುಗಿತು. ಕ್ರಿಯಾಚಾರ ಸಂಪನ್ನರೆಲ್ಲ ಪಾದತೀರ್ಥ ತಕ್ಕೊಂಡರು. ಮಗುವನ್ನು ಸ್ವಾಮಿಗಳ ಮುಂದೆ ಅವರಡಿಯಲ್ಲಿ ಮಲಗಿಸಿದರು. ಶ್ರೀಗಳು

ಸ್ವಹಸ್ತದಿಂದ ಅದರ ಮೈಗೆ ಭಸ್ಮ ಹೂಸಿ ಮುಖಕ್ಕೂ ಲಿಂಗಕ್ಕೂ ಭಸ್ಮ ಧರಿಸಿ ಬಾಯಿಯಲ್ಲಿ ತೀರ್ಥ ಎರೆದರು. "ಶಿವಣ್ಣ" ಹೆಸರಿಟ್ಟರು. ತೊಟ್ಟಿಲಲ್ಲಿಟ್ಟು ಜೋಗುಳ ಹಾಡಿರೆಂದು ಸುಮಂಗಲೆಯರಿಗೆ ಆಜ್ಞಾಪಿಸಿ ಕಳಿಸಿದರು.

ಸ್ವಾಮಿಗಳ ಎದುರುಗಡೆಯಲ್ಲಿ ಎರಡು ಸಾಲಾಗಿ ಗಣಂಗಳನ್ನು ಕೂಡ್ರಿಸಿ ಎಡೆ ಮಾಡಹತ್ತಿದರು. ಪಾಯಸ, ಕರಿಗಡಬು. ಅವುಗಳಿಗೆ ಸಹಾಯಕವಾಗುವ ಹಲವಾರು ವಿವಿಧ ಭಕ್ಷ್ಯಗಳು ಬಂದವು. ಅರ್ಪಿತಕ್ಕೆ ಭಿನ್ನವಿಸಿ ಸಾಷ್ಟಾಂಗ ಹಾಕಲು ಹರಕೆಯ ಘೋಷದೊಡನೆ ಪ್ರಸಾದ ಭೋಜನ ಆರಂಭವಾಯಿತು. ಷಣ್ಮುಖ ಶಿವಯೋಗಿಗಳು ತಮ್ಮ ವಾಡಿಕೆಯ ಊಟದ ಪರಿಮಿತಿಯನ್ನು ಮೀರಿ ಉಣಹತ್ತಿದರು. ಪಟ್ಟಿ ಸಾಮಾನ್ಯ ಮನುಷ್ಯ ಉಣ್ಣುವ ಅಳತೆಯು ಹಿಂದುಳಿತು. ಕಡಬು ತನ್ನಿರಿ ತುಪ್ಪಾ ಎಡೆಮಾಡಿರಿ ಎನ್ನುವರು. ಮತ್ತೆ ಪಾಯಸ, ಕಡಬು ತರಿಸಿದರು. ತಮ್ಮ ದೈನಂದಿನ ಊಟದ ಇಮ್ಮಡಿ, ಮುಮ್ಮಡಿ ಊಟ ಮಾಡಿದರು. ಸಹಪಂಕ್ತಿಯ ಗಣಂಗಳಿಗೂ ಪರಿವಾರಕ್ಕೂ ಆಶ್ಚರ್ಯವಾಯಿತು. ಇದು ಶಿವಯೋಗಿಯ ಲೀಲೆ ಎಂದು ಶ್ರದ್ಧಾಳುಗಳು ಭಾವಿಸಿ ಹರ್ಷತಾಳಿದರು. ಎಲ್ಲ ಮಂಗಲ ಕಾರ್ಯಗಳು ಯಥಾರೀತಿ ಪೂರೈಸಿದವು. ಸ್ವಾಮಿಗಳನ್ನು ಗೌರವ ಪೂರ್ವಕವಾಗಿ ಮಠಕ್ಕೆ ಕಳುಹಿಸಿ ಬಂದರು.

ಅತ್ತ ಊರ ಹೊರವಲಯದಲ್ಲಿಯ ತನ್ನ ಮನೆಯಲ್ಲಿ ಮಲ್ಲಪ್ಪ ಜಳಕ ಮಾಡಿ ಲಿಂಗಾರ್ಚನೆಗೈದು ತನ್ನನ್ನು ಊಟಕ್ಕೆ ಕರೆಯ ಬರುವ ದಾರಿ ಕಾಯುತ್ತ ಕುಳಿತ್ತಿದ್ದನು. ಶಿವಯೋಗಿಗಳನ್ನು ಬಸವಪ್ಪನೆ ಮನೆಗೆ ಕರೆದುಕೊಂಡು ಹೋದ. ವಾದ್ಯಗಳ ಸಪ್ಪಳ ಕೇಳಿದ್ದನು. ಇಷ್ಟರಲ್ಲಿ ಕರೆಯ ಬರುವವರೆಂದು ತಿಳಿದಿದ್ದನು. ಗಳಿಗೆ ಗಳಿಗೆ ಕಳೆದವು ಯಾರು ಬರಲಿಲ್ಲ. ಶುಚಿರ್ಭೂತವಾಗಿ ಕುಳಿತಿದ್ದ ಆತನು ಶಿವನಾಮ ಜಪಮಾಡುತ್ತ ಶಿವಧ್ಯಾನದಲ್ಲಿ ಮಗ್ನನಾದನು. ಮೈಮರೆತನು ಹೊರಗೆ ನಡೆಯಬೇಕಾಗಿದ್ದ ಕ್ರಿಯೆಗಳೆಲ್ಲ ಒಳಗೆ ಸೂಕ್ಷ್ಮ ಶರೀರದಲ್ಲಿ ನಡೆದಿದ್ದವು. ಕೆಲಹೊತ್ತಾದ ಮೇಲೆ ಎಚ್ಚರಾಯಿತು. ಪ್ರಕೃತಿಕೆ ಬಂದನು. ಹೊಟ್ಟೆತುಂಬಿತ್ತು. ತೃಪ್ತಿಯ ತೇಗು ಹೊರಬಿತ್ತು. ತನ್ನ ಜೀವನ ಕಾಯಕದಲ್ಲಿ ತೊಡಗಿದನು.

ಇತ್ತ ಗಣ್ಯಪಂಕ್ತಿ ಮುಗಿದ ಮೇಲೆ ಹೊರಗಿನ ಜನಗಳನ್ನು ಕರೆ

ಯುವಾಗ ಮಲ್ಲಪ್ಪನನ್ನು ಕರೆಯಹೋದರು. ನಾನು ಬಸವಪ್ಪನವರಲ್ಲಿ ಊಟ ಮಾಡಿ ಬಂದಿದ್ದೆನಲ್ಲ. ಮತ್ತೇಕೆ ಬರಬೇಕು. ಸ್ವಾಮಿಗಳ ಪಂಕ್ತಿಯಲ್ಲಿಯೇ ಊಟ ಮಾಡಿದ್ದೇನೆ ಪಾಯಸ, ಕರಿಗಡಬು, ತುಪ್ಪ, ವಡಿ. ಹಪ್ಪಳ ಸೆಂಡಿಗೆ, ಅನ್ನ ಸಾರು ಎಲ್ಲ ಉಂಡಿದ್ದೇನೆ. ನೀವು, ನೋಡಿರಲಿಕ್ಕಿಲ್ಲ ಎನ್ನುತ್ತ ಅಂದಿನ ಪಾಕಪದಾರ್ಥಗಳನ್ನು ಸರಿಯಾಗಿ ಹೇಳಿದನು. ಕರೆಯು ಬಂದವರಿಗೆಲ್ಲ ಸೋಜಿಗವಾಯಿತು. ಮರಳಿ ಬಂದು ಮನೆಯಲ್ಲಿ ಹೇಳಿದಾಗ ಅಲ್ಲಿದ್ದವರೆಲ್ಲ ಕೌತುಕ ಪಟ್ಟರು. ಕೆಲವರು ಗುಂಪುಗೂಡಿ ಇದು ಶಿವಯೋಗಿ ಲೀಲೆ ಅವರು ಇಂದು ಅಳತೆಮೀರಿ ಉಂಡುದರ ಅರ್ಥ ಈಗಾಗುತ್ತಲಿದೆ. ಹೆಚ್ಚಿಗೆ ಉಂಡುದರಲ್ಲಿ ಮಲ್ಲಪ್ಪನ ತೃಪ್ತಿಯಾಗಿದೆ ಅಪ್ಪನವರ ಮಹಿಮೆ ಅಪಾರ ಎಂದು ಮಾತನಾಡಿದರು. ಸಮಾಜದ ಸಾಂಪ್ರದಾಯಕ್ಕಾಗಿ ತಾನು ಸ್ವಾಮಿಗಳ ಮುಂದೆ ಸುಳ್ಳು ಹೇಳಿದುದಕ್ಕೆ ಬಸಪ್ಪನಿಗೆ ಪಶ್ಚಾತ್ತಾಪವಾಯಿತು. "ನಾನು ತಪ್ಪು ಮಾಡಿದೆ, ಅಪ್ಪನವರ ಸ್ಮರಣೆ ಅನಂತ, ಭಕ್ತವತ್ಸಲರಾದ ಅವರು ತಾವೇ ಲೀಲೆ ಗೈದು ಸರಿ ಪಡಿಸಿದ್ದಾರೆ. ಮಲ್ಲಪ್ಪನ ಹೊಟ್ಟೆ ತುಂಬಿಸಿದ್ದಾರೆ. ಎನ್ನುತ್ತ ಮಿತ್ರರೊಡನೆ ಮಠಕ್ಕೆ ಬಂದನು. ಸ್ವಾಮಿಗಳ ಅಡಿಯಲ್ಲಿ ಹೊರಳಿ ತನ್ನ ತಪ್ಪನ್ನು ಅರಿಕೆಮಾಡಿ ಕ್ಷಮಿಸಬೇಕೆಂದು ಬೇಡಿಕೊಂಡನು. ಶಿವಯೋಗಿಗಳು ನಕ್ಕರು ನಮಸ್ಕರಿಸಿದರು. ಎಲ್ಲರಿಗೂ ಕುಳಿತುಕೊಳ್ಳಲು ಹೇಳಿ " ಅಜ್ಜ ಸಮಾಜದಲ್ಲಿದ್ದ ನೀನು ಸಂಪ್ರದಾಯದ ಒತ್ತಡದಲ್ಲಿ ಹಾಗೆ ಹೇಳಬೇಕಾಯಿತು. ನೀನೇನು ಮಾಡೀ? ಸಾವಿರಾರು ವರ್ಷದಿಂದ ಬಂದ ರೂಢಿಯು ಬೇರು ಕೀಳುವದು ಬಹಳ ಕಷ್ಟದ ಕೆಲಸ.

ಹೊಲೆಗಂಡಲ್ಲದೆ, ಪಿಂಡದ ನೆಲೆಗಾಶ್ರಯವಿಲ್ಲ
ಜಲಬಿಂದುವಿನ ವ್ಯವಹಾರವೊಂದೇ
ಆಶೆಯಾಮಿಷರೋಷ ಹರುಷ ವಿಷಯಾದಿಗಳೆಲ್ಲ ಒಂದೇ
ಏನನೋದಿ, ಏನಕೇಳಿ ಏನುಫಲ?

ಎಂದು ಕಳವಳಗೊಂಡಿದ್ದಾರೆ ಬಸವಣ್ಣನವರು.

ಕೊಲುವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ
ಕುಲವೇನೋ ಆವಂದಿರ ಕುಲನೇನೋ
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು

ಎಂದು ಸತ್ಕಾಲದ ಲಕ್ಷಣ ಹೇಳುತ್ತಾರೆ. ಮಲ್ಲಪ್ಪ ಶರಣನಾಗಿದ್ದಾನೆ. ಅವನಲ್ಲಿ ನಿಜದ ನಿಲುವಿದೆ. ಅವನು ಹೊಲಗೇರಿಯಲ್ಲಿದ್ದ ಮಾತ್ರಕ್ಕೆ ಕೀಳನೆ? ದುರ್ಗುಣದ ಹೊಲೆಯರು ಊರಲ್ಲಿ ಎಷ್ಟು ಜನರಿಲ್ಲ, ಹೊಲೆಯು ಹೊಲಬಿಗನಾದರೆ ಅವನ ಹೊರೆಯಲ್ಲಿರುವದು ಲೇಸು ಕಂಡಯ್ಯ! ಹೊಲಬುಗೆಡನೆಲಿಂಗ ಶರಣರೆನ್ನಿರಯ್ಯ! ಹೊಲಬುಗೆಡಬೇಡ ಶಿವಶರಣು ಎನ್ನಿರಯ್ಯ! ಕೂಡಲಸಂಗಮದೇವಾ ಮಹಮನೆಯಲ್ಲಿ ಮಾದಾರ ಚೆನ್ನಯ್ಯ ಹೊಲಬಿಗನಯ್ಯಾ! ಎಂದು ನುಡಿದಿದ್ದಾರೆ ಅಣ್ಣನವರು "ಹೊಲಗೇರಿಗೂ, ಶಿವಾಲಯಕ್ಕೂ ನೆಲವೊಂದೇ ಶೌಚಕ್ಕೂ ಆಚಮನಕ್ಕೂ ಜಲವೊಂದೇ ಎಲ್ಲವು ಒಬ್ಬ ಶಿವನ ಪ್ರತಿಷ್ಠಾನದಲ್ಲಿವೆ ಅವೆಲ್ಲ ಅವನ ಸ್ವರೂಪದಲ್ಲಿಯೇ ಇವೆ. ಈ ಮೇಲು-ಕೀಳುಗಳ ಅಸಮತಿ ಸ್ವಪ್ರತಿಷ್ಠೆಯ ಮೋಹ! ಇದು ಎಂದು ಅಳಿದೀತೋ ಶಿವನೇ ಬಲ್ಲ ಅದಾಗದೆ ಶಿವಸಾಕ್ಷಾತ್ಕಾರ ಸಾಧ್ಯವೇ ಇಲ್ಲ.

ಕುಂಭ , ಸಹಸ್ರ ಉದಕದೊಳಗೆ ಬಿಂಬಿಸಿ ತೋರುವ
ಸೂರ್ಯನು ಒಬ್ಬನಲ್ಲದೆ ಮತ್ತೆ ಹಲವರುಂಟೆ ಅಯ್ಯಾ
ಸಕಲ ವೇಷಿದೊಳಗೆ ಸಂಭ್ರಮಿಸಿ ತುಂಬಿರ್ಪ ಪರವಸ್ತು
ನೀನೊಬ್ಬನಲ್ಲದೆ ಮತ್ತಾರನೂ ಕಾಣೆನಯ್ಯ ಅಖಂಡೇಶ್ವರಾ||

ಈ ಅರಿವು ನೀ ಕರುಣಿಸಿದವರಿಗಲ್ಲದೆ ಇನ್ನಾರಿಗೂ ಉಂಟಾಗುವದು ಸಾಧ್ಯವಿಲ್ಲ "ಕ್ಷಣ ಹೊತ್ತು ಕಣ್ಣು ಮುಚ್ಚಿ ಗುರುಪಾದ ನೆನೆದರು. ಒಳ್ಳೆಯದು ಬಸಪ್ಪನವರೇ ಹೋಗಿ ಬನ್ನಿರಿ ನಿಮಗೆ ಶುಭವಾಗಲಿ"

ಪುನಃ ಪುನಹ ವಂದಿಸಿ ಬಸವಪ್ಪ ಸಂಗಡಿಗರೊಡನೆ ನಡೆದನು.

ಲೀಲಾಮಾಲೆ

ಸಂಗಮದ ಗುರುಕುಲದಲ್ಲಿ ಬಸವಣ್ಣನವರು ಚೈತನ್ಯ ಪಡೆದರು ಅಲ್ಲಿಯೇ ಐಕ್ಯರಾದರು. ಆ ಪ್ರಾಚೀನ ಗುರುಕುಲ ಸ್ಥಳವನ್ನು ಬಸವಣ್ಣನವರ ಗದ್ದುಗೆಯನ್ನು ಸಂದರ್ಶಿಸಲು ಷಣ್ಮುಖಶಿವಯೋಗಿಗಳು ಸಂಗಮದ

ಪ್ರಯಾಣ ಕೈಕೊಂಡರು. ಅಲ್ಲಲ್ಲಿ ಬಿಡಾರ ತಂಗಡಗಿಗೆ ಬಂದರು. ಅಲ್ಲಿರ್ದ ಸಂಗಯ್ಯ ಇಲ್ಲಿಲ್ಲವೇ. ಎಂದು ತಂಗಿ ನೀಲಮ್ಮ ಲಿಂಗದಲ್ಲಿ ಅಡಗಿದ ಸ್ಥಳ ತಂಗಡಗಿ ಆ ಮಹಾಶರಣೆ ತಾಯಿಯ ದರ್ಶನ ಪಡೆದು ಷಣ್ಮುಖ ಶಿವ ಯೋಗಿಗಳು ಸಂಗಮಕ್ಕೆ ಹೋಗಲು ಸಿದ್ಧರಾದರು. ಕೃಷ್ಣೆ-ಮಲಾಪಹಾರಿ ಯೊಡನೆ ಕೂಡಿ ತುಂಬಿ ಹರಿಯುತ್ತಿದ್ದಳು. ಹೊಳೆಯ ದಂಡೆಯ ತಡೆಗ ಟ್ಟೆಯ ಹತ್ತಿರ ನಾವಿಗಾಗಿ ಕಾಯ್ದು ಜನ ನಿಂತಿದ್ದರು. ಸ್ವಾಮಿಗಳು ಅಲ್ಲಿಗೆ ಬಂದರು. ನಾವು ಬಂದು ನಿಂತಿತು. ಏರುವ ಹರಿಗೆ ಹಾಕಿದಳು. ನಾ ನೀ ಎಂದು ಜನರು ನುಗ್ಗಿ ಏರತೊಡಗಿದರು. ಸಹಜ ಅವಕಾಶದಲ್ಲಿ ಶ್ರೀಗಳೂ ಸೇರಿ ಏರ ಬಂದರು. ಓ ಸನ್ಯಾಸಿ ನಿಲ್ಲು, ಸರಿ ಹಿಂದೆ ನಮಗೆ ಸಂಸಾರದ ಅವಸರವಿದೆ ನಿನಗೇನಿದೆ! ಹಿಂದೆ ಬಾ, ಇಲ್ಲವೆ ಇನ್ನೊಮ್ಮೆ ಬಾ ಎಂದ ನೊಬ್ಬ ದಾಂಡಿಗ ಈ ಊರೇನು ? ಮುಂದಿನೂರೇನು ? ಸರಿಯಪ್ಪ ಹಿಂದಕ್ಕೆ ಎಂದು ಮುಂದೆ ಹೋದ ಮತ್ತೊಬ್ಬ, ಆಯ್ಯನವರೇ ನಿಲ್ಲಿರಿ ನಿಮಗೇನು ಗಡಿಬಿಡಿ ಬದಿಗಾಗಿರಿ ಎಂದನು ಅವರಲ್ಲಿಯೇ ಸಂಭಾವಿತ ನೊಬ್ಬ ಅವರನ್ನು ಹಿಂದೆ ತಳ್ಳುತ್ತ ಮುಂದೆ ದಡ ದಡ ಹೋಗಿ ನಾವು ಹತ್ತಿದರು. ತುಂಬಿಕೊಂಡು ನಾವು ಹೊರಟಿತು. ಸ್ವಾಮಿಗಳು ನೀರ ಹತ್ತಿ ರದ ಒಂದು ದೊಡ್ಡ ಕಲ್ಲು ಮೇಲೆ ಕುಳಿತರು, ಅವರ ಹತ್ತಿರವೇ ಬಂದ ಒಂದು ಮೊಸಳಿ ತಲೆ ಎತ್ತಿ ತೋರಿತು. ಹೊ! ಅಖಂಡೇಶ್ವರನೇ ಇದನ್ನು ನಾವೆಯಾಗಿ ಕಳಿಸಿದ್ದಾನೆ, ಹತ್ತೋಣ ಅವನಿಚ್ಛೆ! ಪವಿತ್ರ ಸ್ಥಳದಲ್ಲಿದ್ದು ಪಟ್‌ಸ್ಥಲದ ಸವಿಮಾತು ಸವಿದು ಬಂದಿದೆ ಇಲ್ಲಿಗೆ ಮೊಸಳಿ ಎಂದವರೇ ಅದರ ಬೆನ್ನೇರಿ ಕುಳಿತರು. ಮೊಸಳೆ ಕರೆದೊಯ್ದಿತು ಆಚೆಯ ದಂಡೆಗೆ! ಸ್ವಾಮಿಗಳನ್ನಿಳಿಸಿ ತಾನು ಮನುಷ್ಯನಾಗಿ ನಿಂತಿತು. ಅವರ ಪಾದಕ್ಕೆರಗಿತು. ನಾವೂ ಬಂದು ಜನ ಹಿಂದೆ ಏರಿ ಬಂದರು. ಇದೇನು! ನಾವು ಹೊರಟಾಗ ಆಚೆಯ ತೀರದಲ್ಲಿ ಈ ಅಯ್ಯನವರು ನಮಗಿಂತ ಮುಂದೆ ಬಂದಿದ್ದಾರಲ್ಲ! ಹತ್ತಿರ ಮೊಸಳೆ ಒಂದು ಕಂಡಿತು. ಈಗ್ಗ ನಮಸ್ಕಾರ ಮಾಡಿ ಮನುಷ್ಯ ನಾಗಿ ನಿಂತಿದೆ. ಇವರು ಮಹಾತ್ಮರು ನಾವು ತಿಳಿಯದೇ ಇವರನ್ನು ಕಡೆಗ ಣಿಸಿ ನಿಂದಿಸಿದೆವು. ಇಷ್ಟು ಮಾತ್ರ ಅನ್ನುತ್ತ ಅವಸರದಿಂದ ತಮ್ಮ ಹಾದಿ

ಹಿಡಿದು ಹೋದರು. ಶಿವ ಬಂದು ತಡೆದರೂ ಸಂಸಾರಕ್ಕೆ ಓಡುವದನ್ನು ಬಿಡಲಾರದ ಜನ ಇದು ಸ್ವಾಮಿಗಳಿಗೆ ನಗು! "ಮಾಯೆ ಎಷ್ಟು ಬಲ ನಿನ್ನದು? ಸಂಗಯ್ಯನ ಸಂಗಗೊಳಿಸದೆ ಮಂಗನಂತೆ ಆಡಿಸುವೆ ಈ ಲೋಕದ ಜನರನ್ನು " ಎನ್ನುತ್ತಾ ಹೊಸ ಮನುಷ್ಯನತ್ತ ಹೊರಳಿ ತಲೆ ಬಾಗಿ ಕೈ ಮುಗಿದು ನಿಂತಿದ್ದ ಆತನಿಗೆ "ಏನಪ್ಪ ನಿನಗೀ ಅವಸ್ಥೆ ಏಕೆ ಬಂತು?'' ಎಂದರು. ಮಹಾತ್ಮರೇ ನಾನೊಬ್ಬ ಶ್ರೀಮಂತರ ಮಗ, ತಂದೆ ಒಳ್ಳೆಯವ ಗುರುಭಕ್ತ. ಆದರೆ ನಾನು ದುಷ್ಟನಾದೆ. ದುಷ್ಟ ಚಟಗಳ ಬೆನ್ನ ಹತ್ತಿ ತಂದೆ ನನ್ನನ್ನು ಪೀಡಿಸುತ್ತಿರುವದನ್ನು ತಡೆಯದೇ ಒಂದು ದಿನ ಆತ ಮಲಗಿದಾಗ ಅವನನ್ನು ಕೊಲ್ಲಲು ಕೊಡಲಿ ಎತ್ತಿದೆ. ಅವನ ಗುರುಗಳು ಬಂದು ಕೊಡಲಿ ಹಿಡಿದು ತಡೆದರು. ಗದ್ದಲಕ್ಕೆ ಕಣ್ದೆರೆದು ಕಂಡ ತಂದೆ '' ಮೊಸಳೆಯಂತೆ ಇರುವ ದುಷ್ಟ ಮಗನೇ ಮೊಸಳೆಯಾಗು ಎಂದು ಶಾಪ ಕೊಟ್ಟರು. ಅದನ್ನು ನಿವಾರಿಸಲಿಕ್ಕಾಗದೆಂದು ಗುರುಗಳು ನಾನು ಅತ್ತು ಕರೆದೆ. ಉಭಯತರಿಗೆ ಬೇಡಿಕೊಂಡೆ. ಗುರುಗಳು ನಿನಗೆ ತಂದೆ ಪೂಜ್ಯ ಅವರಿಗೆ ಮಾಡಿದ ದ್ರೋಹದ ಶಿಕ್ಷೆ ಅನುಭವಿಸಲೇಬೇಕು. ನಿನ್ನಿಂದ ಮಹಾಮಹಿಮ ಜಂಗಮ ಮೂರ್ತಿಯೊಬ್ಬರ ಸೇವೆ ಘಟಿಸಿದಾಗ ನಿನಗ್ಗೆ ಪರಿಹಾರವಿದೆ ಎಂದರು. ನಾನು ಮೊಸಳೆಯಾದೆ. ಹೊಳೆಹೊಕ್ಕೆ ಕ್ರೂರನಾದೆ ಆದರೆ ಇಂದು ನಿಮ್ಮನ್ನ ಕಂಡು ನನ್ನ ಕ್ರೂರ ಸ್ವಭಾವವನ್ನೇ ಮರೆತೆ. ನಿಮ್ಮ ಸೇವೆ ಮಾಡಿ ಶಾಪ ಮುಕ್ತನಾದೆ. ಮತ್ತೆಮತ್ತೆ ನಮಿಸಿದ ಆವನು. ಗುರುಗಳು ಆಶೀರ್ವದಿಸಿ ಕಳಿಸಿದರು.

ಷಣ್ಮುಖ ಶಿವಯೋಗಿ ಸಂಗಮ ಕ್ಷೇತ್ರದಲ್ಲಿ ಕುಳಿತರು. ಸಂಗಯ್ಯನ ದರ್ಶನ ಪಡೆದು ಬಸವಣ್ಣ ಆಡಿದ, ಬಸವಣ್ಣ ಓದಿದ, ಬಸವಣ್ಣ ಸಾಧನೆ ಮಾಡಿದ, ಇದೇ ನೆಲ, ಇದೆ ಸ್ಥಲ, ಇದೇ ಪುಣ್ಯಭೂಮಿ, ಎಂದು ಭಾವಿಸಿ ಆನಂದಿಸಿದರು. ಬಸವಣ್ಣನನ್ನು ಎಷ್ಟು ಕೊಂಡಾಡಿದರೂ ತೃಪ್ತರಾಗದ ಅವರ ಎದೆ ತುಂಬಿ ಬಂದು ಮಂಟಪದಲ್ಲಿ ಕುಳಿತು ಬಸವಣ್ಣನ ಭಕ್ತಿ

ಆತ್ಮಜ್ಞಾನ, ಸೋದರತ್ವ, ಬಸವಣ್ಣನ ಸಮತೆ ಬಸವಣ್ಣನ ಮಹಿಮೆ ಇವುಗಳನ್ನು ಕುರಿತು ಮನಸಾರೆ ಹಾಡಿದರು. ತನುತ್ರಯ, ಆತ್ಮತ್ರಯ, ಲಿಂಗತ್ರಯ, ಪ್ರಸಾದತ್ರಯ ಇವು ಬ. ಸ. ವ ಅಕ್ಷರತ್ರಯಗಳಲ್ಲಿಯೇ ಅಡಕಗೊಂಡಿವೆ. ಭಕ್ತಿ, ಕ್ರಿಯಾ, ಜ್ಞಾನಗಳೂ ಆ ಮೂರಕ್ಷರಗಳಲ್ಲಿಯೇ ಸಮನ್ವಯಗೊಂಡಿವೆ. ಬಸವೇಶ ನಿಮಗೆ ನಮೋ ನಮೋ' ಎನ್ನ ತನುವೇ ಬಸವಣ್ಣನು ಎನ್ನ ಮನವೇ, ಚೆನ್ನಬಸವಣ್ಣನು, ಎನ್ನ ಪ್ರಾಣವೇ ಪ್ರಭುದೇವರು, ಎನ್ನ ಸರ್ವ ಕರ್ಮಗಳೆಲ್ಲ ಅಸಂಖ್ಯಾತ ಮಹಾಗಣಂಗಳಾಗಿರ್ಪವಯ್ಯಾ ಅಖಂಡೇಶ್ವರಾ ನಿಮ್ಮೊಳಗ ನಿಜವು ಸಾಧ್ಯವಾಗಿತಯ್ಯಾ" ಎಂಬುದಾಗಿ ಸಮರಸ ಸುಖ ಅನುಭವಿಸಿದರು.

ಮದ್ರಿಕಿ ಗ್ರಾಮದ ಹಿರೆಮಠದ ರಾಚೋಟಿಸ್ವಾಮಿಗಳು ಲಿಂಗನಿಷ್ಟರೂ, ಅನುಭಾವಿಗಳೂ ಆಗಿದ್ದರು. ಆಲೂರ ದಕ್ಷಿಣಕ್ಕೆ ದಿಗ್ಗಿ ಎಂಬದು ಒಂದು ಊರು. ಅಲ್ಲಿ ಸಂಗಮನಾಥ ದೇವಾಲಯವಿದೆ. ಆ ಕ್ಷೇತ್ರದಲ್ಲಿ ಕೆಲವು ದಿನ ಅನುಷ್ಠಾನ ಗೈದರು. ಆ ಊರ ಭಕ್ತರು ಬಸವ ಪುರಾಣ ಕೇಳುವ ಅಭಿಲಾಷೆಯಿಂದ ರಾಚೋಟಿ ಸ್ವಾಮಿಗಳನ್ನು ಕೇಳಿಕೊಂಡರು. ಆ ಸ್ವಾಮಿಗಳು ಎಲ್ಲ ಏರ್ಪಾಡು ಮಾಡಿಕೊಟ್ಟರು, ಗ್ರಾಮ ಭಕ್ತರು ಪುರಾಣ ಮಂಗಲಕ್ಕೆ ಷಣ್ಮುಖ ಸ್ವಾಮಿಗಳಿಗೆ ಬಿನ್ನಹ ಮಾಡಿ ಬರಮಾಡಿಕೊಂಡರು. ಪ್ರಸಾದ ವಿತರಣೆ ಸಹಿತ ಕಾರ್ಯಗಳು ರಾತ್ರಿಯಲ್ಲಿಯೇ ನಡೆದವು. ಅಮವಾಸಿ ಕತ್ತಲು, ಗಾಳಿಗೆ ದಿವಟಿಗೆಗಳು ನಿಲ್ಲದಾದವು. ಕಾರ್ಯಕ್ಕೆ ತೊಂದರೆಯಾಗಹತ್ತಿತ್ತು. ರಾಚೋಟಿಸ್ವಾಮಿಗಳೂ, ಪ್ರಮುಖರೂ ವಿವಂಚನೆಗೊಳಗಾದರು. ಷಣ್ಮುಖಸ್ವಾಮಿಗಳು ಬಂದು " ಶಿವನು ನಡೆಸುತ್ತಾನೆ ಆಕಾಶದಿಂದ ಬೆಳಕು ಬಂದೀತು. ಶಿವಕಾರ್ಯ ತಡೆಯದಿರಿ ಮುಂದುವರಿಯಲಿ" ಎಂದರು. ಎರಡುಗಳಿಗೆ ಆಗುವ ಸಮಯಕ್ಕೆ ಚಂದ್ರೋದಯವಾದಂತೆ ಒಂದು ಗ್ರಹ ಮೂಡಿ ಏರಿ ಬಂದಿತು. ಅದರ ಶಾಂತ ಪ್ರಕಾಶ ಅಲ್ಹಾದಕರವಾಗಿ ಪಸರಿಸಿತು. ಕಾರ್ಯಗಳು ಸುಗಮವಾಗಿ ನೆರ

ವೇರಿದ್ದು ಇದು ಜೇವರಗಿ ತಪಸ್ವಿಗಳ ಮಹಿಮೆ ಎಂದು ಜನರು ಕೊಂಡಾಡಿದರು.

ಷಣ್ಮುಖ ಸ್ವಾಮಿಗಳು ಅಮೀನಗಡಕ್ಕೆ ಬಂದರು. ಸಾಂಖ್ಯಯ ನೈಯಾಯಿಕ ಪಂಡಿತರೆನಿಸಿಕೊಂಡ ಕೆಲವರು ಈ ಶಿವಯೋಗಿಗಳ ಕೀರ್ತನೆಗೆ ಅಸೂಯೆ ಪಟ್ಟು ಅಲ್ಲಿ ಅವರನ್ನು ಕಂಡು ವಾದಕ್ಕಿಳಿದರು. ಶಿವಯೋಗಿಗಳು ಅವರ ವಾದವನ್ನು ಖಂಡಿಸಿ ವೀರಶೈವ ಸಿದ್ಧಾಂತದ ಸತ್ಯತೆಯನ್ನು ಪ್ರತಿಷ್ಠಾಪಿಸಿದರು. ಅಲ್ಲಿ ವಿಜಯ ಧ್ವಜವನ್ನು ನೆಟ್ಟರು. ನಾಸ್ತಿಕನೊಬ್ಬನ ಚಿಲಿಮೆಯಲ್ಲಿ ಅಗ್ನಿ ಇಲ್ಲದೇ ತಮ್ಮ ನೇತ್ರಾಗ್ನಿಯಿಂದ ಬೆಂಕಿಯನ್ನು ಹೊತ್ತಿಸಿದರು. ಅವರ ವಿಜಯದ ಸ್ಮಾರಕವಾಗಿ ಅಲ್ಲಿಯ ವೀರಶೈವ ಭಕ್ತರು ಒಂದು ಮಠವನ್ನು ಕಟ್ಟಿಸಿ ನಿತ್ಯ ಗುರುವಚನ ಪಾರಾಯಣ ಮಾಡಿದರು. ಆದಕ್ಕೆ ಅಖಂಡೇಶ್ವರ ವಚನ ಪಾರಾಯಣ ಮಠವೆಂದು ಕರೆಯುತ್ತಾರೆ.

ಮುಂದೆ ಜೇವರಿಗೆಗೆ ಹೊರಟು ಮುದ್ದೇಬಿಹಾಳಕ್ಕೆ ಬಂದು ಹೊರವಲಯದಲ್ಲಿಯ ಶಿವಾಲಯದಲ್ಲಿ ಲಿಂಗಪೂಜೆ ಮಾಡಿಕೊಂಡು ಮುಂದಿನ ಪ್ರಯಾಣಕ್ಕೆ ಸಿದ್ಧರಾದರು. ಆ ಸಮಯದಲ್ಲಿ ಶಿವಬಸಪ್ಪ, ಸಂಗಮ್ಮ ಎಂಬ ದಂಪತಿಗಳಿಗೆ ಬಹುದಿವಸಕ್ಕೆ ಹುಟ್ಟಿದ ಮಗು ಮೃತ ಪಟ್ಟಿತು. ಅವರಿಗೆ ಅತಿ ದುಃಖವಾದುದರಲ್ಲಿ ಆಶ್ಚರ್ಯವಿಲ್ಲ. ಅದನ್ನು ಹೂಗಿಯಲು ಆ ಶಿವಾಲಯದ ಮುಂದೆ ಹಾಯ್ದು ಹೋಗುತ್ತಿದ್ದರು. ಶಿವಯೋಗಿ ನೋಡಿ ಅವರ ದುಃಖಕ್ಕೆ ಕರುಣೆ ತಾಳಿ ಅದನ್ನು ಕೆಳಗಿಡಿಸಿ ಅಣ್ಣೆಂಬ ನೋಡಿ ಏಳು ಮಗು ಭುವಿಯಲ್ಲಿ ನಿನ್ನ ಬಾಳು ಬೆಳಗಬೇಕಾಗಿದೆ. ಏಳು ಎಂದು ಅಮೃತ ಹಸ್ತ ಎಳೆದರು. ಮಗು ಎಚ್ಚತ್ತೆದ್ದಿತು: ತಂದೆ ತಾಯಿಗಳಿಗೆ ಈಗ ಆ ದುಃಖದಷ್ಟೇ ಸಂತೋಷ ಸ್ವಾಮಿಗಳಿಗೆ ಪೊಡಮಟ್ಟು ನಲಿದಾಡಿದರು.

ತೆಲಗುಬಾಳು ಗ್ರಾಮಕ್ಕೆ ಬಂದರು. ಅಮರಪ್ಪನೆಂಬ ರೈತನು

ಅತ್ಯಂತ ಬಡವನು. ಹೊಲದ ದಂಡೆಯಲ್ಲಿ ಬಡಕಲು ಎತ್ತು ಕಟ್ಟಿ ಕುಳಿತು ಅಳುತ್ತಿದ್ದನು. ಸ್ವಾಮಿಗಳು ಅಲ್ಲಿಗೆ ಬಂದು ಅವನ ದುಃಖದ ಕಾರಣ ಕೇಳಿದರು, 'ಸ್ವಾಮಿ ನಾನು ಒಡವ, ಮಡದಿ ಮಕ್ಕಳಿಗೆ ಅರೆಹೊಟ್ಟೆ ಊಟ! ಸಾಲಮಾಡಿ ತಂದ ಬೀಜ ತಿಂದಿದ್ದೇವೆ ಇನ್ನೇನು ಬಿತ್ತಲಿ? ಎನ್ನುತ್ತ ಎದ್ದು ಬಂದು ಅಡ್ಡ ಬಿದ್ದು ವಂದಿಸಿದನು. ಶ್ರೀಗಳು " ಅಂಜಬೇಡ ಏಳು ಅಖಂಡೇಶ್ವರ ಕರುಣೆಯಿಂದ ಎಲ್ಲ ಪರಿಹಾರವಾಗುವವು. ಹೊಲದ ಹಳ್ಳದಲ್ಲಿಯು ಮಳಲನ್ನೇ ಆತನ ಹೆಸರಿನಿಂದ ಬಿತ್ತು" ಎಂದರು. ಅಪ್ಪನವರೇ ದೈವಹೀನನ ಹಸ್ತದಿಂದ ಮಳಲು ಮೊಳೆತು ಬೆಳೆ ಬಂದೀತೆ? ತಾವೇ ಬಿತ್ತಿ ಈ ಬಡವನ ಬವಣೆ ಕಳೆಯಬೇಕು. ಬಿದ್ದು ಬೇಡಿಕೊಂಡನು. ಕೂರಿಗೆ ಹೂಡಿ ಕೊಟ್ಟನು. ಶಿವಯೋಗಿಗಳು ಅಮೃತ ಹಸ್ತಸ್ಪರ್ಶಮಾಡಿ ಮಳಲು ಕಟ್ಟಿಕೊಂಡು ಬಿತ್ತುತ್ತಸಾಗಿದಂತೆ ಹಿಂದೆ ಸಸಿಗಳು ಹುಟ್ಟಿ ಸಾಲುಗೊಂಡವು. ಅಮರಪ್ಪ ಅವರಡಿಯಲ್ಲಿ ಹೊರಳಾಡಿ 'ಮಹಾತ್ಮರೇ ಬಡತನ ಹಿಂಗಿಸಿದ ಮಹಾದಾನಿಗಳೇ ನಿಮ್ಮನ್ನೆಂತು ಮರೆಯಲು ಸಾಧ್ಯ. ನಿಮ್ಮ ಆವುಗೆ ಕೊಡಿರಿ ಪೂಜಿಸಿ ಕೃತಾರ್ಥನಾಗುವೆ' ಎಂದು ಕೈಮುಗಿದು ಕೇಳಿದನು. ಅವ ನಿಚ್ಛೆಯನ್ನು ಪೂರೈಸಿ ಸ್ವಾಮಿಗಳು ಮುಂದೆ ನಡೆದರು. ಜೇವರಗಿಗೆ ಬಂದರು.

ಗೌನಳ್ಳಿ ಗ್ರಾಮದ ಶಿವಲಿಂಗಪ್ಪ ಲಿಂಗಪ್ಪಗೋಳ ಈತನು ಗುರು ಲಿಂಗ ಜಂಗಮ ಪ್ರೇಮಿ ಆದರೂ ರೋಗ, ಕಲಹ, ಶಿಸು ಮರಣ ಇಂಥಹ ಕಷ್ಟಗಳು ನಿರಂತರ ಒದಗುತ್ತಿದ್ದವು. ಊಟದಕ್ಕದೆ ಕೂಸು ಸಾಯುತ್ತವೆ ಹೆಂಡತಿಗೆ ಭೂತಬಾಧೆ ಶಿವಲಿಂಗಪ್ಪನಿಗೆ ಸಂಸಾರದಲ್ಲಿ ಜಿಗುಪ್ಸೆ ಆಗಿತ್ತು. ಕೋಳಕೂರ ಮಾಲಿಗೌಡರ ಹತ್ತಿರ ತನ್ನ ಸರ್ವಕಷ್ಟ ತೋಡಿಕೊಂಡನು. ಕೋಳಕೂರ ಬಸವಗೌಡನು ಜೇವರ್ಗಿಯ ಶಿವಯೋಗಿ ಮಹಿಮೆ ಕಂಡುಂಡವನು ಆತನು ಗೌನಳ್ಳಿ ಶಿವಲಿಂಗಪ್ಪನಿಗೆ ಜೇವರಗಿ ಶಿವಯೋಗಿಗಳ ಪಾದಕ್ಕೆ ಮೊರೆ ಪೋಗಲು ಹೇಳಿದನು. ಸ್ವಾಮಿಗಳನ್ನು ಮನೆಗೆ ಬಿಜಯಂಗೈಸಿಕೊಳ್ಳಲು ಸೂಚಿಸಿದನು. ಅದರಂತೆ ಆತನು ಜೇವರಗಿಗೆ ಬಂದು ತನ್ನ ಮನೆಗೆ ಬಂದು ತಾಪತ್ರಯವನ್ನು ಕಳೆದು ಪೊರೆಯಬೇಕೆಂದು ಬಿನ್ನವಿಸಿ

ದನು. ಕರುಣಾಕರ ಶಿವಯೋಗಿ ಒಪ್ಪಿ ಬಂದರು. ಅಲ್ಲಿ ಲಿಂಗಾರ್ಚನೆಗೈದರು. ಪಾದೋದಕ ಪ್ರಸಾದ ನೀಡಿದರು. ಅವರ ಕರುಣೆಯಿಂದ ಬ್ರಹ್ಮಿಷ್ಟಳಾಗಿದ್ದ ಕಿರಿಯ ಸೊಸೆಯ ಮೇದುಳಿಗೆ ಸ್ವಾಸ್ಥ್ಯ ಉಂಟಾಯಿತು, ಕುಟುಂಬದವರಿಗೆಲ್ಲ ಅವರ ಆಗಮನದಿಂದ ಜಿಗುಪ್ಸೆ ತೊಲಗಿ ಜೀವನ ಕಳೆಗೊಂಡಿತು. ಶಿವಲಿಂಗಪ್ಪನು ತನ್ನ ಮನೆಯಲ್ಲಿ ಶಿವಯೋಗಿ ಸ್ಮರಣಾರ್ಥ ಗದ್ದುಗೆ ಕಟ್ಟಿಸಿದ್ದಾನೆ. ಆ ಮನೆತನದವರು ಪೂಜಿಸುತ್ತಲಿದ್ದಾರೆ. ತಮ್ಮ ಬಯಕೆಗಳನ್ನು ಪಡೆಯುತ್ತಿದ್ದಾರೆ.

ಭೌತಿಕ ಶ್ರೀಯುಳ್ಳ ಆಧ್ಯಾತ್ಮಿಕ ವೈಭವ ಮೆರೆದ ನಾಡು ಸಗರ ನಾಡು. ಮಳೆಯಿಂದ ಜಲಸಮೃದ್ಧಿಯನ್ನು ತಂದು ಹರಿಯುತ್ತಿರುವ ಭೀಮಾ ಆ ನಾಡ ನೆಲವನ್ನು ಸಫಲಗೊಳಿಸುತ್ತಿದ್ದಾಳೆ. ಅಲ್ಲಿ ಆ ನದಿ ತೀರದಲ್ಲಿ ಚಿನಮಳ್ಳಿ ಎಂಬುದು ಸಂಪದ್ಭರಿತ ಗ್ರಾಮವು ಮಲ್ಲಿಕಾರ್ಜುನ ದೇವ ಮಂದಿರವು ಶಾಂತಿಸುಖದ ನೆಲೆಬೀಡು. ಅಲ್ಲಿಯ ಹಿರಿಯರು ಒಮ್ಮೆ ಒಂದುಗೂಡಿ "ಶ್ರೀ ಗುರುವರ ಷಣ್ಮುಖಸ್ವಾಮಿಗಳನ್ನು ಬರಮಾಡಿಕೊಂಡು ಬಸವೇಶ್ವರ ಪುರಾಣ, ಪ್ರವಚನ, ನಡೆಯಿಸಿ, ಶರಣ ಚರಿತಾಮೃತ ಸವೆದು ಪುನೀತರಾಗೋಣ 'ಎಂದು ಯೋಚಿಸಿದರು. ಯೋಚನೆ ಕಾರ್ಯರೂಪಕ್ಕೆ ಬಂದು ಪ್ರವಚನ ಆರಂಭವಾಯಿತು. ಶ್ರೋತೃಸಂಖ್ಯೆ ಬೆಳೆಯಿತು. ಮಲ್ಲಿಕಾರ್ಜುನ ಮಂದಿರ ಸಾಲದೇ ಮುಂದೆ ದೊಡ್ಡ ಮಂಟಪ ಹಾಕಬೇಕಾಯಿತು. ಮಹಿಮಾಶಾಲಿ ಷಣ್ಮುಖ ಶಿವಯೋಗಿ ಸನ್ನಿಧಿ ಭೀಮಾತೀರದ ಸುರಮ್ಯ ಸ್ಥಳ ವಿಹಾರ ಮಂಗಲೋತ್ಸವದ ದಿನ ಪರಸ್ಥಳದ ಜನರು ಅಳತೆ ಮೀರಿ ಬರಹತ್ತಿದರು. ಬಂದರು. ನದಿಯ ದಂಡೆಯ ಸ್ನಾನಸ್ಥಳದಲ್ಲಿ ಗದ್ದಲ ಹೆಚ್ಚಾಯಿತು. ಆಲೂರ ಶ್ರೀಮಂತ ಮನೆತನದ ಶೈವ ಬ್ರಾಹ್ಮಣ ವೃದ್ಧೆಯೊಬ್ಬಳು ಶ್ರದ್ಧಾವಂತೆ. ಸ್ವಾಮಿಗಳ ದರ್ಶನಕ್ಕೆ ಹೋಗುವ ಮೊದಲು ಸ್ನಾನಕ್ಕೆಂದು ಹೊಳೆಗೆ ಹೋದಳು. ಗದ್ದಲದಾಟಿ ಆಚೆಗೆ ಹೋಗಿ ನೀರಿಗಿಳಿದಳು. ಅಲ್ಲಿ ಮಡುವಿತ್ತು. ಆಕೆಗೆ ಗೊತ್ತಿರಲಿಲ್ಲ. ಕಾಲುಜಾರಿ ಮಡುವಿಗೆ ಬಿದ್ದು ಮುಳುಗಿದಳು. ನೋಡಿದ ಜನರು ಓಡಿಬಂದು ಮಡುವಿನಲ್ಲಿ

ಮುಳುಗಿ ಹುಡುಕಾಡಿ ಎತ್ತಿ ಮೇಲೆ ತಂದರು. ಜೀವ ಹೋಗಿತ್ತು. ಸುದ್ದಿ ಕೇಳಿ ಮನೆಯವರು ಧಾವಿಸಿಬಂದರು. ಜನ ಮುಕರಿಗೊಂಡಿತ್ತು. ವೈದ್ಯರು ಬಂದು ನೋಡಿದರು. ಪ್ರಾಣಪಕ್ಷಿ ಹಾರಿಹೋಗಿದೆ ಎಂದರು. ಬಂಧು ಬಾಂಧವರು ಗೋಳಾಡುತ್ತಿದ್ದರು. ಮಂಗಲ ಮಹೋತ್ಸವಕ್ಕೆ ಬಂದ ಜನರ ಉತ್ಸಾಹಕ್ಕೆ ರಾಹುಬಡಿದಂತಾಯಿತು.

ಹೀಗೇಕಾಯಿತು, ಏನು ಮಾಡಬೇಕು? ಮುಖ್ಯರಿಗೆ ದಿಗಿಲು-ಒಬ್ಬ ಸದ್ಭಾವಿ ಬುದ್ಧಿವಂತನು " ಸ್ವಾಮಿಗಳು ಸಾಕ್ಷಾತ್ ಶಿವಸ್ವರೂಪರಿದ್ದಾರೆ. ಅವರ ಹೃದಯ ಕರುಣಾರಸದಿಂದ ತುಂಬಿದೆ. ಅವರ ಹಸ್ತ ಅಮೃತ-ಹಸ್ತ ಸಂಜೀವಿನಿ, ಅವರಿಗೆ ಮರೆಹೋಗಬೇಕು ಎಂದರು. ಹಲವರು ಹೌದು. ಹೌದು, ಈ ದೇಹವನ್ನು ಅವರ ಪಾದದಲ್ಲಿ ಹಾಕಿ ಬೇಡಿಕೊಂಡರೆ ಈ ಅಜ್ಜಿ ಬದುಕುವದರಲ್ಲಿ ಸಂದೇಹವಿಲ್ಲ ಎಂದರು, ಆ ಮಾತಿನಲ್ಲಿ ಎಲ್ಲರಿಗೆ ನಂಬಿಗೆ! ಕೂಡಲೇ ಆಕೆಯ ಪಾಲಕರು ಆ ದೇಹವನ್ನು ತಕ್ಕೊಂಡು ಹೋಗಿ ಅಪ್ಪಗಳ ಮುಂದೆಹಾಕಿ ಈ ಸಂಕಟದಿಂದ ಪಾರು ಮಾಡಬೇಕೆಂದು ಅಡಿಗೆ ಪೊಡಮಟ್ಟು ಬೇಡಿಕೊಂಡರು. ನಂಬಿ ಕರೆದಡೆ ಬಂದು ನಿಲ್ಲುವ' ಪರಶಿವ ಸ್ವರೂಪ ಶಿವಯೋಗಿ ಬಂದು ಮೌನವಾಗಿ ನೆಟ್ಟ ದೃಷ್ಟಿಯಿಂದ ಕೆಲವು ನಿಮಿಷ ನಿಂತರು. ಬಳಿಕ ಭಸ್ಮವನ್ನು ತರಿಸಿ ಮೈಮೇಲೆ ಧೂಳಿಕರಿಸಿ ಏಳಮ್ಮ ತಾಯಿ ನೂರಾರು ಜನರು ಕಾತರದಿಂದ ನಿಂತಿದ್ದಾರೆ. ಎದ್ದು ಅವರನ್ನು ಸಂತೋಷಗೊಳಿಸು ಶಿವಕೃಪೆಯಾಗಿದೆ. ಏಳು ಏಳಮ್ಮ ಎನಲು ಅಜ್ಜಿ ಎದ್ದು ಕುಳಿತಳು. ಹರಹರಾ ಮಹಾದೇವಾ, ಹರಹರಾ ಮಹಾ ದೇವಾ ಧ್ವನಿ ಜನಜಾತ್ರೆಯಲ್ಲಿ ಭೋರ್ಗರೆಯಿತು. ಪುರಾಣ ಮಂಗಲ ಮಹೋತ್ಸವ ಮತ್ತಿಷ್ಟು ಕಳೆಗೊಂಡು ಮುಂದುವರಿಯಿತು.

ಮುದುಕಿಯ ಪಾಲಕರಾದ ಆ ಶ್ರೀಮಂತರು ಶಿವಯೋಗಿಗಳಿಗೆ ವಂದಿಸಿ ಕೈಮುಗಿದು "ನಮ್ಮಲ್ಲಿ ತಮ್ಮ ಪಾದಪ್ರವೇಶ ಆಗಬೇಕು" ಎಂದು ಬೇಡಿಕೊಂಡರು. ಎಲ್ಲ ಭಕ್ತರ ಮುಖಭಾವವು ಈ ಬಿನ್ನಹವನ್ನು ಅನು ಮೋದಿಸುವಂತಿತ್ತು ಶ್ರೀಗಳು ಒಪ್ಪಿಕೊಂಡರು. ಜಹಗೀರದಾರರು ಉತ್ಸವ

ಪೂರಕವಾಗಿ ಶಿವಯೋಗಿಗಳನ್ನೂ. ಊರ ಪ್ರಮುಖರನ್ನೂ, ಮನೆಗೆ ಬಗು ಮಾಡಿಕೊಂಡರು, ಯತೀಶ್ವರನ ಪಾದಪೂಜೆ ಮಾಡಿ ಕೆಲವೊಂದು ಭೂಮಿ ಯನ್ನು ಕಾಣಿಕೆಯಾಗಿ ಅರ್ಪಿಸುವ ನಾಮಪತ್ರವನ್ನು ಅವರ ಅಡಿಯಲ್ಲಿಟ್ಟು ಸ್ವೀಕರಿಸಬೇಕೆಂದು ಪ್ರಾರ್ಥಿಸಿದರು, ಷಣ್ಮುಖಶಿವಯೋಗಿಗಳು ಅದನ್ನು ಸ್ವೀಕರಿಸಿ ಮಲ್ಲಿಕಾರ್ಜುನ ಮಂದಿರಕ್ಕೆ ಬರುವ ಯಾತ್ರಿಕರ ಸೌಕರ್ಯಕ್ಕಾಗಿ ಈ ಭೂಮಿಯ ಉತ್ಪಾದನೆಯನ್ನು ಉಪಯೋಗಿಸಲು ಅಲ್ಲಿಯ ಪಂಚರಿಗೆ ಅದನ್ನು ಕೊಟ್ಟರು ಈ ಸಂದರ್ಭದಲ್ಲಿ ಹರುಷವೇರಿದ ಭಜಕರು ಮಂಗಲಾ ರತಿ ಮಾಡುವಾಗ ಹಾಡಿದ ಸ್ತೋತ್ರ ಇದು

ಷಣ್ಮುಖ ಶ್ರೀ ಗುರು ಚಿನ್ಮಯ ಮೂರ್ತಿ
ಜಗವನು ಬೆಳಗುವ ಜಂಗಮಮೂರ್ತಿ
ಶಿವನೇ ಜಂಗಮ ರೂಪವ ಧರಿಸಿ
ಭವಭಯ ಅಳಿವನು ಜಗದಲಿಚರಿಸಿ
ಪರಮಪ್ರಸನ್ನನು ಪರಮಜ್ಞಾನಿ
ಕರುಣಾಮೃತಮಯ ನಿರೂಪಮತೇಜನ
ಆತನ ಭಕುತರ ಪೊರೆಯುವ ಪ್ರೇಮಿ
ಲಿಂಗದ ಚೈತನ್ಯವೇ ತಾನಾಗಿ
ಜಂಗಮ ಲಿಂಗವು ಪರಶಿವಯೋಗಿ

ಚಿನ್ಮಳ್ಳಿಯಲ್ಲಿ ಸಂಭವಿಸಿದ ಶಿವಯೋಗಿ ಲೀಲಾಘಟನೆಗಳ ಸುತ್ತಲೂ ಹಬ್ಬಿತು. ನೆಲ್ಲಗಿಯ ದೈವದ ದೊಡ್ಡ ಗುಂಪೊಂದು ಸ್ವಾಮಿಗಳ ದರ್ಶ ನಕ್ಕೆ ಬಂದಿತು, ಅವರಲ್ಲಿ ಕೆಲವು ಪ್ರಮುಖರು ತಮ್ಮ ದೇವರ ಮನೆ ಬಸವಪ್ಪನನ್ನು ಮುಂದೆ ಮಾಡಿಕೊಂಡು ಷಣ್ಮುಖ ಸ್ವಾಮಿಗಳನ್ನು ಒಮ್ಮೆ ಪ್ರತ್ಯೇಕವಾಗಿ ಒಮ್ಮೆ ದರ್ಶನ ಮಾಡಿ ಕೈ ಮುಗಿದು "ಪೂಜ್ಯರೇ ನಮ್ಮೂ ರಿಗೆ ದಯಮಾಡಿಸಿ. ಶ್ರೀ ಅಖಂಡೇಶ್ವರ ಸುಧೆಯನ್ನೆರೆದು ನಮಗೆ ಆ ಮೂಲಕ ತತ್ವಬೋಧೆ ಮಾಡಬೇಕೆಂದು" ಬೇಡಿಕೊಂಡರು. ತಮ್ಮ ಗುರು ಗಳು ತಮ್ಮಲ್ಲಿ ನಿಧಿಯಾಗಿರಿಸಿದ ತತ್ವಜ್ಞಾನವನ್ನು ತಮ್ಮ ವಚನಗಳ

ಮೂಲಕ ಬೋಧಿಸುವದಕ್ಕೆ ಇದೊಂದು ಒಳ್ಳೆಯ ಅವಕಾಶವೆಂದು ಸ್ವಾಮಿ ಸಂತೋಷದಿಂದ ಒಪ್ಪಿಕೊಂಡರು.

ನೆಲ್ಲಗಿಗೆ ಬಂದು ಅನುಭವಗೋಷ್ಠಿಯನ್ನು ನಡೆಸಿದರು. ಅಲ್ಲಿ ತಮ್ಮ ಷಟ್‌ಸ್ಥಲ ಪ್ರವಚನ ಮಾಡಿದರು. ದಿನಕ್ಕೊಂದು ಸ್ಥಲದ ವಿವೇಚನೆಯಾಯಿತು. ಅದರ ತತ್ವಬೋಧೆಯ ಸಾರ ಹೀಗಿತ್ತು.

ಭಕ್ತ : ಚಿತ್ ನಿಶ್ಚಲವಾಗಿ ಸದ್‌ಭಕ್ತಿನೆಲೆಗೊಂಡಿರಬೇಕು. ನಿರ್ವಂಚಕ ಭಾವದಿಂದ ಗುರುಲಿಂಗ ಜಂಗಮಗಳಿಗೆ ತನುಮನಧನಗಳನ್ನು ಅರ್ಪಿಸಬೇಕು. ಸಂಗನ ಬಸವಣ್ಣನು ಈ ಸ್ಥಲಕ್ಕೆ ಶ್ರೇಷ್ಠ ಆದರ್ಶನು.

ಮಹೇಶ್ವರ ; ಸಕಲ ಕರ್ಮಗಳು ಕ್ಷಯವಾಗಬೇಕು. ಕ್ರಿಯೆಗಳೆಲ್ಲ ಲಿಂಗಕ್ಕಾಗಿರಬೇಕು. ಹೊನ್ನು ಹೆಣ್ಣು ಮತ್ತು ಮೋಹದಸಂಗಗಳ ತ್ಯಜಿಸಿರಬೇಕು. ವೀರ ಮಹೇಶ್ವರನೆನಿಸಿದ ಮಡಿವಾಳ ಮಾಚಯ್ಯನು ಈ ಸ್ಥಲಕ್ಕೆ ಶ್ರೇಷ್ಠ ಆದರ್ಶನು,

ಪ್ರಸಾದಿ ; ಶಿವಜ್ಞಾನ ಪರಾಯಣನಾಗಿರಬೇಕು. ಹಲ್ಲುಕಡ್ಡಿ, ಕನ್ನಡಿಗಳಿಂದ ಮೊದಲು ಮಾಡಿ ಸರ್ವ ಭೋಗ್ಯ ವಸ್ತುಗಳನ್ನು ಲಿಂಗಕ್ಕೆ ಕೊಟ್ಟಲ್ಲದೇ ಕೊಳ್ಳದಿರಬೇಕು. ಈ ಸ್ಥಲಕ್ಕೆ ಚನ್ನಬಸವಣ್ಣನವರು ಪರಮಾದರ್ಶ ಮಹಾನುಭಾವಿಗಳು.

ಪ್ರಾಣಲಿಂಗ : ನಿತ್ಯಾನಿತ್ಯ ವಿಚಾರವನ್ನು ಅರಿತಿರಬೇಕು. ಪ್ರಪಂಚದಲ್ಲಿ ಇದ್ದೂ ಇಲ್ಲದಂತಿರಬೇಕು. ಶುದ್ಧ-ಸಿದ್ಧ ಪ್ರಾಣಲಿಂಗಿಯಾದ ಸಿದ್ಧರಾಮನು ಈ ಸ್ಥಲಕ್ಕೆ ಶ್ರೇಷ್ಠ ಆದರ್ಶನು.

ಶರಣ ; ಅಹಂಕಾರದ ಮೂಳೆಯ ಮುರಿದಿರಬೇಕು. ಸಕಲಭೋಗೋಪ ಭೋಗಗಳನ್ನು ತಾನೆಂಬ ಭಾವವಿಲ್ಲದೆ ಲಿಂಗ ಮುಖವನರಿದು ಕೊಡಬೇಕು. ಅನುಭಾವದಲ್ಲಿ ಆಸಕ್ತನಾಗಿರಬೇಕು. ಉರಿಲಿಂಗಪೆದ್ದಿಗಳು

ಉರುತರದ ಶರಣರೆನಿಸಿ ಶರಣಸ್ಥಲಕ್ಕೆ ಪರಮಾದರ್ಶ ಆಗಿರುವರು.

ಐಕ್ಯ : ಬಿನ್ನಭಾವ ಅಳಿದು ಮಹಾಜ್ಞಾನದೊಳಗೆ ಓಲಾಡ ಬೇಕು. ಸರ್ವಸ್ವವೂ ತನ್ನೊಳಗೆ ಎಂದರಿದು ಸರ್ವರೊಳಗೆಲ್ಲ ತನ್ನನೇ ಕಾಣ ಬೇಕು. ನಿಜಲಿಂಗೈಕ್ಯರಾದ ಅಜಗಣ್ಣ ತಂದೆಗಳು ಐಕ್ಯಸ್ಥಲಕ್ಕೆ ಆದರ್ಶ ರಾದರು,

ಆ ಬಗೆಯು ಷಟ್‌ಸ್ಥಲವನರಿತು ಆಚರಿಸುವ ಮಹಾಶರಣರ ಆಳಿನ ಆಳು ನಾನಾಗುವೆ ಅಖಂಡೇಶ್ವರಾ ಎಂದು ಪ್ರಾರ್ಥಿಸಿದರು. ಹಾಗೂ ನಿತ್ಯವೂ ನಿಜಗುಣ ಶಿವಯೋಗಿಗಳಂತೆ ಪರಮ ಆರೂಢನೆಂದೆನಿಸಯ್ಯಾ, ಅಕ್ಕಮಹಾದೇವಿಯಂತೆ ನಿಷ್ಕಾಮಿ ಎಂದೆನಿಸಯ್ಯಾ. ಪ್ರಭುದೇವರಂತೆ ಪರಿಪೂರ್ಣನೆಂದೆನಿಸಯ್ಯಾ, ಇಂತಿವರ ಕಾರುಣ್ಯದನಿಲವನೇ ಕರುಣಿಸಿ ನಿಮ್ಮ ಗಣಂಗಳ ಸಮ್ಮಿಲನದಲ್ಲಿರಿಸಯ್ಯಾ, ಎನ್ನ ಅಖಂಡೇಶ್ವರಾ! ಎಂದು ಬೇಡಿ ಮಂಗಳ ಮಾಡುತ್ತಿದ್ದರು. ಮನಮುಟ್ಟಿ ಆಲಿಸಿ, ಮೆಚ್ಚಿದ ಭಕ್ತರು ತಾವು ಪುಣ್ಯವಂತರೆಂದು ನೆನೆದುಕೊಂಡರು.

ದೇವರ ಮನೆಯ ಬಸವಪ್ಪನ ಮಗ ಮೂಕನಾಗಿದ್ದನು. ಬಬಬ ವವವ ಇದು ಅವನ ವಾಣಿಯಾಗಿತ್ತು. ಷಣ್ಮುಖ ಸ್ವಾಮಿಗಳು ಆ ಬಾಲಕ ನನ್ನು ಹತ್ತಿರ ಕೂಡಿಸಿಕೊಂಡು ಬ-ಸ-ವ ಒಂದೊಂದೇ ಅಕ್ಷರ ಅನ್ನಿಸುತ್ತ ಬಸವ ಶಬ್ದಕ್ಕೆ ಒಂದು ಪಠಣ ಮಾಡಿಸಿದರು. ಅನ್ನುತ್ತ ಅನ್ನುತ್ತ ಆ ಮಗು ಎಲ್ಲ ಶಬ್ದ ಹೇಳಿದಂತೆ ಅನ್ನಹತ್ತಿದನು. ಶಿವಯೋಗಿಗಳು ವೈದಡವಿ ಹೇಳುತ್ತಿದ್ದಂತೆ ಎಲ್ಲ ಮಾತು ಆಡಹತ್ತಿದನು. ಗುರುವರನ ಅಂತಃಕರಣದ ಮಹಿಮೆಗೆ ಮುದತಾಳಿ ಭಕ್ತರು ಮನವಾರೆ ಕೊಂಡಾಡಿ ನಲಿದರು, ಭಕ್ತಜ ನರು ನೆಲಮಿಗಿಯಲ್ಲಿ ಒಂದು ಮಠವನ್ನು ಕಟ್ಟಿಸಿ ಅರ್ಪಿಸಿದರು. ವಚನ ವಾಙ್ಮಯದ ರುಚಿಯುಂಡು ನೆಲಮಿಗೆಯ ಆತ್ಮಾಸಕ್ತಿಯ ಭಕ್ತರು ಅಲ್ಲಿ ಅನುಭವಗೋಷ್ಠಿ ನಡೆಸುತ್ತಿದ್ದರು.

ರಾವೂರ ಶಿದ್ಧಲಿಂಗ ಸ್ವಾಮಿಗಳು ವೈರಾಗ್ಯಶೀಲರು ಅವರು ನೆರೆ ಬೋಳಿಯಲ್ಲಿ ಗುರುಬಸವ ಪುರಾಣ ಕಥೆಯನ್ನು ನಡೆಯಿಸಿದ್ದರು. ಅಲ್ಲಿಯ ಭಕ್ತರ ಅನುಮತಿಯಂತೆ. ಷಣ್ಮುಖ ಶ್ರೀಗಳನ್ನು ಬರಮಾಡಿಕೊಂಡಿದ್ದರು. ಮಹಿಮಾವಂತರಾದ ಮಹಾಶಿವಯೋಗಿಯ ದರ್ಶನಕ್ಕೆಂದು ಸುತ್ತಲಿನ ಗ್ರಾಮಗಳ ಜನರು ನೆರೆಬೋಳಿಗೆ ಬಂದರು. ಮಂಗಲೋತ್ಸವದ ಸಮಯವಾಗಿ ಮಾಡಿದ ಪ್ರಸಾದ ವ್ಯವಸ್ಥೆ ಹೆಚ್ಚಿನ ಸಾವಿರಾರು ಮಂದಿಗೆ ಸಾಲುವುದೇ? ಭಕ್ತರನ್ನೊಳಗೊಂಡು ಶಿದ್ಧಲಿಂಗ ಸ್ವಾಮಿಗಳು ಚಡಪಡಿಸಿ ಚಿಂತೆಗೊಳಗಾದರು. ಷಣ್ಮುಖ ಶಿವಯೋಗಿಗಳಿಗೆ ಪರಿಸ್ಥಿತಿ ಗೊತ್ತಾಯಿತು ಬ್ರಹ್ಮಾಂಡವನ್ನೇ ರಕ್ಷಿಸುವ ಭಾರಹೊತ್ತ ಅಖಂಡೇಶ್ವರ ಲಿಂಗದಲ್ಲಿ ಭಕ್ತಿಯಿರಿಸಿದ ಸದ್ಭಕ್ತರ ಗಣಾರಾಧನೆಯಲ್ಲಿ ಆತಂಕವೆಲ್ಲಿಯದು? " ಬನ್ನಿರಿ " ಎಂದು ಷಣ್ಮುಖ ಶಿವಯೋಗಿ ಪಾದೋದಕದ ಗಿಂಡಿಯನ್ನು ಕೈಯಲ್ಲಿ ಹಿಡಿದು ಸಿದ್ಧಲಿಂಗ ಸ್ವಾಮಿಗಳೊಡನೆ ಸದ್ಭಕ್ತರ ಸಮುದಾಯದೊಡನೆ ಪ್ರಸಾದ ಮಂದಿರಕ್ಕೆ ಬಂದು ಪಾಯಸದ ಹಂಡೆಗಳ ಮೇಲೆ ಪಾದೋದಕ ಪ್ರೋಕ್ಷಿಸಿ ಜಯಘೋಷದೊಡನೆ ಎಡೆಮಾಡಿದರು. ಹರಹರ ಮಹಾದೇವ ಎನ್ನುತ್ತ ಉತ್ಸಾಹಿಗಳು ಓಡಾಡಿ ಎಡೆಮಾಡಿ ಬಂದ ಬಂದವರನ್ನೆಲ್ಲ ತೃಪ್ತಿಪಡಿಸಿದರೂ ಹಂಡೆಗಳು ಬರಿದಾಗಲಿಲ್ಲ. ಶಿವಯೋಗಿಯ ಲೀಲೆ ಎಂದು ಸರ್ವರೂ ಹರ್ಷನಿರ್ಭರರಾಗಿದ್ದರು. ಶಿವಯೋಗಿಯ ಸ್ಮರಣಾರ್ಥ ಆ ನರಬೋಳಿಯಲ್ಲಿ ಶಿವಯೋಗಿಯ ಮಠ ನಿರ್ಮಾಣಗೊಳಿಸಿದ್ದಾರೆ.

ಆಲೂರಲ್ಲಿ ಲಿಂಬಣ್ಣನೆಂಬ ಸಚ್ಛೀಲ ಸದ್ಭಕ್ತನಿದ್ದನು, ಅವನು ಹೊಸಮನೆ ಕಟ್ಟಿಸುತ್ತಿದ್ದನು. ತಲೆಬಾಗಿಲ ಮೇಲೆ ಹಾಕುವ ಬಾಸಿಂಗಬಂಡೆ ಏನು ಮಾಡಿದರೂ ಸರಿಯಾಗಿ ಕೂಡ್ರದೇ ಸಿಡಿದು ಸರಿಯುತ್ತ ತನಗೆ ಸಮಯ ಸರಿಯಾಗಿಲ್ಲೆಂದು ಬಗೆದು ಲಿಂಬಣ್ಣನು ಅದರ ಪರಿಹಾರಕ್ಕೆ ಷಣ್ಮುಖಶಿವಯೋಗಿಗಳ ಮೊರೆಹೊಕ್ಕನು. ಸ್ವಾಮಿಗಳು ಭಕ್ತನ ಮನದ ಅನುತಾಪ ಕಳೆಯಲು ಬಂದು. ಹಸ್ತಸ್ಪರ್ಶಮಾಡಿ ಬಂಡೆಯನ್ನು ಮೇಲೆ ಹೇರಿಸಿದರು. ಅದು ಸರಿಯಾಗಿ ಕುಳಿತಿತು. ಸಂತೋಷಗೊಂಡ ಎಲ್ಲರೂ

ಸ್ವಾಮಿಗಳ ಅಡಿಗಳಿಗೆರಗಿ ಸ್ತುತಿಸಿದರು.

ಚಿತಾಪೂರ ಪ್ರದೇಶದಲ್ಲಿ ಮಳೆಯಾಗದೆ ಪ್ರಜೆಗಳು ಬರಕ್ಕೆ ತುತ್ತಾಗುತ್ತಾ ನಡೆದಿದ್ದರು. ಷಣ್ಮುಖ ಶಿವಯೋಗಿಗಳ ಲೀಲೆಯನ್ನು ಕೇಳಿ ಆ ಭಾಗದ ಹಲವು ಹಳ್ಳಿಗಳ ಗೌಡರು ಒಂದಾಗಿ ಜೇವರಗಿಗೆ ಬಂದು ಶಿವಯೋಗಿಗಳ ಮೊರೆ ಇಟ್ಟರು. " ದೀನ ಜನ ಪರಿಪಾಲಕರಾದ ಮಹಾ ಶಿವಯೋಗಿಗಳೇ ನಮ್ಮ ಭೂಮಿ ಬಂಜೆಯಾಗಿದೆ, ನೆಲವೆಲ್ಲ ಕಾಯುತ್ತಿದೆ. ಕುಡಿಯಲು ನೀರಿಲ್ಲ, ನಾವೆಲ್ಲ ಕಷ್ಟ ಪಡುತ್ತಿದ್ದೇವೆ. ನೀವು ಬಂದು ಅಲ್ಲಿ ಲೋಕಕಲ್ಯಾಣ ಮಾಡಬೇಕೆಂದು ಅಂಗಲಾಚಿದರು. ಕಾಯುವಿರುವ ವರೆಗೆ ಕಾಯಕ, ನಡೆಯಿರಿ. ಎಂದು ಷಣ್ಮುಖಸ್ವಾಮಿಗಳು ಎದ್ದು ಹೊರಟರು, ಆ ಭಾಗದ ಬೆಳಗುಂಪಿ ಗ್ರಾಮಕ್ಕೆ ಬಂದರು. ಅಲ್ಲಿ ದಾಸೋಹವನ್ನಿಟ್ಟು ಸಹಸ್ರ ಸಹಸ್ರ ಜನರ ಪ್ರಾಣ ಉಳಿಸಿದರು. ಅವರ ಹಸ್ತ ಮುಟ್ಟಿದ ಅನ್ನ ಅಕ್ಷಯವಾಯಿತು ಬರದ ಉಗ್ರತೆ ಕಡಿಮೆಯಾಯಿತು. ಶಿವಯೋಗಿಗಳು ಹಳ್ಳದ ದಾಡೆಯಲ್ಲಿ ಬಿಸಿಲಬೇಗೆಯಿಂದ ಸುಟ್ಟಿರುಪುವ ಮಳಲ ಮೇಲೆನಿಂತು ತಪಗೈದು ಮಳೆಯ ಬರಿಸಿದರು. ಶಿವಯೋಗಿಯ ಪಾದ ತೊಳೆಯಿತು. ಇಳಿಗೆ ಕಳೆ ಏರಿತು. ಬೆಳಗುಂಪೆಯ ಜನರು ಆ ಯತಿಯ ತಪದ ಸ್ಮಾರಕವಾಗಿ ಒಂದು ಗದ್ದುಗೆ ಸ್ಥಾಪಿಸಿ ಇಂದಿಗೂ ಅವರ ಜಾತ್ರೆ ಮಾಡುತ್ತಲಿದ್ದಾರೆ.

ಸ್ಥಲವಿಲಾಸವೇ ಷಟ್‌ಸ್ಥಲ

ಸುಪ್ರಭಾತ! ಅತ್ತ ಅರುಣೋದಯವಾಗುತ್ತಲಿದೆ. ಜೇವರಗಿಯ ಪಶ್ಚಿಮ ಭಾಗದಲ್ಲಿ ಶಿವಚೈತನ್ಯ ಸ್ಫುರಿಸಿ ಹೊರಹೊಮ್ಮುತ್ತಲಿದೆ. ಅಖಂಡೇಶ್ವರ ಗದ್ದುಗೆ ಪೂಜೆಯ ಗಂಟೆಯು ಢಣ ಢಣಿಸುತ್ತಿದೆ. ಗುರು ಮಠದಲ್ಲಿ ಶ್ರೀ ಷಣ್ಮುಖಸ್ವಾಮಿಗಳ ಲಿಂಗಾರ್ಚನೆಯ ಝಾಂಗಟೆ ಝೇಂಕರಿಸುತ್ತಿದೆ. ಗದ್ದುಗೆ ಪೂಜೆಯ ಧೂಪಾರತಿಯ ಹೊತ್ತಿಗೆ ನಗಾರಿ ಧಿಮ್ಮಿಟ್ಟಿತು. ಈ ನಾದಗಳಿಗೆ ನಗರದ ಆಲಸಿಗಳು ಕೂಡ ಮೈಮುರಿದೆದ್ದರು.

ಉಲ್ಲಾಸಿತರಾದರು. ಶಿವಯೋಗಿಯ ಸ್ಮರಣೆಗೆ ಕೈಮುಗಿದು ಹೊಸಹುರು ಪಿನಿಂದ ದಿನದ ಕೆಲಸಗಳಿಗಾಗಿ ನಡೆದರು.

ಮಠದ ನೆರೆಯಲ್ಲಿಯ ಜಲಾಶಯದ ಹತ್ತಿರ ಬಯಲಲ್ಲಿ ವರ್ತಕರು ಒಂದು ದೊಡ್ಡ ತಂಡವು ಹೇರೆತ್ತುಗಳೊಡನೆ ಬಿಡಾರ ಮಾಡಿದ್ದರು, ಬೆಳ ಗಿನ ಜಾವದಲ್ಲಿಯೇ ಅವರು ಮುಂದಿನ ಪ್ರಯಾಣಕ್ಕೆ ಸಿದ್ಧರಾಗುತ್ತಿದ್ದರು. ಆದರೆ ಸುಂದರವಾದ ಅರುಣೋದಯದ ಮುಂಬೆಳಕಿನಲ್ಲಿ ಸಮಶಿತೋ ಷ್ಣದ ಎಳೆಗಾಳಿಯ ಅಲ್ಹಾದಕರವಾದ ವಾತಾವರಣದಲ್ಲಿ ಮಠದ ಪೂಜಾಧನಿಗಳು ಅವರ ಅಂತರಂಗವನ್ನು ತಟ್ಟಿ ಅರಳಿಸಿ, ಶಿವಯೋಗಿಯ ದರ್ಶನ ಪಡೆದು ಮುಂದೆ ಹೋಗುವದೆಂಬ ವಿಚಾರಕ್ಕೆ ಪ್ರೇರಣೆ ನೀಡಿ ದವು, ಆ ವ್ಯಾಪಾರಿಗಳ ಗುಂಪಿನ ನಾಯಕನೂ ಹಿರಿಯ ವರ್ತಕನೂ ಆಗಿದ್ದ ಸುಲೇಪೇಟೆಯ ವೀರಭದ್ರಪ್ಪ ಪಟ್ಟಣಶೆಟ್ಟಿಯ ಈ ಸೂಚನೆ ಯನ್ನು ಎಲ್ಲರೂ ಒಮ್ಮನದಿಂದ ಒಪ್ಪಿದರು. ಹೊತ್ತಾದರಾಗಲಿ ಇಲ್ಲಿಯೇ ಸ್ನಾನ ಶಿವಾರ್ಚನೆಗೈದು ಮಠಕ್ಕೆ ಹೋಗಿ ಶ್ರೀಗಳ ದರ್ಶನಾಶೀರ್ವಾದ ಹೊಂದಿ ಪಯಣಿಸುವದೆಂದು ನಿರ್ಣಯವಾಯಿತು. ಅಪ್ಪರಲ್ಲಿ ಎತ್ತುಗಳ ಮೇಲೆ ಹೇರಿದ್ದ ಮೂಟೆಗಳನ್ನಿಳಿಸಿದರು. ಕೆಲವು ಆಳುಗಳನ್ನು ಬಿಟ್ಟು ಉಳಿದವರೆಲ್ಲ ಸ್ನಾನ ಲಿಂಗಾರ್ಚನೆ ಮುಗಿಸಿ ಮಡಿಬಟ್ಟೆಯಲ್ಲಿ ಮಠಕ್ಕೆ ಬಂದರು, ಗದ್ದುಗೆದರ್ಶನ ತೀರ್ಥ ಸ್ವೀಕರಿಸಿದರು. ಆಗ ಎರಡುಗಳಿಗೆ ಹೊತ್ತೇರಿತ್ತು, ವೀರಭದ್ರಪ್ಪನು ಸಹವರ್ತಕರೊಡನೆ ಮಠದ ಮೊಗಸಾ ಲೆಗೆ ಬಂದು, ದರ್ಶನ ಮಂಟಪದಲ್ಲಿ ಶಿವಯೋಗಿಗಳು ಆಶೀನರಾದುದನ್ನು ಕಂಡನು. ಅದೇ ಆಗ ಲಿಂಗಾನುಷ್ಠಾನ ಪೂರೈಸಿ ಬಂದಿದ್ದರು. ಶ್ರೀಗಳು ಶಿವ ಕಳೆ ತುಂಬಿದ ಅವರ ಮುಖಮಂಡಲದಲ್ಲಿ ತ್ರಿಪುಂಡ್ರದ ಶೋಭೆ, ಹೊಸ ಮೆರಗಿನ ಕಾವಿಬಟ್ಟೆಯ ಮೇಲಿನ ರುದ್ರಾಕ್ಷಿಮಾಲೆ ಕರುಣೆಯ ಕಲಗಳ ನೋಟ ಇವುಗಳಿಂದ ಭಕ್ತಿಭಾವ ಉಕ್ಕಿ ಬಂದು ವೀರಭದ್ರಪ್ಪನೂ ಆ ಜನರೂ ತಲೆವಾಗಿ ಕೈಮುಗಿದುಕೊಂಡೆ ಮುಂದಕ್ಕೆ ಬಂದು ಸಾಷ್ಟಾಂಗ ಪ್ರಣತಿಗೈದರು, ಷಣ್ಮುಖ ಶಿವಯೋಗಿಗಳು ಕೂಡ್ರು ಹೇಳಿ ಅವರ ಊರು

ಮತ್ತು ಪಯಣಗಳ ಕುಶಲವಾರ್ತೆ ಕೇಳಿದರು. ದಾಸೋಹ ಮಂದಿರಕ್ಕೆ ಇತ್ತ ಅವರನ್ನು ಮುಂಜಾನೆಯ ಉಪಹಾರಕ್ಕೆ ಕೊಟ್ಟುಕಳಿಸಿದರು. ಅವರು ಅಲ್ಲಿ ರುಚಿಕರವಾದ ಅಂಬಕಳಿ ಪ್ರಸಾದ ಸ್ವೀಕರಿಸಿ ತೃಪ್ತರಾಗಿ ಬರುವಷ್ಟರಲ್ಲಿಯೇ ಶ್ರೀಗಳ ಹತ್ತಿರ ಜಿಜ್ಞಾಸು ಭಕ್ತರು ಬಂದು ಕುಳಿತಿದ್ದರು. ಶಿವಾನುಭವಗೋಷ್ಠಿ ಆರಂಭವಾಗುವದರಲ್ಲಿತ್ತು. ತಾವೂ ಬಂದು ಓರಣವಾಗಿ ಕುಳಿತರು. ಸ್ವಾಮಿಗಳು ಸಾಹಿತ್ಯಾತ್ಮಕ ಸುಲಭ ಶೈಲಿಯಲ್ಲಿ ಶಿವತತ್ವವನ್ನು ನಿರೂಪಿಸುತ್ತಿದ್ದರು. ಆ ಅಮೃತ ಶೈಲಿಯಲ್ಲಿ ಉಳಿದ ಶ್ರೋತೃಗಳಂತೆ ವರ್ತಕರೂ ನಿಬ್ಬೆರಗಾಗಿ ಕುಳಿತರು. ಅಷ್ಟರಲ್ಲಿ ರಾಮಪುರದ ಬೊಕ್ಕಪ್ಪ ಬಂದರು. ಅವರು ಕವಿಗಳು ಧರ್ಮತತ್ವಗಳಲ್ಲಿ ಆಸಕ್ತರು. ಅವರು ನಮಸ್ಕರಿಸಿದುದನ್ನು ಕಂಡು ಶ್ರೀಗಳು ಅವರಿಗೆ ''ಒಳಗೆ ಹೋಗಿ ಸ್ನಾನ ಶಿವಾರ್ಚನೆ ಮಾಡಿ ಉಪಹಾರ ತಕ್ಕೊಂಡು ಬರಬೇಕು" ಎಂದರು. ಆದರೆ ಬೊಕ್ಕಪ್ಪನವರು, ' ಗುರುವೇ ಈ ಪಾದದರ್ಶನವೇ ನನಗೆ ಲಿಂಗಾರ್ಚನೆ. ಈ ಅನುಭವಾಮೃತ ಸೇವೆಯೇ ಪ್ರಸಾದ ಭೋಜನ, ತಮ್ಮ ಬೋಧೆ ಮುಂದುವರಿಯಲಿ. ಈಗ ಅಷ್ಟಾವರಣ, ಪಂಚಾಚಾರ ಉಪದೇಶ ಮಾಡಿದ್ದೀರಿ ಷಟ್‌ಸ್ಥಲ ತತ್ವದ ಯಥಾರ್ಥಜ್ಞಾನದ ಬಹುಜನರಿಗೆ ಇರುವದಿಲ್ಲ ಅದರ ಮೂಲವನ್ನು ಸಾಧನೆಯಲ್ಲಿ ಆ ಮಾರ್ಗದ ಮಹತ್ವವನ್ನು ನಿರೂಪಿಸಬೇಕು.' ಎಂದು ಬಿನ್ನವಿಸಿಕೊಂಡರು, 'ಆಗಲಿ ಕೇಳಿರಿ' ಷಣ್ಮುಖ ಸ್ವಾಮಿಗಳು ಸಂತೋಷದಿಂದ ಅದನ್ನು ವಿವರಿಸಿದರು. ಅಂದಿನ ಅವರ ಉಪದೇಶದ ಸಾರ ಸಂಗ್ರಹವು ಹೀಗಿತ್ತು.

ಅದ್ವೈತಿಗಳು ಸತ್ಯವೆಂದು ಹೇಳುವ ಪರಬ್ರಹ್ಮವನ್ನು ವೀರಶೈವರು 'ಸ್ಥಲ' ಎನ್ನುವರು. ಸ್ಥಲವಿಲಾಸವೇ ಶಿವಾದ್ವೈತ ಸಿದ್ಧಾಂತ, ಷಟ್‌ಸ್ಥಲ ಸಿದ್ಧಾಂತ ತನ್ನಂತೆ ಬೇರೊಂದಿಲ್ಲದ, ಯಾವಾಗಲೂ ಇರುವ, ಎಲ್ಲವೂ ತಾನೊಂದೆ ಆಗಿರುವ ಸತ್+ಚಿತ್+ಆನಂದ ಈ ಲಕ್ಷಣಗಳಿಂದ ಕೂಡಿದ ತತ್ವವೇ ಸ್ಥಲವು. ಶಿವತತ್ವವು ಅಂದರೂ ಇದೆ. ಇದು ಜಡವಲ್ಲ ತನ್ನ ಅರಿವೆಂಬ ವಿಮರ್ಶೆಯೊಡನೆ ಕೂಡಿದೆ. ಆ ವಿಮರ್ಶಗೆ ಶಕ್ತಿಯುನ್ನುವರು.

ಅವಿನಾಭಾವದಿಂದ ಅದು ಶಿವನಲ್ಲಿಯೇ ಇದೆ. ಶಿವನಿಗೆ ಅಕಸ್ಮಾತ್ ಪೂಜ್ಯ-ಪೂಜಕ ಲೀಲಾಭಾವವುಂಟಾಯಿತು, ಆ ಭಾವವು ವಿಮರ್ಶೆಯಲ್ಲಿ ಒಡಮೂಡಿ ಅದು ಶಕ್ತಿಯಾಗಿ ಪ್ರಭುವಿನ ಲೀಲೆಗೆ, ಅವನಲ್ಲಿದ್ದು ಅವನ ಆಶ್ರಯದಲ್ಲಿಯೇ ಏರ್ಪಾಡು ಮಾಡಿತು. ಆ ಏರ್ಪಾಡೇ ಸೃಷ್ಟಿಯಾಯಿತು. ಪೂಜ್ಯಪೂಜಕವಾಗಿ ಲಿಂಗಸ್ಥಲ-ಅಂಗಸ್ಥಲವೆಂದು ಸ್ಥಲವು ಎರಡು ತೆರನಾಯಿತು.

ಲಿಂಗಸ್ಥಲ : ಲಿಂಗಕ್ಕೆ ರೂಪಿಲ್ಲ, ಕುಂದಿಲ್ಲ, ರಂಜನವಿಲ್ಲ, ಅದು ಶಬ್ದಾದಿ ವಿಷಯಗಳಿಗೂ, ಭಾವನೆಗೂ ಮೀರಿದ್ದು. ಶಕ್ತಿವಿಶಿಷ್ಟವಾದನಿರತಾದ ವಸ್ತುವು! ಪರತತ್ವ ಶಿವನಿಗೂ, ಲಿಂಗಕ್ಕೂ, ಭೇದವಿಲ್ಲ. ಶಿವನು ಲಿಂಗ ಅಂಗ, ಆದಾಗ ಲಿಂಗದಲ್ಲಿ ಆದಿಕ್ಯ (ಪೂಜ್ಯ) ಅಂಗದಲ್ಲಿ ಶೂನ್ಯ (ಪೂಜಕ) ವಾದಿ ಶಕ್ತಿಯಿಂದ ನಿರ್ಮಿತವಾದವು. ಶೂನ್ಯವೆಂದರೆ ಸಂಕೋಚಭಾವ. ಜೀವನು ಶುದ್ಧ ಜೀವವಾಗಿ (ಅಂಗವಾಗಿ) ಉಪಾಸ್ಯಲಿಂಗಕ್ಕೆ ಉದಾಸಕಲಿಂಗನಾಗುವನು. ಸೃಷ್ಟಿಯಲ್ಲಿ ಪ್ರವೃತ್ತಿಹೊಂದಿ ಈ ಅವ್ಯವಸ್ಥೆಗಳಿಂದ ಶಕ್ತಿಯು, ಜೀವನು ಸಾದ್ರುತನಾಗಿ ಲಿಂಗ ಸಮರಸಕ್ಕೆ ಆತುರಗೊಂಡು ಶುದ್ಧಜೀವನಾದೊಡನೆ ತಾನೆ ಭಕ್ತಿಯಾಗುವದು. ಲಿಂಗದಲ್ಲಿ ಸೇರಿ ಲಿಂಗ ಅಂಗ ಸಮರಸಕ್ಕೆ ನಿವೃತ್ತಿ ಮಾರ್ಗದಿಂದ ಸಹಾಯಮಾಡುವದು.

ಅಂಗನ ಜೀವತ್ವವನ್ನು [ಸಂಕೋಚಭಾವವನ್ನು] ಶಿವತತ್ವವನ್ನಾಗಿ (ಅಕ್ಷಾಸಭಾವವನ್ನಾಗಿ) ಕ್ರಮವಾಗಿ ಉಂಟು ಮಾಡಲು, ಅಂಗನಸ್ಥೂಲ, ಸೂಕ್ಷ್ಮ, ಕಕರಣ ಶರೀರಗಳಲ್ಲಿ ಪೂಜೆಗೊಳ್ಳಲು ಲಿಂಗವು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗವೆಂದು ಮೂರು ವಿಧವಾಯಿತು.

ಇಷ್ಟಲಿಂಗವು ಸಕಲವಾಗಿ ದೃಷ್ಟಿಯಿಂದ ಗ್ರಹಿಸತಕ್ಕದಾಗಿದೆ.
ಪ್ರಾಣಲಿಂಗವು ಸಕಲ ನಿಷ್ಕಲವಾಗಿ ಮನಸ್ಸಿನಿಂದ ಗ್ರಹಿಸತಕ್ಕದಾಗಿದೆ.
ಭಾವಲಿಂಗವು ನಿಷ್ಕಲವಾಗಿ ಭಾವದಿಂದ ಗ್ರಹಿಸತಕ್ಕದಾಗಿದೆ

ಶಿವನ ಸಚ್ಚಿದಾನಂದ ರೂಪದಲ್ಲಿಯು ಸತ್. ಚಿತ್–ಆನಂದ ರೂಪಗಳನ್ನು ಭಾವ, ಪ್ರಾಣ, ಇಷ್ಟಲಿಂಗಗಳು ಹೊಂದಿರುತ್ತವೆ. ಏಕತ್ವವನ್ನು ಬೋಧಿಸುವ ಉಪನಿಷತ್‌ನಲ್ಲಿಯು ತತ್-ತ್ವಮ್-ಅಸಿ ಪದಗಳ ಅರ್ಥಗಳೇ ಇಷ್ಟ, ಪ್ರಾಣ, ಭಾವಲಿಂಗಗಳಾಗಿವೆ ಎಂದು ನಿರೂಪಿಸಲ್ಪಟ್ಟಿವೆ. ತ್ವಮ್-ತತ್–ಅಸಿ ಈ ಕ್ರಮದಲ್ಲಿ ಇವುಗಳ ಅರ್ಥಗಳು ಇಷ್ಟ, ಪ್ರಾಣ, ಭಾವ ಲಿಂಗಗಳಾಗಿವೆ.

ಲಿಂಗವು ಅಂಗನನ್ನು ತನ್ನಲ್ಲಿ ಲೀನವಾಗಿಸಿಕೊಳ್ಳುವದಕ್ಕಾಗಿ ಉಪಾಸ್ಯತ್ವಕ್ಕಾಗಿ ಮೂರು ಬಗೆಯಾದಂತೆ ಲಿಂಗವಾದರೂ ಆಯಾ ಲಿಂಗೋಪಾಸನದಿಂದ ಆ ಸ್ವರೂಪವನ್ನು ಹೊಂದುವದಕ್ಕಾಗಿ ತಾನೂ ಮೂರು ಬಗೆಯಾಗಬೇಕಾಯಿತು.

ಜೀವನು ಶಿವದೀಕ್ಷಿತನಾಗಿ ಅಂಗ ಶುದ್ಧಜೀವ ನೆನೆಸಿದ ಮೇಲೆ ಅವನಿಗೆ ಸಂಸಾರ ಬ್ರಾಂತಿಯು ಅಂದರೆ ಆಣವ, ಮಾಯಾ, ಕಾರ್ಮಿಕ ಮಲತ್ರಯಗಳ ಬ್ರಾಂತಿಯು ಸಹಜವಾಗಿ ತ್ಯಾಗವಾಗುವದಾದ್ದರಿಂದ ಮೊದಲನೆಯದು ತ್ಯಾಗಾಂಗವೆನಿಸುವದು.

ಅಂಗನು ತನ್ನ ಭೋಗವನ್ನು ಮೊದಲು ಶಿವನಿಗೆ ಅರ್ಪಿಸಿ, ಬಳಿಕ ಶಿವಪ್ರಸಾದ ರೂಪದಿಂದ ಶಿವನಿಂದ ಬೇರಿಲ್ಲವೆಂಬ ಬುದ್ಧಿಯುಳ್ಳವನಾಗಿ ತಾನು ಭೋಗಿಸುವದರಿಂದ ಎರಡನೇಯದು ಭೋಗಾಂಗವೆನಿಸುವದು.

ಅಂಗನು ಶಿವನೊಡನೆ ಸಾಮರಸ್ಯರೂಪವಾದ ಅನುಸಂಧಾನ ಮಾಡುವನು, ಅಂದರೆ ಶಿವಯೋಗ ಸುಖವನ್ನು ಹೊಂದುವನು. ಅದರಿಂದ ಮೂರನೇಯದು ಯೊಗಾಂಗವೆನಿಸುವದು.

ತ್ಯಾಗ, ಭೋಗ, ಯೋಗ ಅಂಗಗಳಿಗೆ ಕ್ರಮವಾಗಿ
ಸ್ಥೂಲ, ಸೂಕ್ಷ್ಮ ಕಾರಣ ಎಂಬ ಶರೀರಗಳೂ
ಜಾಗ್ರತ, ಸ್ವಪ್ನ ನಿದ್ರೆ ಎಂಬ ಅವಸ್ಥೆಗಳೂ
ವಿಶ್ವ, ತೈಜಸ, ಪ್ರಾಜ್ಞ ಎಂಬ ಜೀವರುಗಳೂ

ಎಂದು ಹೇಳಲ್ಪಟ್ಟಿವೆ. ಇವು ಅಂಗತ್ರಯಕ್ಕೆ ಅಭೇದ ರೂಪದಿಂದ ಹೇಳಲ್ಪಟ್ಟಿವೆ. ಅಂಗನೆಂದರೆ ಶುದ್ಧ ಜೀವನು.

ಮೂರು ಶರೀರಗಳಲ್ಲಿ ಆರ್ಜಿಸಿಕೊಳ್ಳಲು ಲಿಂಗವು ಮೂರು ವಿಧವಾದಂತೆ ಅರ್ಪಣವಿಧಾನದಲ್ಲಿ, ಮನಸ್ಸು ಸಹಿತವಾದ ಆರು ವಿಧವಾಯಿತು. ಅವುಗಳ ಉತ್ಪತ್ತಿ ಕ್ರಮ ಹೀಗಿದೆ.

೧ ಶಿವನ ಚಿತ್ಛಕ್ತಿಯು ಸ್ಮರಣದಿಂದ ಮಹಾಲಿಂಗ ಸ್ಥಲವಾಯಿತು. ಅದರ ಉಪಾಸನೆಗೆ ಐಕ್ಯಸ್ಥಲವೆಂಬ ಅಂಗಸ್ಥಲವಾಯಿತು.

೨ ಪರಾಶಕ್ತಿಯು ಸ್ಮರಣದಿಂದ ಪ್ರಸಾದಲಿಂಗ ಸ್ಥಲವಾಯಿತು ಅದರ ಉಪಾಸನೆಗೆ ಶರಣಸ್ಥಲವೆಂಬ ಅಂಗಸ್ಥಲವಾಯಿತು.

೩ ಆದಿಶಕ್ತಿಯು ಸ್ಮರಣದಿಂದ ಚರಲಿಂಗ ಸ್ಥಲವಾಯಿತು ಅದರ ಉಪಾಸನೆ ಪ್ರಾಣಲಿಂಗ ಸ್ಥಲವೆಂಬ ಅಂಗಸ್ಥಲವಾಯಿತು.

೪ ಇಚ್ಛಾಶಕ್ತಿಯು ಸ್ಮರಣದಿಂದ ಶಿವಲಿಂಗಸ್ಥಲವಾಯಿತು ಅದರ ಉಪಾಸನೆ ಪ್ರಾಣಲಿಂಗ ಸ್ಥಲವೆಂಬ ಅಂಗಸ್ಥಲವಾಯಿತು.

೫ ಜ್ಞಾನಶಕ್ತಿಯು ಸ್ಮರಣದಿಂದ ಗುರುಲಿಂಗ ಸ್ಥಲವಾಯಿತು. ಅದರ ಉಪಾಸನೆಗೆ ಮಹೇಶ ಸ್ಥಲವೆಂಬ ಅಂಗಸ್ಥಲವಾಯಿತು.

೬ ಕ್ರಿಯಾಶಕ್ತಿಯು ಸ್ಮರಣದಿಂದ ಆಚಾರಲಿಂಗ ಸ್ಥಲವಾಯಿತು. ಅದರ ಉಪಾಸನೆಗೆ ಭಕ್ತಸ್ಥಲವೆಂಬ ಅಂಗಸ್ಥಲವಾಯಿತು.

ಈ ಆರು ವಿಧವಾದ ಅಂಗಗಳನ್ನು ಪ್ರವೃತ್ತಿಕ್ರಮದಲ್ಲಿ ಹೇಳಿದ್ದಾಯಿತು. ಹೀಗೆ ಮಹಾಲಿಂಗ, ಪ್ರಸಾದಲಿಂಗ, ಚರಲಿಂಗ, ಶಿವಲಿಂಗ, ಗುರುಲಿಂಗ, ಆಚಾರಲಿಂಗ ಇವುಗಳಿಗೆ ಕಾರಣವಾದ ಚಿತ್–ಪರ–ಆಗಿ ಇಚ್ಛಾ–ಜ್ಞಾನ–ಕ್ರಿಯಾ ಈ ಆರು ಶಕ್ತಿಗಳು ಆಯಾ ಲಿಂಗದಲ್ಲಿ ಅವಿಭಾವದಿಂದ ಉಳಿಯಬೇಕಾಯಿತು.

ಮೂರು ಬಗೆಯ ಲಿಂಗಸ್ಥಲವು ಆರು ಬಗೆಯಾದಂತೆ ಆ ಲಿಂಗಗಳ ಸಂಯೋಗಕ್ಕಾಗಿ ಮೇಲೆ ಹೇಳಿದ ಮೂರು ಬಗೆಯ ಅಂಗ

ಸ್ಥಲವೂ ಆರು ಬಗೆಯಾಯಿತು. ತ್ಯಾಗಾಂಗದಲ್ಲಿ ಭಕ್ತ, ಮಹೇಶ ಎಂದು ಭೋಗಾಂಗದಲ್ಲಿ ಪ್ರಸಾದಿ ಪ್ರಾಣಲಿಂಗಿ ಎಂದು ಯೋಗಾಂಗದಲ್ಲಿ ಶರಣ ಐಕ್ಯ ಎಂದು ಆರಂಗಗಳಾದವು. ಲಿಂಗಸ್ಥಲ ಅಂಗಸ್ಥಲಗಳು ಒಂದೇ ಸ್ಥಲದ ಪ್ರಕಾರಗಳಾದ್ದರಿಂದ ಅವುಗಳಲ್ಲಿ ಭೇದವಿಲ್ಲ. ಲಿಂಗಗತವಾದ ಆರುವಿಧಿ ಶಕ್ತಿಯು, ಆರು ಅಂಗಗತವಾಗಿಯು ಆರು ವಿಧವಾಗಿ ಇರಲೇಬೇಕು. ಆಗ ಶಕ್ತಿ ಅಂಗನನ್ನು ಎತ್ತಿ ಲಿಂಗದಲ್ಲಿ ಸಮರಸಗೊಳಿಸುವ ಸಾಧನವಾಗಿ "ಭಕ್ತಿ"ಯೆನಿಸುತ್ತದೆ. ಆದ್ದರಿಂದ ಆರುಲಿಂಗಗಳಲ್ಲಿ ಆರು ವಿಧವಾದ ಶಕ್ತಿ, ಆರು ಅಂಗಗಳಲ್ಲಿ ಆರು ವಿಧವಾದ ಭಕ್ತಿ ಸಹಜವಾಯಿತು. ನಿವೃತ್ತಿ ಮಾರ್ಗದಿಂದ ಹೇಳುವದಾದರೆ ಶ್ರದ್ಧೆ, ನಿಷ್ಠೆ, ಅವಧಾನ, ಅನುಭವ, ಆನಂದ, ಸಮರಸ ಆರು ಭಕ್ತಿಗಳು ಭಕ್ತ, ಮಹೇಶ, ಪ್ರಸಾದಿ, ಪ್ರಾಣ ಲಿಂಗಿ, ಶರಣ, ಐಕ್ಯ ಈ ಆರು ಅಂಗಗತವಾಗಿರುವವು.

ಪ್ರವೃತ್ತಿಕ್ರಮ

ಸ್ಥೂಲ	ಸೂಕ್ಷ್ಮ	ಕಾರಣ	ತ್ರಿವಿಧತನುಗಳು
ಇಷ್ಟಲಿಂಗ	ಪ್ರಾಣಲಿಂಗ	ಭಾವಲಿಂಗ	ತ್ರಿವಿಧಲಿಂಗಗಳು
ರಚನೆ	ತ್ವಕ್	ಮನ	ಹೃದಯಯಂತ್ರಸಹಿತ
ಘ್ರಾಣ	ನೇತ್ರ	ಸ್ತೋತ್ರ	ಆರು ಇಂದ್ರಿಯಗಳು
ಆಚಾರಲಿಂಗ	ಶಿವಲಿಂಗ	ಮಹಾಲಿಂಗ	
			ಆರು ಲಿಂಗಗಳು
ಗುರುಲಿಂಗ	ಚರಲಿಂಗ	ಪ್ರಸಾದಲಿಂಗ	
ನಿವೃತ್ತಿ	ವಿದ್ಯಾ	ಶಾಂತ್ಯತ್ರಿತೆಕಲೆ	
			ಲಿಂಗಗಳ ಕಲೆಗಳು
ಪ್ರತಿಷ್ಠಾ	ಶಾಂತಿ	ಶಾಂತಲೀಲೆ	
ಕ್ರಿಯಾ	ಆದಿ	ಚಿತ	
			ಲಿಂಗಗಳಗತಶಕ್ತಿಗಳು
ಜ್ಞಾನ	ಇಚ್ಛಾ	ಸರಾ	

ಅಂಗಲಿಂಗಸ್ಥಲ

ನಿವೃತ್ತಿ ಕ್ರಮ

ತ್ಯಾಗಾಂಗ	ಭೋಗಾಂಗ	ಯೋಗಾಂಗ	ಮೂರು ಅಂಗಗಳು
ದೃಷ್ಟಿ	ಮನ	ಭಾವ	ಮೂರಗ್ರಾಹ್ಯಸ್ಥಲಗಳು
ವಿಶ್ವಜೀವ	ತೈಜಸಜೀವ	ಪ್ರಾಜ್ಞಜೀವ	ಮೂರುಜೀವರು
ವೃದ್ಧಿ	ವಾಯು	ಆತ್ಮ	ಆರುಅಂಗಾಶ್ರಯಗಳು
ಜಲ	ಅಗ್ನಿ	ಆಕಾಶ	
ಭಕ್ತ	ಪ್ರಾಣಲಿಂಗ	ಐಕ್ಯ	ಆರುಅಂಗಗಳು
ಮಹೇಶ	ಪ್ರಸಾದಿ	ಶರಣ	
ಶ್ರದ್ಧಾ	ಅನುಭಾವಿ	ಸುಮರಸ	ಅಂಗಗತ ಭಕ್ತಿಗಳು
ನಿಷ್ಠೆ	ಅವಧಾನ	ಆನಂದ	

ಅಂಗ ಷಟ್ಸ್ಥಲ

ಸಾಧಕನು ಸದ್ಭಕ್ತಿಸದಾಚಾರಗಳ ಆಧಾರದಿಂದ ಪಂಚಾಚಾರವೆಂಬ ಪ್ರಾಣಶಕ್ತಿಯಿಂದ ಈ ಷಟಸ್ಥಲ ಮಾರ್ಗದಲ್ಲಿ ಅಷ್ಟಾವರಣ ಆಚರಣೆಯನ್ನು ಆಚರಿಸಿ ಲಿಂಗಾಂಗ ಸಾಮರಸ್ಯ ಪಡೆಯುವ ರಹಸ್ಯವನ್ನು ಬೆಳಗಿನ ಹೊತ್ತಿಗೆ ಮತ್ತೆ ವಿವರಿಸೋಣ

ಬೊಕ್ಕ ಪ್ರಭುಗಳೇ ಸ್ನಾನ ಮಾಡಿರಿ. ಇವರೆಲ್ಲರೊಡನೆ ಪ್ರಸಾದ ಭೋಜನ ಮಾಡಿರಿ. "ಸುಲೇಪೇಟ ನಿಮ್ಮ ಹೆಸರು ವೀರಪ್ಪ ಎಂದಿಲ್ಲ? ವೀರಭದ್ರಪ್ಪನವರೇ ನೀವು ಷಟ್‌ಸ್ಥಲ ಶಾಸ್ತ್ರವನ್ನು ಕೇಳುವದರಲ್ಲಿ ತಲ್ಲೀನರಾಗಿದ್ದೀರಿ. ನಿಮಗೆ ಒಳ್ಳೆ ಆಸಕ್ತಿ ಇದೆ. ನೀವು ಇಂದು ಇಲ್ಲಿಯೇ ಇದ್ದುಬಿಡಿರಿ. ಮತ್ತೇ ಕೇಳುವಿರಂತೆ, ಇರುತ್ತಿರಲ್ಲವೇ?" "ಆಗಲಿ ಅಪ್ಪನವರೆ ನಮಗೆ ಈ ಅಮೃತ ಸಿಗುವದೇ ಅಪರೂಪ. ಬರಿ ಹೊಟ್ಟೆಗಾಗಿ ಸಂಗ್ರಹಕ್ಕಾಗಿ ಅಲೆದಾಡುತ್ತಿದ್ದೇವೆ. ಇಂದು ಇರುತ್ತೇವೆ" ವೀರಭದ್ರಪ್ಪ ನಮಸ್ಕರಿಸುತ್ತ ಹೇಳಿದನು.

"ಬಹಳ ಚೆನ್ನಾಯಿತು." ಎಂದು ಶಿವಯೋಗಿಗಳು ಕ್ಷಣ ಹೊತ್ತು ಮೌನ ಧ್ಯಾನ ಮಾಡಿ ಮೇಲೆ ಎದ್ದರು. ಎಲ್ಲರೂ ವಂದಿಸಿದರು. ನಗರದ ವರು ತಮ್ಮ ಮನೆಗಳಿಗೆ ತೆರಳಿದರು. ಬೊಕ್ಕಪ್ಪ ಸ್ನಾನಕ್ಕೆ ಹೋದರು. ವೀರಭದ್ರಪ್ಪ ತಮ್ಮ ಹತ್ತಿರ ಉಳಿದಿದ್ದ ನಾಲ್ಕೇಜನ ಸ್ನೇಹಿತರೊಡನೆ ಬೀಡಾರಕ್ಕೆ ಬಂದರು. ಅಲ್ಲಿ ಕೆಲವರು ಉಳಿದ ಬುತ್ತಿಗಳಲ್ಲಿ ಊಟ ಮಾಡಿದರು. ಕೆಲವರು ಅಡಿಗೆ ಮಾಡಿಕೊಳ್ಳಹತ್ತಿದ್ದರು. ಇನ್ನು ಕೆಲವ ರೊಡನೆ ವೀರಭದ್ರಪ್ಪ ಮಠದ ದಾಸೋಹಕ್ಕೆ ಹೋಗಿ ಪ್ರಸಾದ ಭೋಜನ ಮಾಡಿ ಬಂದರು. ವರ್ತಕರೆಲ್ಲ ತಮ್ಮ ತಮ್ಮ ಸರಕು ಹೇರಿಕೊಂಡು ತಮ್ಮ ಗ್ರಾಮಗಳನ್ನು ಕುರಿತು ನಡೆದರು. ವೀರಭದ್ರಪ್ಪನವನು ತಮ್ಮ ಸರಕನ್ನು ಹೇರಿ ತನ್ನ ಆಳುಗಳ ಸಂಗಡ ಜತೆಗಾರರೊಡನೆ ಸುಲೇಪೆಟೆಗೆ ಕಳಿಸಿದನು. ಉದಾರಿಯೂ, ಧುರೀಣನೂ ಆದ ಅವನಿಗೆ ವಿಶ್ವಾಸದಿಂದ ನೆರವಾಗುವ, ಸಹಕರಿಸುವ ಜನರೇ ಅವರೆಲ್ಲರಾಗಿದ್ದರು. ಹೀಗೆ ಆ ವ್ಯವಹಾರ ಭಾರ ವನ್ನು ಮುಂದೆ ಸಾಗಿಸಿ ತಾನು ನಿಕಟವರ್ತಿಗಳಾದ ನಾಲ್ಕುಜನ ಸ್ನೇಹಿತ ರೊಡನೆ ಉಳಿದನು.

ಮಧ್ಯಾಹ್ನದ ಅನುಷ್ಠಾನ ಪ್ರಸಾದಗಳನ್ನು ಸ್ವೀಕರಿಸಿ ವಿಶ್ರಾಂತಿ ಪಡೆದು ಸ್ವಾಮಿಗಳವರು ಇಳಿಹೊತ್ತಿಗೆ ಇಂದು ಮೊದಲೇ ಹೊರಗೆ ಬಂದು ಬೊಕ್ಕಪ್ರಭುವಿನೊಡನೆ ಆತ್ಮಸಾಹಿತ್ತಿಕ ವಿಷಯವಾಗಿ ಮಾತನಾ ಡುತ್ತ ಕುಳಿತಿದ್ದರು. ಊರಲ್ಲಿಯ ಭಕ್ತರು ಬಂದರು. ವೀರಭದ್ರಪ್ಪನೂ ಜೊತೆಯುವರೊಡನೆ ಬಂದು ವಂದಿಸಿ ಕುಳಿತನು. ದಿನದ ಹೊತ್ತಿಗೆ ಶಿವಾನು ಭವಗೋಷ್ಠಿ ಆರಂಭವಾಯಿತು, ಶ್ರೀಗಳು ಷಟ್‌ಸ್ಥಲ ಮಾರ್ಗದಲ್ಲಿ ಆತ್ಮ ಸಾಧನೆ ಹೇಗೆ ಉನ್ನತಿ ಪಡೆಯುತ್ತೆಂಬುದನ್ನು ವಿವರಿಸಿದರು.

ಭಕ್ತ : ಶರೀರ, ಪ್ರಾಣ, ವಸ್ತುಸಮೂಹ, ಸತ್ಯವೆಂಬಂತೆ ತೋರು ತಿದ್ದರೂ, ಅಸ್ಥಿರವೆಂದು ತಿಳಿದು ಅವುಗಳಿಂದ ನಿವೃತ್ತಿಗೊಳಿಸಿದ ಚಿತ್ತ

ವನ್ನು ಸದ್ಭಕ್ತಿಯ ಕ್ರಿಯಾಚರಣೆಯಲ್ಲಿ ತೊಡಗಿಸಿ ಭವವಿಕಾರ ದೂರವಾದವನು ಭಕ್ತ.

ಭಕ್ತನು ಲಿಂಗದಲ್ಲಿ ಶ್ರದ್ಧೆ ಇರಿಸಿ ಶಿವಕ್ರಿಯೆಗಳಲ್ಲಿ ಶಿವನ ವ್ಯವಹಾರಗಳಲ್ಲಿ ಆಧ್ಯಾತ್ಮಿಕವಾಗಿ, ನೈತಿಕವಾಗಿ, ಸಾಮಾಜಿಕವಾಗಿ, ಪರಿಶುದ್ಧವಾಗಿ, ಫಲಪ್ರದವಾಗಿ ಹೇಗೆ ನಡೆಯಬೇಕೆಂಬುದನ್ನು ಎಷ್ಟು ವಿವರಿಸಿದರೂ ಕಡಿಮೆಯೇ.

ಪರದೈವವ ಪೂಜಿಸುವಾತ ಸದ್ಭಕ್ತನೇ? ಅಲ್ಲಲ್ಲ !
ಪರಸಮಯ ಬಳಸುವಾತ ಸದ್ಭಕ್ತನೇ? ಅಲ್ಲಲ್ಲ !
ಪರಸ್ತ್ರೀಯರಿಗಳಪ್ಪುವಾತ ಸದ್ಭಕ್ತನೇ ? ಅಲ್ಲಲ್ಲ!
ಪರರೊಡವೆಯ ಅಪಹರಿಸಿಕೊಂಬಾತ ಸದ್ ಭಕ್ತನೇ? ಅಲ್ಲಲ್ಲ !
ಇಂತೀ ದುರಾಚಾರದಲ್ಲಿ ನಡೆದು ದುಃಖಕ್ಕೆ ಈಡಾಗಿ ಹೋಗುವ
ಕತ್ತೆ ಮೂಳ ಹೊಲೆಯರು ಸದ್ ಭಕ್ತರೆಂದಡೆ ಭವ ಹಿಂಗದಯ್ಯ
ಅಖಂಡೇಶ್ವರಾ

ಎನ್ನುತ್ತಿದ್ದೇನೆ. ಭಕ್ತನಾದೊಡೆ ಲಿಂಗನಿಷ್ಠಾಪರನಾಗಿರಬೇಕು. ಜಂಗಮವೇ ಪ್ರಾಣವಾಗಿರಬೇಕು. ಅರ್ಥಪ್ರಾಣ ಅಭಿಮಾನಿಗಳು ಶಿವನ ಕೂಡಿರಬೇಕು.

ವಿದ್ಯೆಯ ಬಹಳ ಕಲಿತರೇನು ಭಕ್ತಿಯಲ್ಲಿ ಶುದ್ಧನಲ್ಲದವನು !
ಬುದ್ಧಿಯಲ್ಲಿ ವಿಶೇಷವೆನಿಸಿದಡೇನು ಭಕ್ತಿಯಲ್ಲಿ ಬಡವನಾದವನ?
ಅರ್ಥದಲ್ಲಿ ಅಧಿಕವಾದಡೇನು ಕರ್ತೃಶಿವನ ನೆನೆಯದವನು ?
ಮದ್ದುಗುಣಕೆಯ ತಿಂದ ಮದೋನ್ಮತ್ತರ ಎನ್ನತ್ತಾತೋರದಿರಯ್ಯಾ
ಅಖಂಡೇಶ್ವರಾ

ಎಂದು ಬೇಡಿಕೊಳ್ಳುತ್ತಿದ್ದೇನೆ.

ಮಹೇಶ : ಆಸ್ತಿಕ್ಯಬುದ್ಧಿ, ಲಿಂಗಪೂಜಾದಿ ನಿತ್ಯವ್ರತ, ಸತ್ಯ ಧರ್ಮ ಶೌಚಾದಿಗಳ ಆಚರಣೆ, ಸಚ್ಚರಿತ್ರೆ, ಲಿಂಗನಿಷ್ಠಾಭಕ್ತಿ ಉಳ್ಳವನಾಗಿ

ವೀರವ್ರತ ತತ್ಪರನಾದವನು ಮಹೇಶ. ಮಹೇಶನು ವೀರಮಹೇಶ್ವರನಾಗಿರಬೇಕು. ಸಕಲ ಕಷ್ಟಗಳನ್ನೆದುರಿಸುವಲ್ಲಿ ದಿಟ್ಟನಾಗಿರಬೇಕು ಸುಖದಲ್ಲಿಯೂ ನಿರಹಂಕಾರಿಯಾಗಿರಬೇಕು.

ಶ್ರದ್ಧೆಬಲಿದು ನಿಷ್ಠೆಯಾಗಿರಬೇಕು.

ನೈಷ್ಠಿಕ ಭಾವನಂಬುಗೆ ಇಲ್ಲದ ಬಳಿಕ
ಎಷ್ಟು ಓದಿದಡೇನು? ಎಷ್ಟು ಕೇಳಿದಡೇನು? ಎಷ್ಟು ಹೇಳಿದಡೇನು?
ಎಷ್ಟು ಪೂಜೆಯು ಮಾಡಿದಡೇನು?
ಅದು ನಷ್ಟವಲ್ಲದೆ ದೃಷ್ಟಕ್ಕೆ ಸಂಧಾನವಲ್ಲ ನೋಡಾ!
ಇದು ಶರಣ ನೈಷ್ಠೆಬಲಿದು ಭಾವತುಂಬಿ
ನಂಬುಗೆ ಇಂಬುಗೊಂಡು ಮಾಡುವುದೇ ದೇವರ ಪೂಜೆ
ಅದೇ ನಮ್ಮ ಅಖಂಡೇಶ್ವರ ಲಿಂಗದ ಮಹಿಮೆ

ಗುರುಭಕ್ತಿಯು ಮಾಡುವಲ್ಲಿ ಲಿಂಗ ಪೂಜೆಯು ಮಾಡುವಲ್ಲಿ, ಜಂಗಮನರ್ಚಿಸುವಲ್ಲಿ ಪಾದೋದಕ ಪ್ರಸಾದ ಕೊಂಬುವಲ್ಲಿ ನಮ್ಮ ಅಖಂಡೇಶ್ವರ ಲಿಂಗವನೊಲಿಸುವಲ್ಲಿ ನಿಷ್ಠೆ ನೆಲೆಗೊಂಡಿರಬೇಕು.

ಪ್ರಸಾದಿ : ತಾನು ಅನುಭವಿಸುವ ಇಂದ್ರಿಯ ಭೋಗ ಪದಾರ್ಥಗಳನ್ನು ಮೊದಲು ಪ್ರತಿಯೊಂದು ಇಂದ್ರಿಯ ಮುಖದಿಂದ ಲಿಂಗಕ್ಕೆ ಸಮರ್ಪಿಸಿ, ಬಳಿಕ ಅದನ್ನು ಲಿಂಗಮುಖದಿಂದ ಅವಧಾನ ಭಕ್ತಿಪೂರ್ವಕವಾಗಿ ಪ್ರಸಾದವಾಗಿ ಪರಿಗ್ರಹಿಸುವವನು ಪ್ರಸಾದಿಯು.

ತಾನೂ ತನ್ನ ಸರ್ವಸ್ವವೂ ಪ್ರಸಾದವಾದಾಗ ತಾನೆ ಅಖಂಡೇಶ್ವರನಾಗುವನು ಆದರೆ ಪ್ರಸಾದಿಯಾಗುವದು ಡಂಬಾಚಾರಕ್ಕೆ ತೋರಿಕೆಗೆ ಇದ್ದರೆ ಅದು ಮಹಾಪರಾಧವಾಗುವದು. ಅರ್ಪಣೆ ಮತ್ತು ಪ್ರಸಾದಗಳು ವ್ಯಾಪಕವಾದಿ ಮತ್ತು ಪ್ರಸಾದಗಳು ವ್ಯಾಪಕವಾಗಿ ಮತ್ತು ಸೀಮಾತೀತವಾಗಿ ಇರುವವು.

ಕೇಳುವ ಸಂಗೀತ ನೋಡುವ ಸುರೂಪುಗಳು
ಲಿಂಗಾರ್ಪಿತವ ಮಾಡಬಲ್ಲರೆ ಪರಮ ಪ್ರಸಾದಿ ಎಂಬೆನು
ವಾಸಿಸುವ ಸುಗಂಧ, ರುಚಿಸುವ ಸುರಸಂಗಳ
ಲಿಂಗಾರ್ಪಿತವ ಮಾಡಬಲ್ಲರೆ ಪರಮ ಪ್ರಸಾದಿ ಎಂಬೆನು
ತಟ್ಟು ಮುಟ್ಟು ತಾಗು ನಿರೋಧ ಸೋಂಕು ಸಂಬಂಧಗಳ
ಲಿಂಗಾರ್ಪಿತವ ಮಾಡಬಲ್ಲರೆ ಪರಮ ಪ್ರಸಾದಿಯೆಂಬೆನು
ಹುಲ್ಲುಕಡ್ಡಿ ದರ್ಪಣ ಮೊದಲಾದ ಪದಾರ್ಥಗಳ
ಲಿಂಗಾರ್ಪಿತ ಮಾಡಬಲ್ಲರೆ ಪರಮ ಪ್ರಸಾದಿ ಎಂಬೆನು
ಚಳಿ ಮಳಿ ಗಾಳಿ ಬಿಸಿಲು ಮಿಂಚು ನೀರು ನೆಳಲುಗಳ
ಲಿಂಗಾರ್ಪಿತವ ಮಾಡಬಲ್ಲರೆ ಪರಮ ಪ್ರಸಾದಿಯೆಂಬೆನು
ಪೃಥ್ವಿ ಗಗನ ತತ್ವತೋರಿಕೆ ಸೂರ್ಯ ಚಂದ್ರ ಅಗ್ನಿ ತಾರೆ ಪ್ರಕಾಶಂಗಳ
ಲಿಂಗಾರ್ಪಿತವ ಮಾಡಬಲ್ಲರೆ ಪರಮ ಪ್ರಸಾದಿಯೆಂಬೆನು
ಇಂತೀ ಲಿಂಗಾರ್ಪಿತವನ ಕೀಲವನರಿಯದೆ ಬರಿದೆವು ಪ್ರಸಾದಿಗಳೆಂದು
ನಂಬಿವ ನುಡಿ ಜಾಣರ ಕಂಡು ನಾಚಿದೆನಯ್ಯಾ ಅಖಂಡೇಶ್ವರಾ.

ಎನ್ನುತ್ತಿದ್ದೇನೆ. ನಿಜ ಪ್ರಸಾದಿಯಾದೊಡನೆ ಚೋಳಿಯಕ್ಕನಂತಿರಬೇಕು. ಮಾದಾರ ಚನ್ನಯ್ಯನಂತಿರಬೇಕು. ಬೇಡರ ಕಣ್ಣಪ್ಪನಂತಿರಬೇಕು. ಬಿಜಿಬಾಚಯ್ಯನಂತಿರಬೇಕು. ಡೊಹರ ಕಕ್ಕಯ್ಯನಂತಿರಬೇಕು. ಪರಮ ಗುರು ಚೆನ್ನಬಸವಣ್ಣನಂತಿರಬೇಕು. ಹೀಗೆ ಇರಲಾರದೆ ಪ್ರಾಣವ ಹಸಿವೆಗೆಂದು ಬಾಯಿಗೆ ತಿಂಬ ಜೀವಗಳ್ಳರೆಲ್ಲಿಯ ಪ್ರಸಾದಿ?

ಪ್ರಾಣಲಿಂಗ ; ಪ್ರಾಣ-ಇಂದ್ರಿಯಗಳು ನಾನು ನನ್ನವು ಎಂಬ ಭ್ರಮಿತವಾದ ವ್ಯಾಮೋಹವನ್ನು ತ್ಯಜಿಸಿ, ಇವೆಲ್ಲವೂ ಲಿಂಗಮಯವಾದುವೆಂದು ಅನುಭವವನ್ನು ಹೊಂದುತ್ತ ತದೇಕಧ್ಯಾನಾಸಕ್ತ ಮಾನಸನಾದವನು ಪ್ರಾಣಲಿಂಗಿಯು.

ಪ್ರಾಣಲಿಂಗಿ ಸ್ಥಲದ ನಿಲುಗಡೆಗೆ ನಿಜಯೋಗ ಪಡೆದರೆ ಅವನು ಷಟ್‌ಸ್ಥಲ ಸಿದ್ಧಿಗೆ ಸಮರ್ಥನೆಂಬುದು ನಿಶ್ಚಿತ. ಅವನೆಂದೂ ಮರಳಿ ಭವ

ದಬಂಧನದಲ್ಲಿ ಬೀಳಲಾರ.

ಪಂಚ ಪ್ರಾಣವಾಯುಗಳ ಚಂಚಲಗುಣ ಅಳಿದಿರಬೇಕು
ಮುಂಚುವಕರಣಂಗಳ ವಂಚನೆಯು ಅತಿಗಳೆದಿರಬೇಕು
ಚಿತ್ತವು ಲಿಂಗದಲ್ಲಿ ಅಚ್ಚೊತ್ತಿರಬೇಕು
ಪ್ರಾಣ ಲಿಂಗದಲ್ಲಿ ಕೂಡಿ, ಲಿಂಗ ಪ್ರಾಣದಲ್ಲಿ ಕೂಡಿ ಚನ್ನಮಲ್ಲ
ದೇವರ ಸಮರಸವಾಗಿರಬೇಕು
ಸುಖದುಃಖ ನಾಸ್ತಿಯಾಗಿರಬೇಕು. ಇಷ್ಟುಳ್ಳಾತನೇ ಪ್ರಾಣಲಿಂಗಿ
ಇಂತಪ್ಪ ಪ್ರಾಣಲಿಂಗಿಗಳ ಶ್ರೀಪಾದಕ್ಕೆ ನಮೋನಮಃ ಎಂಬೆನಯ್ಯಾ
ಅಖಂಡೇಶ್ವರಾ

ಅಯ್ಯ ನಿಮ್ಮನ್ನು ಕರಸ್ಥಲದಲ್ಲಿ ನೋಡಿದರೆ ಕಂಗಳ ಕೊನೆಯಲ್ಲಿ ತೋರುತಿರ್ಪಿರಿ. ಕಂಗಳ ಕೊನೆಯಲ್ಲಿ ನೋಡಿದರೆ ಮನದ ಕೊನೆಯಲ್ಲಿ ತೋರುತಿರ್ಪಿರಿ. ಮನದ ಕೊನೆಯಲ್ಲಿ ನೋಡಿದರೆ ಪಂಚಮುಖದಲ್ಲಿ ತೋರುತಿರ್ಪಿರಿ. ನೆನಹಿನ ಪಂಚಮುಖದಲ್ಲಿ ನೋಡಿದರೆ ನವಚಕ್ರದಲ್ಲಿ ತೋರುತಿರ್ಪಿರಿ. ನವಚಕ್ರದಲ್ಲಿ ನೋಡಿದರೆ ಸರ್ವಾಂಗದಲ್ಲಿ ತುಂಬಿರ್ಪಿರಿ. ಇದೇನು ಗಾರುಡವಯ್ಯ ನಿಮ್ಮದು ಅಖಂಡೇಶ್ವರಾ? ಎಂದು ಬೆರಗಿನಲ್ಲಿ ನಿಬ್ಬೆರಗಾಗಿ ಕೇಳುವ ಈ ಅನುಭವವಾಗಬೇಕು ಪ್ರಾಣಲಿಂಗಿಗೆ.

ಶರಣ : ಜ್ಞಾನಿಯಾಗಿ ಜ್ಞಾನಪ್ರಸಾರ ಬಲದಿಂದ ನನ್ನ ದೇಹೇಂದ್ರಿಯಾದಿಗಳೂ ಸ್ವತಃ ಲಿಂಗರೂಪವಾಗಿರುವವು. ಎಂದು ಧೃಡಪಡಿಸಿಕೊಂಡು ಸಕಲ ವಿಷಯಗಳಿಂದ ಕೂಡಿದ್ದರೂ ವಿಶುದ್ಧನಾದವನು. ಶುದ್ಧವಾದ ಆನಂದ ಭಕ್ತಿಯುಳ್ಳವನು ಶರಣನು.

ಶರಣನು ಸರ್ವರಲ್ಲಿ ಶಿವನನ್ನು ಕಾಣುವವನು. ಅವನು ಸಮತಾ ಭಾವದವನು ಸುಖ ದುಃಖ ಹಾನಿ ವೃದ್ಧಿ ಮಾನಾಪಮಾನ ಮುಂತಾದ

ಎಲ್ಲ ದ್ವಂದ್ವಗಳಲ್ಲಿಯೂ ಒಂದೇತೆರನಾಗಿರುವನು. ಪರಮಾನಂದಭರಿತನು. ಲೋಕದ ಮರುಳುತನಕ್ಕೆ ಕೊರಗುವನು. ಲೋಕಕ್ಕೆ ತಾನು ಮರುಳನಾದರೂ ತನಗಾಗಿ ಬಲು ಜಾಣನವನು.

ವೇದ ಶಾಸ್ತ್ರ ಆಗಮ ಪುರಾಣ ತರ್ಕ ವ್ಯಾಕರಣ ಇತಿಹಾಸಂಗಳ
ಓದಿ ಕೇಳಿ ಹೇಳುವಾತ ಜಾಣನೇ ! ಅಲ್ಲಲ್ಲ
ಜಾತಿಗೊಂದು ಮಾತುಕಲಿತು
ಸರ್ವರಿಗೆ ನೀತಿ ಹೇಳುವಾತ ಜಾಣನೇ! ಅಲ್ಲಲ್ಲ
ಮತ್ತಾರು ಜಾಣರೆಂದೊಡೆ, ಮತ್ತಮತಿ ಎಂಬ ಕತ್ತಲೆಯ ಕಳೆದು
ತಥ್ಯ ಮಿಥ್ಯರಾಗ ದ್ವೇಷವಳಿದು
ನಿತ್ಯ ಲಿಂಗದಲ್ಲಿ ಚಿತ್ತವದಗಿರ್ಪ ಚಿನ್ಮಯ ಶರಣನೇ ಜಾಣನಯ್ಯಾ
ಅಖಂಡೇಶ್ವರಾ

ಎಂದು ಹರ್ಷತಾಳಿ ಹೋಗೋಣ !

ಶರಣರು ನಡೆದು ತಪ್ಪುವರಲ್ಲ ನುಡಿದು ಹುಸಿವರಲ್ಲ ಪಡಲು ಪಾಧಿಯ ಹೊದ್ದವರಲ್ಲ ಶರಣ ಪರಿಯ ಅಖಂಡೇಶ್ವರನೇ ಬಲ್ಲ ಶರಣ ಕರಣಂಗಳ ಕತ್ತಲೆಯಲ್ಲಿ ಸುತ್ತಿ ಬಳಲುವದಿಲ್ಲ ಇಂದ್ರಿಯಂಗಳ ವಿಕಾರದಲ್ಲಿ ಹರಿದಾಡುವದಿಲ್ಲ. ಪರತರ ಲಿಂಗದ ಬೆಳಗಿನೋಳ್ ಬೆರೆದು ತೆರಹಿಲ್ಲದೆ ಬೆಳಗುವ ಪರಮ ಗಂಭೀರ ಶರಣನ ನಿಲುವಿಗೆ ನಮೊ ನಮೋ ಎಂಬುವೆನು.

ಐಕ್ಯ : ನಾನು ನೀನೆಂಬ ಭೇದ ದೇಹ-ಪ್ರಾಣ-ಇಂದ್ರಿಯಗಳೆಂಬ ಭೇದ ವ್ಯವಹಾರವು ಭ್ರಾಂತಿಯಿಂದಾದವುಗಳು ಅಂದರೆ ಅಭೇದದಲ್ಲಿ ಕೂಡಿದ ಭೇದವುಳ್ಳವುಗಳು ಯಥಾಕ್ರಮವಲ್ಲ ಈ ಭೇದವು ನನ್ನಲ್ಲಿ ಇಲ್ಲವೇ ಇಲ್ಲ. ಎಂಬ ಭಾವಬೆಳಗಿ ಶಿವಾದ್ವೈತಭಾವದಿಂದ ಸಮರಸ ಭಕ್ತಿಯ ಸುಖಸ್ವರೂಪವನ್ನು ಪಡೆದವನು ಐಕ್ಯನು. ಐಕ್ಯನಿಗೆ ತಾನೆಂಬುದೆ ಇಲ್ಲ ಅಹಂಕಾರ ಮಮಕಾರ ಇನ್ನೆಲ್ಲಿರಬೇಕು.

ನಿಮ್ಮ ಪೂಜಿಸಿಹೆನೆಂದಡೆ ತನುವಿಲ್ಲವಯ್ಯಾ ಎನಗೆ
ಅದೇನು ಕಾರಣವೆಂದಡೆ ಆ ಪೂಜಿಸುವಾತನು ನೀವೆ ಆದಿಗಾಗಿ
ನಿಮ್ಮ ನೆನೆದಿಹೆನೆಂದಡೆ ಮನವಿಲ್ಲವಯ್ಯಾ ಎನಗೆ
ಅದೇನು ಕಾರಣವೆಂದಡೆ ಆ ಅರುಹು ನಿವೆ ಆದಿಗಾಗಿ
ಅಖಂಡೇಶ್ವರಾ ನಿಮ್ಮೊಳಗೆ ನಾನು ಉರಿಯುಂಡಕರ್ಪುರ
ದಂತಿರ್ದೆನಯ್ಯಾ ದೇವರ ದೇವ
ಏನೆಂಬೆ ಏನೆಂಬೆನಯ್ಯಾ ಬಿಂದು ಎರದಾಡುವ
ಏನೆಂಬೆ ಏನೆಂಬೆನಯ್ಯಾ ಎರಡು ಒಂದಾದುದರ
ಏನೆಂಬೆ ಏನೆಂಬೆನಯ್ಯಾ ಸರ್ವತೋರಿಕೆ ನಿರವಹಲಾದುದ
ಏನೆಂಬೆ ಏನೆಂಬೆನಯ್ಯಾ ಅಖಂಡೇಶ್ವರಾ
ನಿಮ್ಮೊಳಗೆನಗೆ ಸಮರಸೈಕ್ಯ ಸಂಬಂಧವಾದುದ

ಹೇಳ ಹೇಳುತ್ತ ಶಿವಯೋಗಿಗಳ ಧನಿ ಸಣ್ಣಾಯಿತು. ಅವರು ಯೋಗಾರೂಢರಾಗಿ ಸ್ತಬ್ಧರಾದರು. ಶ್ರೋತೃಭಕ್ತರು ಮೌನವಾಗಿ ಕುಳಿತರು. ಕೆಲವರಿಗೆ ಸಹಜ ಕೆಲವರಿಗೆ ಅಚ್ಚರಿ ಎಲ್ಲರೂ ಕೈಮುಗಿದು ನೆಟ್ಟ ನೋಟದಿಂದ ನೋಡಹತ್ತಿದ್ದರು. ಕೆಲವು ನಿಮಿಷಗಳ ಮೇಲೆ ಶ್ರೀಗಳು ಪ್ರಕೃತಕ್ಕೆ ಬಂದು 'ನಮೋ ನಮೋ ಅಖಂಡೇಶ್ವರಾ' ಎಂದು ಕೈ ಮುಗಿದರು. ಎಂದಿನಂತೆ ಗೋಷ್ಠಿಗೆ ಮಂಗಳವಾಯಿತು.

ವೀರಭದ್ರಪ್ಪನ ಭಕ್ತಿ

ವೀರಭದ್ರಪ್ಪನು ತನ್ನ ಊರಿಗೆ ಹೋಗಲು ಅವಸರ ಪಡಲಿಲ್ಲ. ಶಿವಯೋಗಿಗಳ ಸನ್ನಿಧಿ, ನಿತ್ಯದ ಗೋಷ್ಠಿಯ ಆತ್ಮಜ್ಞಾನದ ವಿದ್ಯೆ ಅವನನ್ನು ಆಕರ್ಷಿಸಿದ್ದವು. ನಾಳೆ ನಾಳೆ ಹೋಗೋಣ ಎನ್ನುತ್ತ ನಾಲ್ಕೈದುದಿನ ಉಳಿದನು. ಸ್ವಾಮಿಗಳ ಸೇವೆ ಮಾಡಿದನು. ಅನುಭವಾಮೃತ ಸವಿದನು. ಅವನ ವಿನಯ ಮೃದುವಾಣಿ ಸರಳ ಶುದ್ಧ ಭಕ್ತಿಭಾವಗಳಿಗೆ ಷಣ್ಮುಖ ಶಿವಯೋಗಿಗಳೂ ಸಂತೋಷ ಪಟ್ಟಿದ್ದರು, ಬೇರೆ ವೇಳೆಯಲ್ಲಿ ಹತ್ತಿರ ಕೂಡಿಸಿಕೊಂಡು ಅವನ ವ್ಯವಹಾರವನ್ನು ಅದರ ನೀತಿ ರೀತಿಗಳನ್ನು ಕೇಳಿ ತಿಳಿದಿದ್ದರು. ಅವನ ಲಿಂಗಪೂಜಾ ನಿಷ್ಠೆಯನ್ನು ಅದರಲ್ಲಿ ಆನಂದಪಡುವ

ದನ್ನು ಕಂಡಿದ್ದರು. ಹಾಗೂ ಉಳಿದ ವೇಳೆಯಲ್ಲಿ ಸುಮ್ಮನೇ ಕೂಡ್ರದೆ ಮಠದ ಆಗುಹೋಗುಗಳ, ದಾಸೋಹದ, ಯಾವುದೊಂದು ಕೆಲಸದಲ್ಲಿ ತೊಡಗಿರುತ್ತಿದ್ದುದನ್ನು ನೋಡಿದ್ದರು. ಅವನ ಸೇವಾಭಾವವನ್ನು ಮೆಚ್ಚಿದ ಶ್ರೀಗಳಿಗೆ ವೀರಭದ್ರಪ್ಪನು "ಇವನಾರವ ಇವನಾರವ ಎನ್ನಿಸದೇ ಇವ ನಮ್ಮವ ಇವನಮ್ಮವ" ಎನ್ನುವಂತಾಯಿತು. ಅವರು ಐದನೇ ದಿವಸ ಒಮ್ಮೆ ಅಂಗಳದಲ್ಲಿ ಅಖಂಡೇಶ್ವರ ಗದ್ದುಗೆಯತ್ತ ಅಡ್ಡಾಡುತ್ತ ಬಂದರು. ಅಲ್ಲಿ ಕಟ್ಟೆಯ ಮೇಲೆ ಕುಳಿತಿದ್ದ ವೀರಭದ್ರಪ್ಪ ಎದ್ದು ನಮಿಸಿ ನಿಂತನು. ಮಂದಸ್ಮಿತವದನದಿಂದ ನೋಡಿ ಅವನ ಭುಜದ ಮೇಲೆ ಕೈಯಿಟ್ಟ. ಶಿವ ಯೋಗಿಗಳು "ವೀರಭದ್ರಪ್ಪಾ ನಿಮ್ಮ ಕಾಯಕ ಬಿಟ್ಟು ನಿಂತಿದ್ದೀರಿ. ನಿಮ್ಮ ಅನುಭಾವದಲ್ಲಿಯ ಪ್ರೀತಿ ಸೇವಾ ಭಾವನೆ ಹೊಗಳತಕ್ಕವು. ಆದರೆ ನಿಮ್ಮ ಕಾಯಕದಲ್ಲಿಯೇ ಇವುಗಳನ್ನು ಅಳವಡಿಸಿಕೊಳ್ಳಬಹುದು. ನೀವು ಕಾಯಕ ಮಾಡಿ ಜಂಗಮ ದಾಸೋಹ ನಡೆಸಿದರೆ ಆ ಜಂಗಮದಿಂದ ಧರ್ಮ ತತ್ವ ಪ್ರಚಾರವಾಗುತ್ತದೆ. ನೀವು ಸತ್ಯ ಶೀಲತೆಯಿಂದ ಮಾಡುವ ಕಾಯಕ ಸಮಾಜಕ್ಕೂ ಆಧಾರವಾಗುವದು. ನಮ್ಮಂಥ ಶಿವಯೋಗಿಗಳ ಪೋಷಣೆ ನಿಮ್ಮಂಥವರಿಂದ ಸಮಾಜದಿಂದ ಆಗುತ್ತದೆ. ಕಾಯಕದಲ್ಲಿ ನಿರತನಾದರೆ ಗುರು, ಲಿಂಗ, ಜಂಗಮವನ್ನಾದರೂ ಮರೆಯಬಹುದು. ಎಂದಿದ್ದಾರೆ ಅಣ್ಣನವರು. ಅಂದರೆ ಸತ್ಯ ಶುದ್ಧ ಕಾಯಕದಲ್ಲಿಯೂ ಗುರುಲಿಂಗ ಜಂಗಮಾರ್ಚನೆಯಷ್ಟು ಫಲವಿದೆ. ಆದ್ದರಿಂದ ಈಗ ನೀವು ಊರಿಗೆ ಹೋಗಿರಿ ಊರು ಮುಟ್ಟಿದ ಸರಕಿನ ವ್ಯವಸ್ಥೆ ನೋಡಿರಿ. ಮತ್ತೆ ದರ್ಶನಕ್ಕೆ ಬರುವಿ ರಂತೆ, ನೀವು ನಮ್ಮನ್ನು ಮರೆಯುವದಿಲ್ಲ. ಆದ್ದರಿಂದ ನಿಮ್ಮ ಹತ್ತಿರವೇ ಇರುತ್ತೇವೆ''

ತಲೆಬಾಗಿ ಕೇಳಿದ ವೀರಭದ್ರಪ್ಪ ಆಗಲಿ ಅಪ್ಪಾ ಎಂದು ವಂದಿಸಿ ದನು. ಅವನ ಕಣ್ಣು ತೇವಾಗಿದ್ದವು. ಶಿವಯೋಗಿ ಅವನ ಮೈದಡವಿ ಆಶಿ ರ್ವದಿಸಿದರು

ಮರು ದಿನ ವೀರಭದ್ರಪ್ಪ ತನ್ನ ಕುದುರೆ ಹತ್ತಿ ಸುಲೇಪೇಟೆಗೆ ಹೋದನು. ಮುಂದೆ ಹೋಗಿದ್ದ ತನ್ನ ವ್ಯಾಪಾರದ ಸರಕನ್ನು ಪರಿಶೀಲಿಸಿ ಮಾರಾಟಕ್ಕೆ ಅಣಿಗೊಳಿಸಿದನು. ಗ್ರಾಮಾಂತರದ ತನ್ನ ಕೈಕೆಳಗಿನ ವ್ಯಾಪಾರಿಗಳಿಗೂ ಕಳುಹಿಸಿಕೊಟ್ಟನು.

ಮುಂದಿನ ಸಲದ ಖರೀದಿ ಸಾರಿಗೆಯನ್ನು ದೊಡ್ಡ ಪ್ರಮಾಣದಿಂದ ಯೋಜಿಸಿಕೊಂಡನು. ಅದು ವಿಜಾಪೂರಕ್ಕೆ ಹೋಗುವದಾಗಿತ್ತು. ಐವತ್ತು ಹೇರೆತ್ತುಗಳು ಹಲವಾರು ಕುದುರೆ ಬಂಡೆಗಳು ಅಡಿಗೆಯವರೂ ಆಳುಗಳೂ ಕಾವಲಭಟರೂ, ಮೇಲ್ವಿಚಾರಕರೂ ಇವರೆಲ್ಲರಿಂದ ಕಳಿಸಿ ತಾನು ಷಣ್ಮುಖ ಶಿವಯೋಗಿಗಳ ದರ್ಶನಾಶೀರ್ವಾದ ಪಡೆಯಲು ಜೇವರಗಿಗೆ ಬಂದನು. ಮಠಕ್ಕೆ ಬಂದು ತಲ್ಪಿದಾಗ ಅನುಭವಗೋಷ್ಠಿ ನಡೆಯುತ್ತಲಿತ್ತು ಗೋಷ್ಠಿಯಲ್ಲಿ ಸಾಷ್ಟಾಂಗವೆರಗಿ ಶ್ರವಣ ಮಾಡಲು ಕುಳಿತನು. ಸಜ್ಜನ ಸದ್ಭಕ್ತನ ಹಿರಿಮೆಯನ್ನು ಮಾನವಾರೆ ಮೆಚ್ಚಿ ಗೋಷ್ಠಿಯ ಕೊನೆಯ ಭಾಗದಲ್ಲಿ ಶಿವಯೋಗಿಗಳು ಅಪ್ಪಣೆ ಕೊಡಿಸಿದರು.

" ಭಕ್ತನ ನಡೆ ನುಡಿ ಶುದ್ಧಿ, ಭಕ್ತನ ತನು ಮನ ಶುದ್ಧಿ
ಭಕ್ತನ ಭಾವಶುದ್ಧಿ, ಭಕ್ತನ ಸರ್ವಕ್ರಿಯೆಯಲ್ಲಿ ಶುದ್ಧಿ
ಅಖಂಡೇಶ್ವರಾ ನಿಮ್ಮೊಳಿದು ಭಕ್ತನ ಕಾಯಕವೇ ಕೈಲಾಸವಯ್ಯಾ"

ಈ ವಚನ ವೀರಭದ್ರಪ್ಪನ ಮನಸ್ಸಿನಲ್ಲಿ ಅಚ್ಚೊತ್ತಿತು. ತಾನು ಇಂತಹ ಸಜ್ಜನ ಸದ್ಭಕ್ತನಾಗುವಂತೆ ಕರುಣಿಸಯ್ಯಾ ಎಂದು ಮನದಲ್ಲಿ ಅನಂತವಾಗಿ ಪ್ರಾರ್ಥಿಸಿದನು. ವೀರಭದ್ರಪ್ಪನ ಕುಶಲ ಕೇಳಿ ಶ್ರೀಗಳು ಒಳಗೆ ಹೋದರು.

ವೀರಭದ್ರಪ್ಪನು ಮೊಗಸಾಲೆಗೆ ಬಂದು ಸ್ವಾಮಿಗಳ ಅರ್ಪಿತಕ್ಕೆ ಫಲಪದಾರ್ಥಗಳನ್ನು ತನ್ನ ಹಸಿಬೆಯಿಂದ ತೆಗೆದು ಅವರ ಸೇವಕನ ಕೈ

ಗಿತ್ತು ತಾನು ತನ್ನ ಕುದುರೆಗೆ ಮೇವು ಇಟ್ಟನು. ಅಷ್ಟರಲ್ಲಿ ಲಿಂಗಾನು ಷ್ಠಾನ ಮುಗಿಸಿದ ಶಿವಯೋಗಿಗಳು ತಮ್ಮ ಎದುರಿನ ಸ್ಥಳದಲ್ಲಿ ವೀರಭದ್ರ ಪ್ಪನಿಗೆ ಎಡೆಮಾಡಿದರು. ಭೋಜನಾಂತರ ವೀರಭದ್ರಪ್ಪನು ಈ ಸಲದ ವಿಜಾಪೂರದ ಸಾರಿಗೆಗೆ ಮಾಡಿಕೊಂಡು ವ್ಯವಸ್ಥೆಯನ್ನೆಲ್ಲ, ಶ್ರೀಗಳ ಸನ್ನಿ ಧಿಗೆ ಅರಿಕೆ ಮಾಡಿಕೊಂಡನು. ಶ್ರೀಗಳು ಸಂತೋಷಪಟ್ಟು ಆಶೀರ್ವಾದವು ಫಲವನ್ನು ಅವನ ಉಡಿಗೆ ಹಾಕಿದರು. ತ್ರಿಕರಣಪೂರ್ವಕ ವಂದಿನೆ ಸಲ್ಲಿಸಿ ಆ ಸದ್ಭಕ್ತ ಅವರ ಅಪ್ಪಣೆ ಪಡೆದನು. ತನ್ನ ಪ್ರಯಾಣ ಮುಂದುವರೆಸಿ ದನು. ಮೂರನೆ ದಿನ ವಿಜಾಪುರ ತಲುಪಿದನು. ಅವನ ಸಾರಿಗೆ ತಂಡವು ಇನ್ನೂ ಬಂದಿರಲಿಲ್ಲ. ಈ ಅವಕಾಶದಲ್ಲಿ ವೀರಭದ್ರಪ್ಪನು ನಗರದಲ್ಲಿ ಸುತ್ತಾಡಿ ತನ್ನ ವ್ಯಾಪಾರಕ್ಕೆ ಸಂಬಂಧಿಸಿದ ಪರಿಸ್ಥಿತಿಯನ್ನು ಅಭ್ಯಸಿಸಿದನು,

ವಿಜಾಪುರದ ವೈಭವ ಸೂರ್ಯನು ಕೆಲವೇ ತಿಂಗಳ ಹಿಂದೆ ಅಸ್ತಂಗ ತವಾಗಿದ್ದನು. ಆದರೂ ಅದರ ಬೆಳಕು ಇನ್ನೂ ನಿಚ್ಚಳವಾಗಿತ್ತು. ದಿಲ್ಲಿಯ ಔರಂಗಜೇಬ ಬಾದಶಹನು ವಿಜಾಪುರದ ಆದಿಲ್‌ಶಾಹಿ ಸಿಂಹಾಸನ ವನ್ನು ಉರುಳಿಸಿದ್ದನು. ಚಿಕ್ಕವಯಸ್ಸಿನ ಅರಸನಾದ ಸಿಕಂದರ ಆದಿಲಶಹ ನನ್ನು ಸೆರೆಹಿಡಿದು ಗ್ವಾಲೇರಕ್ಕೆ ಕಳಿಸಿದ್ದನು. ರಾಜ್ಯದ ಆಡಳಿತದ ಅಧಿಕಾ ರಿಗಳೂ, ದಂಡಿನ ಅಧಿಕಾರಿಗಳೂ, ದಂಡಾಳುಗಳೂ ಅವರೆಲ್ಲರ ಪರಿವಾರ ಹಾಗೂ ಪೂರೈಕೆದಾರರೂ ನಗರದಿಂದ ತೊಲಗುವದಕ್ಕೆ ಆರಂಭವಾಗು ತಲಿತ್ತು ಒಂದು ಪ್ರಬಲರಾಜ್ಯದ ರಾಜ್ಯಧಾನಿಯಾಗಿ ಮೆರೆದ ವಿಜಾಪುರದ ಹಾಳಾಗುವ ಪರಿಸ್ಥಿತಿ ಸನಿಹದಲ್ಲಿ ಕಾದಿತ್ತು. ಈ ಕರಾಳ ಛಾಯೆಯು ಚಾಣಾಕ್ಷ ವ್ಯಾಪಾರಿಗಳಿಗೆ ಕಾಣಹತ್ತಿತ್ತು. ವಿಜಾಪುರವು ಲಕ್ಷಾವಧಿ ಜನ ಸಂಖ್ಯೆಯ ಪಟ್ಟಣವಾಗಿತ್ತು. ಮಲೆನಾಡಿನ ಕಡೆಯಿಂದ ಬರುವ ಕೊಬ್ಬರಿ ಮುಂತಾದ ತೆಂಗಿನ ಸರಕನ್ನು ಉಚ್ಚತರದ ಮಸಾಲೆ ಸಾಮಾನುಗಳನ್ನು ಪೂರ್ವದ ನಾಡುಗಳಿಗೆ ಮಾರುವ ದೊಡ್ಡ ಕೇಂದ್ರವಾಗಿತ್ತು. ಈಗ ಇಲ್ಲಿಯ ದೊಡ್ಡ ಸಂಗ್ರಹಕಾರರು ಮುಂದೆ ನಗರ ಒಡೆಯುವ ಲಕ್ಷಣದಿಂದಾಗಿ ತಮ್ಮ ಸಂಗ್ರಹವನ್ನು ಕರಗಿಸುವ ಧೋರಣೆ ತಾಳಬೇಕಾಗಿತ್ತು. ಆದರಿಂದ ವೀರ

ಭದ್ರಪ್ಪನಿಗೆ ಸುಲಭದರಲ್ಲಿ ಸಾಕಷ್ಟು ಒದಗು ಬೇಗನೆ ಪಡೆಯಲು ಅನುವಾಯಿತು. ಅವನು ಒಂದು ದಿನ ತಿರುಗಾಡಿ ಮಸಳಿಸಲಿರುವ ಶಹರದ ವೈಭವವನ್ನು ವಿವಿಧ ಪೇಟೆ ಬಜಾರುಗಳನ್ನು ನೋಡಿದನು. ತಮ್ಮ ತಂಡವು ಬಂದೊಡನೆ ಸಾಗಾಣಿಕೆಗೆ ಸಾಕಾಗಿ ಮಿಕ್ಕುವಷ್ಟು ಸರಕನ್ನು ಕೊಂಡನು. ವಿಶೇಷ ಸರಕಿನಲ್ಲಿ ಕೊಬ್ಬರಿ ಮುಖ್ಯವಾಗಿತ್ತು. ಅದನ್ನು ನೂರಾರು ಚೀಲದಲ್ಲಿ ತುಂಬಿ ಹಲವಾರು ಎತ್ತುಗಳ ಮೇಲೆ ಹೇರಲಾಗಿತ್ತು. ಉಳಿದ ಎಲ್ಲ "ಮಾಲು" ಹೇರಿ ಸಾಗಾಣಿಕೆ ಸಿದ್ಧವಾದ ಮೇಲೆ ಆ ತಂಡವನ್ನು ಊರ ಕಡೆಗೆ ಹೊರಡಿಸಿ ತಾನು ಕರಳೀ ಜಾಜಊಮುಗಳ ಖರೀದಿಗಾಗಿ ತಾಳೀಕೋಟೆಗೆ ಹೋದನು. ಮತ್ತೆ ಕೆಲವೊಂದು ಪೇಟೆಗಳನ್ನು ನೋಡಿಕೊಂಡು ಸುಲೇಪೇಟೆಗೆ ಹೋಗುವದು ಉದ್ದೇಶವಾಗಿತ್ತು.

ಇತ್ತ ಭಾರೀಸರಕು ಹೊತ್ತು ಸಾಗಿಸುವ ತಂಡವು ದಾರಿಯಲ್ಲಿ ಜೇವರಗಿಗೆ ಬಂದು ತಮ್ಮ ವಾಡಿಕೆಯ ಸ್ಥಳದಲ್ಲಿ ಬೀಡಾರ ಮಾಡಿತ್ತು. ಪಶುಗಳನ್ನು ಮೇಯಿಸುವ ಸಲುವಾಗಿ ಮೂಟೆ ಚೀಲಗಳನ್ನು ಇಳಿಸಿ ಬಿಟ್ಟಿದ್ದರು. ಅವುಗಳಲ್ಲಿ ಕೊಬ್ಬರಿ ಚೀಲಗಳ ಒಟ್ಟಲು ದೊಡ್ಡದಾಗಿತ್ತು.

ಜೇವರ್ಗಿ ಮಠದಲ್ಲಿ ಈ ಸಲದ ವಾರ್ಷಿಕ ಪುರಾಣವು ಅತ್ಯುತ್ಸಾಹದಿಂದ ಆರಂಭವಾಗಿತ್ತು. ಪ್ರವಚನಕಾರರು, ಪರಿಣಿತ ಕಲಾವಿದರು, ಪಂಡಿತರು ಆಗಿದ್ದರು. ಪರಸ್ಥಳದ ಶ್ರೋತೃಗಳಿಗಾಗಿ ವಿಶೇಷ ವ್ಯವಸ್ಥೆಯಾಗಿತ್ತು. ಪ್ರವಚನ ಮಂಟಪವು ಬಸವಣ್ಣನವರ ಶಿವಾನುಭವ ಮಂಟಪವನ್ನು ನೆನಪಿಗೆ ತರುವ ಆದರ್ಶ ಹೊಂದಿತ್ತು. ಪುರಾಣದ ವಿಷಯವೂ ಮಹಾತ್ಮರಾದ ಬಸವಣ್ಣನವರ ಮಹಿಮಾತ್ಮಕ ಚರಿತ್ರೆಯಾಗಿತ್ತು. ನೂರಾರು ಉತ್ಸಾಹಿಗಳು ಟೊಂಕಕಟ್ಟಿ ನಿಂತಿದ್ದರು. ತಿಂಗಳವರೆಗೆ ನಡೆಯುವದಿತ್ತು. ಈಗಾಗಲೇ ಒಂದು ವಾರ ಕಳೆದಿತ್ತು.

ಹೊರವಲಯಕ್ಕೆ ಬಂದಿದ್ದ ಷಣ್ಮುಖ ಶಿವಯೋಗಿಗಳು ವರ್ತಕರ ಬೀಡಾರದ ಹತ್ತಿರ ಹಾಯ್ದು ಹೋಗುತ್ತಿದ್ದಾಗ ಅಲ್ಲಿ ಒಬ್ಬ ಹಿರಿಯ

ಭಕ್ತರೊಡನೆ ಮಾತನಾಡುತ್ತ ಕ್ಷಣ ಹೊತ್ತು ನಿಂತ್ತಿದ್ದರು. ಆಗ ತಮ್ಮ ಮುಂದೆ ಹಾದು ಹೋಗುತ್ತಿದ್ದ ಬೀಡಾರದ ಒಬ್ಬ ಆಳು ಮಗನನ್ನು "ಏನಿವೆ ಈ ಚೀಲದಲ್ಲಿ" ಎಂದು ಸಹಜವಾಗಿ ಕೇಳಿದರು. ಆ ಅಜ್ಞಾನಿ ಮನುಷ್ಯನು "ಏನಿವೆ ಎಂಬುದು ನಿಮಗೆ ಗೊತ್ತಾಗುವದಿಲ್ಲವೇನು?" ಅವು ಕಾಕುಳ್ಳಿ ಎಂದು ಒರಟಾಗಿ ನುಡಿದು ನಡೆದನು. ಶ್ರೀಗಳು " ಕಾಕುಳ್ಳೀ ? ಎಂಥ ತಾಮಸೀ ಈ ಮನುಷ್ಯ?" ಎಂದು ಕೊಂಚ ಮನಸ್ಸು ಮುದಡಿ ಮಾಡಿ ಅಂದು ಮಠಕ್ಕೆ ದಯಮಾಡಿಸಿದರು.

ವೀರಭದ್ರಪ್ಪ ಸುಲೇಪೇಟೆಗೆ ಬಂದ ಮರುದಿನ ಅವನ ಸರಕು ಸಂಚಾರ ಬಂದು ತಲುಪಿತು. ಅವನು ಆಳುಗಳನ್ನು ಮೇಲ್ವಿಚಾರಕನನು ಬರಮಾಡಿಕೊಂಡು ಅವರ ಪ್ರಯಾಣದ ವಿವರ ಕೇಳಿದನು. ಯಾವತೊಂದರೆ ಇಲ್ಲದೆ ಯಾರ ಉಪದ್ರವ ಇಲ್ಲದೆ ಯಾವ ಅಪಾಯವೂ ಸಂಭವಿಸದೆ ಸುರಕ್ಷಿತವಾಗಿ ಊರು ತಲುಪಿದುದನ್ನು ತಿಳಿದು ಸಂತೋಷ ಪಟ್ಟನು. ಇದು ಜೇವರಗಿಯ ಷಣ್ಮುಖ ಶಿವಯೋಗಿಗಳ ರಕ್ಷಣೆ ಬಲವೆಂದು ಭಾವದಲ್ಲಿಯೇ ನಮಸ್ಕರಿಸಿದನು. ಊಟ ವಿಶ್ರಾಂತಿಗಳ ಬಳಿಕ ಮೂಟೆಗಳನ್ನು ಬಿಚ್ಚಿ ಸರಕು ಸ್ಥಳಕ್ಕೆ ಹೊಂದಿಸಲು ಕರ್ಮಚಾರಿಗಳಿಗೆ ಹೇಳಿದನು. ಲೆಖ್ಖಪತ್ರದವರು ಗ್ರಾಮಾಂತರದ ತಮ್ಮ ಅಂಗಡಿಗಳಿಗೆ ಕಳಿಸುವ ಜಿನಸುಗಳು ಪ್ರಮಾಣ ಪಟ್ಟಿ ಮಾಡುತ್ತಿದ್ದರು. ಆಳುಗಳು ಬಂದು ಮೂಟೆಗಳನ್ನು ಚೀಲಗಳನ್ನು ಬಿಚ್ಚುತ್ತಿದ್ದರು. ಕೊಬ್ಬರಿ ಚೀಲಗಳನ್ನು ಬಿಚ್ಚಿದಾಗ ಒಳಗೆಲ್ಲ ಕಾಕುಳು ಅಡವಿಯ ಬೆರಣಿಗಳು ! ಆಳುಮಕ್ಕಳು ಗಾಬರಿಯಾದರು. ವೀರಭದ್ರಪ್ಪನಿಗೆ ಆಶ್ಚರ್ಯ ಇದು ವರೆಗೆ ಇವರು ಹೇಳಿದ್ದೇನು? ಈಗ ಕಂಡುದೇನು? ಇದು ಕಳ್ಳರ ಕೃತಿಯೇ? ವೈರಿಗಳ ಕೈವಾಡವೋ? ಇವರದೇ ಮೋಸವೇ ? ಎಂದು ಚಡಪಡಿಸಿದನು. ವೀರಭದ್ರಪ್ಪ ಕಾವಲಕ್ಕೇ ಎಂದು ಹೋದ ಭಟರನ್ನು ಮುಂದಕ್ಕೆ ಕರೆದನು. ಗದರಿಸಿ ಕೇಳಿದನು. "ಏನಾಗಿದೆ ಹೇಳಿರಿ ಎಂದನು. ಭಟರು ಏನು ತಿಳಿಯದೆಂದು ಕೈಮುಗಿದು ನಿಂತರು. ಆಳುಗಳನ್ನು ಕುರಿತು ನೀವೇನಾದರೂ ಬಲ್ಲಿರಾ ? ನಿಜವನ್ನು

ಹೇಳಿರಿ ನಿಮಗೇನೂ ಕಷ್ಟ ಕೊಡುವದಿಲ್ಲ ಅಂಜಬೇಡಿರಿ" ಎಂದು ಸುಮ್ಮಾನಿಸಿ ಕೇಳಲು ಒಬ್ಬ ಆಳು "ಒಡೆಯರೇ ಎಲ್ಲಿಯೂ ನಮಗೆ ಅಪಾಯು ತಟ್ಟಿಲ್ಲ. ಒಂದು ಮಾತಿನಲ್ಲಿ ಮಾತ್ರ ನನಗೆ ಸಂದೇಹ ಬರುತ್ತದೆ. ಅದು ನನ್ನಿಂದಾದ ತಪ್ಪು. ಜೇವರಗಿಯಲ್ಲಿ ವಸತಿ ಮಾಡಿದ್ದೆವು. ಅಲ್ಲಿ ಹಾಯ್ದು ಹೋಗುತ್ತಿದ್ದ ಸ್ವಾಮಿಗಳೊಬ್ಬರು ಚೀಲಗಳಲ್ಲಿ ಏನಿವೆ ಎಂದು ಕೇಳಿದರು. ಅವುಗಳಲ್ಲಿ ಕಾಡುಕುರುಳುಗಳಿವೆ ಎಂದೆ ನಾನು ಸುಳ್ಳು ಹೇಳಿದೆ ಅದರ ಪರಿಣಾಮವೋ ಏನೋ? ಅವರು ಮಹಿಮಾ ವಂತರಿರಬಹುದು"

" ಅಯ್ಯೋ ಮೂರ್ಖಾ ಹಾಗೇಕೆ ಹೇಳಿದೆ, ಷಣ್ಮುಖ ಶಿವಯೋಗಿಗಳೇ ಆವರಿರಬೇಕು. ಪ್ರತ್ಯಕ್ಷ ಪರಶಿವ ಸ್ವರೂಪದವರು. ಅವರು ನೊಂದರೆ ನಾವು ಬಾಳೇವೇ"

" ತಪ್ಪಾಯಿತು ಒಡೆಯರೆ, ಕ್ಷಮಿಸಬೇಕು. ಕಳ್ಳರ ಕಣ್ಣು ಬೀಳದಿರಲೆಂದು ನಾವು ಕಂಡಕಂಡವರ ಮುಂದೆ ಹೇಳುವಂತೆ ಹೇಳಿಬಿಟ್ಟೆ ಅವರು ಸ್ವಾಮಿಗಳು ಎಂಬ ಅರಿವಾಗಲಿಲ್ಲ. ಬುದ್ಧಿಗೇಡಿ ನಾನು ಕ್ಷಮಿಸಬೇಕು" ಎಂದು ಅಳಹತ್ತಿದನು.

" ಆದದ್ದಾಯಿತು ಇನ್ನು ಅತ್ತರೇನಾಗುವದು ಆಳು ಮಾಡಿದ್ದು ಆಳ್ದನ ಉಡಿಯಲ್ಲಿ ಎಂಬುದು ಈಗ ತಪ್ಪು ನನ್ನದಾಯಿತು. ಹಾ! ಗುರುವೆ ನಿನ್ನ ಮಹಿಮೆಯು ತಿಳಿಯದ ಜಡಮತಿಗಳಾದೆವು ನಾವು, ಕೃಪಾಳುವೇ ನಮ್ಮ ಅಪರಾಧಗಳ ಕ್ಷಮಿಸಬೇಕು. ಎಲ್ಲ ನಿನ್ನ ಪಾದ ಅಲ್ಲಿ ಬಂದು ಬಿದ್ದು ಬೇಡುವೆ ಕ್ಷಮಿಸಬೇಕು ಕೃಪೆಮಾಡಬೇಕು" ಹೀಗೆ ಒಡನುಡಿಯುತ್ತ ತಲೆ ಹಿಡದುಕೊಂಡು ಕುಳಿತು ಧ್ಯಾನಿಸಿದನು. ಸೂರ್ಯ ಮುಳುಗಿ ಸಂಜೆಯಾಗಿತ್ತು. ಕಾಣುವೆನು ಗುರುಪಾದವನ್ನು ಎಂಬ ಹಂಬಲಿಕೆ ಬಲಿಯಿತು. ಊಟ ಮಾಡಲಿಲ್ಲ ಮಲಗಿದರೆ ನಿದ್ರೆ ಬಂದಿತೆ? ಜೇವರಗಿಗೆ ಧಾವಿಸುವ ಲವಲವಿಕೆ ಹೆಚ್ಚಾಯಿತು. ಬೆಳಗಿನ ಜಾವದ ಮೊದಲು ಮೆಲ್ಲಗೆ ಎದ್ದು

ಯಾರಿಗೂ ತಿಳಿಸದೆ ಮುಂಬಾಗಿಲಿನ ಆಳನ್ನು ಮಾತ್ರ ಎಬ್ಬಿಸಿ ಬಾಗಿಲ ಹಾಕಿಕೊಳ್ಳಲು ಹೇಳಿ ನಡೆದುಬಿಟ್ಟನು.

ರಾತ್ರಿಯಲ್ಲಿ ಒಬ್ಬನೇ ನಡೆದನು. ಹಲವು ಹಳ್ಳಗಳನ್ನು ಕಾಡುಗಳನ್ನು ದಾರಿಯಲ್ಲಿ ದಾಟಬೇಕಾಗಿತ್ತು ಕಾಡುಮೃಗಗಳ ಸುಳಿದಾಟ ಗೋಚರಿಸುತ್ತಿತ್ತು ಕ್ರೂರದನಿಗಳು ಕೇಳುತ್ತಿದ್ದವು. ಆದರೆ ಅವುಗಳ ಕಡೆಗೆ ಗಮನವಿಲ್ಲ. ಮನದಲ್ಲಿ ಗುರುಪಾದದ ನೆನಹೇ ಬೆಳಕಾಗಿತ್ತು. ಅದನ್ನು ಕಾಣುವ ಆತುರವೇ ಶಕ್ತಿಯಾಗಿತ್ತು. ಯಾವ ಭಯವೂ ಎದೆಯಲಿಲ್ಲ. ಶಿವಯೋಗಿಯ ಸ್ಮರಣೆಯಲ್ಲಿ ಹಿಂಜರಿಯದೇ ಕುದುರೆಗೆ ಗೊತ್ತಿರುವ ದಾರಿಯಲ್ಲಿ ಪಯಣಿಸಿ ಬೆಳಗಾಗುವ ಹೊತ್ತಿಗೆ ಜೇವರಿಗಿಗೆ ಬಂದನು. ಕೋಡದಲ್ಲಿ ಸ್ನಾನ ಮಾಡಿ ದಾಸೋಹದಲ್ಲಿ ಲಿಂಗಾರ್ಚನೆ ಗೈದು ಬಂದು ಗಣವರದ ಮಧ್ಯದಲ್ಲಿ ಶಿವನು ಕುಳಿತಂತೆ ಶಿವಾನುಭವ ಮಂಟಪದಲ್ಲಿ ಭಕ್ತರ ನಡುವೆ ಕುಳಿತಿದ್ದ ಷಣ್ಮುಖ ಶಿವಯೋಗಿಗಳ ಪಾದದ ಮೇಲೆ ತಲೆಯಿಟ್ಟು ಕಣ್ಣೀರು ಕರೆದು "ಅಪ್ಪಾ ನಾನು ಮಾಡಿದ ತಪ್ಪುಗಳನ್ನೆಲ್ಲಾ ಕ್ಷಮಿಸಬೇಕು ಮಂದಮತಿ ನಾನು, ಅಜ್ಞಾನಿ ನಾನು" ಗದ್ಗದಿತ ಕಂಠವಾಗಿ ಅಳುತ್ತ ಬೇಡಿಕೊಂಡನು ಕುಳಿತವರಿಗೆಲ್ಲಾ ಕುತೂಹಲ!

ಶಿವಯೋಗಿಗಳು ನೋಡುತ್ತಾರೆ. ವೀರಭದ್ರಪ್ಪಾ! "ಏನಾಯಿತು ವೀರಭದ್ರಪ್ಪಾ ಯಾವಾಗ ಬಂದೆ? ನಿನ್ನೆ ಸಂಜೆಯಿಂದ ನಿನ್ನ ನೆನಪಾಗಿತ್ತು ಕರೆಯಿಸಬೇಕೆಂದಿದ್ದೆವು ಬಂದೆಯಲ್ಲಾ ನಿನ್ನಿಂದ ಯಾವ ತಪ್ಪು ಆಗಿಲ್ಲ. ಆಗದು ಏನಿದ್ದರೂ ಶಿವನು ತನ್ನವರ ತಪ್ಪುತಡಿಗಳನ್ನು ಮನ್ನಿಸಿ ಕಾಪಾಡುವನು. ಸಂದೇಹ ಬೇಡ ಏಳು ಇಲ್ಲಿ ಏನು ನಡೆದಿದೆ ಲಕ್ಷಿಸು ನಿನ್ನ ಕರ್ತವ್ಯವೂ ಇಲ್ಲಿ ಕಾದಿದೆ. ಮಹಾತ್ಮ ಬಸವೇಶನ ಕರುಣೆಯಿಂದ ನಿನ್ನ ಕಷ್ಟನಷ್ಟಗಳೆಲ್ಲ ಪರಿಹಾರಗೊಳ್ಳುವವು. ಅಳುಕು ಅಂಜಿಕೆಬೇಡ.

ಈ ಇಷ್ಟರಲ್ಲಿಯೇ ಅರಿಕೆ ಅವಗಾಹನೆ, ಅಭಯದ ಹರಕೆ ಇವೆಲ್ಲವೂ ನೆರವೇರಿದ್ದವು. ವೀರಭದ್ರಪ್ಪನ ನೀರು ತುಂಬಿದ ಕಣ್ಣಲ್ಲಿ ಆನಂದದ

ಕಳೆ ಮೂಡಿತು. ಶ್ರೀಗಳಮುಖ ನೋಡಿ ಮತ್ತೆ ಮತ್ತೆ ನಮಿಸಿ ಹಿಂದಕ್ಕೆ ಸರಿದು ಕುಳಿತನು. ಆಗ ಕಾರ್ಯಕರ್ತರ ಯೋಚನೆಗಳಲ್ಲಿ ತಾನೂ ಕೂಡಿ ಕೊಂಡನು. ಪುರಾಣ ಶ್ರವಣಕ್ಕೆ ಬರುಹೋಗುವ ಹಾಗೂ ಇಲ್ಲಿಯೇ ಉಳಿಯುವ ಜನರು ಹೆಚ್ಚಾದಂತೆಲ್ಲ ದಾಸೋಹದಲ್ಲಿಯ ಕೆಲಸಬೊಗಸೆಗಳೂ ಹೆಚ್ಚಾಗಿದ್ದವು ಅದರಲ್ಲಿ ಮೈಮನ ಬೆರಸಿ ವೀರಭದ್ರಪ್ಪ ಸೇವೆ ಸಲ್ಲಿಸುತ್ತ ನಿಂತು ಬಿಟ್ಟನು. ವ್ಯವಹಾರ ಸಾಮಗ್ರಿಯು, ಮನೆ ಹೆಂಡತಿ ಈ ಎಲ್ಲ ಚಿಂತೆ ಬಿಟ್ಟು ಮನಸ್ಸನ್ನು ಈ ಶಿವಕಾರ್ಯದಲ್ಲಿ ಮುಂದುವರೆಸಿದ್ದನು. ಅವನ ತ್ಯಾಗ ಸೇವೆಗಳು, ಬುದ್ಧಿ, ಜಾಣ್ಮೆಗಳು ನೂರಾರು ಕಾರ್ಯಕರ್ತರಲ್ಲಿ ಪ್ರಾಮುಖ್ಯತೆಯನ್ನು ತಂದು ಕೊಟ್ಟವು.

ಶ್ರೀ ಬಸವೇಶ್ವರ ಮಹಾಪುರಾಣದ ಮುಕ್ತಾಯ ಸಮಾರಂಭದ ದಿನ ಸಮೀಪಿಸಿತು. ಒಂದುದಿನ ಪುರಾಣದ ಮಂಗಳಾರತಿಯ ನಂತರ ಕಾರ್ಯಕರ್ತರೆಲ್ಲ ಮಂಟಪದಲ್ಲಿ ಸಮಾಲೋಚನೆಗೆ ಉಳಿದರು ಮಹೋತ್ಸವಕ್ಕೆ ಅಪರಿಮಿತ ಜನ ಕೂಡುವ ನಿರೀಕ್ಷೆ ಇತ್ತು, ಅದಕ್ಕೆ ತಕ್ಕ ಪ್ರಮಾಣದಲ್ಲಿ ಸಾಧನ ಸಾಮಗ್ರಿಗಳು ಭಕ್ತರ ಉದಾರ ಭಕ್ತಿಯಿಂದ ಬಂದು ಸಿದ್ಧವಾಗಿದ್ದವು ಆದರೆ ನೀರು ಪೂರೈಕೆಯಲ್ಲಿ ಕೊರತೆಯಾಗುವ ಚಿಂತೆ ಉತ್ಪನ್ನವಾಗಿತ್ತು ಅಷ್ಟು ಜನರ ಬಳಕೆಯಿಂದ ಕೊಳ-ಹಳ್ಳಗಳ ನೀರು ಮತ್ತಷ್ಟು ಮಲಿನವಾಗುವವು. ಕುಡಿಯುವ ಅಡಿಗೆಯ ನೀರು ಪೂರೈಕೆ ಹೇಗೆ? ಎಂದು ಆಲೋಚಿಸಹತ್ತಿದರು. ವೀರಭದ್ರಪ್ಪನ ವೀರವಾಣಿ ಬಂದಿತು. ಮಹನೀಯರೇ ಬೇರೆ ಆಲೋಚನೆ ಏನೂ ಬೇಡ. ನಾಳೆ ಬೆಳಗಿನಲ್ಲಿ ಅಪ್ಪನವರು ತೋರಿಸುವ ಸ್ಥಳದಲ್ಲಿ ಪೂಜೆ ಮಾಡಿ ಭಾವಿ ಅಗಿಯೋಣ. ಹತ್ತು ಕೈ ಮುಂದಾದರೆ ನೂರು ಬಂದಾವು ಸಾವಿರ ಕೊಡ ನೆರೆದಾವು.

"ಆಗ ಬಹುದು ಎಂದರು" ಹಲವು ಕಾರ್ಯಕರ್ತರು ಇಷ್ಟು ಅವಸರದಲ್ಲಿ ಹೇಗೆ ಸಾಧ್ಯ ಎಂದರು ಕೆಲವರು ಇನ್ನೂ ಕೆಲವರು ಅನುಮಾನಿಸಿ

ದರು ಶಿವನ ಶುಭಕಾರ್ಯಕ್ಕೆ ಸಂಕೋಚ ವ್ಯಕ್ತ ಪಡಿಸಲು ಹಿಂಜರಿದು ಅನುಮೋದಿಸಿದರು ಚರ್ಚೆಯ ವಿವರ ಸ್ವಾಮಿಗಳಿಗೆ ವಿದಿತವಾಯಿತು.

ಮುಂಜಾವು ವೀರಭದ್ರಪ್ಪ ಸ್ನಾನಾದಿಗಳನ್ನು ಬೇಗ ತೀರಿಸಿಕೊಂಡು ಗುರುಮಠದ ಬಾಗಿಲಿಗೆ ಬಂದನು. ತನ್ನ ಯೋಜನೆಗೆ ಸಿದ್ಧನಾಗಿದ್ದನು. ಶಿವಯೋಗಿಗಳು ಅನುಷ್ಠಾನ ಪೂರೈಸಿಕೊಂಡು ಹೊರ ಬಂದಕೂಡಲೆ ನಮಸ್ಕರಿಸಿ ಅದೇ ಆವೇಶದಲ್ಲಿಯೇ ಅಂಗಣಕ್ಕೆ ಬಿಜಯಂಗೈಸಿಕೊಂಡು ಬಂದರು. ಹಲವಾರು ಭಕ್ತಿ ಭಾವುಕರು ಬಂದಿದ್ದರು. " ಅಗ್ಗವಣಿ ಎಲ್ಲಿ ಅಪ್ಪಾ ? ಎಂದು ವೀರಭದ್ರಪ್ಪ ಕೈಮುಗಿದು ಕೇಳಿದನು. ಸ್ವಾಮಿಗಳು ಅತ್ತಿತ್ತ ನೋಡಿದರು. ಸ್ವಲ್ಪ ಸುಳಿದಾಡಿದರು. "ಇಲ್ಲಿ" ಎಂದು ಒಂದೆಡೆ ಯಲ್ಲಿ ನಿಂತರು. ಅಲ್ಲಿಯೇ ಅವರ ಪಾದ ಪೂಜೆ ಮಾಡಿ ವಂದಿಸಿದರು. ಪ್ರಸಾದ ಹಂಚಿದರು. ಕೆಲ ನಿಮಿಷ ಸ್ವಲ್ಪ ಹಿಂದಕ್ಕೆ ಸ್ವಾಮಿಗಳನ್ನು ಮೂರ್ತ ಮಾಡಿಸಿ, ಪೂಜೆ ಆದ ಸ್ಥಳದಲ್ಲಿ ಮೊದಲು ವೀರಭದ್ರಪ್ಪ ಗುದ್ದಲಿ ಹಾಕಿ ಅಗಿದು ಮಣ್ಣು ತುಂಬ ಅತ್ತ ಹಾಕಿದನು. ತತ್‌ಕ್ಷಣ ಜಾಗ ಅಳೆದು ಗೆರೆ ಹಾಕಿ ಹತ್ತು ಗುದ್ದಲಿ ಸಲಕಿ ಜೋಡಿ ಜನರು ಕೆಲಸಕ್ಕೆ ನಿಂತರು. ಐದುಗಳಿಗೆ ಹೊತ್ತೇರುವ ಹೊತ್ತಿಗೆಗೆ ನೂರಾರು ಜನರು ಕೆಲಸ ದಲ್ಲಿ ತೊಡಗಿದರು. ಮರುದಿನಕ್ಕೆ ಇದರ ಇಮ್ಮಡಿ ಜನರಾದರು ಮುಗಿವ ವರೆಗೆ ಈ ಸೇವೆಗೆ ನಿಂತರು ಹಲವರು. ಒಂದು ದಿನ ಸೇವೆಗೆ ಬರುವ ವರು ಹಲವರು ನಮಗೂ ಅಷ್ಟು ಈ ಸೇವೆಯ ಭಾಗ್ಯ ಸಲ್ಲಲೆಂದು ಸಾಂಕೇತಿಕವಾಗಿ ಕೈಹಚ್ಚುವ ಹಿರಿಯರು ಕೆಲವರು ಮೂರನೆಯ ದಿನ ಜನದರ್ಶನವಾಯಿತು. ಹರ ಹರ ಮಹಾದೇವ ಘೋಷದೊಡನೆ ಮೊದಲು ಜಲದಿಂದ ಅಖಂಡೇಶ್ವರ ಗದ್ದುಗೆಯ ಅಭಿಷೇಕವಾಯಿತು. ಶಿವಯೋಗಿಗಳ ಸ್ನಾನಕ್ಕೆ ಪನ್ನೀರಾಯಿತು. ಲಿಂಗಾರ್ಚನೆಗೆ ಅಗ್ಗವಣಿಯಾಯಿತು. ಐದನೆಯ ದಿವಸಕ್ಕೆ ಅದಿಯುಲಿಕ್ಕೆ ಬಾರ ದಷ್ಟು ನೀರು ಏರಿ ಬಂದಿತು. ಶಿವನ ಕರುಣೆ ಹಳ್ಳದ ಸನಿಹ ಭೂಗರ್ಭ ದಿಂದ ದೊಡ್ಡ ಸೆಲೆ ಚಿಮ್ಮಿತು ನಾಲ್ಕು ಅಡಿ ನೀರು ಏರಿ ನಿಂತಿತು.

ಕಾರ್ಯಕರ್ತರ ಚಿಂತೆದೂರಾಯಿತು.

ಅತ್ತ ಏನಾಯಿತು ಸುಲೇಪೇಟೆಯಲ್ಲಿ? ತನ್ನ ಪತಿ ಯಾತಕ್ಕಾಗಿ ಯಾವೂರಿಗೆ ಹೋದನೆಂಬುದು ಗೊತ್ತಾಗದೆ ವೀರಭದ್ರಪ್ಪನ ಮಡದಿ ಗಂಗಮ್ಮ ಗಾಬರಿಯಾದಳು. ಆತನ ಧೀಧತಿಗಳ ಬಗೆಗೆ ಆಕೆಗೆ ನಂಬಿಗೆ ಇದ್ದುವಾದರೂ ತನಗೆ ತಿಳಿಸದೆ ರಾತ್ರಿಯಲ್ಲಿಯೇ ಎದ್ದು ಹೋದುದಕ್ಕೆ ಸಂದೇಹಿಸಿ ಸಮಾಧಾನವಿಲ್ಲದೆ ಚಡಪಡಿಸುತ್ತಿದ್ದಳು. ಗಂಡನಿಲ್ಲದಾಗ ಎಲ್ಲ ವ್ಯವಹಾರ ತನ್ನ ಕಣ್ಣರಿಕೆಯಲ್ಲಿ ನಡೆಯುವಂತೆ ಈಗಲೂ ಮುಂದುವರೆಯಿತು. ಕೊಬ್ಬರಿಗಳ ಬದಲು ಕಾಡುಕುರುಳುಗಳ ಸಮಸ್ಯೆ ಆಕೆಗೂ ಕರಣಿಕ ಕಾರ್ಮಿಕರಿಗೂ ಗೂಢವಾಗಿಯೇ ಉಳಿದಿತ್ತು. ಹೀಗೆ ಇಬ್ಬಗೆಯ ಚಿಂತೆ ಗಂಗಮ್ಮನಿಗೆ ಒಂದು ವಾರ ಕಳೆಯಿತು.

ಒಂದು ದಿನ ಒಬ್ಬ ಜಂಗಮರು ಭಿಕ್ಷಾಂದೇಹಿ ಎಂದು ಬಾಗಿಲಿಗೆ ಬಂದರು. ಪತಿಯಂತೆ ಗುರುಲಿಂಗ ಜಂಗಮಭಕ್ತೆ ಗಂಗಾಂಬೆ ಆ ಸ್ವಾಮಿಗಳನ್ನು ಬರಮಾಡಿಕೊಂಡು ಸತ್ಕರಿಸಿದಳು,

" ಸ್ವಾಮಿ ತಮ್ಮದು ಯಾವ ನಾಡು"

" ನಮ್ಮದು ಸಗರ ನಾಡು ತಾಯಿ "

ಆ ನಾಡಿನ ಜೇವರಗಿಯಲ್ಲಿ ಮನದ ಕ್ಷೋಭೆಯನ್ನು ಕಳೆಯುವ ಶ್ರೀ ಷಣ್ಮುಖಸ್ವಾಮಿಗಳ ಪವಿತ್ರ ಮಠವೊಂದಿದೆ"

" ಹೌದು ಅಮ್ಮಾ ಅದನ್ನು ಅರಿಯುವ ಜನರಿಲ್ಲ ಈ ನಾಡಿನಲ್ಲಿ ಅಲ್ಲಿ ಈಗ ಬಸವ ಪುರಾಣ ಬಹು ವೈಭವದಿಂದ ನಡೆಯುತ್ತಲಿದೆ"

" ಅಲ್ಲಿಗೆ ತಾವು ಹೋಗಿದ್ದೀರಾ? ಅಲ್ಲಿ ಪಟ್ಟಣಶೆಟ್ಟಿ ಎಂಬ ಹಿರಿಯಾವರ್ತಕರು ಇರುವರೇ?"

" ಇದ್ದಾರಮ್ಮ, ವೀರಭದ್ರಪ್ಪ ಪಟ್ಟಣಶೆಟ್ಟಿ ಎಂಬುವರು ಇದ್ದಾರೆ

ಅವರು ಪುರಾಣದ ಕಾರ್ಯಕ್ರಮಗಳಲ್ಲಿ ಧುರೀಣರಾಗಿ ಸೇವೆ ಸಲ್ಲಿಸುತ್ತಿದ್ದಾರೆ, ಶಿವನ ಮುಂದಿನ ನಂದಿಯಂತೆ ಅವರು ಶಿವಯೋಗಿಗಳ ಮುಂದಿದ್ದ ಹಿರಿಯರು ಕಾರ್ಯಕರ್ತರು ಯಾಕಮ್ಮಾ.

"ಅವರು ನನ್ನ ಯಜಮಾನರು ಸ್ವಾಮಿ"!

" ಹೀಗೆನಮ್ಮಾ ಅಂತಹ ಸದ್ಭಕ್ತ ಶರಣನ ಸತಿಯಾದ ನೀನು ಧನ್ಯಳುತಾಯೀ !

" ಅವರ ಸಮಾಚಾರ ತಿಳಿದು ಸಂತೋಷವಾಯಿತು ಸ್ವಾಮಿ ಆದರೆ ....[ಕಣ್ಣೀರೊರೆಸುತ್ತ] ಅವರು ಹೇಳದೆ ಹೋಗಿದ್ದಾರೆ.

"ಅದೇನು ಕಾರಣ ತಾಯೀ" ?

"ಆದೊಂದು ಶಿವಯೋಗಿ ಲೀಲೆ ಅಯ್ಯನವರೆ ಆ ಕತೆ ಕೇಳಿರಿ...... ಎಂದು ಜೇವರಿಗಿಯಲ್ಲಿ ಶ್ರೀಗಳಿಗೆ ಆಳು ಹೇಳಿದ ಉತ್ತರದಿಂದ ಚೀಲದಲ್ಲಿಯ ಕೊಬ್ಬರಿ ಕುರುಳಾವ ಕತೆಯನ್ನು ವಿವರಿಸಿದಳು. ಅಪ್ಪನವರ ಪಾದದರ್ಶನ ಮಾಡಿ ಕ್ಷಮೆ ಬೇಡಲು ಜೇವರಿಗಿಗೆ ಹೋಗಲಿದ್ದರು. ಆದರೆ ಅಪ ರಾತ್ರಿಯಲ್ಲಿಯೇ ಯಾರಿಗೂ ಹೇಳದೆ ಹೊರಟು ಹೋಗಿದ್ದಾರೆ ಹತ್ತೆಂಟು ದಿನವಾದರೂ ಮರಳಿಬಂದಿಲ್ಲ. ಅಲ್ಲಿಗೋ ಮತ್ತೆಲ್ಲಿಗಾದರೂ ಹೋದರೋ ತಿಳಿಯದೆ ವ್ಯಥೆಯಾಗಿತ್ತು. ಅಯ್ಯನವರೆ ತಾವು ಬಂದು ಅವರ ಸಮಾಚಾರ ತಿಳಿಸಿ ಸಂತೋಷಪಡಿಸಿದಿರಿ "

" ವೀರಭದ್ರಪ್ಪನವರು ಹೇಗೆ ಬಂದಾರಮ್ಮಾ ಬೇಗ? ಅವರ ಮಂಗಲೋತ್ಸವಕ್ಕೆ ಬರುವ ಜನರಿಗೆ ನೀರು ಪೂರೈಸಲು ಸ್ವತಃ ಸಹಭಾಗಿಯಾಗಿ ಬಾವಿಯನ್ನು ಕಡಿಸಹತ್ತಿದ್ದಾರೆ. ಶಿವಯೋಗಿ ಕೃಪೆ ಅವರ ಮೇಲೆ ಪೂರ್ಣವಾಗಿದೆ. ಆಳು ಆಡಿದ ಅಪಶಬ್ದದದೋಷ ಇನ್ನೆಲ್ಲಿರುವದು? ಇದು ನೋಡಮ್ಮಾ ಷಣ್ಮುಖಶಿವಯೋಗಿಗಳು ಅನುಗ್ರಹಿಸಿ ಕೊಟ್ಟ ಎರಡು

ಭಸ್ಮದ ಘಟ್ಟಿಗಳು ನನ್ನಲ್ಲಿವೆ ಒಂದನ್ನು ತೆಗೆದುಕೊಳ್ಳವ್ಮಾ ಇದನ್ನು ನೀರಿನಲ್ಲಿ ಬೆರಸಿ ಚೀಲಗಳ ಮೇಲೆ ಅವರ ಪಾದತೀರ್ಥದೆಂದು ಭಾವಿಸಿ ಪ್ರೋಕ್ಷಿಸಮ್ಮ "

ಗಂಗಾಂಬೆ ಎದ್ದು 'ಕೊಡಿ ಸ್ವಾಮಿ' ಎಂದು ಆದರದಿಂದ ಭಸ್ಮವನ್ನು ತಕ್ಕೊಂಡು ಅದೇ ಜಂಗಮರ ಧೂಳ ಪಾದೋದಕದಲ್ಲಿ ಭಸ್ಮದಹುಡಿ ಬೆರಸಿ ಕೊಬ್ಬರಿ ಚೀಲಗಳ ಮೇಲೆಲ್ಲ ಪ್ರೋಕ್ಷಿಸಿದಳು. ಅವುಗಳೆಲ್ಲ ಕಾಡು ಕುರುಳುಗಳೆಲ್ಲ ಕೊಬ್ಬರಿಗಳಾದವು.

" ಅವರ ಮಹಿಮೆ ಹೇಳತೀರದವ್ಮಾ. ನೀನು ಪುಣ್ಯವಂತೆ ನಾನು ಅಲ್ಲಿಗೆ ಹೋಗಿದ್ದಾಗ ಶಿವಯೋಗಿಗಳ ಮತ್ತೊಂದು ಲೀಲಾ ಘಟನೆ ಸಂಭವಿಸಿತು."

" ಅದೇನು ಅಪ್ಪನವರೇ ಹೇಳಿರಿ. ಕೇಳಿ ಧನ್ಯರಾಗೋಣ "

" ಮಠದ ಮುಂದಿನ ಬೀದಿಯಲ್ಲಿ ಕಲ್ಲು ಕುಟಿಗನೊಬ್ಬ ಕಲ್ಲು ಒಡೆಯುವಾಗ ಸಿಡಿದ ಕಲ್ಲು ಚೂರೊಂದು ಅವನ ಕಣ್ಣಿಗೆ ಬಡಿಯಲು ಕಣ್ಣುಗುಡ್ಡಿ ಹೊರಬಿದ್ದು ನೇತಾಡ ಹತ್ತಿತು. ಕಂಡ ಜನರೆಲ್ಲ ಗಾಬರಿಯಾಗಿ ಇನ್ನೇನು ಗತಿ ಎಂದು ನಿಂತರು. ಇದನ್ನು ಶಿವಯೋಗಿಗಳು ತಿಳಿದು ತತ್‌ಕ್ಷಣ ಅಲ್ಲಿಗೆ ಬಂದರು, ಅಖಂಡೇಶ್ವರ ಕಾಪಾಡುತ್ತಾನೆ ಚಿಂತಿಸದಿರಿ ಸರಿಯಿರಿ' ಎಂದು ಅವನ ಹತ್ತಿರ ಬಂದು ಕರುಣಾದೃಷ್ಟಿಯಿಂದ ನಿಟ್ಟಿಸಿ ವಿಶ್ವಾತ್ಮಲಿಂಗವನ್ನು ಪೂಜಿಸುವ ತಮ್ಮ ಘನಹಸ್ತದಲ್ಲಿ ಆ ನೇತಾಡುವ ಗುಡ್ಡಿಯನ್ನು ಧರಿಸಿ ಅದನ್ನು ಅದರ ಗೂಡಿನಲ್ಲಿ ಸರಿಯಾಗಿ ಕೂಡ್ರಿಸಿದರು. ಕಣ್ಣು ಮೊದಲಿನಂತೆಯೇ ಆಯಿತು. ಅದರೊಡನೆ ಅವನ ನೋವು ಅಳುವು ಕೂಡ ಮಾಯವಾಗಿದ್ದವು. ಎದ್ದು ನಿಂತನು ಸುತ್ತಲೂ ನೋಡಿದನು. ಶ್ರೀಗಳ ಪಾದದ ಮೇಲೆ ಹೊರಳಾಡಿದನು. ನೆರೆದವರೆಲ್ಲ ಹರಹರ ಮಹಾದೇವ ಜಯಘೋಷ ಮಾಡಿದರು. ಸ್ವಾಮಿಗಳ ಪಾದಕ್ಕೆ ವಂದಿಸಲು ನೂಕು ನುಗ್ಗಲಾಯಿತು.

" ಎಂಥ ಮಹಾತ್ಮರು ಅಪ್ಪನವರೇ, ಸೃಷ್ಟಿಕರ್ತ ಶಿವನಿಗೂ ಇವರಿಗೂ ಏನು ಅಂತರ?" ಶಿವನೇ ಅವರು ತಾಯೀ ?

" ನಾನು ಜೇವರಗಿಗೇ ಹೋಗಬೇಕು. ಶಿವಯೋಗಿಗಳ ಪಾದ ದರ್ಶನ ಮಾಡಲೇಬೇಕು ಅನಿಸುತ್ತದೆ ಅಯ್ಯನವರೆ."

'' ಹೋ ಹಾಗಾದರೆ, ಮುಂದಿನ ಸೋಮವಾರ ನಡೆಯುವ ಮಂಗಲೋತ್ಸವಕ್ಕೆ ತಾವು ಹೋಗಬಹುದು. ಸತಿ ಪತಿಗಳಿಬ್ಬರೂ ಒಂದಾಗಿ ಶಿವಕಾರ್ಯದಲ್ಲಿ ಸೇವೆ ಸಲ್ಲಿಸಬಹುದಮ್ಮ ಮಹಾತ್ಮರ ಆಶೀರ್ವಾದ ಪಡೆಯಿರಿ. ನಾನು ಉತ್ಸವಕ್ಕೆ ಅಲ್ಲಿ ಹೋಗುವವನಿದ್ದೇನೆ. ಅಷ್ಟರೊಳಗೆ ಈ ಭಾಗದಲ್ಲಿ ಭಿಕ್ಷೆ ಮಾಡಿ ಕೊಳ್ಳುವೆನು"

" ಹಾಗಾದರೆ ನಮ್ಮನ್ನು ಕರೆದುಕೊಂಡು ಹೋಗುವಿರಾ ? ನನ್ನ ಜೊತೆಗೆ ನಾಲ್ಕು ಜನರೊಡನೆ ಹೊರಡುವೆನು"

"ಯಾರು ಬೇಡವೆನ್ನುವರು ಅಮ್ಮಾ? ಒಂದು ದಿನ ಮೊದಲಿಗೆ ನಾನು ಇಲ್ಲಿಗೆ ಬರುವೆನು ಎಲ್ಲರೂ ಕೂಡಿ ಹೋಗೋಣ "

ಗಂಗಮ್ಮನಿಗೆ ಸಂತೋಷವಾಯಿತು. ಅಯ್ಯನವರಿಗೆ ತೃಪ್ತಿಯಾಗುವಂತೆ ಭಿಕ್ಷೆ ನೀಡಿ ನಮಿಸಿ ಕಳಿಸಿದಳು. ಗ್ರಾಮಾಂತರದ ವ್ಯಾಪಾರಿಗಳು ಕೊಬ್ಬರಿಗಾಗಿ ಕಾದು ಕುಳಿತ್ತಿದ್ದರು. ಕರಣಿಕರು ಇಂದು ನಾಳೆ ಎನ್ನುತ್ತ ನಡೆದಿದ್ದರು. ಅಂದಿನ ಪವಾಡದಿಂದ ಸಮಸ್ಯ ಬಗೆಹರಿದು ಹೋಗಿತ್ತು. ಎಲ್ಲ ಕೊಬ್ಬರಿ ಮಾರಾಟವಾದವು. ವಿಪುಲ ಹಣ ಬಂದಿತು. ಅದನ್ನು ಕಟ್ಟಿಕೊಂಡೇ ಗಂಗಮ್ಮ ಭಟರ ಕಾವಲಿನಲ್ಲಿ ಜೇವರಗಿಗೆ ಸಿದ್ಧಳಾದಳು.

ಗಂಗಮ್ಮ ಜೇವರಗಿಗೆ ಬಂದಾಗ ಮಧಾಹ್ನವಾಗಿತ್ತು. ಏನು ಮಂದಿ! ಎಷ್ಟು ಮಂದಿ! ನೋಡಿ ದಂಗಾದಳು ಆಕೆ. ತಪೋಧನ ಷಣ್ಮುಖ ಶಿವಯೋಗಿಗಳ ಇತ್ತೀಚಿನ ಲೀಲೆಗಳ ಸುದ್ದಿ ಹರಡಿದಂತೆಲ್ಲ ಮಂಗಲೋ

ತ್ಸವದ ಜಾತ್ರೆಯಾಗಿತ್ತು. ಮಠದ ಆವರಣದಲ್ಲಿ ಕಾಲಿಡಲು ಇಂಬಿಲ್ಲ. ಹೊರಗಣ ಮಂದಿ ಗಣಾರಾಧನೆ ನಡೆದಿತ್ತು ಜನರ ಪಂಕ್ತಿಗಳು ಒಂದರ ಮೇಲೊಂದು ನಡೆದು ಪಡೆದ ಜನರು ಹೊರಗೆ ಬರುತ್ತಿದ್ದರು, ಹೆಬ್ಬಾಗಿ ಲಲ್ಲಿ ನೂಕುನುಗ್ಗಲು, ಗಂಗಮ್ಮ ಕಷ್ಟಪಟ್ಟು ಪರಿಚಾರಕರೊಡನೆ ಒಳಗೆ ಹೋದಳು. ಆದರೆ ತನ್ನ ಪತಿ ಎಲ್ಲಿ? ಶಿವಯೋಗಿಗಳ ದರ್ಶನ ಹೇಗೆ ಸಾಧ್ಯ? ಒಂದು ಕಡೆ ಗೋಡೆ ಹತ್ತಿರ ಸರಿದು ನಿಂತರು

"ಉಂಡವರು ಇಲ್ಲಿ ತಾಂಬೂಲ ತಕ್ಕೊಂಡು ಹೋಗಿರಿ ಎಂದೆ ವೀರಭದ್ರಪ್ಪ ಕೂಗಿ ಹೇಳುವನು ಗಂಗಮ್ಮನ ಕಿವಿಗೆ ಬಿತ್ತು. ಪರಿಚಾರ ಕರೂ ದನಿಯನ್ನು ಗುರುತಿಸಿದರು ತಮ್ಮ ಒಡತಿಯನ್ನು ಆ ಸ್ಥಲಕ್ಕೆ ಕರಕೊಂಡು ಹೋದರು. ಅವರನ್ನು ಕಂಡು ವೀರಭದ್ರಪ್ಪನಿಗೆ ಒಂದು ಬಗೆಯ ಸಮಾಧಾನವಾಯಿತು. ಹೆಚ್ಚಿಗೆ ಮಾತಾಡಲು ಅವಕಾಶವಿರಲಿಲ್ಲ ಗಂಗಮ್ಮನೇ “ ಇದು ಕೊಬ್ಬರಿಯಿಂದ ಬಂದ ಹಣ ಅರ್ಪಣೆಯಾಗಲಿ ” ಎನ್ನುತ್ತ ಹಣದ ಚೀಲವನ್ನು ಮುಂದಿಟ್ಟಳು. ಬಹಳ ಚೆನ್ನಾಯಿತಲ್ಲ. ಎಂದು ವೀರಭದ್ರಪ್ಪ ತಾಂಬೂಲ ಕೊಡುವಾಗ "ಜಂಗಮರೇ" ಎಂದು ಕೇಳಿ ಜಂಗಮರಾದವರಿಗೆ ದಕ್ಷಿಣೆ ಕೊಡುತ್ತ ಅದನ್ನೆಲ್ಲ ಕರಗಿಸಿ ಬಿಟ್ಟನು. ಇದೆಲ್ಲವನ್ನು ನೋಡಿದ ಸಹಕಾರ್ಯಕರ್ತರು ಈ ಪರಿವಾರವನ್ನೂ ಕರೆ ದೊಯ್ದು ಸ್ಥಳಮಾಡಿ ಪ್ರಸಾದಕ್ಕೆ ಕೂಡಿಸಿದರು. ಬಳಿಕ ಸ್ವಾಮಿಗಳ ದರ್ಶನಕ್ಕೂ ಅನುಮಾಡಿ ಕರೆದುಕೊಂಡು ಹೋದರು. ಸುಲೇಪೇಟೆ ತಾಯಿ ಎಂದು ಸನ್ನಿಧಿಗೆ ಅರಿಕೆ ಮಾಡಿದರು. ಸ್ವಾಮಿಗಳು "ಅವ್ವಾ ಬಂದೆಯಾ ಹೇಗೆ ಬಂದೆಯಮ್ಮಾ ಎಂದು ಕೇಳಿದರು. ಗಂಗಮ್ಮ ನಮಸ್ಕಾರಮಾಡುತ್ತ ತಾವೇ ಕರೆದು ಕೊಂಡಂತೆ ಬಂದೆ ಅಪ್ಪಾ" ಎಂದು ಮುಖವೆತ್ತಿ ನುಡಿದಳು. ಹಿಂದೆ ಮಂದಿ ಹಾಗೇ ಬರುತ್ತಿತ್ತು ಹೆಚ್ಚು ಹೊತ್ತು ಅವಕಾಶವಿರಲಿಲ್ಲ.

ಅಂದಿನ ಹಗಲು ಪೂರ್ಣವಾಗಿ ಪುರಾಣ ಮಂಟಪದಲ್ಲಿ ಭಜನೆ ಕೀರ್ತನೆಗಳು ಧಾರ್ಮಿಕ ಭಾಷಣಗಳು, ವಾದ್ಯಮೇಳ ಸಂಗೀತಕಲಾ ಪ್ರದ

ರ್ಶನಗಳು ನಡೆದಿದ್ದವು. ಸಂಜೆಗೆ ಶಿವಯೋಗಿಗಳ ನೇತೃತ್ವದಲ್ಲಿ ಮುಕ್ತಾಯ ಸಮಾರಂಭ ನಡೆದು ಸಂಭಾವನೆ ಆಶೀರ್ವಚನ ಕರುಣಿಸಲ್ಪಟ್ಟವು. ಪುರಾಣಿಕರು ಆದಿಪದ್ಯವನ್ನು ಪಠಿಸಿ ವಿದ್ಯುಕ್ತವಾಗಿ ಸಮಾರಂಭ ಮುಕ್ತಾಯಗೊಳಿಸಿದರು. ಪರಸ್ಥಳದವರು ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು. ಜೇವರಗಿಯ ಹಿರಿಯ ಭಕ್ತರು ಶೇಷಕಾರ್ಯಗಳನ್ನು ನೋಡಿಕೊಂಡರು. ಮರು ದಿವಸ ಕಾರ್ಯಕರ್ತರೆಲ್ಲರು ಶಿವಯೋಗಿ ಸನ್ನಿಧಿಯಲ್ಲಿ ಕೂಡಿ ಅಭಿವಂದಿಸಿ ಅಪ್ಪಣೆ ಪಡೆಯಲು ಬಂದಿದ್ದರು. ಶ್ರೀಗಳು ಅವರ ಕ್ರಿಯಾಶಕ್ತಿಯನ್ನು ಶ್ಲಾಘಿಸಿ ಆಶೀರ್ವಾದ ಫಲಗಳನ್ನು ಕರುಣಿಸಿ ಬೀಳ್ಕೊಟ್ಟರು. ಅವರು ಪರಮಾನಂದದಿಂದ ಮಾತನಾಡುತ್ತ ತಮ್ಮ ಗೃಹಗಳಿಗೆ ತೆರಳಿದರು. ವೀರಭದ್ರಪ್ಪ ಗಂಗಮ್ಮನವರು ಅಪ್ಪಣೆ ಕೇಳಿದಾಗ ಶ್ರೀಗಳು " ಭಕ್ತಶ್ರೇಷ್ಠನೆ ನಿಮ್ಮ, ಭಕ್ತಿ, ತ್ಯಾಗ, ಸೇವೆಗಳು ಅಖಂಡೇಶ್ವರ ಲಿಂಗಕ್ಕೆ ತುಂಬ ಸಮ್ಮತವಾದವು. ನಿಮ್ಮಂತಹವರಿಂದಲೇ ಧರ್ಮಾಚಾರಕ್ಕೆ ಉಜ್ವಲತೆ! ಶಿವಸಾಮರಸ್ಯ ಜ್ಞಾನದ ಪ್ರಚಾರಕ್ಕಾಗಿಯೇ ಮುಡುಪಾಗಿ ಜನ್ಮವೆತ್ತಿದೆ ನಿಮ್ಮಂತಹವರ ಕಾರ್ಯನಿರ್ವಹಣೆಯೂ ನಿಮ್ಮಂತಹ ಸೇವಾದಾರಿ ಪರಮ ಭಕ್ತರನ್ನೇ ಅವಲಂಬಿಸಿಯಶಸ್ವಿಯಾಗಬೇಕು. ವೀರಭದ್ರಪ್ಪ ತಾಯಿ ಗಂಗಮ್ಮ ನಿಮ್ಮ ಜೀವನ ಕೀರ್ತಿಯುತವಾದದ್ದು "

ಗಂಗಮ್ಮ ಕೈಮುಗಿದು ಅರಿಕೆ ಮಾಡಿದಳು "ಅಪ್ಪಾ ಅದೆಲ್ಲದಕ್ಕೂ ತಮ್ಮ ಕೃಪೆಯಿಂದ ಪ್ರಾಪ್ತವಾದ ಬುದ್ಧಿ, ಭಾವಗಳೇ ಕಾರಣವಾಗಿರಬೇಕು ಆದರೂ ನಾವು ಅಜ್ಞಾನಿಗಳು ನಮ್ಮಿಂದಾದ ಅಪರಾಧಗಳನ್ನು ಕ್ಷಮಿಸಿ ಆಶೀರ್ವದಿಸಬೇಕು ಅದು ನಮ್ಮ ಮನದಲ್ಲಿ ಅಳುಕಾಗಿದೆ"

"ನಿಮ್ಮಿಂದ ಯಾವ ಅಪರಾಧವೂ ಆಗಿಲ್ಲ ಅಂಥದೇನೂ ಸಂಭವಿಸಿಲ್ಲ "

" ತಮ್ಮ ಚಿತ್ತಕ್ಕೆ ತಿಳಿಯದಿರುವುದು ಯಾವುದು? ಆದರೂ ಅರಿಕೆ

ಮಾಡುವೆ ಅಪ್ಪಾ........ಗಂಗಮ್ಮ ಆಳು ನೀಡಿದ ಒರಟು ಉತ್ತರ ಪರಿಯಾಮ ಸ್ವಲ್ಪದರಲ್ಲಿ ಹೇಳಿ " ಈ ಪಾದ ಸನ್ನಿಧಿಯಿಂದ ಬಂದ ಪರೋಕ್ಷಿ ಆಶೀರ್ವಾದದಿಂದಲೇ ಅದಕ್ಕೆ ಪರಿಹಾರ ದೊರೆಯಿತು.

"ಆಳಿನ ತಪ್ಪು ಆಳ್ವನ ಮನಸ್ಸಿಗೆ ಪೆಟ್ಟು " ನಗುತ್ತ ತಿಂದರು ಸ್ವಾಮಿಗಳು.

"ಅಪ್ಪಾ ತಮ್ಮ ಸ್ಮರಣೆ ಅನಂತ ನಮ್ಮ ಮನದ ದುಗುಡು ಕಳೆಯುವ ಕೃಪೆಯಾದರೆ ಸಾಕು'' ನಮಸ್ಕರಿಸುತ್ತ ನುಡಿದನು ವೀರಭದ್ರಪ್ಪ.

" ವೀರಭದ್ರಪ್ಪ ಇದು ಅಖಂಡೇಶ್ವರ ಲೀಲೆ ಆ ಗುರುವಿನ ಕರುಣೆ ನಿಮ್ಮ ಮೇಲೆ ಪೂರ್ಣಯಾಗಿದೆ ಅದನ್ನು ಕ್ಷಮಿಸಿಯೂ ಇದ್ದಾನೆ ತಳಮಳ ಬೇಡ ನಿಶ್ಚಿಂತರಾಗಿರಿ. ಈ ಮಠದ ಈ ಸಂಸ್ಥೆ ನಿಮ್ಮದು. ಇದರ ಆಗು ಹೋಗುಗಳ ಶ್ರೇಯ ನಿಮಗೆ ಅಖಂಡೇಶ್ವರ ಕರುಣೆಯಿಂದ ನಿಮ್ಮ ಕೀರ್ತಿ ಬೆಳಗುವದು. ನಿಮ್ಮ ಭವಿಷ್ಯ ಉಜ್ವಲವಾಗಿದೆ" ಪರಮ ಶಿವಯೋಗಿಗಳು, ಫಲತಾಂಬಿದ ತಟ್ಟೆಯನ್ನೇ ಅವರ ಕೈಗೆತ್ತಿಕೊಂಡು ಮಂತ್ರಪ್ರಭಾವ ಹಸ್ತ ಸ್ಪರ್ಶ ಇವುಗಳಿಂದ ಘನತೆಗೊಳಿಸಿ ದಂಪತಿಗಳ ಉಡಿಗೆ ಸಂಯುಕ್ತವಾಗಿ ನೀಡಿ ಆಶೀರ್ವದಿಸಿದರು.

ಜಂಗಮಾರ್ಚನೆ

ಎನ್ನ ಕರಕಮಲಮಧ್ಯದಲ್ಲಿ ಪರಮ ನಿರಂಜನದ ಕುರುಹ ತೋರಿದ
ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆಯ ತೋರಿದ
ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ
ಆ ಬೆಳಗಿನ ನಿಲುವಿನೊಳಗೆ ಎನ್ನ ತೋರಿದ
ಎನ್ನೊಳಗೆ ತನ್ನ ತೋರಿದ
ತನ್ನೊಳಗೆ ಎನ್ನನಿಂಬಿಟ್ಟುಕೊಂಡ ಮಹಾಗುರುವಿಂಗೆ
ನಮೋ ನಮಃ ಎನುತಿರ್ದನಯ್ಯಾ ಅಖಂಡೇಶ್ವರಾ

ಶ್ರೀ ಷಣ್ಮುಖ ಶಿವಯೋಗಿಗಳು ಈ ವಚನವನ್ನು ತಮ್ಮ ತುಟಿಯುಲ್ಲಿಯೇ ಪಠಿಸುತ್ತ ಹೂದೋಟದಲ್ಲಿ ಒಂದು ಆಸನದಲ್ಲಿ ಕುಳಿತರು. ಅವರಲ್ಲಿ ಗುರು-ಶಿಷ್ಯರ ನಿಜೈಕ್ಯನ ಭಾವ ನಿತ್ಯವು ನಿರಂತರವೂ ಇದ್ದದ್ದೇ ! ಇದೀಗ ಅವರು ತಮ್ಮ ಅರ್ಚನಾದಿಗಳನ್ನು ಮುಗಿಸಿ ಹೊರಗೆ ಬಂದಿದ್ದರು. ನಿರ್ಮಲ ಶಿವಾನಂದದ ರಸಗಂಗೆಯಲ್ಲಿ ಮಿಂದುಬಂದಂತಿತ್ತು ಅವರ ಭಾವದ ಬಗೆ! ಆದ್ದರಿಂದ ಅವರ ಒಳಬಗೆಯಲ್ಲಿ ಮುಳುಗಿ ಇದ್ದ ಗುರುವಿನ ಅರಿವಿನಲ್ಲಿ ಬೆರೆದು ಪಠಿಸುತ್ತಿದ್ದರು. ಎರಡು ಗಳಿಗೆಯಷ್ಟು ಹೊತ್ತು ಏರಿತ್ತು ಗಿಡ ಬಳ್ಳಿಗಳ ಎಲೆಗಳ ಮೇಲಿನ ಇಬ್ಬನಿ ಇನ್ನೂ ಆರಿದ್ದಿಲ್ಲ ಬೆಳಗಿನ ಸುಳಿಗಾಳಿ ಅಲೆಅಲೆಯಾಗಿ ಬರುತ್ತಲಿತ್ತು. ಅರಳಿಸೌರಭ ಸೂಸುತ್ತಿರುವ ಹಲವು ಬಗೆಯ ಹೂಗಳು ಯಾವಾಗಲೂ ಅರಳಿರುವ ಹೃದಯದ ವನ ಪಾದಪೂಜೆಗೆ ತವಕಿಸುತ್ತಿರುವಂತೆ ತೊನೆಯುತ್ತಿದ್ದವು. ಈ ಸುಂದರ ಶಿವಸಮಯದಲ್ಲಿ ಹಿರಿಯವಟು ಮರಿದೇವರು ವಚನಗಳ ಕಟ್ಟನ್ನು ಗುರುಗಳ ಮುಂದೆ ಬಿಚ್ಚಿಟ್ಟು ಬದಿಗೆ ಕುಳಿತನು. ಉಳಿದ ವಟುಗಳೂ ಬಂದು ವಂದಿಸಿ ಓರಣವಾಗಿ ಕುಳಿತರು. ಸ್ವಲ್ಪ ಅಂತರದಲ್ಲಿ ಕೆಲವು ಶ್ರೋತೃಗಳೂ ಬಂದು ಸಾಲಾಗಿ ಕುಳಿತಿದ್ದರು. ಶಿವಯೋಗಿಗಳು, ತಮ್ಮ ಪ್ರವಚನ ಪಾಠ ಆರಂಭಿಸಿದರು.

" ನೀವು ವಿರಕ್ತಾಶ್ರಯ ಹೊಂದಿದವರು. ವೈರಾಗ್ಯಶೀಲರು. ವೈರಾಗ್ಯವು ಗುರುತುಗಳ ಮಟ್ಟಿಗೆ ಇರಬಾರದು. ವಿರಕ್ತರೆಂಬ ಅಭಿಮಾನ ಹೊಂದಿದರೆ ಸಾಲದು ಅಂತರಂಗದಲ್ಲಿ ಆ ಭಾವ ಕರಿಗೊಂಡಿರಬೇಕು. ಅಶನ ವ್ಯಸನದ ವಿಷಯದ ವಿಕಾರ ದೂರಿರಲಿ ಹೊನ್ನು, ಹೆಣ್ಣು ಮಣ್ಣುಗಳನ್ನು ಒಮ್ಮೆ ಹೇಸಿ ಬಿಟ್ಟಿರುವಿರಿ. ಮರಳಿ ಮೋಹಿಸಬೇಡಿರಿ, ಅಷ್ಟಮದ ಅರಿಷಡ್ವರ್ಗಗಳನ್ನು ನಷ್ಟಮಾಡಿರಿ. ಹಮ್ಮು ಬಿಮ್ಮು ಗರ್ವಾಹಂಕಾರಗಳನ್ನು ಕಡೆಮೆಟ್ಟಬೇಕು. ತನು. ಮನ, ಪ್ರಾಣ, ಇಂದ್ರಿಯಗಳಲ್ಲಿ ಮುಸುಕಿದ ಅಜ್ಞಾನ ಕತ್ತಲೆಯು ಕಳೆದು ಬಿಡಿ. ಸರ್ವಾವಸ್ಥೆಯಲ್ಲಿ ಲಿಂಗವನಪ್ಪಿರಬೇಕು. ಚಿಂತೆ ಭ್ರಾಂತುಗಳಿಲ್ಲದಿರಬೇಕು. ಸಂಕಲ್ಪ ವಿಕಲ್ಪಗಳನ್ನು

ಅಳಿದು ಮನವು ಮಹಾಲಿಂಗದಲ್ಲಿ ನಿಕ್ಷೇಪವಾಗಿರಬೇಕು. ಭಾವ ನಿರ್ಭಾವವಾಗಿ ಮಹಾಬಯಲು ನಿಜವಾಸಿಯಾದವನೇ ಪರಮ ಗುರು ಅಖಂಡೇಶ್ವರನಂತೆ ಪರಮ ವಿರಕ್ತನು.

"ವಿರಕ್ತನಾದವನು ಲಿಂಗದ ನಡೆ ತುಂಬಿ ನಡೆಯಬೇಕು. ಲಿಂಗದ ನುಡಿ ತುಂಬಿ ನುಡಿಯಬೇಕು. ಕಂಗಳಕೊನೆಯಲ್ಲಿ ಲಿಂಗದ ನೋಟ ತುಂಬಿ ನೋಡಬೇಕು. ಲಿಂಗದ ಬೆಳಗೆ ತುಂಬಿ ಭಾವಕೊನೆಯಲ್ಲಿ ಅಖಂಡೇಶ್ವರನಂತೆ ಸುಳಿಯ ಬಲ್ಲವನು ವಿರಕ್ತನು"

ವಟುಗಳೆಲ್ಲ ಮನಸ್ಸುಗೊಟ್ಟು ಆಲಿಸುತ್ತಿದ್ದರು. ಆಗ ಮಹಾದ್ವಾರದಲ್ಲಿಯ ಕರ್ಕಶವಾಗಿ ಕಿರುಚುವ ಧ್ವನಿಯೊಂದು ಅವರ ಗಮನ ಸೆಳೆಯಿತು. ಅಲ್ಲಿ ಅತಿ ವೃದ್ಧ ಜಂಗಮನೊಬ್ಬನು ಒಂದು ಮುದಿ ಎತ್ತನ್ನು ಒಳಗೆ ಜಗ್ಗಿಕೊಂಡು ಬರಲು ಪ್ರಯತ್ನಿಸುತ್ತಿದ್ದನು. ಅದು ಮುಂದೆ ಜಗ್ಗಿದರೂ ಬಾರದು. ಹಿಂದೆ ಹೋಗಿ ಹೊಡೆದರೂ ನಡೆಯದು. ಅಶಕ್ತವಾದ ಎತ್ತು ಪಾವಟಿಗೆ ಹತ್ತಲಾರದೆ ಸುಮ್ಮನೆ ನಿಂತಿತ್ತು, ಆ ಜಂಗಮನು "ಷಣ್ಮುಖಪ್ಪಾ, ಏ ಷಣ್ಮುಖಪ್ಪಾ ಎಂದು ಚೀರುತ್ತಿದ್ದನು. ಶಿವಯೋಗಿಗಳು ತಟ್ಟನೆ ಎದ್ದು ಮಹಾದ್ವಾರಕ್ಕೆ ಧಾವಿಸಿ ಬಂದರು. "ಬನ್ನಿರಿಸ್ವಾಮೀ, ಬನ್ನಿರಿ, ಎನ್ನುತ್ತ ಆ ಜಂಗಮರ ಪಾದಕ್ಕೆ ನಮಿಸಿದರು. ಆ ನಂದೀಶನ ಪಾದಕ್ಕೂ ವಂದಿಸಿದರು. ಹಿಂದೆ ಎದ್ದು ಬಂದ ಆ ಭಕ್ತರಿಗೆ ಇದರಿಂದ ಆಶ್ಚರ್ಯ ಆದರೂ ಶಿವಯೋಗಿಗಳನ್ನು ಶಿವಯೋಗಿಗಳೇ ಬಲ್ಲರು ಎಂದು ಕೈಮುಗಿದು ನಿಂತರು ಮುದಿ ಎತ್ತಪ್ಪಾ ಬಹಳಕಷ್ಟ ಕೊಡುತ್ತದೆ. ಒಳಗೆ ತಕ್ಕೊಳ್ಳಿರಿ" ಎಂದು ಜಂಗಮ ಅಜ್ಜ ನಡುಗುವ ಧ್ವನಿಯಲ್ಲಿ ಹೇಳುತ್ತಿದ್ದನು. ಗುರುಗಳನ್ನು ಹಿಂಬಾಲಿಸಿ ಎದ್ದು ಬಂದಿದ್ದ ವಟುಗಳು ಆ ಎತ್ತನ್ನು ಒಳಗೆ ತಕ್ಕೊಂಡರು. ಷಣ್ಮುಖ ಶಿವಯೋಗಿಗಳು ಒಂದು ಕೈಯಲ್ಲಿ ಎತ್ತಿನ ಹಗ್ಗವನ್ನು ಒಂದು ಕೈಯಲ್ಲಿ ಆ ವೃದ್ಧ ಜಂಗಮನನ್ನು ಹಿಡಿದು ಮೆಲ್ಲಗೆ ನಡೆಸುತ್ತ ಒಳಾಂಗಣಕ್ಕೆ ಕರೆತಂದು ನಿಲ್ಲಿಸಿದರು. ಬಳಿಕ ಅಜ್ಜನನ್ನು ಮೇಲೆ

ಕರೆದೊಯ್ದು ಉಚಿತಾಸನದಲ್ಲಿ ಕುಳ್ಳಿರಿಸಿ " ಸ್ವಾಮೀ ದಣಿದು ಬಂದಿರು ವಿರಿ, ಮೊದಲು ಸ್ನಾನ ಶಿವಾರ್ಚನೆ ಆಗಲಿ, ಎಂದರು. ಆ ಜಂಗಮ ಅಜ್ಜನು ನರಳುತ್ತ ನುಡಿದನು.

"ಷಣ್ಮುಖಪ್ಪಾ ಬಹಳ ದಣಿವು! ನಿನ್ನ ಕೀರ್ತಿ ಕೇಳಿ ದೂರದಿಂದ ಪ್ರಯಾಣಿಸುತ್ತ ಬಂದೆ ಸ್ನಾನ ಮಾಡ್ತೀನಪ್ಪ ಷಣ್ಮುಖಪ್ಪ ಯೋ ೀ ನಿನ್ನ ಹೃದಯ ಜ್ಞಾನದಿಂದ ತುಂಬಿದೆ ನಿನ್ನ ಹೃದಯ ಗಗನದಷ್ಟು ವಿಶಾಲವಾದದು! ನಿನ್ನ ಮನ ಸ್ಫಟಿಕದಂತೆ ನಿರ್ಮಲ ! ನಿನ್ನ ತತ್ವಾ ನುಭವವು ಸಾಗರದಂತೆ ಗಂಭೀರ! ಕರುಣಾನಿಧಿ ನೀನು ನೀನಿಟ್ಟ ಹೆಜ್ಜೆ ನಿನ್ನನುಡಿ ಪರಶಿವನ ಸೊಲ್ಲ; ನೀನು ಭೂಅನುತನು ಎಲ್ಲೆಲ್ಲಿಯು ಜನ ನಿನ್ನನ್ನು ಹೊಗಳುತ್ತಲ್ಲಿದ್ದಾರೆ ನಿನ್ನನ್ನು ಕಾಣಬೇಕೆಂಬ ಆಸೆ ಬಲವಾಯಿತು ನಂಬಿದವರ ಇಚ್ಛೆಯನ್ನು ಪೂರ್ತಿಗೊಳಿಸುವವನೆಂದು ನಿನ್ನ ಹೆಸರು ಪ್ರಸಿದ್ಧವಾಗಿದೆ. ನನ್ನ ಇಚ್ಛೆಯೂ ಇಲ್ಲಿ ನೆರವೇರುವದೆಂದು ಬಂದೆನಪ್ಪಾ ಶಿವಯೋಗಿ"

" ತಮ್ಮ ಇಚ್ಛೆಯನ್ನು ಅಖಂಡೇಶ್ವರನು ಪೂರೈಸುವನು "

' ಮೊದಲು ನೀನು ತಿಳಿಸಬೇಕು ಸಾಧ್ಯವಾಗುತ್ತಿದ್ದರೆ ಸ್ನಾನಮಾಡುವೆನು. "

" ಹೇಳಿರಿ ಪೂಜ್ಯರೆ "

" ಚೊಚ್ಚಲು ಈಗ ಆಕಳಗಿಣ್ಣ, ಹಳೆಜೋಳದ ಉದುರು ಕಡಬು ಉಣ್ಣುವ ಆಶೆಯಾಗಿದೆ. ತೃಪ್ತಿಪಡಿಸಬೇಕಪ್ಪಾ"

ಅತ್ತೆಯ ಮನೆಯಿಂದ ಬಂದ ಮಗಳು ಹೆತ್ತಮ್ಮನ ಮುಂದೆ ತನು ಬಚ್ಚಿಟ್ಟ ಬಯಕೆಯನ್ನು ಬಿಚ್ಚು ಮಾತಿನಿಂದ ತಿಳಿಸುವಂತೆ ಜಂಗಮಅಜ್ಜಗೆ ತನ್ನ ಇಚ್ಛೆಯನ್ನು ಸ್ಪಷ್ಟವಾಗಿ ಹೇಳಿಬಿಟ್ಟನು ಷಣ್ಮುಖಶಿವಯೋಗಿ ಕ್ಷಣ ಹೊತ್ತು ಕಣ್ಮುಚ್ಚಿ ಆತ್ಮಜ್ಯೋತಿಗೆ ನಮನಗೈದು ಆರ್ಯಸೆ ಜಂಗಮ

ತೃಪ್ತಿಮಾಡುವ ಲಿಂಗಪೂಜೆ ವ್ಯರ್ಥವಲ್ಲವೇ? ನಿನ್ನ ಸೇವೆಯೇ ನನ್ನ ಲಿಂಗಾರ್ಚನೆ ಜಗದೊಡೆಯ ಅಖಂಡೇಶ್ವರನು ನಿನ್ನ ಬಯಕೆಯನ್ನು ಈಡೇರಿಸುವವನು ಇದು ನಿಶ್ಚಯ. ಎನಲು ವೃದ್ಧಜಂಗಮನು ಸ್ನಾನಕ್ಕೆ ಎದ್ದನು. ಎರಡು ಹೆಜ್ಜೆ ಇಟ್ಟು ಮತ್ತೆ ನಿಂತು ಷಣ್ಮುಖಾರ್ಯ ದುಡಿದು ದುಡಿದು ಮುಪ್ಪು ಬಂದ ನನ್ನ ಎತ್ತು ಬಸವ ಅದರ ಕಡೆಗೆ ಲಕ್ಷವಿರಲಿ ಅದು ನನ್ನ ಪ್ರಾಣ ನನ್ನ ಸಿಟ್ಟು ನನಗೆ ಕೊರತೆಯಾಗಲಿ ಅದಕ್ಕೆ ಸುಖವಾಗುವಂತೆ ನೋಡು ಅದುಮರುಗಿದರೆ ಕಲ್ಯಾಣವಾಗದು ಅದು ಸಮಾಧಾನ ಪಟ್ಟರೆ ನಿನಗೆ ಪರಮ ಸೌಖ್ಯ ! ಎತ್ತು ಜೋಕೆ ಎಂದನು.

ಮನದಲ್ಲಿ ಸಂತಸ ತಳೆದ ಶಿವಯೋಗಿ ಆ ವೃದ್ಧನನ್ನು ಬಚ್ಚಲಕ್ಕೆ ಕರೆದೊಯ್ದು ಸ್ವತಃ ನೀರೆರೆದು ಕೈಯಾಡಿಸಿ ಸ್ನಾನ ಮಾಡಿಸಿದರು. ಪೂಜಾ ಗೃಹಕ್ಕೆ ತಂದು ಪೂಜೆಗೆ ಅಣಿಗೊಳಿಸಿಕೊಟ್ಟರು. ಬಳಿಕ ಆ ಜಂಗಮ ದೇವನ ಲಿಂಗಾರ್ಚನೆ ಪೂರೈಸುವವರೆಗೆ ಅವರ ಎದುರಿನಲ್ಲಿ ಕುಳಿತರು ಅದನ್ನು ವೀಕ್ಷಿಸುತ್ತಿದ್ದರು. ನೆಟ್ಟ ದೃಷ್ಟಿಯಿಂದ ನೋಡು ನೋಡುತ್ತಿದ್ದಂತೆ ಅಂತರ್ಮುಖರಾದರು. ಆ ಜಂಗಮ ಮೂರ್ತಿ ಅವರ ಭಾವದಲ್ಲಿ ಮೂಡಿ ಬಂದರು. ಆನಂದಮಯ ಜಂಗಮಪಾದ ಪೂಜೆ ಭಾವದಲ್ಲಿ ನಡೆದಿತ್ತು ಜಂಗಮ ದೇವನನ್ನು ಮುಕ್ತಿ ಸಿಂಹಾಸನದ ಮೇಲೆ ಕೂಡ್ರಿಸಿದ್ದಾರೆ. ಪಶ್ಚಾತ್ತಾಪದೋದಕದಿಂದ ಪಾದವನ್ನು ತೊಳೆದಿದ್ದಾರೆ. ಪರಶಿವ ಸ್ವರೂಪದ ಜಂಗಮನ ಕ್ರಿಯಾ-ಜ್ಞಾನಗಳೆಂಬ ಪಾದದ್ವಂದವನ್ನು ತಮ್ಮ ಸುಚಿತ್ತ ಹಸ್ತದಲ್ಲಿ ಧರಿಸಿದ್ದಾರೆ ಸದ್ಭಾವವೆಂಬ ಬಲದ ಹಸ್ತದಿಂದ ಚಿತ್ ಪ್ರಕಾಶವೆಂಬ ಭಸ್ಮವನ್ನು ಧರಿಸಿದ್ದಾರೆ ಪಂಚಕರಣಗಳ ಪುಷ್ಪಮಾಲೆಯಿಂದ ಅಲಂಕರಿಸಿ, ಸ್ವಾನುಭವವೆಂಬ ಸುಗಂಧ ಸೂಸುವ ಧೂಪವನ್ನು ಸಮರ್ಪಿಸಿದ್ದಾರೆ. ಬಳಿಕ ನಿಶ್ಶೂನ್ಯ ಕುಂಭದೊಳಿರುತಿನಿರವಯ ಜಲದಿಂದ ನಿರಂಜನ ಜಂಗಮರ ದಿವ್ಯ ಚರಣಕ್ಕೆ ಅಭಿಷೇಕ ಮಾಡಿ ನಿರಾಳ ಬಟ್ಟಲದಲ್ಲಿ ಹಿಡಿದಿಟ್ಟು ಪೂಜೆಮಾಡಿ ಸಮರಸ ಭಾವದಿಂದ ಉಭಯರು ಲಿಂಗಕ್ಕರ್ಪಿಸಿ ಸ್ವೀಕರಿಸಿ

ಭೋಗಿಸುವದರಲ್ಲಿ ಹೊರಗಿನ ಜಂಗಮಜ್ಜನ ಪೂಜೆಯು ಗಂಟೆ ಬಾರಿಸಿತು. ಷಣ್ಮುಖ ಶಿವಯೋಗಿಗಳು ಪ್ರಕೃತಕ್ಕೆ ಬಂದರು. ಕಣ್ಣು ತೆರೆದರು. ಭಾವದಲ್ಲಿಯು ಪೂಜಾವೈಭವವನ್ನು ಮನಕ್ಕೆ ತಂದು ನೆನೆದರು. ಮನದಿಂದ ಕ್ರಿಯಾಚಾರಕ್ಕೆ ಹರಿಸಿದರು. ಮೇಲೆ ಎದ್ದು ಜಂಗಮಜ್ಜನ ಮುಂದೆ ಏಕಾಸನದಲ್ಲಿ ಮಂಡಿಸಿ ಆತನ ಪಾದಪೂಜೆ ಮಾಡಿ ಪಾದತೀರ್ಥದೊಡನೆ ಸಾಮರಸ್ಯ ಸುಖಾನುಭವ ಪಡೆದರು....

ಇದುವರೆಗೆ ಆಕಳಗಿಣ್ಣಿಲ್ಲ, ಕಡುಬಿಲ್ಲ, ಎಡೆಮಾಡುವ ಸಮಯ ಈಗಲೆ ಆದರೂ ಅಖಂಡೇಶ್ವರನು ಒದಗಿಸುವನೆಂದೇ ಷಣ್ಮುಖ ಶಿವಯೋಗಿಯು ನಂಬಿಗೆ ಆದರ ತಪದ ಮಹಿಮೆ. ಆ ನಂಬಿಗೆ ನಿಜವಾಯಿತು. ಅದೇ ಕ್ಷಣದಲ್ಲಿ ಭಕ್ತನೊಬ್ಬನು ಗಿಂಡಿಯಲ್ಲಿ ಗಿಣ್ಣದ ಹಾಲನ್ನು ಮಗನ ಕೈಯಲ್ಲಿಕೊಟ್ಟು ಚೊಚ್ಚಲೀದ ಹಸುವನ್ನು ಕರುವನ್ನು ತಾನು ಸಾಗಿಸಿಕೊಂಡು ಮಠಕ್ಕೆ ಬಂದನು "ಅಪ್ಪನವರೆ, ಆಕಳು ಚೊಚ್ಚಲ ಕರುಕೊಟ್ಟಿದೆ ಇವೆ ಅದರ ಗಿಣ್ಣದ ಹಾಲು ತಮ್ಮ ನಿತ್ಯದ ಲಿಂಗಾಭಿಷೇಕದ ಸಲುವಾಗಿ ಈ ಹಸು, ಕರು. ಮಠದಲ್ಲಿರಲೆಂದು ಬಯಸಿ ತಂದಿದ್ದೇನೆ ಸ್ವೀಕರಿಸಿ ಕೃತಾರ್ಥನನ್ನಾಗಿ ಮಾಡಬೇಕು. ಸಾಷ್ಟಾಂಗವಾಗಿ ಎರಗಿದನು. ಆ ಭಕ್ತ ಅವನ ಹಿಂದೆಯೇ ಗುರುಲಿಂಗ ಜಂಗಮ ಭಕ್ತೆಯೊಬ್ಬಳು ಎಡೆತಕ್ಕೊಂಡು ಬಂದಳು. " ಅಪ್ಪಾ ಮಕ್ಕಳು ಹಳಿಯ ಜೋಳದ ಉದುರು ಕಡಬು ಬೇಡಿದರು ಮಾಡಿದೆ. ಮೊದಲು ಕುದಿಯುವ ಕಡಬುಗಳ ಎಡೆ ಇದು; ಎಂದು ಅಡಿಗೆಯ ಸ್ಥಳದಲ್ಲಿಟ್ಟು ಸ್ವಾಮಿಗಳಿಗೆ ವಂದಿಸಿದಳು.

ಶ್ರೀಗುರು ಅಖಂಡೇಶ್ವರನ ಕರುಣೆ ಎಂದು ಶಿವಯೋಗಿಗಳು ಸಂತೋಷಿಸಿ ಆ ಇಬ್ಬರೂ ಭಕ್ತರನ್ನು ಮನವಾರೆ ಹರಿಸಿ ಆಶೀರ್ವದಿಸಿ ಕಳುಹಿಸಿದರು. ಇಚ್ಚಿತ ಪ್ರಸಾದದಿಂದ ಜಂಗಮಜ್ಜನಿಗೆ ತೃಪ್ತಿಯಾಯಿತು. ಸಾಕಷ್ಟು ಉಂಡು ಡೇಕರಿಸುತ್ತ "ಷಣ್ಮುಖಾರ್ಯ ಧನ್ಯನಪ್ಪಾ ನೀನು, ನನ್ನನ್ನು ಸಂತೋಷ ಪಡಿಸಿದೆ. ನಿನ್ನ ಕೀರ್ತಿ ಹೆಚ್ಚು ಹೆಚ್ಚಾಗಿ ಬೆಳಗಲಿ.

ನಾನು ಸ್ವಲ್ಪ ಇಲ್ಲಿಯೇ ವಿಶ್ರಾಂತಿ ಪಡೆಯುವೆ. ಹೊರಗೆ ಬೇಡ ಅಲ್ಲಿ ಗದ್ದಲ ಎನ್ನುತ್ತ ಪೂಜಾ ಮಂದಿರದಲ್ಲಿಯೇ ಜಂಗಮಜ್ಜ ದರ್ಭೆಯ ಚಾಪೆಯ ಮೇಲೆ ಮಲಗಿ ಬಿಟ್ಟನು. ಮಲಗುವ ಮುಂದೆ ಎತ್ತಿನ ಆರೈಕೆಗೆ ಎಚ್ಚರ ಹೇಳುವದನ್ನು ಮರೆಯಲಿಲ್ಲ,

ಇತ್ತ ಎತ್ತು ಮೇವು ತಿಂದು ನೀರು ಕುಡಿದು ಸಮಾಧಾನವಾಗಿತ್ತು. ತನ್ನ ಗುರುವೇ ತನ್ನ ರಕ್ಷಕನೆಂದೂ ತನ್ನ ಹಾನಿವೃದ್ಧಿಗಳನ್ನು ಗುರುಪಾದಕ್ಕೆ ಅರ್ಪಿಸಿ ಸಂತೋಷಪಡುತ್ತಿದ್ದರು ಷಣ್ಮುಖಶಿವಯೋಗಿಗಳು.

ವಟುಗಳು ಎರಡು ಮೂರು ಸಲ ಪೂಜಾ ಮಂದಿರದಲ್ಲಿ ಹೋಗಿ ನೋಡಿದರು. ಜಂಗಮಾರ್ಯನು ಎದ್ದಿರಲಿಲ್ಲ. ಸಾಯಂಕಾಲವಾಯಿತು. ಶಿವಯೋಗಿಗಳ ಸಂಜೆಯ ಲಿಂಗಾನುಷ್ಠಾನಕ್ಕೆ ಸಜ್ಜುಗೊಳಿಸಬೇಕಲ್ಲ ಎಂದು ಚಿಂತಿಸುತ್ತ ಮತ್ತೊಮ್ಮೆ ಹೋಗಿ ನೋಡಿದರು. ಜಂಗಮ ಮೂರ್ತಿ ಇರಲಿಲ್ಲ. ಮಠದಲ್ಲಿ ನೋಡಿದರೆ ಎಲ್ಲಿಯೂ ಇಲ್ಲ ಮಾಯವಾಗಿದ್ದಾನೆ, ಶಿವಯೋಗಿ ತಿಳಿದು ಇದೆಲ್ಲ ಅಖಂಡೇಶ್ವರ ಲೀಲೆ ಅಪ್ಪಾ " ಎಂದು ವಟುಗಳನ್ನು ಅದೇ ಬಂದಿದ್ದ ಶ್ರೋತೃಗಳನ್ನು ಸಮಾಧಾನ ಪಡಿಸಿದರು.

ಕಸವುಗುಂದಿ ಅಸು ಮಾತ್ರ ಇರುವ ಎತ್ತನ್ನು ಕಾಪಾಡುವಭಾರ ನಿನ್ನದು ಗುರುವೇ ಎಂದೆನ್ನುತ್ತ ಅಖಂಡೇಶ್ವರನನ್ನು ಸ್ಮರಿಸುತ್ತ ನಿತ್ಯವೂ ಅದರ ಮೇಲೆ ಕೈಯಾಡಿಸಿ ನೀರು ಮೇವು ಒದಗಿಸುತ್ತ ಬಂದರು. ಶ್ರೀಗಳ ಸಂಜೀವಿನಿ ಹಸ್ತಸ್ಪರ್ಶವನ್ನು ನಿತ್ಯ ಪಡೆಯುವ ಎತ್ತು ಪುಣ್ಯವಂತವಾಗಿತ್ತು. ಒಂದೆರಡು ತಿಂಗಳಲ್ಲಿ ಅದು ದೃಢವಾಗಿ ಎದ್ದು ಓಡಾಡಹತ್ತಿತ್ತು. ಡುರಕೆಹಾಕಹತ್ತಿತ್ತು. ಕಾಷಾಯಾಂಬರದವರು ಹಿಂಬಾಲಿಸಿದರೆ ಅವರಿಚ್ಛೆಯಂತೆ ಅವರ ಮುಂದೆ ಮುಂದೆ ನಡೆಯುತ್ತಿತ್ತು. ಶಿವಯೋಗಿಗಳು ಸದರಿನಲ್ಲಿ ಕುಳಿತಾಗ ಲಿಂಗದ ಮುಂದಿನ ನಂದಿಯಂತೆ ಪ್ರಾಂಗಣದಲ್ಲಿ ಅವರ ಮುಂದೆ ಕುಳಿತಿರುತ್ತಿತ್ತು, ಒಮ್ಮೆ ಕಂತೆಯ ಬಿಕ್ಷೆಯ ವಟುವಿನ

ಮುಂದೆ ಊರಲ್ಲಿ ಹೋಗಿ ಭಕ್ತರ ಮನೆಗಳನ್ನು ಕಂಡು ಬಂದಿತ್ತು. ಮರು ದಿನ ಅದರ ಕೊಂಬುಗಳಿಗೆ ಜೋಳಿಗೆಕಟ್ಟಿ ಮುಂದೆ ಹೋಗ ಬಿಟ್ಟರೆ ಆ ಎಲ್ಲ ಭಕ್ತರ ಮನೆಗೆ ಹೋಗಿ ಕಂತೆಯು ಬಿಕ್ಷೆಯು ಮಾಡಿಕೊಂಡು ಬಂದಿತು. ಮುಂದೆ ಆ ಕಾಯಕವೇ ಅದಕ್ಕೆ ಒಪ್ಪಿತವಾಯಿತು. ಭಕ್ತರ ಬಾಗಿಲ ಮುಂದೆ ಬಂದು ಡುರುಕೆ ಹಾಕಿ ನಿಲ್ಲುವದು. ಒಳಗಿನಿಂದ ಮನೆಯುವರು ಬಂದು ಜೋಳಿಗೆಯಲ್ಲಿ ಕಜ್ಜಾಯುವಿಟ್ಟು ಕೈಮುಗಿಯಲು ಮುಂದೆ ಹೋಗುವದು. ಕೊನೆಯಲ್ಲಿ ಮಠಕ್ಕೆ ಬಂದು ಮೊಗಶಾಲೆಯ ಮುಂದೆ ನಿಂತು ಡುರುಕೀ ಹಾಕುವದು. ಜೋಳಿಗೆ ಬಿಚ್ಚಿಕೊಂಡು ಒಳಗೆ ಒಯ್ದು ಮೇಲೆ ತನ್ನ ಸ್ಥಳಕ್ಕೆ ಹೋಗುವದು. ಅದರ ನಿಷ್ಠೆಯನ್ನು ಕಂಡು ಜನರಿಗೆ ಅಚ್ಚರಿಯಾಯಿತು. ಶಿವಯೋಗಿಯ ಲೀಲೆ ಎಂದು ಇದು ಪಶುವಲ್ಲ ಪಶುಪತಿಯ ನಿಷ್ಟೆ, ಭಕ್ತ, ಸೇವಕ ನಂದಿ ಎಂದು ಹೊಗಳಿದರು, ಇದು ಸತ್ಪುರುಷರ ಸಹವಾಸದ ಫಲವೆಂದು ಕೆಲ ಕೆಲವರು ಹರ್ಷಿಸಿ ಕೈ ಮುಗಿದರು.

ಶಿವಯೋಗಿ ಮಹಿಮೆಗೆ ಅಸೂವೆ ಪಡುವ ಖಳರು ಕೆಲವರು ಎತ್ತಿನ ಕಾಯಕವ ಕಂಡು ಅಣಕ ಮಾಡಿ ಹಾಸ್ಯ ಮಾಡುತ್ತಿದ್ದರು. ಆದರೆ ಕೆಲವು ನಿರುದ್ಯೋಗಿಗಳು ಆ ಬಸವನ ಕಾಯಕ ಕಂಡು ನಾಚಿದರು. ಅವರ ಪಾಪ ಕಳೆಗುವ ಸಮಯ ಬಂದಿರಬೇಕು, ನಮ್ಮ ಜನ್ಮ ಪಶುಗಿಂತ ಕೀಳಾದುದೆಂದು ಭಾವಿಸಿ ಅದರ ಪರಿಹಾರಕ್ಕಾಗಿ ಷಣ್ಮುಖ ಶಿವಯೋಗಿಗಳ ಸನ್ನಿಧಿಗೆ ಬಂದು ಪೊಡಮೊಟ್ಟು ತಮ್ಮ ಸೋಮಾರಿತನವನ್ನು ಬುದ್ಧಿ ಹೀನತೆಯನ್ನು ನಿವೇದಿಸಿ ತಮಗೆ ದಾರಿ ತೋರಿಸಬೇಕೆಂದು ಪ್ರಾರ್ಥಿಸಿದರು.

"ತಮ್ಮಗಳಿರಾ, ಇಂದಿನ ನಿಮ್ಮ ನಡತೆ ಮುಂದಿನ ನಿಮ್ಮ ಉನ್ನತಿಗೆ ಮುನ್ಸೂಚನೆಯಾಗಿದೆ. ಮನುಷ್ಯನು ತನು, ಮನ ಒಳಲಿಸಿ ದುಡಿಯಬೇಕು. ದುಡಿದು ಜೀವಿಸಬೇಕು. ದಾನ, ಧರ್ಮ ಮಾಡಬೇಕು. ಸ್ವಾವಲಂಬನವಿಲ್ಲದೆ ಪರಪುಷ್ಟಿ ಜೀವಿಯಾಗಿರುವದು ಹೀನಾಯವಾದದ್ದು ಆದಕ್ಕೆ ನಾಚಿಕೆಪಡಬೇಕು. ಅದನ್ನು ಶಿವನು ಮೆಚ್ಚನು, ಕಷ್ಟಪಟ್ಟು ಸತ್ಯ,

ಶುದ್ಧಿ ಕಾಯಕದಿಂದ ಸಂಪಾದಿಸಿದ, ಅನಾಯಾಸ ಮಾರ್ಗದಿಂದ ಗಳಿಸಿದ್ದನ್ನು ವೆಚ್ಚಮಾಡಿ ಕೀರ್ತಿಪಡೆಯಲು ಎಳಸುವವರಿಗೆ ಯಾವ ಪರಮಾರ್ಥವೂ ಇಲ್ಲ. ಅಪ್ಪ ಬಸವಣ್ಣನವರ ಕಾಯಕಕ್ಕೆ ಬಹಳ ಮಹತ್ವಕೊಟ್ಟರು "ಕಾಯಕವೇ ಕೈಲಾಸವೆಂದು" ಸಾರಿದ್ದರು. ಅವರನ್ನು ಬಳಸಿ ಅಧ್ಯಾತ್ಮ ಸಾಧನೆ ಮಾಡುತ್ತಿದ್ದ ಶರಣರೆಲ್ಲ ಒಂದೊಂದು ಕಾಯಕವನ್ನು ಕೈಕೊಂಡಿದ್ದಾರೆ. ಮಡಿವಾಳ ಮಾಚಯ್ಯಾ, ಜೇಡರ ದಾಸಿಮಯ್ಯಾ, ಹಡಪದ ಅಪ್ಪಣ್ಣ, ಒಕ್ಕಲಿಗ ಮುದ್ದಣ್ಣ, ಅಂಬಿಗರ ಚೌಡಯ್ಯ, ಶಿವಸಿಂಪಿ ಶಂಕರ ದಾಸಿಮಯ್ಯ, ಮಾದರ ಚೆನ್ನಯ್ಯಾ, ಡೋಹರ ಕಕ್ಕಯ್ಯ, ನುಲಿಯ ಚಂದಯ್ಯ, ಗಾಣಿಗ ಕನ್ನಪ್ಪ, ಆಯ್ದಕ್ಕಿ, ಮಾದಯ್ಯ ಖದಿರೇ ರೆಮ್ಮವ್ವೆ, ಕುಂಬಾರ ಗುಂಡಯ್ಯ, ಮಾದಾರ ಧೂಳಯ್ಯ. ಚರ್ಮಗಾರ ಹರಳಯ್ಯ ಇವರೆಲ್ಲರ ಹೆಸರುಗಳು ಅವರ ಕಾಯಕದಿಂದಲೇ ಪ್ರಸಿದ್ಧಿ ಪಡೆದಿವೆ. ಸೋಮಾರಿತನದಿಂದ ಮನಸ್ಸು ಕಲುಷಿತಗೊಳ್ಳುವದು. ಮಾಡಬಾರದ ಕೆಲಸ ಅವನ ಕೈಯಿಂದಾಗುವವು, ನಾನಾರೋಗ ಅಂಟುವವು. ಹೀಗೆ ಆಲಸ್ಯವು ಆರೋಗ್ಯಕ್ಕೆ ಅಪಾಯಕಾರಿ, ಸಮಾಜದಲ್ಲಿ ನಿಂದೆಗೆ ಕಾರಣ ಕೊನೆಗೆ ಪಾಪಕ್ಕೆ ಗುರಿ, ಅದೋಗತಿಗೆ ದಾರಿ ಅಪ್ಪ ಬಸವಣ್ಣನವರು ದುಡಿಯದವನ ಬಾಳು ಕೀಳೆಂದು ಅನೇಕ ಬಗೆಯಿಂದ ಹೇಳಿದ್ದಾರೆ, ಸಿದ್ಧರಾಮದೇವರ ಒಂದು ಸೊಗಸಾದ ಉಕ್ತಿಯನ್ನು ಇಲ್ಲಿ ಕೇಳಿರಿ.

> ಕೃಷಿ ಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೋ?
> ಕರ್ಮಯೋಗವ ಮಾಡದೆ ನಿರ್ಮಲ ಚಿತ್ತವನರಿಯುವ ಇನ್ನೆಂತೋ?
> ಬೇಯದೆ ಅಶನವನುಂಬರಾವಾವುದು?
> ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗಕ್ಕೆ ?

ಕಾಯಕದ ಮಹತ್ವವನ್ನು ಪ್ರಚುರಪಡಿಸಿಯೇ ಅಣ್ಣನವರು ಸಮಾಜದ ಉನ್ನತಿ ಸಾಧಿಸಿದರು. ನಮ್ಮ ಅಜ್ಜ ಮುತ್ತಜ್ಜರು ಅವರ ಆದರ್ಶದಲ್ಲಿ ಕಾಯಕಗೈದು ಶ್ರೀಮಂತರಾದರು. ಸುಖಿಗಳಾದರು, ದಾನಿಗಳಾ

ದರು ಅವರ ಮಕ್ಕಳು ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಅದನ್ನು ಅಲಕ್ಷಿಸಿ ಶೂನಿಗಳಂತೆ ತಿರುಗಿದರೆ ಫಲವೇನು? ಆದ್ದರಿಂದ ಸಜ್ಜನರು ನೀವು ಸದ್ಭಕ್ತರು ನೀವು ಕಾಯಕ ಮಾಡಿರಿ ಇಹ ಪರದಲ್ಲಿ ಸುಖ ಪಡೆಯಿರಿ.

ಶ್ರೀಗಳ ವಾಣಿ ಮುಕ್ತಾಯಗೊಳ್ಳುವ ಮೊದಲೇ ಹೊರಗಿನಿಂದ ಓಡುತ್ತ ತೇಕುತ್ತ ಬಂದ ಶಿಷ್ಯನೊಬ್ಬ ಗುರುಗಳೇ ಕಂತೆ ಬಿಕ್ಷೆಗೆ ಹೋಗಿದ್ದ ನಮ್ಮ ವೃಷಭನನ್ನು ಕೆಟ್ಟ ಬುದ್ಧಿಯಿಂದ ಕುಡುಕರೈವರು ತಡೆದು ಮುಟ್ಟಿದರು. ವೃಷಭನು ಕಣ್ಣು ಕೆಂಪಗೆ ಮಾಡಿ ಭೀಕರವಾಗಿ ಘುರುಕಿಸಿ ಅವರ ಮೇಲೆರಗುವಂತೆ ಜಿಗಿದು ಹೆದರಿಸಿದನು, ಕಾಲು ಕೆದರಿ ಧೂಳೆಬ್ಬಿಸಿದನು. ಕೂಡಲೇ ಆ ದುಷ್ಕರ್ಮಿಗಳ ಕಣ್ಣುಗಳು ಇಂಗಿ ಹೋಗಿವೆ ಹುಡಿಗಾಗಿ ಕಣ್ಣು ಮುಚ್ಚಿ ಮರಳಿ ತೆರೆದಾಗ ಕತ್ತಲೇ ಆವರಿಗೆ ಕಂಡದ್ದು ಆ ಮೂಢರೀಗ ಗೋಳಾಡುತ್ತ ಸನ್ನಿಧಿಗೆ ಮೊರೆಹೋಗಲು ಬರುತ್ತಿದ್ದಾರೆ.

ಕುಳಿತವರಿಗೆಲ್ಲ ಕಾತುರವಾಯಿತು ಸ್ವಾಮಿಗಳು ಸುಮ್ಮನಿದ್ದರು. ಅಷ್ಟರಲ್ಲಿ ಕೈ ಕೈ ಹಿಡಿದುಕೊಂಡು ಬಂದ ಬಳ್ಳಿಗುರುಡರು ಶ್ರೀಗಳ ಎದುರಿಗೆ ಪ್ರಾಂಗಣದಲ್ಲಿ ಸಾಗರ ಬಿದ್ದು ಹೊರಳಾಡಿದರು. " ಭೋ ದೇವರೇ ದುಷ್ಟರು ನಾವು ಕುಡಿದು ಕುಣಿಯುವ ಮದೋನ್ಮತ್ತರು ನಾವು ತಿಳಿಯದೆ ಅಪರಾಧ ಮಾಡಿದೆವು. ಭೂಮಿಗೆ ಬಂದ ಪರಮಾತ್ಮ ನೀವು! ಪಾಪಿಗಳು ನಾವು ! ನೀವು ಕಾಪಾಡದಿದ್ದರೆ ನಮ್ಮಗತಿ ಏನು ? " ಎಂದು ಕಿವಿ ಹಿಂಡಿಕೊಂಡರು, ಗಲ್ಲ ಗಲ್ಲ ಬಡಿದುಕೊಂಡರು ದೈನ್ಯದಿಂದ ಬೇಡಿಕೊಳುತ್ತ ಅಳಹತ್ತಿದರು,

ಕರುಣಾಸಾಗರ ಷಣ್ಮುಖ ಶಿವಯೋಗಿಗಳು ಅವರನ್ನು ಮುಂದಕ್ಕೆ ಕರೆದರು ಕೂಡ್ರ, ಹೇಳಿದರು. ಬಳಿಕ ತಮ್ಮಗಳಿರಾ. ನಾನು ಹೇಳವದನ್ನು ಕೇಳಿರಿ ಮೊದಲು ನಿಮ್ಮ ಮನಸ್ಸಿನ ಹೊಲಸು ತೊಳೆಯಿರಿ ಸ್ವಚ್ಛ ಮನಸ್ಸಿನಿಂದ ವಿಚಾರ ಮಾಡಿರಿ ಮಧ್ಯಪಾನದಿಂದ ಬುದ್ಧಿ ಕೆಡುವದು ಕಳವು ಕೊಲೆ

ಸುಳ್ಳು, ಹಿಂಸೆಗಳು ಬುದ್ಧಿ ಕೆಟ್ಟವರಿಂದಲೇ ಆಗುವವು. ಮದ್ಯಪಾನದಿಂದ ಹಣಹಾಳು, ಆರೋಗ್ಯಹಾಳು ಅಶಕ್ತರಾಗಿ ದುಡಿಯಲಾರದೆ ಹೊಟ್ಟೆಗಾಗಿ ಕೆಟ್ಟಹಾದಿ ಹಿಡಿಯುತ್ತೀರಿ ಪಾಪದ ಕೆಲಸ ಮಾಡುತ್ತೀರಿ. ಯಾರು ಹೇಗೆ ಎಂಬುದನ್ನು ತಿಳಿಯದೆ ಅಪಚಾರ ಮಾಡಿ ನರಕಕ್ಕೆ ಪಾತ್ರರಾಗುತ್ತೀರಿ ಇದನ್ನು ಬಿಟ್ಟು ಧರ್ಮದಂತೆ ನಡೆಯಿರಿ. ದೇವರಲ್ಲಿ ನಂಬಿಗೆ ಇಟ್ಟು ಭಕ್ತರಾಗಿರಿ, ದುಡಿದು ಜೀವಿಸಿರಿ. ನಿಮ್ಮನ್ನು ನಂಬಿದ ಸತಿಸುತರ ರಕ್ಷಣೆ ಮಾಡಿರಿ ತಿಳಿಯಿತೇ?"

" ತಿಳಿಯಿತು ಅಪ್ಪನವರೇ ತಪ್ಪಾಯಿತು. ತಪ್ಪಾಯಿತು ತಂದೆ ಮಹಾತ್ಮರೆ, ತಾವು ಹೇಳಿದಂತೆಯೇ ನಡೆಯುತ್ತೇವೆ. ತಮ್ಮ ಪಾದ ಸಾಕ್ಷಿ ಯಾಗಿ ಇನ್ನೆಂದೂ ಈ ದುರ್ವ್ಯಸನಕ್ಕೆ ಹೋಗುವದಿಲ್ಲ " ಮತ್ತೆ ಮತ್ತೆ ನೆಲಕ್ಕೆ ತಲೆಯಿಟ್ಟು ನಮಿಸುತ್ತಿದ್ದಾರೆ.

ಕಂತೆಯ ಭಿಕ್ಷೆಯ ಬಸವ ಬಂದಿತು, ಕೊಂಬಿಗೆ ಕಟ್ಟಿದ ಜೋಳಿಗೆಯ ಲ್ಲಿದ್ದ ಪ್ರಸಾದವನ್ನು ಅವರಿಗೆ ಹಂಚಿಸಿದರು. ಅದನ್ನು ಸೇವಿಸುತ್ತಿದ್ದಂತೆ ಅವರ ಕಣ್ಣಿನ ಕತ್ತಲೆ ಕಳೆದು ಬೆಳಕು ತೋರಿತು, ಪಶ್ಚಾತ್ತಾಪದಿಂದ ಪರಿ ಶುದ್ಧರಾಗಿ ಶ್ರೀಗಳ ಉಪದೇಶಾಮೃತದಿಂದ ಪುನೀತರಾದ ಆ ಐವರು ಸ್ವಾಮಿಗಳ ಎದುರಿನಲ್ಲಿ ಸಾಷ್ಟಾಂಗವೆರಗಿದರು. ಮಹಾತ್ಮರೆ ನಿಮ್ಮ ಕರುಣೆ ಅಪಾರ ನಮ್ಮನ್ನು ಕಾಪಾಡಿದಿರಿ" ಎಂದು ಕೊಂಡಾಡಿದರು. ಶ್ರೀಗಳು ಆಶೀರ್ವದಿಸಿ ಅಪ್ಪಣೆ ಕೊಟ್ಟರು, ಶಾಂತನಾಗಿ ನಿಂತಿದ್ದ ವೃಷ ಭನ ಗೊರಸುಗಳನ್ನು ಮುಟ್ಟಿ ನಮಸ್ಕರಿಸುತ್ತ ಅವರು ಹೊರಟು ಹೋದರು.

ಇದಕ್ಕೂ ಮೊದಲೇ ಮಹಾಸ್ವಾಮಿಗಳಿಂದ ಕಾಯಕದ ಉಪದೇಶ ಪಡೆದು ಕುಳಿತಿದ್ದ ಜನರು ತಮ್ಮ ಕಣ್ಣೆದುರಿನಲ್ಲಿಯೇ ನಡೆದ ಮಹತ್ವದ ಮಹಿಮೆಯನ್ನು ಕಂಡು ಅತ್ಯಂತ ನಯ, ಭಯ, ಭಕ್ತಿಯುಳ್ಳವರಾದರು.

ಅಪ್ಪಾ ತಮ್ಮ ಹಿತವಚನಗಳನ್ನು ಆಲಿಸಿ, ನಮ್ಮ ಆಲಸ್ಯವನ್ನು ಮೆಟ್ಟಿ ನಿಲ್ಲುವ ಸ್ಫೂರ್ತಿನಮಗುಂಟಾಗಿದೆ. ಏನಾದರೂ ಉದ್ಯೋಗ ಕೈಕೊಳ್ಳುತ್ತೇವೆ. ತಮ್ಮ ಪಾದ ಕೃಪೆಯಿಂದ ನಾವು ಧನ್ಯರಾಗುತ್ತೇವೆ. ಎನ್ನುತ್ತ ಸಾಷ್ಟಾಂಗವಾಗಿ ಎರಗಿದರು. ಶ್ರೀಗಳು ನಿಮಗೆ ಕಲ್ಯಾಣವಾಗಲೆಂದು ಆಶೀರ್ವದಿಸಿದರು.

ಕೆಲಕಾಲದಲ್ಲಿ ಶಿವಯೋಗಿಯ ಸೇವೆಯನ್ನು ನಿಷ್ಠೆಯಿಂದ ಮಾಡಿದ ಮೇಲೆ ಕಂತೆಯ ವೃಷಭ ತೀರ ಮುಪ್ಪಾಗಿ ಮುದಿಬಸವನಾದನು. ಮುದಿ ಎತ್ತು ಎನಿಸಿದನು ಮೆಟ್ಟಲು ಇಳಿದು ಏರುವದಾಗಲಿಲ್ಲ. ಅದಕ್ಕೆ ಸುಖ ವಾಗುವಂತೆ ಶ್ರೀಗಳು ಅದರ ಆರೈಕೆಯನ್ನು ನೋಡಿಕೊಂಡರು. ತಿರುಗಾಡುವದಕ್ಕೆ ಆಗುವವರೆಗೆ ಗುರುಮಂದಿರದ ಎದುರು ಪ್ರಾಂಗಣದಲ್ಲಿ ಬಂದು ನಿಲ್ಲುತ್ತಿತ್ತು, ಅಖಂಡೇಶ್ವರ ಗದ್ದುಗೆ ಸುತ್ತ ಅಲೆದಾಡುತ್ತಿತ್ತು, ಕಾಲು ಹೋದ ಮೇಲೆಯೂ ಪೂಜೆಯ ಗಂಟೆಯನಾದ ಕೇಳಿದ ಕೂಡಲೇ ಮಲಗಿದಲ್ಲಿಯೇ ಎದ್ದು ನಿಲ್ಲುತ್ತಿತ್ತು. ಪ್ರಸಾದಕ್ಕಾಗಿ ಕಾದಿರುತ್ತಿತ್ತು. ತಾನು ಪಶುವಾದರೂ ಮಾನವರಿಗೆ ಮಾದರಿಯಾಗುವ ನಿಷ್ಠೆ ಜೀವನ ನಡಿಸಿ ಜನ್ಮ ಸಾರ್ಥಕಮಾಡಿಕೊಂಡು ಇಹಲೋಕದ ಯಾತ್ರೆ ಮುಗಿಸಿತು. ಮಠದ ಮಹಾದ್ವಾರದ ಎದುರಿನಲ್ಲಿ ಅದರ ಸಮಾಧಿಯಾಯಿತು.

ಬಸವನ ತೋರ ಗದ್ದುಗೆಯ ಲೀಲೆ ಆಗಾಧವಾಗಿದೆ ಪ್ರಸವ ವೇದನೆಯಿಂದ ಯಾವ ಹೆಣ್ಣುಮಗಳು ನರಳುವಳೋ ಅವಳು ಬಸವ ಹೆಸರಿನಿಂದ ಹರಕೆಹೊತ್ತರೆ ಸುಸೂತ್ರವಾಗಿ ಹೆರಗಿಯಾಗುತ್ತಾಳೆ. ಮನೆಯವರು ಬಸವನ [ನಂದಿ] ಗದ್ದುಗೆಗೆ ಬಂದು ಕಾಯಿಕರ್ಪೂರ ಸಲ್ಲಿಸಿ ಹೋಗುತ್ತಾರೆ.

ಈ ಲೀಲೆ ಜೇವರಗಿಯ ಸಮಸ್ತ ಜನರ ನಾಲಿಗೆಯಲ್ಲಿ ಲಾಸ್ಯವಾಡುತ್ತಿದೆ.

ಭಕ್ತಿ ಭಾಗ್ಯ

ಭಕ್ತಿಯ ಅಭಿವ್ಯಕ್ತಿ ಯಾವಾಗ ಹೇಗೆ ಆಗುತ್ತದೆಂಬುದನ್ನು ಹೇಳಲಿಕ್ಕಾಗದು. ಸದ್ಗುರು ಷಣ್ಮುಖ ಶಿವಯೋಗಿಗಳ ದರ್ಶನದ ಆಶೆ ವೀರಭದ್ರಪ್ಪನಲ್ಲಿ ಒಮ್ಮಿಂದೊಮ್ಮೆ ಮಿಂಚಿತು. ಮಿಂಚಿಮಾಯವಾಗಲಿಲ್ಲ ಬೆಳೆಯಿತು. ಆಗ ಇಳಿಹೊತ್ತಾಗಿತ್ತು. ಜೇವರಗಿ ತಲುಪುವಷ್ಟು ಹೊತ್ತಿಲ್ಲ ಎಂಬ ಸಹಜ ತಿಳುವಳಿಕೆಯನ್ನು ಮೀರಿ ಗುರುಪಾದ ದರ್ಶನದ ಬಯಕೆ ಉತ್ಕಟವಾಯಿತು. ಹೊತ್ತು ವೇಳೆಗಳನ್ನು ಗಮನಿಸಿ ತಡೆಯುವದಕ್ಕಾಗಲಿಲ್ಲ ಎದ್ದು ಬಿಟ್ಟ ವೀರಭದ್ರಪ್ಪ! ಕುದುರೆ ಇರಲಿಲ್ಲ. ನಾಲ್ಕು ಕುದುರೆಗಳನ್ನು ವ್ಯವಹಾರಕ್ಕಾಗಿ ಸೇವಕರು ಹತ್ತಿ ಗ್ರಾಮಾಂತರಕ್ಕೆ ಹೋಗಿದ್ದರು. ಬೇಡಿಕೆಯ ಎತ್ತನ್ನೇ ಒಂದು ಹೊರತೆಂದು ಸಜರ ಹಾಕಿ ಸೈದಾನಿಗಳನ್ನು ಕಟ್ಟಿಕೊಂಡು ಹತ್ತಿ ಹೊರಟುಬಿಟ್ಟನು. ತಮ್ಮೊಡೆಯರು ಹೀಗೆ ಎಲ್ಲಿಗೆ ಹೊರಟರೆಂಬುದು ಆಳುಗಳಿಗೆ ತಿಳಿಯಲಿಲ್ಲ. ಗಂಗಮ್ಮ ತಿಳಿದಳು ಯಜಮಾನರು ಜೇವರಗಿಗೆ ಹೋದರೆಂದು ಆ ವೇಳೆ ಎಂಬುದಕ್ಕಾಗಿ ಆಕೆಯೇನು ಚಿಂತಿಸಲಿಲ್ಲ. ಸದ್ಗುರು ಶಿವಯೋಗಿ ರಕ್ಷಿಸುವನೆಂದು ನಂಬಿಗೆ ಕಾರಣವಾಗಿರಬೇಕು.

ವೀರಭದ್ರಪ್ಪ ಮಾರ್ಗರಗೇರಿ ಗುಡ್ಡದ ದಾರಿಯಲ್ಲಿ ಬರುತ್ತಿದ್ದನು. ಅಷ್ಟರಲ್ಲಿ ಸೂರ್ಯ ಮುಳಗಿದ್ದನು, ಚಂದ್ರನ ಬೆಳಕಿತ್ತು, ಆದರೆ ಸುಲೇಪೇಟೆಯಿಂದ ಹೊರಡುವಾಗ ಗಗನದಲ್ಲಿ ತೇಲುತ್ತಲಿದ್ದ ಎರಡು ಚಿಕ್ಕಮೋಡಗಳು ದೊಡ್ಡದಾಗುತ್ತ ಚಂದ್ರನನ್ನು ಮುತ್ತಲು ಹವಣಿಸುತ್ತಿದ್ದವು, ಮುಂದೊಂದು ಹರದಾರಿ ಹೋಗುವಷ್ಟರಲ್ಲಿ ಕಪ್ಪು ಮೋಡ ತುಂಬಾ ಮುಸುಕಿತು. ಚಂದ್ರಮಾಯವಾದನು. ಕತ್ತಲೆ ಕವಿಯಿತು. ಗಾಳಿ ನಿಂತ್ತಿತ್ತು. ಮುನ್ನೆಚ್ಚರಿಕೆಗೆಂದು ಟಪ ಟಪ ಹತ್ತಿಪ್ಪತ್ತು ಹನಿ ಬಿದ್ದು ನಿಂತವು ವೀರಭದ್ರಪ್ಪನಿಗೆ ಯಾವ ಮುಂಜಾಗ್ರತೆಗೂ ಯಾವ ಉಪಾಯವೂ ಸಾಧ್ಯವಿರಲಿಲ್ಲ. ಅವನ ಅಸಹಾಯಕತೆಯನ್ನು ಮಳೆ ಲಕ್ಷಿಸಲಿಲ್ಲ. ಭರ್ರನೆ ಬಿರು

ಮಳೆ ಸುರಿಯುತೊಡಗಿತು, ದಾರಿಯು ಗುರುತು ಅಳಿಯಿತು. ಕಾಲಲ್ಲಿ ನೀರು ಹರಿದಾಡಿತು. ಎತ್ತು ಕಾಲಿಗೆ ಅನುವು ಕಂಡಂತೆ ಚಲಿಸಿತು, ಕೊನೆಗೆ ದಿಕ್ಕುಗಾಣದೆ ನಿಂತಿತು. ಏನೂ ತಿಳಿಯದೆ ವೀರಭದ್ರಪ್ಪ ಶಿವ ಶಿವಾ ಶಿವಯೋಗಿಶಾ ಇದೇನು ಪರೀಕ್ಷೆಗೆ ತಂದೆಯಪ್ಪಾ ! ನೀನೇ ರಕ್ಷಿಸಬೇಕು. ಅವನ ಮನಸ್ಸು ಮೊರೆಯಿಡುತ್ತಿತ್ತು, ಒಳಬಗೆಯಲ್ಲಿ ಗುರುಶಿಷ್ಯರ ನಡುವೆ ದೂರವಾಣಿಯ ಸಂಪರ್ಕವಿತ್ತೇನೋ? ಗುರುವಿಗೆ ಮೊರೆ ಕೇಳಿರಬೇಕು. ಪೊರೆಯುವ ಭರವಸೆ ತೋರಿರಬೇಕು. ನಿನ್ನ ರಕ್ಷೆ ರಕ್ಷಿಸುತ್ತಿರುವಾಗ ನನಗೆ ಯಾವ ಅಪಾಯ? ಎಂದು ಧೈರ್ಯ ತಾಳಿಬಿಟ್ಟನು. ಮಿಂಚಿದಾಗೊಮ್ಮೆ ಎತ್ತು ಅತ್ತಿತ್ತ ಸ್ವಲ್ಪ ಹೆಜ್ಜೆ ಇಡುವದು. ಹೀಗೆ ಅಲೆಯುತ್ತಿರುವಾಗ ಒಮ್ಮೆ ಥಕ್ಕನೆ ಮಿಂಚಿದ ಬೆಳಕಿಗೆ ಹತ್ತಿರದಲ್ಲಿ ಚಿಕ್ಕದೇವಾಲಯವೊಂದು ಅವನ ಕಣ್ಣಿಗೆ ಬಿತ್ತು ಮುಗ್ಗುತ್ತ, ಏಳುತ್ತ ಅಲ್ಲಿಗೆ ಹೋಗಿ ಬಟ್ಟೆಗಳನ್ನು ಹಿಂಡಿಕೊಂಡನು. ಎತ್ತಿನ ಸಬರ ಇಳಿಸಿಟ್ಟು ಗುಡಿಯಲ್ಲಿ ಕುಳಿತನು. ಶಿವಯೋಗಿಯ ಸನ್ನಿಧಿ ಸೇರುವ ಕಲ್ಪನೆಯಲ್ಲಿಯೇ ಕಾಲ ಕಳೆದನು. ಮಳೆ ನಿಂತಿತು. ಮೋಡ ಹರಿದುಹೋಗಿ ಬೆಳದಿಂಗಳು ಬಿದ್ದಿತು. ರಾತ್ರಿಯು ಕಡೆಯ ಜಾವದ ಚಿಕ್ಕಿ ಮೂಡಿತ್ತು, ವೀರಭದ್ರಪ್ಪ ಎತ್ತಿಗೆ ಸಬರ ಹಾಕಿ ಹಗ್ಗ ಹಿಡಿದುಕೊಂಡು ಸಾಗಿ ಬಂದು ದಾರಿಯನ್ನು ಗುರುತಿಸಿದನು. ಗುಡ್ಡದಡಿಯಾದ್ದರಿಂದ ಗಟ್ಟಿದಾರಿ. ಎತ್ತಿನ ಮೇಲೆ ಕುಳಿತು ನಡೆದನು.

ಮಠದ ಮಹಾದ್ವಾರಕ್ಕೆ ಬರುವ ಮೊದಲೇ ಎತ್ತು ಇಳಿದು ಹೆಬ್ಬಾಲಿಗೆ ಬಂದನು. ಅಲ್ಲಿ ಮೊದಲೇ ನೋಡಿದ ವಟುಗಳು ಸುಲೇಪೇಟೆ ವೀರಭದ್ರಪ್ಪನವರು ಬಂದರೆಂದು ಗುರುಗಳಿಗೆ ಅರಿಕೆ ಮಾಡಿದರು. ಐದು ಗಳಿಗೆ ಹೊತ್ತೇರಿತ್ತು. ಷಣ್ಮುಖ ಶಿವಯೋಗಿಗಳು ಪ್ರಾತ; ಶಿವಾರ್ಚನೆ ಮುಗಿಸಿ ಮೊಗಸಾಲೆಯಲ್ಲಿ ಭಕ್ತರ ಮಧ್ಯದಲ್ಲಿ ಕುಳಿತಿದ್ದರು. ವೀರಭದ್ರಪ್ಪನವರ ಬಗೆಗೆ ಜೇವರಗಿಯ ಮಹಾಜನರು ತುಂಬಾ ಗೌರವ ಹೊಂದಿದ್ದರು, ಅಲ್ಲಿ ಶ್ರೀಗಳ ಹತ್ತಿರ ಕುಳಿತಿದ್ದ ಭಕ್ತರು ಅವನನ್ನು ಬರಮಾಡಿಕೊಳ್ಳಲು

ಹೆಬ್ಬಾಗಿಲಿಗೆ ಬಂದರು. ಶರಣು ಶರಣು ಎಂದು ಕೈ ಮುಗಿದರು. ಈ ಸಲ ಕುದುರೆಯಿಲ್ಲ ಎತ್ತು ಬೇರೆ ಹತ್ತಿ ಬಂದಿದ್ದಾರೆ, ರಾತ್ರಿಯೆಲ್ಲ ಪಯಣಿಸಿ ಬಂದಿದ್ದಾರೆ. ಬಟ್ಟೆಗಳು ತೊಯ್ದು ಒಣಗಹತ್ತಿದಂತಿವೆ. ಎಲ್ಲರಿಗೂ ಕುತೂಹಲ ಕಾತುರ! ಒಬ್ಬರು ಎತ್ತು ಹಿಡಿದುಕೊಂಡರು. ಒಬ್ಬರು ಸಬರ ತೆಗೆದರು. ವೀರಭದ್ರಪ್ಪ ಕಟ್ಟೆ ಹತ್ತಿ ಹೋಗಿ ಸಾಗರ ಬಿದ್ದು ಶ್ರೀಗಳ ಪಾದದ ಮೇಲೆ ಹಣೆ ಇಟ್ಟು ನಮಸ್ಕರಿಸಿದನು. ಮಂದಹಾಸದಿಂದ ಶಿವಯೋಗಿಗಳು " ಎಷ್ಟು ಹಂಬಲವಪ್ಪ ನಿನಗೆ, ನನ್ನ ಕಾಣುವದಕ್ಕೆ ಏಳು ಎಂದರು. ಮರಿದೇವರನ್ನು ಕರೆದು "ನೀರು ನೋಡಿರಿ ಬೇಗ ಇವರ ಸ್ನಾನವಾಗಲಿ" ಎಂದರು. ಒಂದೆರಡು ಕುಶಲವಾರ್ತೆಯಾಡಿ ತಾವೇ ಎದ್ದು ಅವನನ್ನು ಒಳಗೆ ಕರೆದುಕೊಂಡು ಹೋದರು. ಅವನ ಜಳಕ ಪೂಜೆ ಉಪಹಾರಗಳನ್ನೆಲ್ಲ ತಮ್ಮ ಎದುರಿನಲ್ಲಿಯೇ ಮಾಡಿಸಿದರು. ಬಳಿಕ ಬಹಳ ಹೊತ್ತು ಮಾತಾಡುತ್ತ ಕುಳಿತರು.

ಆಗ ಗುರುಭಕ್ತರ ನಡುವಿನ ಸಂದು ಅಳಿದಂತಿತ್ತು. ಶಿವಯೋಗಿಗಳು ವೀರಭದ್ರಪ್ಪನಿಗೆ ಪ್ರಾಣವಾಗಿದ್ದರು. ವೀರಭದ್ರಪ್ಪನು ಶಿವಯೋಗಿಗಳಿಗೆ ಕಾಯಕವಾಗಿದ್ದನು. ಕಾಯಪ್ರಾಣಗಳ ಸಂದಿಲ್ಲದೆ ಹೊಂದಿಕೆಯಿಲ್ಲದೆಯೇ ಆತ್ಮನ ಆವಾಸ ಅವರಿಬ್ಬರೂ ಆತ್ಮನ ಪ್ರಕಾಶದಲ್ಲಿ ಈ "ಇದರ" ಆ "ಅದರ" ಆ "ಅವರು" ಅನುಭವ ಅನುಭಾವಗಳನ್ನು ಚರ್ಚಿಸುತ್ತ ನಗುತ್ತ ಆನಂದಿಸುತ್ತ ಮೈಮರೆತು ಕುಳಿತ್ತಿದ್ದರು, ಇದು ಗುರುಭಕ್ತ ಸಮಾಗಮ ವೈಭವದ ಸನ್ನಿವೇಶವಾಗಿತ್ತು. ವೀರಭದ್ರಪ್ಪ ನಾಲ್ಕು ದಿನ ನಿಂತನು. ನಿತ್ಯವೂ ಪಾದೋದಕ ಪ್ರಸಾದ ಪಡೆದು ಸಂತುಷ್ಟನಾದನು, ಒಂದು ದಿನ ತನ್ನೂರಿಗೆ ಹೊರಡಲನುವಾಗಿ ಶಿವಯೋಗಿಗಳ ಅಡಿಯಲ್ಲಿ ಅರಿಕೆ ಮಾಡಿದನು. ಶ್ರೀಗಳು ಅವನನ್ನು ಮುಂದೆ ಕೂಡಿಸಿಕೊಂಡು ಹೃದಯದಿಂದ ಉಕ್ಕಿಬಂದ ನುಡಿಗಳನ್ನಾಡಿ ಆಶೀರ್ವದಿಸಿದ್ದು ಹೀಗೆ : " ವೀರಭದ್ರಪ್ಪ ನಿಮ್ಮ ಉನ್ನತ ಬಾಳು ಬದುಕುಗಳ ರೀತಿಯನ್ನು ಹೊಗಳಬೇಕೆನಿಸುತ್ತದೆ

ನನಗೆ ಅದು ಮುಖಸ್ತುತಿ ಅಲ್ಲ. ನಿಮ್ಮ ತೀಕ್ಷ್ಣ ಬುದ್ಧಿ ವ್ಯವಹಾರ ಚಾತುರ್ಯ, ಮುದಗೊಳಿಸುವ ಮಾತು ಇವು ಕಾರ್ಯದಲ್ಲಿ ವಿಜಯ ತಂದು ಕೊಟ್ಟಿವೆ. ವಿಶಾಲ ಭಾವನೆ ಸುಸಂಸ್ಕೃತ ಜೀವನ. ನಿರ್ವಂಚನೆಯ ನಡತೆ, ಸಾಹಿತ್ಯ, ಪ್ರೀತಿ. ಧರ್ಮಾಭಿಮಾನ. ಜನಹಿತ ಚಿಂತನೆ ನಿಮ್ಮ ಈ ಗುಣಗಳು ಸಮಾಜದಲ್ಲಿ ನಿಮಗೆ ಘನತೆಯನ್ನು ತಂದುಕೊಟ್ಟಿವೆ. ಗುರು ಲಿಂಗ ಜಂಗಮಭಕ್ತಿ. ತ್ಯಾಗ ಜ್ಞಾನಶಕ್ತಿ ಇವು ಪಾರಮಾರ್ಥಿಕ ದಾರಿಯಲ್ಲಿ ನಿಮ್ಮನ್ನು ಮುನ್ನಡೆಸಿವೆ. ಇಂತಹ ನೀವು ಒಂದು ಮಹತ್ವದ ಸ್ಥಾನದಲ್ಲಿದ್ದರೆ ನಿಮ್ಮಿಂದ ಹೆಚ್ಚಿನ ಲೋಕೋಪಕಾರದ ಕಾರ್ಯಗಳು ಸಂಭವಿಸುತ್ತಿವೆ. ರಾಜಾಸ್ಥಾನದಲ್ಲಿ ಅಂಥದೊಂದು ಅಧಿಕೃತಸ್ಥಾನ ನಿಮಗೆ ದೊರೆಯಲೆಂದು ನನ್ನ ಅಪೇಕ್ಷೆ. ಅಖಂಡೇಶ್ವರನು ಅದನ್ನು ಕರುಣಿಸುತ್ತಾನೆ. ಎಂದು ನಂಬಿ ಆಶೀರ್ವದಿಸುತ್ತೇನೆ. ವೀರಭದ್ರಪ್ಪನ ಕಣ್ಣು ತೇವಾಗಿದ್ದವು. ಕೈಮುಗಿದು.

"ಪೂಜ್ಯರೆ ನನ್ನನ್ನು ಹೀಗೆ ಹೊಗಳಬೇಕೇ? ಕೇವಲ ಕಿಂಕರ ನಾನು ನನ್ನಲ್ಲಿ ಏನಿವೆ? ಆ ಯಾವ ಯೋಗ್ಯತೆಯೂ ಇಲ್ಲ.

ಈ ಪಾದಕೃಪೆಯಿಂದ ಹೇಗೋ ಬಾಳುತ್ತಿದ್ದೇನೆ........

"ನಿಷ್ಠರೆ ನಿಜವಾಗಿಯೂ ನೀವು ನಿಷ್ಠೆಯ ವೀರಭದ್ರಪ್ಪನವರು, ನೀವು ಹಾಗೆನ್ನುವದು ಸರಿ ಆದರೆ ಇಲ್ಲಿ ಕೇಳಿರಿ.

ಕ್ರಿಯೆಯಲ್ಲಿ ಬಲ್ಲವರು, ಜ್ಞಾನದಲ್ಲಿ ಸಂಪನ್ನರು
ಎಂದು ಹೇಳಲೇತಕೋ?
ನಡೆ ನುಡಿಯಲ್ಲಿ ಕಾಣಬಹುದು.
ನಡೆ ನುಡಿ ಶುದ್ಧಿವಿಲ್ಲದವರಲ್ಲಿ
ಇರಲೊಲ್ಲ ನೋಡಾ ನಮ್ಮ ಅಖಂಡೇಶ್ವರಾ !

ಎಂದು ನಾನು ಹಾಡಿದ್ದೇನೆ. ಆದ್ದರಿಂದ ಬೇರೆ ಪ್ರಮಾಣಬೇಕೆ? ದೇಶ ಸೇವೆಗೆ ಒಳ್ಳೇ ಅವಕಾಶ ನಿಮಗೆ ಸಿಗಲಿ" ಬಗೆದುಂಬಿ ಫಲಾದಿಗಳನ್ನಿತ್ತು ಆಶೀರ್ವದಿಸಿ ಬಿಳ್ಕೊಟ್ಟರು" ವೀರಭದ್ರಪ್ಪ ಊರಿಗೆ ತೆರಳಿದನು.

ಕರ್ನಾಟಕದಲ್ಲಿ ಮಹಮ್ಮದೀಯ ಅರಸರ ರಾಜ್ಯಗಳಿದ್ದವು. ಅವರ ರಾಜಧಾನಿಯಿಂದ ದೂರದಲ್ಲಿರುವ ಭಾಗಗಳಲ್ಲಿ ಪ್ರಜೆಗಳು ದಂಗೆ-ಕಾಳಗಗಳಿಗೆ ತುತ್ತಾಗಿ ಅಶಾಂತಿಯನ್ನೇ ಅನುಭವಿಸಬೇಕಾಗುತ್ತಿತ್ತು. ಇಂತಹ ಸಂದರ್ಭಗಳಲ್ಲಿ ಜನರು ತಮ್ಮಲ್ಲಿಯೇ ಒಬ್ಬ ವೀರನಾಯಕ ಮೊರೆಹೋದಲ್ಲಿ ಅವನ ಆಶ್ರಯದಲ್ಲಿ ತಮ್ಮ ರಕ್ಷಣೆ ಮಾಡಿಕೊಳ್ಳಬೇಕಾಗುತ್ತಿತ್ತು. ವಿಜಾಪುರದ ಆದಿಲಶಾಹೀ ರಾಜ್ಯದ ಪೂರ್ವಭಾಗದಲ್ಲಿ ಪಿಡ್ಡನಾಯಕ–ಪಾಮನಾಯಕ ಎಂಬುವರು ಸುರಪುರದಲ್ಲಿ ಒಂದು ಸಂಸ್ಥಾನವನ್ನು ಸ್ಥಾಪಿಸಿ ಆ ಭಾಗದ ಪ್ರಜಾಪಾಲನೆ ಮಾಡಿದ್ದಾರೆ. ಅವರ ವಂಶದಲ್ಲಿ ಈಗ ವೆಂಕಟಪ್ಪ ನಾಯಕನೆಂಬವನು ರಾಜನಾಗಿದ್ದನು. ಈ ರಾಜನು, ರಾಜ್ಯದಲ್ಲಿ ದುರಾಶೆಯಿಂದ ಒಳಸಂಚು ನಡೆಸಿದ್ದ ಮಂತ್ರಿಯನ್ನೊಳಗೊಂಡ ಅಧಿಕಾರಿಗಳನ್ನು ಬಗ್ಗುಬಡೆದು ಹೊಸ ಮಂತ್ರಿಯನ್ನು ನೇಮಕ ಮಾಡಿಕೊಳ್ಳಲು ವಿಶ್ವಾಸದ ಯೋಗ್ಯವ್ಯಕ್ತಿಯನ್ನು ಹುಡುಕುತ್ತಿದ್ದನು. ರಾಜ್ಯದಲ್ಲಿ ಲಿಂಗಾಯತರೇ ಬಹುಸಂಖ್ಯೆಯ ಪ್ರಮುಖ ಪ್ರಜೆಗಳಾದ್ದರಿಂದ ಆ ಸಮಾಜದ ಒಬ್ಬ ಸಮರ್ಥ-ಜಾಣ ಧುರೀಣನನ್ನು ನೇಮಿಸಿಕೊಳ್ಳಲು ಯೋಚಿಸುತ್ತಿದ್ದನು. ಹೀಗಿರುವಾಗ ಸುಲೆಪೇಟೆಯ ವೀರಭದ್ರಪ್ಪ ನೆನಪಾಯಿತು. ಅವನು ಪ್ರಾಮಾಣಿಕ ವ್ಯಾಪಾರಿ, ಶ್ರೀಮಂತ, ಸಜ್ಜನನೆಂದು ಗೊತ್ತಿತ್ತು. ವ್ಯಾಪಾರಕ್ಕೆ ಸಂಬಂಧಿಸಿದ ಕೆಲವು ಕಾರ್ಯಗಳಿಗೆ ತನ್ನ ದರ್ಬಾರಕೆ ಬಂದಾಗ ಈ ವ್ಯಕ್ತಿಯ ಪರಿಚಯವಾಗಿತ್ತು. ಕೂಡಲೆ ಅವನನ್ನು ಬರಮಾಡಿಕೊಂಡು, ಆದರಿಸಿ ಮಂತ್ರಿಪದವಿಯನ್ನಿತ್ತನು. ಗುರು ಶ್ರೀ ಷಣ್ಮುಖಶಿವಯೋಗಿಯ ಕೃಪಾ ಬಲದ ಮೇಲೆ ನಂಬಿಗೆ ಇಟ್ಟ ವೀರಭದ್ರಪ್ಪ ಅದನ್ನು ಸ್ವೀಕರಿಸಿದನು.

ಮಂತ್ರಿ ವೀರಭದ್ರಪ್ಪ ಅಧಿಕಾರಿಗಳ ಮೇಲೆ ಚೆನ್ನಾಗಿ ಗಮನವಿಟ್ಟು ರಾಜ್ಯದಲ್ಲಿ ಸುವ್ಯವಸ್ಥೆ ನೆಲೆಗೊಳ್ಳುವಂತೆ ಮಾಡಿದನು. ರಹಸ್ಯವಾಗಿ ಹೊರಗೆ ಹರಿದು ಹೋಗುತ್ತಿದ್ದ ಸಂಪನ್ಮೂಲಗಳನ್ನು ತಡೆದು ಕಾರಣರಾದವರನ್ನು ದಂಡನೆಗೆ ಗುರಿಮಾಡಿದನಂತರ ತೆರಿಗೆಗಳನ್ನು ನಿಶ್ಚಿತಗೊಳಿಸಿ

ದನು. ಇದರಿಂದ ರಾಜ್ಯದ ಆದಾಯ ಸ್ಥಿರವಾಯಿತು. ನಿಷ್ಕಾರಣ ಪ್ರಜೆಗಳನ್ನು ಪೀಡಿಸುವದು ನಿಂತಿತು. ರೈತರ ಹಿತವನ್ನು ಲಕ್ಷಿಸಿ ಕೃಷಿಕಾರ್ಯಗಳಿಗೆ ನೆರವಾಗಿ ಉತ್ತೇಜನ ಕೊಟ್ಟನು ಧಾರ್ಮಿಕ ಸಂಸ್ಥೆಗಳು ನಿರಾತಂಕವಾಗಿ ನಡೆಯುವಂತೆ ನೋಡಿಕೊಂಡನು ಅವುಗಳಿಂದ ಜನರಿಗೆ ಸುಸಂಸ್ಕೃತ ಜೀವನದ ಅರಿವಾಗುವದೆಂದು ಅವನ ನಂಬಿಕೆ ಈ ಎಲ್ಲ ಕಾರ್ಯಗಳಿಗೂ ರಾಜನು ಮೆಚ್ಚಿಕೊಂಡು ಆಜ್ಞೆಮಾಡುತ್ತಿದ್ದನು. ಅರಸು ಮಂತ್ರಿಗಳ ನಡುವೆ ವಿಶ್ವಾಸವರ್ಧಿಸಿತು. ತನ್ನ ಭಾಗ್ಯೋದಯಕ್ಕೆ ಕಾರಣರಾದ ಶ್ರೀ ಷಣ್ಮುಖ ಶಿವಯೋಗಿಗಳ ಪಾದಸ್ಮರಣೆಯನ್ನು ಮರೆತಿರಲಿಲ್ಲ ಅಧಿಕಾರ ಮದವು ಕೊಂಚವೂ ಅವನಿಗುಂಟಾಗಲಿಲ್ಲ. ತನ್ನ ಗುರು ತನ್ನ ಜೀವನದ ಅಧಿದೇವ. ಶಿವಯೋಗಿಯನ್ನು ರಾಜೋಚಿತ ರೀತಿಯಿಂದ ಸನ್ಮಾನಿಸಿ ಪೂಜಿಸಬೇಕೆಂದು ಮನಸ್ಸು ಮಾಡಿದನು. ಈ ವಿಚಾರವನ್ನು ದೊರೆಯ ಮುಂದಿಟ್ಟನು. ದೊರೆ ವೆಂಕಟಪ್ಪ ನಾಯಕನು ಸಂತೋಷದಿಂದ ಸಮ್ಮತಿಸಿ ತನ್ನ ಪರವಾಗಿ ಬಿನ್ನಹ ಮಾಡಿಬರಲು ಮಂತ್ರಿ ವೀರಭದ್ರಪ್ಪನಿಗೇ ಆದೇಶ ನೀಡಿದನು ಮಹಾತಪಸ್ವಿಗಳ ಘನವ್ಯಕ್ತಿತ್ವಕ್ಕೆ ತಕ್ಕಂತೆ ಗೌರವಿಸಲು ಅಗತ್ಯವಾದ ವ್ಯವಸ್ಥೆ ಮಾಡುವ ಹೊಣೆಯನ್ನು ಅವನಿಗೆ ಒಪ್ಪಿಸಿದನು.

ತೆಂಗಿನಕಾಯಿ ಫಲ ಪುಷ್ಪ ಮೊದಲಾದವುಗಳೊಡನೆ ನಿಷ್ಠೆಯ ವೀರಭದ್ರಪ್ಪ ಜೇವರಗಿಗೆ ಬಂದು ಶಿವಯೋಗಿಗಳ ಮುಂದಿಟ್ಟು ವಂದಿಸಿದನು. ಸುರಪುರಕ್ಕೆ ದಯಮಾಡಿಸಬೇಕೆಂಬ ರಾಜನ ಬಿನ್ನಪವನ್ನು ಅರಿಕೆ ಮಾಡಿದನು. ವೀರಭದ್ರಪ್ಪನ ಬರುವಿನಿಂದ ಶ್ರೀಗಳು ಸಂತೋಷಪಟ್ಟರು ಆದರೆ ಬಿನ್ನಹ ಸ್ವೀಕರಿಸಲು ಸುಲಭವಾಗಿ ಒಪ್ಪಲಿಲ್ಲ "ಮಂತ್ರಿಗಳೇ ನಮಗೆ ಶಿಗೇಕಯ್ಯಾ ಈ ರಾಜ್ಯ ಸಂಪರ್ಕ? ಜನದಟ್ಟಣೆ ಮೆರವಣಿಗೆ ಗದ್ದಲ ಇವೆಲ್ಲಾ ಬೇಡ ನನ್ನಪ್ಪಾ, ನಿಮ್ಮ ರಾಜರಿಗೆ ನನ್ನ ಆಶೀರ್ವಾದ ಹೇಳಿರಿ. ನಿಮ್ಮುಭಯರ ಕೀರ್ತಿ ಬೆಳಗಲಿ" ಎಂದು ಬಿನ್ನಹಕ್ಕೆ ಅಸಮ್ಮತಿಯನ್ನೇ ಸೂಚಿಸಹತ್ತಿದರು. ವೀರಭದ್ರಪ್ಪ ಆಗ್ರಹ ಪಡುಸುವದಕ್ಕೆ ಹಿಂಜರಿಯಲಿಲ್ಲ.

"ತಮಗೆ ಈ ಗೌರವ ಬೇಕಾಗಿಲ್ಲವಾದರೂ ತಾವು ಅಲಂಕರಿಸಿರುವ ಈ ಪೀಠದ, ತಾವು ಪ್ರತಿನಿಧಿಸುತ್ತಿರುವ ವೀರಶೈವದ ಗೌರವ ಪ್ರತಿಷ್ಠೆಗಳಿಗಾಗಿಯೇ ಈ ಯೋಜನೆ, ತಾವು ನಿರಾಕರಿಸಲಾಗದು" ಎಂದು ಪರಿಪರಿಯಿಂದ ಪ್ರಾರ್ಥಿಸಿದ್ದನು. ಅತ್ಯಂತ ವಿಶ್ವಾಸದ, ನಿಷ್ಠೆಯ ಮಂತ್ರಿಯ ಪ್ರಾರ್ಥನೆಯನ್ನು ತಿರಸ್ಕರಿಸಲಿಕ್ಕಾಗದೆ ಶ್ರೀಗಳು ಸುರಪುರಕ್ಕೆ ಬರಲು ಒಪ್ಪಿಕೊಂಡರು.

ಅರಸನ ಅಪ್ಪಣೆಯಂತೆ ಮಂತ್ರಿಯು ಆನೆ, ಕುದುರೆ ರಥ ಪದಾತಿಗಳ ಸರಂಜಾಮು ಜೇವರಗಿಗೆ ಕಳುಹಿ ಷಣ್ಮುಖ ಶಿವಯೋಗಿಗಳನ್ನು ಸುರಪುರಕ್ಕೆ ಬರಮಾಡಿಕೊಂಡನು. ನಗರದ ಹೊರವಲಯದಿಂದ ಅರಸನ ಒಡ್ಡೋಲಗಕ್ಕೆ ಬರುವ ಸ್ವಾಮಿಗಳ ಪಲ್ಲಕ್ಕಿ ಉತ್ಸವವು ಬಹು ಸಂಭ್ರಮದಿಂದ ಹೊರಟಿತು.

ಮುಂದೆ ಆನೆಯ ಮೇಲಿನ ನಗಾರಿ ನೌಬತ್ತುಗಳು ಭೋರ್ಗರೆದವು ಅವರ ಹಿಂದೆ ಅಶ್ವಾರೋಹಿಗಳು ಎರಡು ಸಾಲಾಗಿ ನಡೆದಿದ್ದರು. ಅವರ ಹಿಂದೆ ಚಿಕ್ಕ ಪದಾತಿದಳ ಆಯುಧಗಳೊಡನೆ ಸಾಗಿತ್ತು. ಅನಂತರ ವಿವಿಧ ವಾದ್ಯಗಳು ಮೊಳಗುತ್ತ ಬಂದವು ಕಹಳೆ ನಾಗಸ್ವರ ತಮ್ಮಟಿಗಳು ಅವುಗಳಲ್ಲಿ ಭಜನೆಮೇಳಗಳು ಶಿವಕೀರ್ತನೆಗಳನ್ನು ಹಾಡುತ್ತಿದ್ದವು ಓಂಕಾರ ಅಂಕಿತವುಳ್ಳ ಕಾವಿ ಧ್ವಜಗಳು ಮೇಲೆದ್ದು ಮೆರೆದಿದ್ದವು, ಆ ಬಳಿಕ ಬರುತ್ತಿದ್ದ ಪಲ್ಲಕ್ಕಿಯ ಮುಂದುಗಡೆಯಲ್ಲಿ ಮಂತ್ರಿ ಅಧಿಕಾರಿಗಳು ಮತ್ತು ದಳವಾಯಿಗಳೊಡನೆ ಉತ್ಸವದ ವಹಿಸಿನಡೆದಿದ್ದನು. ಎಡ-ಬಲದಲ್ಲಿ ಸಾವಿರಾರು ಜನರು ಸಾಲುಕಟ್ಟಿ ನೋಡುತ್ತಿದ್ದರು, ಸಂಗಡ ಸಾಗಿದ್ದರು. ದರ್ಶನಾಪೇಕ್ಷೆಯುವರಿಂದ ನೂಕುನುಗ್ಗುಲಾಗದಂತೆ ಪಲ್ಲಕ್ಕಿಯ ಎರಡು ಬದಿಗಳಲ್ಲಿ ರಾಜಭಟ್ಟರು ರಕ್ಷಿಸಿಕೊಂಡು ನಡೆದಿದ್ದರು. ಹಿಂದೆ ವಿಭೂತಿ-ಕುಂಕುಮಗಳಿಂದ ಕಳೆಗೊಂಡ ಮುಖದ ನೂರಾರು ಸುಮಂಗಲೆಯರು ಕಲಶದಾರುತಿ ಹಿಡಿದು ಮಂಗಲ ಪದ ಹಾಡುತ್ತ ಬರುತ್ತಿದ್ದರು. ಅವರ ಹಿಂದೊಂದು

ರಕ್ಷಕ ದಲವಿತ್ತು. ಈ ಪ್ರಕಾರದ ವೈಭವದ ಸ್ವಾಮಿಗಳ ತಿರ್ಯದಾದೋಲಿ ಕೋತ್ಸವವು ಆಸ್ಥಾನ ಮಂದಿರದ ಸಮೀಪಕ್ಕೆ ಬರಲು ಅರಸು ವೆಂಕಟಪ್ಪ ನಾಯಕನು ಮನೆಯ ಪರಿವಾರದೊಂದಿಗೆ ಎದುರುಗೊಂಡು ತಲೆವಾಗಿ ನಮಸ್ಕರಿಸಲು ಶಿವಯೋಗಿಗಳು ಎರಡು ಹಸ್ತಗಳನ್ನೆತ್ತಿ ಆಶೀರ್ವದಿಸಿದರು ಅಲ್ಲಿಂದ ಅರಸುಕೂಡ ಮೆರವಣಿಗೆಯಲ್ಲಿ ಪಾಲ್ಗೊಂಡನು. ಪಾಲಕಿ ಉತ್ಸವ ಆಸ್ಥಾನದ ಮುಂಬಾಗಿಲಿಗೆ ಬಂದಿತು. ಅಲಂಕರಿಸಿದ ಹಾಸಿನಲ್ಲಿ ಪಲ್ಲಕ್ಕಿ ಯನ್ನು ಇಳಿಸಿದರು. ಸ್ವಾಮಿಗಳು ಹೊರ ಬಂದು ಹಾವುಗೆ ಮೆಟ್ಟಿ ಮುಂದೆ ಬರಲು ಬಾಗಿಲಲ್ಲಿ ಮಂಗಲಾರತಿ ಮಾಡಿ ಹೂಮಾಲೆಹಾಕಿ ವಂದಿಸಿ ಸ್ವಾಗ ತಿಸಿದರು, ಬಳಿಕ ಅರಸನನ್ನು ಅನುಸರಿಸಿ ಓಲಗದ ಆಲಯಕ್ಕೆ ಬರಲು ಅಲ್ಲಿ ಓರಣವಾಗಿ ತುಂಬ ಕುಳಿತಿದ್ದ ಅಧಿಕೃತ ಜನರು ಆಮಂತ್ರಿತರು ಎದ್ದು ನಿಂತು ತಲೆವಾಗಿ ನಮಸ್ಕಾರ ಮಾಡಿದರು. ಅರಸನು ಶಿವಯೋಗಿಗಳ ಕೈ ಹಿಡಿದು ವೇದಿಕೆಯನ್ನೇರಿಸಿ ಸಿಂಹಾಸನದಲ್ಲಿ ಕೂಡ್ರಿಸಿದನು, ಸಭೆಗೆ ಸಭೆಯೇ ಚಪ್ಪಾಳೆತಟ್ಟಿ ಜಯಘೋಷ ಮಾಡಿತು. ಬಳಿಕ ಸಜ್ಜುಗೊಳಿಸಿಟ್ಟಿದ್ದ ಸಲಕ ರಣೆಗಳಿಂದ ರಾಜನು ಸಪತ್ನಿಕನಾಗಿ ಶ್ರೀಗಳ ಪಾದ ಪೂಜೆ ಮಾಡಿದನು. ರಾಣಿ ಆರತಿ ಎತ್ತಿದಳು, ಮಠದ ದಾಸೋಹಕ್ಕೆಂದು ವಿಪುಲ ಕಾಣಿಕೆಯನ್ನು ತಟ್ಟೆಯಲ್ಲಿಟ್ಟು ಶಿವಯೋಗಿಯ ಪಾದಕ್ಕೆ ಅರ್ಪಿಸಿದಾಗ ಮತ್ತೆ ಜಯ ಘೋಷವಾಯಿತು. ರಾಜದಂಪತಿಗಳಿಗೆ ಫಲಪುಷ್ಪಗಳನ್ನು ಆಶೀರ್ವದಿಸಿ ಇತ್ತ ಬಳಿಕ ಪರಿಚಾರಿಕೆಯರೊಡನೆ ರಾಣಿ ಸರಿದು ತನ್ನ ಪರಿವಾರದಲ್ಲಿ ಕುಳಿತಳು. ರಾಜನು ಶ್ರೀಗಳ ಪೀಠದ ಕೆಳಬದಿಯ ಮತ್ತೊಂದು ಆಸನದಲ್ಲಿ ಮಂಡಿಸಿದನು. ಸಭೆಯ ಶಿಷ್ಟತೆಯ ಕಾರ್ಯಕ್ರಮಗಳು ಮುಂದುವರೆದವು.

ಮಂತ್ರಿ ವೀರಭದ್ರಪ್ಪನು ಸಭೆಯ ಪರವಾಗಿ ಚಿಕ್ಕ ಭಾಷಣ ಮಾಡಿ ಗೌರವಾಭಿವಂದನೆಯ ಪತ್ರವನ್ನು ಪೂಮಾಲೆಯೊಡನೆ ಅರ್ಪಿಸಿದನು. ಸಚಿವರು, ಹಿರಿಯ ಅಧಿಕಾರಿಗಳು ರೈತ ಪ್ರಮುಖರು. ಉದ್ದಿಮೆಗಳ ಒಡೆಯರು, ವರ್ತಕ ಶ್ರೇಷ್ಠರು, ಕ್ರಮವಾಗಿ ಫಲಪುಷ್ಪಗಳನ್ನು ಕಾಣಿಕೆ ಗಳನ್ನು ಶಿವಯೋಗಿಗಳಿಗೆ ಅರ್ಪಿಸಿ ವಂದನೆಗೈದರು. ಶ್ರೀಗಳು ಇವರೆಲ್ಲರಿಗೆ

ಸ್ವಹಸ್ತದಿಂದ ಹಣ್ಣುಕಾಯಿ ತಾಂಬೂಲಗಳನ್ನಿತ್ತು. ಆಶೀರ್ವಚನವನ್ನು ಅನುಗ್ರಹಿಸಿದರು. ನಮ್ಮ ಶಿವಯೋಗಿಗಳು ಈಗ ರಾಜಾಸ್ಥಾನದಲ್ಲಿ ಮಾತನಾಡುಬೇಕಾಗಿತ್ತಷ್ಟೇ? ಆದ್ದರಿಂದ ಅವರು ಲೌಕಿಕವಾಗಿ ಪ್ರಚಲಿತ ಹಾಗೂ ಭವಿಷ್ಯದ ಸಮಾಜ ವ್ಯವಸ್ಥೆಯನ್ನೇ ಕುರಿತು ತಮ್ಮ ವಾಣಿ ವೈಖರಿಯ ಹೊನಲು ಹರಿಸಿದರು.

" ಸಕಲ ಚರಾಚರ ಸೃಷ್ಟಿ ಸ್ವರೂಪನೂ, ಒಡೆಯನೂ. ನಿಯಾಮಕನೂ ಆದ ಪರಮಾತ್ಮನಲ್ಲಿ ಭಕ್ತಿ ಇರಿಸಿದ ದೊರೆಗಳೇ, ಮಹಾಜನರೇ ನಮ್ಮನ್ನು ರಾಜಸಭೆಗೆ ಕರೆತಂದು ಗೌರವಿಸಿ ಸತ್ಕಾರಗೈದಿರಿ. ಇದು ನಿಮ್ಮ ಹೃದಯ ಶ್ರೀಮಂತಿಕೆ. ಹಾಗೂ ಪರಮನಿರಂಜನ ಪೀಠದಲ್ಲಿರಿಸಿದ ಅಭಿಮಾನದ ದ್ಯೋತಕವಾಗಿದೆ. ನಾನೇನು ಇದಕ್ಕೆ ತಕ್ಕವನಲ್ಲ. ನಿಮಗೆ ಆ ಅಖಂಡೇಶ್ವರ ಲಿಂಗವು ಉತ್ಕರ್ಷವನ್ನುಂಟು ಮಾಡಲೆಂದು ಹಾರೈಸುತ್ತೇನೆ. ಸುರಪುರದ ಅರಸರು, ಶೂರರು, ಧೀರರು, ಪ್ರಜಾಪ್ರೇಮಿಗಳು, ಧರ್ಮ. ಸಾಹಿತ್ಯ, ಸಾಂಸ್ಕೃತ, ಕಲೆಗಳಲ್ಲಿ ಆಸಕ್ತಿಯುಳ್ಳವರು. ಈ ಪರಂಪರಾಗತ ಗುಣಗಳುಳ್ಳವರಾಗಿ ಇಂದು ಒಡೆಯರಾಗಿರುವ ವೆಂಕಟಪ್ಪ ಭೂಪರು, ಮಂತ್ರಿ ವೀರಭದ್ರಪ್ಪನವರು. ಇವರಿಂದ ರಾಜ್ಯದ ಏಳ್ಗೆಯಾಗುತ್ತಲಿದೆ. ಅರಸೊತ್ತಿಗೆಯು ಅರಸರ ಸುಖೋಪಭೋಗಕ್ಕಾಗಿ ಮಾತ್ರ ಇರುವದಿಲ್ಲ. ಪ್ರಜಾಜನರ ಹಿತಸಾಧಿಸುವದಕ್ಕಾಗಿ ಇರುವದು. ಸುರಪುರದ ರಾಜರು ಈ ರಾಜಧರ್ಮವನ್ನು ಬಲ್ಲವರಾಗಿದ್ದಾರೆ. ಅರಸು ಮಂತ್ರಿಗಳ ನಡುವಿನ ಸಂಬಂಧ ತೃಪ್ತಕರವಾಗಿದೆ. ಇದು ಪ್ರಜೆಗಳ ಸುಖಾಭಿವೃದ್ಧಿ ಕಾರ್ಯಗಳಿಗೆ ನೆರವಾಗುವದೆಂದು ಭಾವಿಸುವೆ, ಪ್ರಜೆಗಳು ಸುಖಶಾಂತಿಗಳಿಂದ ಬಾಳುವಂತಾಗಲಿ, ''ಸುರಪುರದ ಜನರು ದೇವಭಕ್ತರಾಗಲಿ. ದೇವಮಾನವರಾಗಲಿ, ಸುರಪುರವು ನಿಜವಾಗಿ ಸುರರ ಪುರವಾಗಲಿ ಅಖಂಡೇಶ್ವರ ಲಿಂಗದ ಕೃಪೆಯಿಂದ ಇದು ಸಾಧ್ಯವಾಗಲಿ ತಮಗೆಲ್ಲ ಶುಭವಾಗಲಿ" ವರದ ಹಸ್ತದಿಂದ ಹರಕೆ ಇತ್ತು ಮುಕ್ತಾಯಗೊಳಿಸಿದರು.

ವೆಂಕಟರಾಜ ವಂದನಾರ್ಪಣಮಾಡಿ ಸಭಾಸದರನ್ನು ಕುರಿತು "ಶಿವ

ಯೋಗಿಗಳು ಅವರ ನಿವಾಸ ಮತ್ತು ಲಿಂಗಾರ್ಚನೆಗಾಗಿ ರಚಿತವಾಗಿರುವ ಮಠಕ್ಕೆ ದಯಮಾಡಿಸುವರು. ನಾವೆಲ್ಲರು ಅವರನ್ನು ಅಲ್ಲಿಗೆ ಕಳಿಸಿ ಬರೋಣ! ಎಂದು ಸೂಚಿಸಿದನು. ಅದರಂತೆ ರಾಜರು ಮೊದಲ್ಗೊಂಡು ಓಲಗದ ಜನರೆಲ್ಲ ಪೂಜ್ಯ ಶಿವಯೋಗಿಗಳನ್ನು ಕರೆದುಕೊಂಡು ಮುಂದೆ ಮಂಗಲ ಪಾಠಗಳು, ಭಜನೆ ಗೀತೆಗಳು ನಡೆಯುತ್ತಿದ್ದಂತೆ ಹೊಸ ಮಠದ ವರೆಗೆ ಸಂಭ್ರಮದಿಂದ ಹೋದರು. ಅಲ್ಲಿ ಅವರನ್ನು ಮೂರ್ತ ಮಾಡಿಸಿ ವಂದಿಸಿ ಎಲ್ಲರೂ ಮರಳಿದರು. ರಾಜಾತಿಥ್ಯದಲ್ಲಿ ಸ್ವಾಮಿಗಳ ಸ್ನಾನ ಪೂಜೆ ಪ್ರಸಾದಗಳು ಕುಂದಿಲ್ಲದೆ ಮುಂದುವರಿದವು.

ಷಣ್ಮುಖ ಶಿವಯೋಗಿಗಳು ಐದು ದಿನ ಸುರಪುರದಲ್ಲಿ ಉಳಿದರು. ದಿನನಿತ್ಯವೂ ಆ ಮಠದಲ್ಲಿ ಅನುಭವಗೋಷ್ಟಿ ನಡೆಯಿತು ಈ ಶಿವಯೋಗಿಗಳ ಬಗೆಗೆ ಅತ್ಯಂತ ಆದರ ಭಾವನೆ ಹೊಂದಿದ್ದ ನೆರೆಹೊರೆ ಗ್ರಾಮಗಳ ಗುರುಚರ ಮೂರ್ತಿಗಳು ಅನುಭವಗೋಷ್ಠಿಯಲ್ಲಿ ಭಾಗವಹಿಸಿದರು. ಸುರಪುರದ ನೂರಾರು ಭಕ್ತರೂ ಆ ಅನುಭವಾಮೃತ ಸವೆದು ಧನ್ಯರಾದರು. ನಾಲ್ಕನೆದಿನ ಅರ್ಪಣ ವಿಧಾನ ಪ್ರಸಾದ ಸಿದ್ಧಿಗಳ ಚರ್ಚೆಯಾಯಿತು. ಚರ್ಚೆಯ ಕೊನೆಯಲ್ಲಿ ಷಣ್ಮುಖ ಶಿವಯೋಗಿಗಳು ಮಥನದಿಂದ ಬರುವ ನವನೀತದಂತೆ, ಅನುಭವ ಮಥನದಿಂದ ಉಂಟಾದ ಅರ್ಪಣ ಸದ್ಭಾವದ ಸಾರವನ್ನು ಸ್ಥೂಲವಾಗಿ ಹೀಗೆ ನಿರೂಪಿಸಿದರು.

" ವೀರಶೈವರ ಕ್ರಿಯಾಜ್ಞಾನ ಸಮನ್ವಯದ ಆಚಾರದ ಎಲ್ಲ ಬಗೆಗಳಲ್ಲಿ ಅರ್ಪಣ ಸದ್ಭಾವವು ಅತಿಮುಖ್ಯವಾದದು. ಆತ್ಮನಿಗೆ ಯಾವದೇ ಕರ್ಮದ ಲೇಪವಾಗುವದನ್ನು ಅರ್ಪಣ ಸದ್ಭಾವವೇ ತಡೆಗಟ್ಟಬಲ್ಲದು. ಅರ್ಪಣ ವಿಧಿಯು ಕ್ರಿಯಾ ಮತಾರ್ಪಣ, ಜ್ಞಾನಮತಾರ್ಪಣ ಎಂದು ಎರಡು ವಿಧ. ವೀರಶೈವನು ಆಶೆಗೆ ದಾಸನಾಗದೆ. ಶಿವನಿಗೆ ದಾಸನಾಗಿ ನ್ಯಾಯವಾದ ಕಾಯಕದಿಂದ ಧವಸ ಧಾನ್ಯ ವಸ್ತುಗಳನ್ನು ಶಿವನಿಗಾಗಿ ಶಿವೋಪಾಸನೆಗಾಗಿ ಸಂಗ್ರಹಿಸುವನು. ಅದರಲ್ಲಿ ಕಾಲಕ್ಕೆ ತಕ್ಕ ವಸ್ತುಗಳನ್ನು

ಶಿವಕ್ರಿಯೆಗಳಿಂದ ಸಂಸ್ಕಾರಗೊಳಿಸಿ ಇಷ್ಟ-ಪ್ರಾಣ-ಭಾವಲಿಂಗಗಳಿಗೆ ಅಥವಾ ಗುರುಲಿಂಗ-ಜಂಗಮರಿಗೆ ಅರ್ಪಿಸಿ ಅವರ ಪ್ರಸಾದ ಸ್ವೀಕರಿಸುವನು. ಇದು ಕ್ರಿಯಾಮತಾರ್ಪಣವು.

ಎಲ್ಲ ಕಾಲಗಳಲ್ಲಿ ಎಲ್ಲಕಡೆಗೆ ನಾಶಿಕಾದಿ ಇಂದ್ರಿಯಗಳ ಮುಖಾಂತರ ತಾನಾಗಿಯೇ ಭೋಗವು ಸಂಘಟಿಸುವದು. ವನಗಳಲ್ಲಿ ಸುವಾಸನೆ, ನಿಸರ್ಗದ ಕಲಾಕೃಗಾರಿಕೆಗಳ ಸೌಂದರ್ಯ, ಭಾಷಣ ಸಂಗೀತಾದಿಗಳ ಸುಖ ಮಿಶ್ರಣ (ಮುಂತಾದವು ಇದಕ್ಕೆ ಉದಾಹರಣೆ. ಆವಾರ ವೀರಶೈವನು ಈ ಭೋಗ) ವಸ್ತುಗಳಿಗೆ ಜ್ಞಾನ ಸಂಸ್ಕಾರವೀಯುವನು. ಅಂದರೆ ಇಂದ್ರಿಯಗಳನ್ನು ಲಿಂಗಾಸ್ಥಾನಗಳನ್ನಾಗಿಯೂ. ಲಿಂಗಮುಖಗಳನ್ನಾಗಿಯೂ ತಿಳಿಯುವನು, ಭೋಗವಿಷಯವು ಯಾವ ಇಂದ್ರಿಯಕ್ಕೆ ಸಂಬಂಧಿಸಿರುವದೋ ಆ ಇಂದ್ರಿಯದಲ್ಲಿರುವ ಲಿಂಗಕ್ಕೆ ಆ ಇಂದ್ರಿಯ ಮುಖದಲ್ಲಿ ಅದನ್ನು ಅರ್ಪಣಗೊಳಿಸುವನು. ಹೀಗೆ ಅರ್ಪಿತವಾದ ವಿಷಯವು ವಿಷಯವಲ್ಲ. ಪ್ರಸಾದವು ಆ ಪ್ರಸಾದ ಭೋಗದಿಂದ ಆನಂದಿಸುವನು. ಈ ಕ್ರಮದ ವಿವೇಕವೇ ಜ್ಞಾನಾರ್ಪಣವು.

ಕ್ರಿಯಾರ್ಪಣದಲ್ಲಿ ಕ್ರಿಯೆ ಪ್ರಧಾನವಾಗಿ ಜ್ಞಾನವು ನ್ಯೂನವಾಗಿರುವದು, ಜ್ಞಾನಾರ್ಪಣದಲ್ಲಿ ಜ್ಞಾನವು ಪ್ರಧಾನವಾಗಿ ಕ್ರಿಯೆ ನ್ಯೂನವಾಗಿರುವದು. ಎರಡು ಒಂದನ್ನೊಂದು ಬಿಟ್ಟಿರುವದಿಲ್ಲ. ಕ್ರಿಯಾಪ್ರಧಾನ ಅರ್ಪಣ ಸಹಜಾಚರಣೆ ಅರ್ಪಣೆ. ಜ್ಞಾನ ಪ್ರಧಾನವಾದುದು ಸಂಬಂಧಾಚರಣೆ ಅರ್ಪಣೆ. ಈ ಸಹಜ ಮತ್ತು ಸಂಬಂಧಗಳ ಜ್ಞಾನವು ಇಲ್ಲದಿದ್ದರೆ ವೀರಶೈವಾಚಾರವನ್ನು ನಡೆಯಿಸುವದು ಸಾಧ್ಯವಿಲ್ಲ.

ವೀರಶೈವನು ವಸ್ತುಗಳ ಸಂಪಾದನೆ ಸಂಸ್ಕರಣಗಳನ್ನು ಶಿವಾರ್ಪಣ ಬುದ್ಧಿಯಿಂದಲೆ ಮಾಡುವವನಾದ್ದರಿಂದ ಶಿವಾರ್ಪಿತವಾದ ದ್ರವ್ಯಗಳು ಶಿವಪ್ರಸಾದವನ್ನೆ ಉಂಟುಮಾಡುವವು.

ಕ್ರಿಯಾರ್ಪಣೆಗೆ ಬರುವ ವಸ್ತುಗಳು ಸ್ಥೂಲ, ಸೂಕ್ಷ್ಮ, ಆನಂದ ಎಂಬ ನಾಮಗಳ ಮೂರು ದ್ರವ್ಯಗಳ ಘಟಕವಾಗಿರುವವು. ಈ ಮೂರು ಸ್ವರೂಪಗಳು ರೂಪ, ರುಚಿ, ತೃಪ್ತಿ ಎಂದು ಕರೆಯಿಸಿಕೊಳ್ಳುವವು ಆದ್ದರಿಂದ.......

ಬಹಿರಂಗದ ಸ್ಥೂಲಶರೀರದಲ್ಲಿ ಸ್ಥೂಲದ್ರವ್ಯವಾದ ರೂಪವನ್ನು ಇಷ್ಟಲಿಂಗಕ್ಕೆ ಅರ್ಪಿಸುವನು. ಅಂತರಂಗದ ಸೂಕ್ಷ್ಮಶರೀರದಲ್ಲಿ ಸೂಕ್ಷ್ಮದ್ರವ್ಯವಾದ ರುಚಿಯನ್ನು ಪ್ರಾಣಲಿಂಗಕ್ಕೆ ಅರ್ಪಿಸುವನು. ಆತ್ಮಾಂಗದ ಕಾರಣ ಶರೀರದಲ್ಲಿ ಆನಂದ ದ್ರವ್ಯವಾದ ತೃಪ್ತಿಯನ್ನು ಭಾವಲಿಂಗಕ್ಕೆ ಅರ್ಪಿಸುವನು. ಈ ಅರ್ಪಣದಿಂದ ಉಂಟಾಗುವ ಶುದ್ಧಿ-ಸಿದ್ಧಿ-ಪ್ರಸಿದ್ಧಿ ಪ್ರಸಾದಗಳನ್ನು ಭೋಗಿಸಿ ಪ್ರಸಾದ ಸ್ವರೂಪನಾಗುವದು. ಇದು ಸಹಜಾಚರಣೆ.

ಇನ್ನೂ ಜ್ಞಾನ ಸಮತಾರ್ಪಣೆಯ ಪ್ರಸಾದ ಪ್ರಾಪ್ತಿಸಂಬಂಧಾಚರಣೆಯಲ್ಲಿ ಹೀಗಿದೆ.

ಕ್ರಮವಾಗಿ ತಿಳಿಯಬೇಕು ಆತ್ಮನು :-

ಶ್ರದ್ಧೆ	ನಿಷ್ಠೆ	ಅವಧಾನ	ಅನುಭವ	ಆನಂದ	ಸಮರಸ

ಈ ಆರು ಭಕ್ತಿಯುಕ್ತನಾಗಿ

ಭಕ್ತ	ಮಹೇಶ	ಪ್ರಸಾದಿ	ಪ್ರಾಣಲಿಂಗಿ	ಶರಣ	ಐಕ್ಯ

ಈ ಆರು ಲಿಂಗಸ್ಥಳಗಳಲ್ಲಿದ್ದು

ಸಂಚಿತ್ತ	ಸುಬುದ್ಧಿ	ನಿರಹಂಕಾರ	ಸು ಮನಸ್ಸು	ಸುಜ್ಞಾನ	ಸದ್ಭಾವ

ಈ ಆರು ಹಸ್ತಗಳಿಂದ

ಪರಿಮಳ ಪದಾರ್ಥ	ಮದುರಾದಿ ಪದಾರ್ಥ	ಶ್ವೇತಾದಿವರ್ಣ ಪದಾರ್ಥ	ಮೃದುಕಠಿಣ ಪದಾರ್ಥ	ಶಬ್ದನಾದ ಪದಾರ್ಥ	ಪರಿಣಾಮ ಪದಾರ್ಥ

ಈ ಆರು ಪದಾರ್ಥಗಳನ್ನು

ಕ್ರಿಯಾಶಕ್ತಿ	ಜ್ಞಾನಶಕ್ತಿ	ಇಚ್ಛಾಶಕ್ತಿ	ಆದಿಶಕ್ತಿ	ಪರಾಶಕ್ತಿ	ಚಿಚ್ಛಕ್ತಿ

ಈ ಆರು ಶಕ್ತಿಯುಕ್ತಗಳಾದ

ಆಚಾರಲಿಂಗ	ಗುರುಲಿಂಗ	ಶಿವಲಿಂಗ	ಚರಲಿಂಗ	ಪ್ರಸಾದಲಿಂಗ	ಮಹಾಲಿಂಗ

ಈ ಆರುಲಿಂಗಳಿಗೆ

ನಾಶಿಕ	ಜಿಹ್ವೆ	ನೇತ್ರ	ತ್ವಕ್	ಶ್ರೋತ್ರ	ಹೃದಯ

ಈ ಆರು ಲಿಂಗಮುಖಗಳಲ್ಲಿ

ಅರ್ಪಿಸಿ

ಗಂಧ ಪ್ರಸಾದ ರಸಪ್ರಸಾದ ಸ್ಪರ್ಶಪ್ರಸಾದ ಶಬ್ದಪ್ರಸಾದ ತೃಪ್ತಿಪ್ರಸಾದ ಈ ಆರು ಬಗೆಯ ಪ್ರಸಾದ ಸೇವಿಸಿ ತೃಪ್ತಿಯಲ್ಲಿ ನಿಬ್ಬೆರಗೆ ಹೊಂದುವನು, ಇದು ಸಂಬಂಧಾಚರಣೆಯ ಅರ್ಪಣ.

ಅರ್ಪಣ ವಿಧಾನದಲ್ಲಿ ಭಕ್ತಿಯು ಸರ್ವತ್ರ ಪ್ರಾಣವಾಗಿರುವದು ಭಕ್ತಿಯು ಸಾರ ಮಧ್ಯದಲ್ಲಿ ತೃಪ್ತಿಯು ಭಾಗವಿದೆ. ಅರ್ಪಣ ಪ್ರಸಾದ ವಿಷಯದಲ್ಲಿ ಇನ್ನೂ ಹಲವು ಸೂಕ್ಷ್ಮ ವಿಚಾರಗಳನ್ನು ಸಚ್ಛಿಷ್ಯನು ಗುರು ಮುಖದಿಂದಲೇ ಅರಿತು ಅಭ್ಯಸಿಸಬೇಕು, ಸಮುದಾಯದಲ್ಲಿ ವಿವರಿಸಲು ಪ್ರಯೋಜನವಾಗದು.

ಶ್ರೀಗಳ ನಿರೂಪಣ ಮುಕ್ತಾಯವಾದ ಬಳಿಕ ಸಾಧಕ ಶಿವಯೋಗಿಯೊಬ್ಬರು ವಂದನಾರ್ಪಣೆ ಮಾಡುತ್ತ ಷಡ್ ವಿಧ ವಿಷಯಗಳನ್ನು ಷಣ್ಮುಖಗಳಲ್ಲಿ ಅರ್ಪಿಸಿಕೊಳ್ಳಲು ಲಿಂಗವು ಷಣ್ಮುಖ ಲಿಂಗವಾಯಿತು. ಅದು ಷಡ್ ವಿಧ ಪ್ರಸಾದಗಳ ಕೊನೆಯಲ್ಲಿ ತೃಪ್ತಿ ಪ್ರಸಾದವಿತ್ತಂತೆ. ಆ ಷಣ್ಮುಖಲಿಂಗವೇ ಪ್ರತ್ಯಕ್ಷ ಷಣ್ಮುಖ ಶಿವಯೋಗಿಯಾಗಿ ಅರ್ಪಣ ಸದ್ಭಾವದ ಅಂಶವನ್ನು ನಿರೂಪಿಸಿ ತೃಪ್ತಿ ಪಡಿಸಿದ್ದಾರೆ. ಅವರ ಶ್ರೀಪಾದಕ್ಕೆ ನಮೋ ನಮೋ ಎಂದು ಗೋಷ್ಠಿಯಲ್ಲಿದ್ದವರಿಗೆ ಕೊಂಚ ಹರ್ಷ ವಿನೋದವನ್ನೊದಗಿಸಿ ವಂದಿಸಿದರು.

ಮತ್ತೊಬ್ಬ ಶರಣರು ಶಿವಯೋಗಿಗಳು ಷಟಸ್ಥಲ ಜ್ಞಾನದ ಮಹಾಜ್ಯೋತಿ ಷಟ್‌ಸ್ಥಲ ಜ್ಞಾನಿ ಚೆನ್ನಬಸವಣ್ಣನವರು ಷಣ್ಮುಖದೇವನ ಅವತಾರವೆಂದು ಪ್ರತೀತಿ ಇದೆ. ಆ ಚೆನ್ನಬಸವಣ್ಣನವರ ಅಪರಾವತಾರವೇ ಷಣ್ಮುಖ ಶಿವಯೋಗಿಗಳೆಂದು ನಾಡಿನ ಅನುಭಾವಿಗಳು ನುಡಿಯುವ ನುಡಿ ನಿಜಕ್ಕೂ ನಿಜವಾದುದು. ಅವರ ಶ್ರೀಪಾದಕ್ಕೆ ನಮೋ ಎನ್ನುವೆ" ಸರ್ವ ಶ್ರೋತೃಗಳು ಕರತಾಡನ ಮಾಡಿ ಹರ್ಷ ಸೂಚಿಸಿದರು.

ವೆಂಕಟಪ್ಪ ನಾಯಕರ ವೈಯಕ್ತಿಕ ಬಿನ್ನಹದಂತೆ ಷಣ್ಮುಖಶಿವಯೋಗಿಗಳು ಅರಮನೆಗೆ ದಯಮಾಡಿಸಿ ರಾಣಿಯರಿಂದ ಕಾಣಿಕೆ ಸ್ವೀಕರಿಸಿ ಆಶೀರ್ವದಿಸಿ ಬಂದರು ಆರನೆಯ ದಿವಸ ಸಕಲರ ಸಮುದಾಯ ದಿಂದ ಬೀಳ್ಕೊಂಡು ಸರಂಜಾಮು ಸನ್ನಾಹದಲ್ಲಿ ಜೇವರಗಿಗೆ ಬಂದರು,

ಶ್ರೀ ಅಖಂಡೇಶ್ವರಾಯನಮಃ

ನಿರವಲಯ ಲಿಂಗೈಕ್ಯ

ಒಂದು ಮತದ ಒಬ್ಬ ವಿಭೂತಿ ಪುರುಷನ ಪ್ರಭಾವ ಹೆಚ್ಚಿದರೆ ಇನ್ನೊಂದು ಮತದವರು ಅಸೂಯೆ ಪಡುವದು ದ್ವೇಷಿಸುವದು ಭಾರತ ದೇಶದ ದುರ್ದೈವಕ್ಕೊಂದು ನಿದರ್ಶನ. ಷಣ್ಮುಖ ಶಿವಯೋಗಿಗಳ ಹೆಸರು ನಾಡಿನಲ್ಲೆಲ್ಲ ಬೆಳಗಿತು. ಅವರನ್ನು ಆರಾಧಿಸುವ ಅಭಿಮಾನಿಸುವ ಜನ ಎಲ್ಲಿ ಹೋದರೂ ಕಂಡು ಬಂದರು. ಸುರಪುರದ ಅರಸರೋಲಗದಲ್ಲಿ ಅವರಿಗೆ ಸನ್ಮಾನ ಸತ್ಕಾರಗಳು ಜರುಗಿದವು. ಇದರಿಂದ ಹಲವರು ಮತ್ಸರ ತಾಳಿದುದರಲ್ಲಿ ಆಶ್ಚರ್ಯವಿಲ್ಲ. ಕೆಲವರು, ಸಂಗಾವಿ ಸಂಗಪ್ಪನೆಂಬ ಮೂಢ ಕಂಗಾಲ ಲಿಂಗಾಯತನಿಗೆ ಬಹಳಷ್ಟು ಹಣ ಕೊಡಮಾಡಿ, ಸ್ವಾಮಿಗಳನ್ನು ಆಮಂತ್ರಿಸಿ ವಿಷವನ್ನು ಉಣ್ಣಿಸಲು ಪ್ರೇರೇಪಿಸಿದರು. ಹಣವೆಂದರೆ ಹೆಣ ಬಾಯಿ ತೆಗೆಯುವ ದೆಂಬುದು ಸುಳ್ಳಲ್ಲ ದೇವರಿಗೆ ಅಂಜದ ಪಾಪಕ್ಕೆ ಹೇಸದ ಆ ದುಷ್ಕರ್ಮಿ ಶಿವಯೋಗಿಗಳಿಗೆ ಬಿನ್ನಹ ಮಾಡಿ ಮನೆಯಲ್ಲಿ ಲಿಂಗಾರ್ಚನೆ ಮಾಡಿಸಿ ವಿಷಬೆರಸಿದ ಅಡುಗೆಯನ್ನು ಹೆಂಡತಿಯಿಂದ ಎಡೆ ಮಾಡಿಸಿದನು. ಶ್ರೀಗಳು ಅದನ್ನುಂಡು ಅರಗಿಸಿಕೊಂಡರು. ಆದುಷ್ಟ ದಂಪತಿಗಳು ತಮ್ಮ ಪಾಪಕೃತ್ಯದ ಫಲಕ್ಕೆ ಅಂಜಿ ಅಪ್ಪನವರ ಪಾದದ ಮೇಲೆ ಹೊರಳಾಡಿ ನಿಜ ಹೇಳಿ ಕ್ಷಮೆ ಕೋರಿದರು. ಶಿವಯೋಗಿಗಳು ಕ್ಷಮಿಸಿಬಿಟ್ಟರು.

ದಿನಗಳು ಉರುಳಿದವು ಶಿವಯೋಗಿಗಳ ಶರೀರಕ್ಕೆ ಮುಪ್ಪಾವರಿಸಿತು ಶಕ್ತಿ ಕುಂದಿತು. ನಿತ್ಯದ ಲಿಂಗಾರ್ಚನೆಯನ್ನು ನಿಲ್ಲಿಸಿರಲಿಲ್ಲ. ಹೊರದಿನ ಬಿನ್ನಹ ಸ್ವೀಕರಿಸುವದನ್ನು ಸಂಚರಿಸುವದನ್ನು ಬಿಟ್ಟಿದ್ದಾರೆ. ಭಕ್ತರ ಸಂದರ್ಶನದ ವೇಳೆಯೂ ಮೊಟಕಾಗಿದೆ. ಹೂದೋಟದಲ್ಲಿ ಸ್ವಲ್ಪ ಅಡ್ಡಾಡಿ ಬಂದು ಮಲಗುತ್ತಾರೆ, ಮರಿಷಣ್ಮುಖ ದೇವರು ಅವರ ಯೋಗಕ್ಷೇಮ ನೋಡಿಕೊಂಡು ಸೇವೆ ಮಾಡುತ್ತಾರೆ.

ಮರಿಷಣ್ಮುಖ ದೇವರು ಮುಂದೆವಾಲಿಯ ಚೆನ್ನಯ್ಯ, ಶಿವಮ್ಮ

ಎಂಬ ಸುಶೀಲ ಸತ್ಕ್ರಿಯಾ ನಿರತ ತಂದೆ ತಾಯಿಗಳಲ್ಲಿ ಜನಿಸಿದವರು. ಈ ದಂಪತಿಗಳಿಗೆ ಹುಟ್ಟಿ-ಹುಟ್ಟಿದ ಮಕ್ಕಳೆಲ್ಲ ಬಾಳದೆ ಮರಣವನ್ನಪ್ಪುತ್ತಿದ್ದವು. ಶಿವಮ್ಮ ತಾಯಿ ಒಮ್ಮೆ ಇನ್ನೂ ಹುಟ್ಟುವ ಗಂಡು ಮಗುವನ್ನು ಜೇವರಗಿಯ ಅಖಂಡೇಶ್ವರ ಮಠಕ್ಕೆ ಕೊಡುವದಾಗಿ ಹರಕೆ ಹೊತ್ತು ಭಾಷೆ ತೊಟ್ಟಳು. ಈ ಹರಕೆಯ ಮಗುವಾಗಿ ಬಂದವರು ಈ ಕುಮಾರರು ಬಾಲಕ ಐದಾರು ವರ್ಷದವನಾದಾಗ ತಂದೆ-ತಾಯಿಗಳು ಷಣ್ಮುಖಸ್ವಾಮಿಗಳಿಗೆ ಅವನನ್ನು ಅರ್ಪಿಸಿದರು ಆಕರ್ಷಕವಾದ ಬಾಲಕನ ರೂಪ, ಬುದ್ಧಿ, ವಾಣಿಗಳಿಗೆ ಸ್ವಾಮಿಗಳು ಮೆಚ್ಚಿಕೊಂಡರು. ಅವರಿಗೆ ವಿದ್ಯಾ-ಬುದ್ಧಿಗಳನ್ನು ಕಲಿಸಿ ನೀತಿಯುತನನ್ನಾಗಿ ಮಾಡಿದರು. ಷಟ್‌ಸ್ಥಲ ಶಾಸ್ತ್ರದಲ್ಲಿಯೂ ಪರಿಣಿತಗೊಳಿಸಿದರು. 'ಗುರು' ಅಖಂಡೇಶ್ವರರು ತಮ್ಮನ್ನು ಹೇಗೋ ಹಾಗೆ ಈ ಕುಮಾರನನ್ನು ಪೋಷಿಸಿದ್ದರು. ಪ್ರಬುದ್ಧನನ್ನಾಗಿ ಮಾಡಿದ್ದರು. ದೊಡ್ಡವನಾದಂತೆ ಅವನ ಗುಣಶೀಲಗಳು ಭಕ್ತರ ಸಮುದಾಯಕ್ಕೆ ಹರ್ಷ ತರುವಂತವಾದವು. ಶಿವಯೋಗಿಗಳು ಈತನೇ ತಮ್ಮ ಉತ್ತರಾಧಿಕಾರಿಯೆಂದು ಗೊತ್ತು ಮಾಡಿ ಸಾಧಿಕರಣ ದೀಕ್ಷೆಯಲ್ಲಿನ ಚಿನ್ಮಯ [ಅನುಗ್ರಹ] ದೀಕ್ಷಾ ಸಂಸ್ಕಾರವನ್ನಿತ್ತು ಮರಿಷಣ್ಮುಖಸ್ವಾಮಿ ಎಂದು ನಾಮಕರಣ ಮಾಡಿದರು. ಮರಿದೇವರೂ ಗುರುಗಳಲ್ಲಿ ನಿಸ್ಸೀಮ ಭಕ್ತಿಯುಳ್ಳವರು ಒಂದು ಕ್ಷಣವೂ ಗುರುಗಳಿಗೆ ತೊಂದರೆಯಾಗದಂತೆ ಅವರಿಗೆ ಊರುಗೋಲಾಗಿ ಅವರ ಸೇವೆಯನ್ನು ಮಾಡುತ್ತಿದ್ದರು. ಗುರುಬಾಂಧವರ ಮೂಲಕ ಮಠದ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದರು. ಹಿರಿಯ ಮತ್ತು ಕಿರಿಯ ಈ ಉಭಯ ಷಣ್ಮುಖಶಿವಯೋಗಿಗಳ ಜೋಡಿಯನ್ನು ಲೋಕವನ್ನುದ್ಧರಿಸ ಬಂದ ವರಗುರು ಪರಮ ಶಿಷ್ಯರೆಂದು ಜನರು ಕೊಂಡಾಡುತ್ತಿದ್ದರು.

ಷಣ್ಮುಖಶಿವಯೋಗಿಗಳಿಗೆ ಲೌಕಿಕ ಭಾವಕುಂದುತ್ತ ಬಂದಿತ್ತು. ಕೊನೆಯ ಎರಡು ವರ್ಷಗಳಲ್ಲಿ ಅವರು ಬಹುಶಃ ಅಂತರ ಮುಖರಾಗಿಯೇ ಇರುತ್ತಿದ್ದರು. ಲಿಂಗ ಸಂಯೋಗಸುಖ ಅನುಭವಿಸುತ್ತಿದ್ದರು.

ಮನ-ಮಾತು-ಭಾವಗಳಲ್ಲಿ ಸಾಮರಸ್ಯ ಸುಖದ ಅಲೆಗಳುಂಟಾಗಿ ಅವು ಹೊಸ ಇಲ್ಲವೆ ಈ ಮೊದಲಿನ ವಚನಗಳಾಗಿ ತಮ್ಮಷ್ಟಕ್ಕೆ ತಾವು ಬರುತ್ತಿದ್ದವು. ಆ ಆನಂದದಲ್ಲಿ ಯಾರಿಲ್ಲದೆ ನಗುವರು. ಅಖಂಡೇಶ್ವರಾ ನೀನು ಗುರು, ತಂದೆ ನಾನು ಗುರುಪುತ್ರ ನಿಜ. ಆದರೆ ನೀನು ಮಗ ಅಲ್ಲವೇನು? ನಾನು ನಿನ್ನ ತಾಯಿಯಲ್ಲವೇನು ? ಆ ವಿಚಿತ್ರವನ್ನು ಅರಿಯೆಯಾ? ನೋಡಿರೆ ನೋಡಿರೆ ಒಂದು ವಿಚಿತ್ರವ

ಶಿಷ್ಯನೆಂಬ ಹೆಂಡತಿಯು ಶ್ರೀಗುರುವೆಂಬ ಗಂಡನು
ಹಸ್ತ ಮಸ್ತಕ ಸಂಯೋಗವೆಂಬ ಕೂಟವ ಕೂಡಲು
ಜಿಹ್ವೆಯೆಂಬ ಮೇದ್ರದಲ್ಲಿ ಷಡಕ್ಷರ ಮಂತ್ರವೆಂಬ ವೀರ್ಯವು
ಚಲನೆಯಾಗಿ ಆ ಶಿಷ್ಯನೆಂಬ ಹೆಂಡತಿಯು ಕರ್ಣವೆಂಬ ಗರ್ಭ
ಪ್ರವೇಶವಾಗಲು ಮನಬಸುರಾಗಿ ಕಂಗಳೆಂಬ ಯೋನಿಯಲ್ಲಿ
ಲಿಂಗವೆಂಬ ಮಗನ ಹಡೆದು ಅಂಗೈಯೆಂಬ ತೊಟ್ಟಿಲಲ್ಲಿಕ್ಕಿ
ಮಂಗಳ ಸೂತ್ರವೆಂಬ ಜೋಗುಳ ಹಾಡಿ
ಅಖಂಡೇಶ್ವರನೆಂಬ ಹೆಸರಿಟ್ಟರು ನೋಡಾ
ಇದು ಕಾರಣ ನಿಮಗವೆನಗೆ ಮಗನಾದಿರಿ
ನಾ ನಿಮಗೆ ತಾಯಾದೆನಯ್ಯಾ
ನಾ ನಿಮ್ಮನ್ನು ಅಂಗೈಯಲ್ಲಿಟ್ಟಿ
ತನುವಿಹ ಪರಿಯಂತರ ನಿಮ್ಮ ಪೂಜಿಸಿದೆನಯ್ಯ
ಮನವಿಹ ಪರಿಯಂತರ ನಿಮ್ಮ ನೆನೆದೆನಯ್ಯ
ಭಾವವಿರು ಪರಿಯಂತರ ನಿಮ್ಮ ಬಯಸಿದೆನಯ್ಯ
ಇಂತಿವೆಲ್ಲವು ನಿಮ್ಮಲ್ಲಿ ಸ್ವಯವಾದ ಬಳಿಕ
ಗಜ ಭುಕ್ತ ಕಪಿತ್ಥದಂತಿರ್ದೆನಯ್ಯಾ ಅಖಂಡೇಶ್ವರಾ

ಒಮ್ಮೊಮ್ಮೆ ಒಂದೆರಡು ದಿವಸಗಳವರೆಗೂ ಬಾಹ್ಯಪ್ರಜ್ಞೆಯಲ್ಲಿರುವರು, ಆಗಲೂ ನಿಜಾನಂದ ಸುಖದ ಹೆಬ್ಬಯಕೆ ಹೆಚ್ಚುತ್ತಿತ್ತು.

ಸಂಗನ ಬಸವಣ್ಣನು ಕಪ್ಪಡಿಯ ಸಂಗಯ್ಯನೊಳಗೆ ಬಯಲಾದನು
ಅಕ್ಕಮಹಾದೇವಿ ಪ್ರಭುದೇವರು ಶ್ರೀಶೈಲ ಕದಳಿಯ
ಜ್ಯೋತಿರ್ಮಯ ಲಿಂಗದೊಳಗೆ ಬಯಲಾದರು.
ಹಡಪದಪ್ಪಣ್ಣ ನೀಲಲೋಚನೆತಾಯಿ ಮೊದಲಾದ ಕೆಲವು
ಗಣಂಗಳು ತಮ್ಮ ಲಿಂಗದಲ್ಲಿ ಬಯಲಾದರು.
ಚೆನ್ನಬಸವಣ್ಣ ಮಡಿವಾಳ ಮಾಚಿದೇವ ಕಿನ್ನರಿಯ ಬ್ರಹ್ಮತಂದೆ
ಮೊದಲಾದ ಉಳಿದ ಗಣಂಗಳು ಉಳಿವೆಯ ಮಹಾಮನೆಯಲ್ಲಿ
ಮಹಾಘನ ಲಿಂಗದೊಳಗೆ ಬಯಲಾದರು
ಇಂತಪ್ಪ ಸಕಲ ಗಣಂಗಳಿಗೆ ಆಯಾಯ ಸ್ಥಾನದಲ್ಲಿ ನಿರವಯಲ
ಪದವ ಕರುಣಿಸಿ ಕೊಟ್ಟಾಗ ನೀನೊಬ್ಬನಲ್ಲದೆ ಮತ್ತಾರನು ಕಾಣೆನಯಾ
ಇಂತಪ್ಪ ಸಕಲ ಗಣಂಗಳ ತೊತ್ತಿನ ಮಗನೆಂದು
ಎನ್ನನೆತ್ತಿಕೊಂಡು ಸಲಹಿದಿರಾಗಿ
ಎನಗೆ ನಿಜೈಕ್ಯ ನಿರವಯಲ ಪದವೆಲ್ಲಿಹುದೆಂದೊಡೆ
ಉತ್ಪತ್ತಿ ಸ್ಥಿತಿ, ಪ್ರಳಯಂಗಳಿಗೆ ಹೊರಗಾದ
ನಿಮ್ಮ ಪರಾತ್ಮರ ಪರಮಹೃದಯ ಕಮಲ ಕರಣಿಕವಾಸಮಧ್ಯ
ಸೂಕ್ಷ್ಮ ಬಯಲೊಳಗೆನ್ನ ನೀವಯಲ ಮಾಡಿಕೊಳಯ್ಯ
ಅಖಂಡೇಶ್ವರಾ

ಒಂದು ಮುಂಜಾವು ಷಣ್ಮುಖ ಶಿವಯೋಗಿ ಅಜ್ಜನವರು ಮರಿದೇವರನ್ನು ಕರೆದು ಹೇಳಿದರು. ಕಲಬುರ್ಗಿ ಗದ್ದಿಗಿ ಮಠದ ರೇವಣಸಿದ್ಧ ಶಿವಯೋಗಿ ಬಂಕಾಪುರದ ಹೊಸಪೇಟಿ ಶ್ರೀಗಳು ಯಾದಗಿರಿ ಶಾಂತವೀರ ಯತಿಗಳು ಫಿರೋಜಾಬಾದದ ಮಹದೇವ ಸ್ವಾಮಿಗಳು, ಯಾದವಾಡದ ಚೌಕಪ್ಪನವರು, ಮುದ್ದೇಬಿಹಾಳದ ಶಿವಬಸವ ಸ್ವಾಮಿಗಳು, ಇಜೇರಿಯ ಗುಂಡಪಾರ್ಯರು ಇವರೆಲ್ಲರು ಒಂದು ದಿನ ಕೂಡುವಂತೆ ಸನ್ಮಾನ ಪೂರ್ವಕ ಕರೆಯಿಸಬೇಕು ಎಂದು ಅಪ್ಪಣೆ ಮಾಡಿದರು. ಮರಿದೇವರು ಜಾಗ್ರತೆಯಿಂದ ಯೋಜನೆ ಮಾಡಿ ಎಲ್ಲರನ್ನು ಕರೆಯುಕಳುಹಿದರು. ಗೊತ್ತು ಮಾಡಿದ ದಿನಕ್ಕೆ ಅವರೆಲ್ಲರು ಆಗಮಿಸಿದರು, ಮಹಿಮಾತ್ಮರೆಲ್ಲರು ಕೂಡಿದ ಇದೊಂದು ಹಬ್ಬದ ದಿನವೆಂದು ಜೇವರ್ಗಿ ಭಕ್ತರು ಅವರ ಸೇವೆ

ಮಾಡಿದರು. ಹಿರಿಯ ಶಿವಯೋಗಿಗಳು ಅವರೆಲ್ಲರೊಡನೆ ಪ್ರಸಾದ ಸ್ವೀಕರಿಸಿ ನಲಿ ನಲಿದಾಡಿ ಪರಿಸಂತೋಷಗೊಂಡರು.

ಬಳಿಕ ಸದರಿನಲ್ಲಿ ಆ ಪೂಜ್ಯರುಗಳನ್ನು ಜೇವರಗಿಯ ಹಿರಿಯಭಕ್ತರನ್ನು ಒಳಗೊಂಡ ಸಭೆ ಮಾಡಿ ಮಧ್ಯದಲ್ಲಿ ತಾವು ಸಿಂಹಾಸನದಲ್ಲಿ ಕುಳಿತು ನೀಡಿದ ಸಂದೇಶವು ಮನೋವೇದಕವೂ ಹೃದಯದ್ರಾವಕವೂ ಆಗಿತ್ತು. ಅದರ ಸಾರಾಂಶ ಇದು.

"ಪೂಜ್ಯರಾದ ಹರ-ಗುರು ಮೂರ್ತಿಗಳೆ ಪರಮಾನುಭಾವಿ ಶರಣರೆ ಸದ್‌ಭಕ್ತರೆ, ಇನ್ನು ನಾವು ನಿಜಲಿಂಗೈಕ್ಯವಾಗುವ ಸಮಯ ಸನ್ನಿಹಿತವಾಗಿದೆ. ಪೂಜ್ಯರೆ ಒಲಿದು ಅನುಗ್ರಹಿಸಿ ಆದೇಶಿಸಬೇಕು. ಭಕ್ತರು ಹರ-ಗುರುಗಳಲ್ಲಿ ಭಕ್ತಿಯನ್ನಿರಿಸಿ ಸತ್ಯಶುದ್ಧಕಾಯಕದಿಂದ ತಮ್ಮ ಜೀವನ ಪಾವನಗೊಳಿಸಬೇಕು ನಾಳೆಯೇ ಮರಿದೇವರಿಗೆ ನಿರಂಜನ ಪೀಠಾಧಿಕಾರ ಪ್ರದಾನ ಏರ್ಪಡಿಸಬೇಕು, ಅವರು ಜ್ಞಾನಿಗಳು ಅವರ ಹೃದಯ ವಿಶಾಲ ಪರಿಪೂರ್ಣದಯಾವಂತರು, ನೀವೆಲ್ಲ ಅವರಲ್ಲಿ ಭಕ್ತಿಯನ್ನಿರಿಸಿ ಜ್ಞಾನಕ್ರಿಯೆಗಳ ಸಾಧನೆಗೆ ಮಾರ್ಗದರ್ಶನ ಪಡೆಯಬೇಕು,

ಭಕ್ತರ ಸಮುದಾಯದಲ್ಲಿ ಕಳವಳದ ಉದ್ಗಾರ ಕೇಳಿ ಬಂದವು, ಹಲವರು ಉತ್ಕಂಠಿತರಾದರು. ಕಣ್ಣೀರುದಿರಿಸಿದರು. ಶಿವಯೋಗಿಗಳು ಲಕ್ಷಿಸಿದರು ವ್ಯಥೆಗೆ ಕಾರಣವಿಲ್ಲ ಸಂತೋಷ ಪಡಬೇಕು. ಶಿವಯೋಗಿ ಬಂದಿಲ್ಲ ಹೋಗುವದಿಲ್ಲ ಎಂದಿಗೂ ಇದ್ದವನೇ ನಾವು ಅಖಂಡೇಶ್ವರನೊಡನೆಯೇ ನಿಜಸಮಾಧಿಯಲ್ಲಿರುವೆವು. ಬೇಗ ಕಾರ್ಯ ತತ್ಪರರಾಗಿರಿ ಶಿವನು ಮಂಗಲವನ್ನಿಯಲಿ ನಿಶ್ಚಿತವಾಗಿ ನುಡಿದುಬಿಟ್ಟರು.

ಬರುವ ಮಹನೀಯರೆಲ್ಲ ಬಂದೇ ಇದ್ದರು. ಕಾರ್ಯಕ್ರಮಗಳಿಗೆ ಭಕ್ತರು ಸನ್ನದ್ಧರಿದ್ದರು ಮರಿಷಣ್ಮುಖದೇವರಿಗೆ ಚರಪಟ್ಟಾಭಿಷೇಕೋತ್ಸ

ವವೂ ಅವರ ಶೂನ್ಯಸಿಂಹಾಸನಾರೋಹಣವು ಅವಸರಕ್ಕೆ ತಕ್ಕಪ್ರಮಾಣ ದಲ್ಲಿ ವೈಭವದಿಂದಲೇ ಜರುಗಿದವು. ಸಭೆಗೆ ಶಿವಯೋಗಿ ಅಜ್ಜನವರು.

ನಿಮ್ಮ ಪೂಜಿಸಿಹೆನೆಂದಡೆ ತನುವಿಲ್ಲವಯ್ಯ ಎನಗೆ,
ಅದೇನು ಕಾರಣವೆಂದಡೆ ಆ ಪೂಜಿಸುವತನು ನೀವೆ ಆದಿರಾಗಿ
ನಿಮ್ಮ ನೆನೆದಿಹೆನೆಂದಡೆ ಮನವಿಲ್ಲವಯ್ಯ ಎನಗೆ
ಅದೇನು ಕಾರಣವೆಂದಡೆ ಆ ನೆನೆವ ಮನ ನೀವೆ ಆದಿರಾಗಿ
ನಿಮ್ಮ ಅರಿದಿಹೆನೆಂದಡೆ ಅರಹು ಇಲ್ಲವಯ್ಯ ಎನಗೆ
ಅದೇನು ಕಾರಣವೆಂದೊಡೆ ಆ ಅರಹು ನೀವೆ ಆದಿರಾಗಿ
ಅಖಂಡೇಶ್ವರಾ ನಿಮ್ಮೊಳಗೆ ನಾನು
ಉರಿಯುಂಡ ಕರ್ಪುರದಂತಿರ್ದೆನಯ್ಯಾ ದೇವರ ದೇವಾ

ಮಾರುದಿನ ಬೆಳಿಗ್ಗೆ ಕೆಲವು ನಿಮಿಷ ಮತ್ತೆ ಪ್ರಕೃತಕ್ಕೆ ಬಂದಂತೆ ಕಂಡರು ಕಂಠದಲ್ಲಿಯೇ ಈ ವಚನ ಗುಣುಗುಡುತ್ತಿದ್ದರು.

ಮನ ಮಹಾಘನವಾಯಿತು
ಭಾವ ನಿರ್ಭಾವವಾಯಿತು
ಬೆರಡು ನಿಬ್ಬೆರಗಾಯಿತು
ನೆನಹು ನಿಷ್ಪತ್ತಿಯಾಯಿತು
ಅರಹುಕರಗಿ ನಿರವಯಲಾಗಿತ್ತಾಗಿ
ಅಖಂಡೇಶ್ವರನೆಂಬ ಶಬ್ದ ಮುಗ್ಧವಾಯಿತು

ಅನಂತರ ಧನಿ ಅಡಗಿದ್ದು ಅಡಗಿಬಿಟ್ಟಿತು.

ಪರಸ್ಥಳ ಪೂಜ್ಯ ಅತಿಥಿಗಳಲ್ಲಿ ಕೆಲವರು ಮರಳಿಹೋಗಿದ್ದರು. ಕೆಲವರು ಶಿವಯೋಗಿಗಳ ಕರಣವಡಗಿದ ಭಾವ ಶೂನ್ಯ-ಜ್ಞಾನಶೂನ್ಯ ಸ್ಥಲಗಳಲ್ಲಿಯ ಅವಿರಲ ಐಶ್ವದ ವೈಭವವನ್ನು ಕಾಣುತ್ತ ಆ ಬೇಗಿನಲ್ಲಿ ಅನುಭಾವ ಭರಿತರಾಗಿ ಉಳಿದಿದ್ದರು,

ನೂತನ ಶಿವಯೋಗಿಗಳೂ ಉಳಿದ ಅವರ ಸಹಚರ್ಯದ ಸಾಧಕ ಶಿವಗೋದಿಗಳೂ ಎಡೆಬಿಡದೆ ಅಜ್ಜನವರ ಶರೀರದ ನಿರ್ಮಲತೆ ಪಾವಿತ್ರತೆ ಗಳನ್ನು ಕಾಪಾಡಿಕೊಂಡಿದ್ದರು. ಸೇವೆ ಮಾಡಿ ಧನ್ಯರಾಗುತ್ತಿದ್ದರು,

ಷಣ್ಮುಖಶಿವಯೋಗಿಗಳು ಅಖಂಡ ಮಹಾ ಬಯಲಿ ಬೆರೆದು ಬಯಲಾಗಿ ಹೋದರು ನಿರವಯಲರಾದರು ನಿರ್ವಚನರಾದರು.

ಶಿವಯೋಗಿಗಳ ಮಂತ್ರಮಯ ದೇಹಕ್ಕೆ ಶಿಷ್ಯೋತ್ತಮರು ಸ್ವಚ್ಛವಾಗಿ ಸ್ನಾನ ಮಾಡಿಸಿ ಸರ್ವ ಶಿವಲಾಂಛನಗಳನ್ನು ತೊಡಿಸಿ ಧರಿಸಿ ಅಲಂಕರಿಸಿದರು. ಸದರಿನಲ್ಲಿಯ ಮಂಟಪ ಪೀಠದಲ್ಲಿ ದರ್ಶನಾರ್ಥಿಗಳ ಸಲುವಾಗಿ ಕೂಡ್ರಿಸಿದರು. ಮಂತ್ರ ಪಠಣ ಭಜನೆಗಳು ಅಖಂಡವಾಗಿ ನಡೆದವು. ಊರಿಗೆ ಊರೇ ಬಂದು ತೇವುಗಣ್ಣುಗಳಲ್ಲಿ ಕಂಡು ಕೈಮುಗಿದು ಉಸಿರ್ಗರೆಯಿತು. ಶಿವಯೋಗಿಗಳ ಈ ಲಿಂಗೈಕ್ಯದ ವಾರ್ತೆ ವೇಗವಾಗಿ ಆ ಪ್ರಾಂತದಲ್ಲೆಲ್ಲ ಹರಡಿತು. ಅವರ ಅಂತ್ಯ ದರ್ಶನಕ್ಕೆ ಎಲ್ಲೆಡೆಗಳಿಂದ ತಂಡ ತಂಡವಾಗಿ ಜನರು ತೆರಪಿಲ್ಲದೆ ಬಂದರು. ದೊಡ್ಡ ಜಾತ್ರೆ ನೆರೆದಂತಾಯಿತು. ಅದು ಮಹಾ ವಿಭೂತಿಯ ಪರಂಧಾಮ ಯಾತ್ರೆಯೇ ಆಗಿತ್ತು. ಪೀಠಾರೋಹಣಕ್ಕೆ ಬಂದಿದ್ದ ಮಂತ್ರಿ ವೀರಭದ್ರಪ್ಪ ನಿನ್ನೆಯೇ ಸಂರಪುರಕ್ಕೆ ಹೋಗಿದ್ದನು. ಗುರುಗಳ ಈ ಅಂತಿಮ ವಾರ್ತೆಯನ್ನು ಕೇಳಿ ಕಳವಳಿಸಿ ದುಃಖದಿಂದ ಬಂದನು,

ಜನರ ದಟ್ಟಣೆಯನ್ನು ನಿಯಂತ್ರಿಸಿ ಶಿಸ್ತಿನಿಂದ ದರ್ಶನ ಪಡೆಯುವಂತೆ ವ್ಯವಸ್ಥೆ ಮಾಡಿದ್ದರು. ಪೂಜೆ ಮಂಗಲಾರುತಿಗಳು ಎಡೆಬಿಡದೆ ನಡೆದವು. ಮಹಾಯೋಗಿಯ ಅಂತ್ಯದರ್ಶನಕ್ಕೆಂದು ಪೂಮಾಲೆ, ಕರ್ಪೂರದೊಡನೆ ಜನ ಇಡೀ ದಿನ ಬಂದೇ ಬರುತ್ತಿದ್ದರು. ಪ್ರಸಾದ ಸಂತರ್ಪಣೆ, ದಾನಗಳು ನಡೆದಿದ್ದವು.

ಸಂಧ್ಯಾ ಸಮಯದಲ್ಲಿ ಹರ-ಗುರು-ಚರಮೂರ್ತಿಗಳು ಸಿದ್ಧವಾದ ಸಮಾಧಿಯಲ್ಲಿ ಪುಣ್ಯಮಯ ಪಾರ್ಥಿವ ಶರೀರವನ್ನು ಭಸ್ಮದ ಘಟ್ಟಿಗಳ ನಡುವೆ ಸಮಾಧಿಗೊಳಿಸಿದರು.

ಷಣ್ಮುಖ ಶಿವಯೋಗಿಗಳ ಪಾರ್ಥಿವ ಶರೀರವು ಅಳಿದರೂ ಅವರು ಬೈಂದ್ಯಾತ್ಮಕ ಶರೀರದಲ್ಲಿ ನಿತ್ಯವಾಗಿ ಉಳಿದಿದ್ದಾರೆ. ವಚನಗಳ ರೂಪ

ದಿಂದ ಅವರ ಅಮರ ವಾಣಿಗಳು ಜಗತ್ತಿನಲ್ಲಿ ಜನರ ತಾತ್ವಿಕ ಜೀವನಕ್ಕೆ ಬೆಳಕು ನೀಡುತ್ತಲಿವೆ. ಈ ಶಿವಯೋಗಿಗಳು ಕೇವಲ ಲೀಲೆಗಳಿಂದ ಮೆರೆದ ಸಿದ್ಧಿಪುರುಷರು ಮಾತ್ರವಲ್ಲ. ಭಕ್ತಿ-ಜ್ಞಾನ-ವೈರಾಗ್ಯಗಳ ತಮ್ಮ ಪರಿಪೂರ್ಣ ಬಾಳಿನಲ್ಲಿ ಷಟ್‌ಸ್ಥಲ ಸಿದ್ಧಾಂತ ಪ್ರಚಾರ ಪಡಿಸಿ ಕಾಪಾಟಿ ಲೋಕೋದ್ಧಾರಗೈದ ವಿಧಾಯ ಕಾರ್ಯಕರ್ತರಿವರು. ಕನ್ನಡ ಸಾಹಿತ್ಯದ ವಿಶೇಷ ಪ್ರಕಾರವಾದ ವಚನಗಳು ತಾತ್ವಿತ ವಿಚಾರಗಳನ್ನು ಹೃದಯದಾಳಕ್ಕೆ ಸುಲಭವಾಗಿ ಮುಟ್ಟಿಸುವ ಸಾಧನವಾಗಿರುವವು. ಶರಣರ ಆ ವಚನ ವಾಙ್ಮಯ ರಚನಾ ಕ್ರಮವನ್ನು ಹದಿನೇಳನೆಯ ಶತಮಾನದ ಆದಿಭಾಗೆಕಲ್ಕ ತಂದು ಪಾರಮಾರ್ಥಿಕ ಪ್ರಪಂಚಕ್ಕೆ ಅಮೌಲ್ಯಕೊಡುಗೆ ಸಲ್ಲಿಸಿದ ಶ್ರೇಷ್ಠ ಆತ್ಮ ಸಾಹಿತಿಗಳಿವರು. ಅವರ ವಚನಗಳು ಅವರಿರುವಾಗಲೇ ಪ್ರತಿಗಳಿಂದ ಪ್ರತಿಗಳಾಗುತ್ತ ನಾಡನಲ್ಲೆಲ್ಲ ಪಸರಿಸಿದವು. ಧಾರ್ಮಿಕ ವಿಧಾನಗಳಲ್ಲಿ ಹಾಸುಹೊಕ್ಕಾಗಿ ಬಳಕೆಯಲ್ಲಿ ಬಂದವು. ಮನ-ಭಾವಗಳಲ್ಲಿ ಮಾಡಿದ ಈ ಮಹಾಶಿವಯೋಗಿಯ ರೂಪು-ಕ್ರಿಯೆ, ಜ್ಞಾನಗಳ ನೆನಹಿಗೆ ಸಹಸ್ರ ಸಹಸ್ರ ನಮನಗಳು.

ಮಠದ ಮುನ್ನಡೆ

ಮರಿಷಣ್ಮುಖ ಸ್ವಾಮಿಗಳು

ಮರಿ ಷಣ್ಮುಖ ಸ್ವಾಮಿಗಳು (೧೪ ನೆಯ ಪ್ರಕರಣ ನೋಡಿರಿ) ತಮ್ಮ ಗುರು ಷಣ್ಮುಖ ಶಿವಯೋಗಿಗಳು ಇರುವಾಗಲೇ ತಮ್ಮ ಯೋಗ ಸಾಧನೆಯೊಡನೆ ಮಠದ ಆಗು ಹೋಗುಗಳನ್ನು ಭಕ್ತರ ಹಿತಾಭಿವೃದ್ಧಿಯನ್ನು ಗಮನಿಸಿ ನಿರ್ವಹಿಸುತ್ತ ಬಂದಿದ್ದರು. ಅದನ್ನು ಚ್ಯುತಿಯಿಲ್ಲದೆ ಮುಂದುವರೆಸಿದರು.

ನಿಷ್ಠೆಯ ವೀರಭದ್ರಪ್ಪನು ಗುರುಗಳು ಇರುವಾಗಲೆ ಆವರಣದಲ್ಲಿಯ ಭಾವಿಗೆ ಭದ್ರಕಟ್ಟಡ ಕಟ್ಟಿಸಿ ಕೊಟ್ಟಿದ್ದನು. ಅವರು ಲಿಂಗದೊಳ

ಗಾದ ಮೇಲೆ ಅವರ ಗದ್ದುಗೆಯು ಗುಡಿಯ ಮೇಲೆ ಗೋಪುರ ಕಟ್ಟಿಸಿ ಹೊನ್ನ ಕಳಸವಿಟ್ಟನು. ಅದರ ಮೇಲೆ ಈ ಮಂತ್ರಿಯ ಹೆಸರಿದೆ. ಇದಲ್ಲದೆ ಮರಿಷಣ್ಮುಖ ಶಿವಯೋಗಿಗಳ ನೇತೃತ್ವದಲ್ಲಿ ಮಠದ ಕಟ್ಟಡ ಪೂರಕ ರಚನೆ ಗಳನ್ನು ಮಾಡಿಸಿದನು. ಗದ್ದುಗೆ ಪೂಜೆ ನಿರಂತರ ನಡೆಯುವಂತೆ, ವೈಶಾಖ ಬಹುಳ ಪಂಚಮಿಯಿಂದ ಜಾತ್ರೆ ರಥೋತ್ಸವಗಳು ಜರುಗುವಂತೆ ತಕ್ಕ ಉಂಬಳಿ ಗೊತ್ತು ಮಾಡಿ ಶ್ವೇತಛತ್ರ ಹಗಲು ದೀವಟಿಗೆ ಇತ್ಯಾದಿ ಇತ್ಯಾದಿ ಬಿರುದುಗಳೊಡನೆ ಶಾಸನಪತ್ರ ಬರೆಯಿಸಿ, ರಾಜ ಮನ್ನಣೆಯ ಮುದ್ರೆ ಹಾಕಿ ಮರಿಷಣ್ಮುಖ ಶಿವಯೋಗಿಗಳಿಗೆ ಅರ್ಪಿಸಿದನು. ಇವು ಪರಂಪರಾಗ ತವಾಗಿ ಇಂದಿಗೂ ನಡೆದು ಬಂದಿವೆ ಬಾರ [ಮಹಾರಾಷ್ಟ್ರ] ಉಸ್ಮಾನಾ ಜಿಲ್ಲೆ ನೀಲಾಗಾ ತಾಲೂಕಾ ತಾಂಬಾಳವು ಶಿವಭಕ್ತರಿಗಾಗಿ ಹೆಸರಾದದ್ದು ಅಲ್ಲಿ ಭಕ್ತಿಯನ್ನು ನೆಲೆಗೊಳಿಸಿದರು ಷಣ್ಮುಖ ಶಿವಯೋಗಿಗಳು ಅಲ್ಲಿಯೇ ಕೆರೆ–ಮಾವಿನ ಬನಗಳ ತಪೋವನದಲ್ಲಿ ಅವರು ಅನುಷ್ಠಾನ ಗೈದಿದ್ದರು, ಈಗ ಶಿವಾನುಭವ ಪ್ರಸಾರದ ಸಂಚಾರ ಕೈಕೊಂಡು ಮರಿಷಣ್ಮುಖ ಸ್ವಾಮಿ ಗಳು ಅಲ್ಲಿಗೆ ಬಂದು ಅದೇ ಸ್ಥಳದಲ್ಲಿ ಅನುಷ್ಠಾನ ಗೈದರು. ಇವರ ಭವ್ಯ ವ್ಯಕ್ತಿತ್ವ ಅಧ್ಯಾತ್ಮಿಕ ನಿಲುವುಗಳಿಗೆ ಮೆಚ್ಚಿದ ಜನರು ಭಕ್ತಿ ಪ್ರೇಮಗಳಿಂದ ಬಂಧಿಸಿ ಅಲ್ಲಿಯೇ ಉಳಿಸಿಕೊಂಡರು. ಅವರ ಸಮಾಧಿ ಅಲ್ಲಿಯೇ ಆಗಿದೆ ಅಲ್ಲಿ ಮಠ ನಿರ್ಮಾಣವಾಗಿದೆ ಶಿವರಾತ್ರಿ ಜಾತ್ರೆಯಾಗುತ್ತದೆ. ಇತ್ತೀಚೆಗೆ ಷಣ್ಮುಖಸ್ವಾಮಿ ಹಾಯಸ್ಕೂಲ ಆಗಿದೆ.

ರುದ್ರಮುನಿ ಸ್ವಾಮಿಗಳು

ಸಂಗಮ್ಮ ಸಿದ್ಧಮ್ಮ ಎಂಬ ಬಡ ಜಂಗಮ ದಂಪತಿಗಳು ಕಂತೆ ಭಿಕ್ಷೆ ಯಿಂದ ಉಪಜೀವಿಸುತ್ತ ಕೆಲವು ದಿವಸ ಜೇವರಗಿ ಮಠದಲ್ಲಿ ತಂದಿದ್ದರು. ಅವರ ಚಿಕ್ಕ ಮಗುವೊಂದು ಕಿರಿಕಿರಿ ಮಾಡುತ್ತಿದ್ದರಿಂದ ತಾಯಿ ಒಮ್ಮೆ "ಏ ರುದ್ರ ಹೀಗೆ ಹಟಮಾಡಹತ್ತಿದರೆ ನಿನ್ನನ್ನು ಇಲ್ಲಿಯ ಸ್ವಾಮಿಗಳಿಗೆ ಕೊಟ್ಟುಬಿಡುವೆನು ನೋಡು" ಎಂದಳು. ಇದನ್ನು ಕೇಳಿದ ಮರಿ ಷಣ್ಮುಖ

ಶಿವಯೋಗಿಗಳು ಹೊರಗೆ ಬಂದು ನೀನು ನುಡಿದಂತೆ ಆ ಕೂಸನ್ನು ನಮಗೆ ಕೊಟ್ಟು ಬಿಡಮ್ಮ ಎಂದರು. ಶಿವಯೋಗಿಗಳ ಅಪ್ಪಣೆಯೆಂದು ತಂದೆ ತಾಯಿಗಳು ಆ ಮಗು ರುದ್ರನನ್ನು ಅವರ ಪಾದಕ್ಕೆ ಅರ್ಪಿಸಿ ತಮ್ಮ ಊರಾದ ಶಹಾಪುರ ತಾಲೂಕಿನ ಚಿಕ್ಕಗೋಗಿಗೆ ಹೋದರು.

ಸ್ವಾಮಿಗಳು ಆ ಮಗುವನ್ನು ಪೋಷಿಸಿದರು. ವಿದ್ಯೆ ಕಲಿಸಿ ಶಾಸ್ತ್ರಾಭ್ಯಾಸ ಮಾಡಿಸಿ ಶಿವಾನುಭವದಲ್ಲಿ ಪಳಗಿಸಿದರು. ಅವನ ಆಚಾರ ವಿಚಾರ ಸೇವಾಭಾವನೆಗಳಿಗೆ ಮೆಚ್ಚಿ ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡರು.

ರುದ್ರಮುನಿ ಶಿವಯೋಗಿಗಳಿಗೆ ಚಿತ್ರಕಲೆಯಲ್ಲಿ ಆಸಕ್ತಿ ಬಹಳ ವೀರಶೈವರನೂರೊಂದು ಸ್ಥಳಗಳ ಉದ್ಧರಣೆಯ ಪಟಲಗಳನ್ನು ಬಣ್ಣದ ಚಿತ್ರಗಳಲ್ಲಿ ರಚಿಸಿದ್ದಾರೆ ಅವು ಈಗಲೂ ಇವೆಯಂತೆ.

ಈ ಶಿವಯೋಗಿಗಳು ಅಂತ್ಯದಲ್ಲಿ ಶ್ರೀಶೈಲದಲ್ಲಿ ತಪಸ್ಸು ಮಾಡುತ್ತ ಕಳೆದರು ಅಖಂಡೇಶ್ವರ ವಚನಗಳಿಂದ ಲಿಂಗಾಂಗ ಸಾಮರಸ್ಯ ಸುಖವನ್ನು ಅನುಭವಿಸಿ ಬೆರೆದು ಸಮಾಧಿಸ್ತರಾದರು.

ಅಪ್ಪಯ್ಯ ಸ್ವಾಮಿಗಳು

ರಾಮಯ್ಯ ಸಿದ್ಧಬಸಮ್ಮ ಎಂಬ ಜೇವರಗಿಯ ಜಂಗಮ ದಂಪತಿಗಳಿಗೆ ಮಗುವಾಗಿ ಜನಿಸಿದ ಅಪ್ಪಯ್ಯ ಬಾಲ್ಯದಲ್ಲಿ ರೋಗಗ್ರಸ್ತನಾಗಿದ್ದನು ಪ್ರತಿದಿನ ತಪ್ಪದೆ ಷಣ್ಮುಖ ಶಿವಯೋಗಿ ಗದ್ದುಗೆಯ ಅಂಗಾರ ಹಚ್ಚುವದರಿಂದ ಶಿವಸಂಕಲ್ಪದಂತೆ ರೋಗ ಗುಣವಾಯಿತು. ರುದ್ರಮುನಿ ಶಿವಯೋಗಿಗಳು ಆ ಬಾಲಕನಿಗೆ ಮಹೇಶ್ವರ ದೀಕ್ಷೆಕೊಟ್ಟು ಪೋಷಿಸಿ ವಿದ್ಯಾ-ಬುದ್ಧಿ-ಶಿವಜ್ಞಾನ ಸಂಪನ್ನನನ್ನಾಗಿಸಿ ತಮ್ಮ ತರುವಾಯದಲ್ಲಿ

ಪೀಠಾಧಿಕಾರವನ್ನು ನೀಡಿದರು. ಈ ಅಪ್ಪಯ್ಯ ಶಿವಯೋಗಿಗಳು ಭಕ್ತರನ್ನು ಮಕ್ಕಳಂತೆ ಪೋಷಿಸಿದರು.

ಸಿದ್ಧರಾಮ ಸ್ವಾಮಿಗಳು

ಇವರು ಷಣ್ಮುಖ ಮಠದ ನಿರಂಜನ ಪೀಠಕ್ಕೆ ೨೫ ವರ್ಷ ಒಡೆಯರಾಗಿದ್ದರು. ತಮ್ಮ ಜೀವನದ ಉತ್ತರಾರ್ಧದಲ್ಲಿ ಕಲ್ಯಾಣಕ್ಕೆಂದು ಹೊರಟು ಕಲಬುರ್ಗಿ ಆಚೆಯ ಕಮಲಾಪುರದಲ್ಲಿ ಉಳಿದುಕೊಂಡಾಗ ಹಲವು ಮಹಾತ್ಮ್ಯಗಳನ್ನು ಮಾಡಿದರು. ತತ್ತ್ವೋಪದೇಶದಿಂದ ಸಾವಿರಾರು ಜನರನ್ನು ಒಲಿಸಿಕೊಂಡು ಅವರಿಗೆ ಲಿಂಗದೀಕ್ಷೆ ಮಾಡಿದರು. ಅಲ್ಲಿಯ ಭಕ್ತರು ಅವರನ್ನು ಅಲ್ಲಿಯೇ ಉಳಿಸಿಕೊಂಡರು. ಕೊನೆಗೆ ಲಿಂಗಾನುಷ್ಠಾನ ಗೈಯುತ್ತ ಜೀವಂತ ಸಮಾಧಿ ಹೊಂದಿದರಂತೆ ಇವರ ಗದ್ದುಗೆಯ ಮೇಲೆ ಒಂದು ಮೂರ್ತಿಯನ್ನಿಟ್ಟು ಭಕ್ತರು ಶ್ರದ್ಧೆಯಿಂದ ಪೂಜಾದಿಗಳನ್ನು ನೆರವೇರಿಸಿಕೊಳ್ಳುತ್ತಿದ್ದಾರೆ.

ಮೂರನೆಯ ಷಣ್ಮುಖ ಸ್ವಾಮಿಗಳು

ಜೇವರಗಿ ಪೋಲೀಸಗೌಡ ಮನೆತನದ ಶರಣಪ್ಪಗೌಡ ಗಂಗಮ್ಮ ಈ ದಂಪತಿಗಳ ಪವಿತ್ರ ಉದರದಲ್ಲಿ ಜನಿಸಿದ ಷಣ್ಮುಖ ಮಗು ಶಿವಕಳೆಯಿಂದ ಪರಿಶೋಭಿಸುತ್ತಿತ್ತು. ಈ ಬಾಲಕನನ್ನು ಸಿದ್ಧರಾಮ ಶಿವಯೋಗಿಗಳು ತಮ್ಮ ಮಠಕ್ಕೆ ಪಡೆದುಕೊಂಡು ಮಹೇಶ್ವರ ದೀಕ್ಷೆಕೊಟ್ಟು ತಮ್ಮ ಉತ್ತರಾಧಿಕಾರಕ್ಕೆ ತಕ್ಕವನಾಗುವಂತೆ ಪೋಷಿಸಿ ಬೆಳೆಸಿದರು. ಅವರ ತರುವಾಯ ಪೀಠಾಧಿಕಾರ ಹೊಂದಿದ ಬಳಿಕ ಈ ಷಣ್ಮುಖ ಸ್ವಾಮಿಗಳು ಮಠದ ಕೃಷಿ ಕಾರ್ಯ ಅಭಿವೃದ್ಧಿಗೊಳಿಸಿ ಆರ್ಥಿಕಸ್ಥಿತಿ ಸುಧಾರಿಸಿದರು. ಶಿವಾನುಭವ ಪ್ರಸಾರ ಕಾರ್ಯದಲ್ಲಿ ಸಾಕಷ್ಟು ಶ್ರಮವಹಿಸಿದರು, ತಮ್ಮ ಶಾಖಾ ಮಠಗಳಿದ್ದಲ್ಲಿ ಹೋಗಿ ತಿಂಗಳಾನುಗಟ್ಟಲೆ ನಿಂತು ಧಾರ್ಮಿಕ ಜಾಗ್ರತಿಯಿಂದ ಭಕ್ತೋದ್ಧಾರ ಮಾಡುತ್ತಿದ್ದರು.

ಹುನಗುಂದ ವಿರಕ್ತ ಮಠದಲ್ಲಿ ಪ್ರಭುಸ್ವಾಮಿಗಳು ಬಸವ ಪುರಾಣ ಹೇಳಿಸಿದರು. ಆದರ ಮಂಗಲ ಮಹೋತ್ಸವಕ್ಕೆ ಷಣ್ಮುಖ ಸ್ವಾಮಿಗಳು ತಮ್ಮ ಕರ್ತೃ ಷಣ್ಮುಖ ಶಿವಯೋಗಿಗಳ ಅಖಂಡೇಶ್ವರ ವಚನಗಳನ್ನು ಅಲ್ಲಿಯ ಭಕ್ತರಿಗೆ ಭೋದಿಸಿದರು. ಅಲ್ಲಿಯ ಜನರು ಅಖಂಡೇಶ್ವರ ವಚನ ಪಾರಾಯಣ ಮಾಡಹತ್ತಿದರು. ಹುನಗುಂದ ಹತ್ತಿರದ ಅಮೀನ ಗಡದಲ್ಲಿ ಅಖಂಡೇಶ್ವರ ವಚನ ಪಾರಾಯಣ ಮಠವಿದೆ ಈ ಶಿವಯೋಗಿ ಗಳ ಗದ್ದುಗೆ ಅಲ್ಲಿ ಇದೆ.

ಚೆನ್ನಮಲ್ಲ ಸ್ವಾಮಿಗಳು

ಷಣ್ಮುಖ ಶಿವಯೋಗಿಗಳು ಹುನಗುಂದದಿಂದ ಸಂಗಮಕ್ಕೆ ಹೋಗಿ ಬರುವಾಗ ಧನ್ನೂರಲ್ಲಿ ಬಸವಯ್ಯನೆಂಬ ಜಂಗಮನ ಮನೆಯಲ್ಲಿ ಸಂಜೆ ಯಲಿಂಗಾರ್ಚನೆ ಮಾಡಿದರು, ೨ ದಿವಸಗಳಿಂದ ಪ್ರಸವವೇದನೆಯಲ್ಲಿ ನರಳುತ್ತಿದ್ದ ಬಸವಯ್ಯನ ಹೆಂಡತಿ ನೀಲಮ್ಮ ಶ್ರೀಗಳ ಪೂಜಾಯೋಗ ದಿಂದ ಸುಲಭವಾಗಿ ಗಂಡು ಮಗುವನ್ನು ಹೆತ್ತಳು. ಶಿವಯೋಗಿಯ ಆಗ ಮನದ ಫಲವಾಗಿ ಆಪತ್ತು ಬದಿಗಾಯಿತೆಂದು ಸಂತೋಷಪಟ್ಟರು. ನಾಲ್ಕು ವರ್ಷ ಕಳೆದ ಮೇಲೆ ಈ ಮಗು ಷಣ್ಮುಖ ಶಿವಯೋಗಿ ಸನ್ನಿಧಿ ಸೇರಿತು,

ಈ ಮಗುವೇ ಜೇವರಗಿಯ ಶೂನ್ಯ ಪೀಠಾಧಿಕಾರಕ್ಕೆ ಬಂದ ಚೆನ್ನ ಮಲ್ಲ ಶ್ರೀಗಳವರು ಧನ್ನೂರಲ್ಲಿ ಅವರ ವಂಶದವರ ಮನೆಯಲ್ಲಿ ಅಖಂಡೇ ಶ್ವರ ವಚನಗಳ ಪೂಜೆ ಪ್ರವಚನಗಳು ನಡೆಯುತ್ತಲಿವೆ.

ಅಖಂಡೇಶ್ವರ ಸ್ವಾಮಿಗಳು

ಚೆನ್ನಮಲ್ಲ ಸ್ವಾಮಿಗಳ ಶಿಷ್ಯರಲ್ಲಿ ಒಬ್ಬರಾದ ಅಖಂಡೇಶ್ವರರು ಮಠದ ನಿರಂಜನ ಪೀಠಾಧಿಪತಿಗಳಾದರು. ಇವರು ಭಕ್ತಿಯಲ್ಲಿ ನಿಸ್ಸೀ

ಮೂರು ಜೇವರಗಿ ಮಠದಲ್ಲಿ ೬೩ ಪುರಾತನ ಮಂಟಪ ಪೂಜೆಯನ್ನು ನೆರ ವೇರಿಸಿದರು ಅಖಂಡೇಶ್ವರ ವಚನಗಳನ್ನು ರಾಗ-ತಾಳಬದ್ಧವಾಗಿ ಹಾಡು ತ್ತಿದ್ದರು, ಅವುಗಳ ವಿವರಣೆಯಿಂದ ಭಕ್ತರಿಗೆ ವೀರಶೈವ ತತ್ವಜ್ಞಾನವನ್ನು ಬೋಧಿಸುತ್ತಿದ್ದರು. ಚಿಕ್ಕ ಕೌಲಗಿ ಪತ್ರಿ ವನದಲ್ಲಿ ಅನುಷ್ಠಾನಗೈದು ಪೂರ್ವದ ಗುರುಗಳ ಸ್ಥಳದ ಮಹತ್ವವನ್ನು ಹೆಚ್ಚಿಸಿದರು. ಜೇವರಗಿ ಜಿಲ್ಲಿಸಾಹೇಬ ದೊಡ್ಡಮನಿ ಇವರು ಅಖಂಡೇಶ್ವರ ಫಲಾಶೀರ್ವಾದದಿಂದ ಇಳಿವಯಸ್ಸಿನಲ್ಲಿ ಪುತ್ರನನ್ನು ಪಡೆದರು. ಮೂಲಗುರುಗಳ ನೆಚ್ಚಿನ ಶಿಷ್ಯ ಕಿಂತ್ಯಜ ಮಲ್ಲಪ್ಪನ ಓಣಿಯಲ್ಲಿ ಷಣ್ಮುಖ ಶಿವಯೋಗಿಗಳ ಗದ್ದುಗೆ ಕಟ್ಟಿಸಿ ಅಲ್ಲಿಯು ಜನರಿಗೆ ಲಿಂಗಧಾರಣೆ ಮಾಡಿ ವಚನಗಳನ್ನು ಬೋಧಿಸಿ ಶಿವಭಕ್ತರಾಗಿ ಬಾಳುವಂತೆ ಮಾಡಿದರು. ತಾಂಬಾಳದ ಷಣ್ಮುಖ ಶಿವ ಯೋಗಿ ಜಾತ್ರೆಗೆ ಹೋಗಿ ಭಕ್ತರಿಗೆ ದರ್ಶನವೀಯುತ್ತಿದ್ದರು.

ಶರಣೆ ಲಿಂಗಮ್ಮ

ಜೇವರಗಿ ಶಿವಣ್ಣ ಗೌಡರಿಗೆ ಸಂತಾನ ವಿರಲಿಲ್ಲ. ಚೆನ್ನಮಲ್ಲ ಶಿವ ಯೋಗಿಗಳ ಆಶೀರ್ವಾದದಿಂದ ಒಂದು ಕನ್ಯಾರತ್ನ ಹುಟ್ಟಿತು. ಹೆಸರು ಲಿಂಗಮ್ಮನೆಂದಾಯಿತು. ಅದು ಶಿಶುವಾಗಿರುವಾಗಲೇ ಭಕ್ತಿ ವೈರಾಗ್ಯಗಳ ಸುಳಿವು ತೋರಿತ್ತು. ಮುಂದೆ ಅಕ್ಕಮಹಾದೇವಿಯಂತೆ ಭಕ್ತಿಯ ಪ್ರಕಾಶ ದಲ್ಲಿ ಬೆಳೆಯುಹತ್ತಿದಳು. ಈ ಬಾಲಿಕೆ ಶ್ರೀ ಷಣ್ಮುಖ ಶಿವಯೋಗಿ ಮಠಕ್ಕೆ ಅರ್ಪಿತವಾದಳು. ಆಕೆ ಅಖಂಡೇಶ್ವರರಿಂದ ಅನುಗ್ರಹಪಡೆದಳು. ಜ್ಞಾನ ಸಾಧನೆ, ಮಠದ ಸೇವೆ ಬಂದ ಭಕ್ತರ ಪರಾಮರಿಕೆ ಮಾಡುತ್ತ ದಾಸೋಹ ದಲ್ಲಿ ಜನ್ಮ ಸಾರ್ಥಕ ಕಂಡುಕೊಂಡಳು. ಮಠದ ಪರಿಸರದ ತಾಯಿಯಾ ದಳು. ಅಖಂಡೇಶ್ವರ ತರುವಾಯ ೧೫ ವರುಷ ಮಠದ ಎಲ್ಲ ವ್ಯವಹಾರ ಗಳನ್ನು ನಡಿಸಿ ಅದರ ಘನತೆ ಗೌರವಗಳನ್ನು ಕಾಪಾಡಿಕೊಂಡು ಬಂದಳು.

ಒಂದು ವರುಷ ಮಠದಲ್ಲಿ ಬಸವ ಪುರಾಣವನ್ನು ಬಹು ವಿಜೃಂಭ ಣೆಯಿಂದ ನಡೆಸಿದಳು, ಆ ಕಾಲದಲ್ಲಿ ಪರಮ ಶಿವಾನುಭವಿಯೆಂದು ಚರ

ಚಕ್ರವರ್ತಿಯೆಂದು ಘನವಿದ್ವಾಂಸರೆಂದು ಹೆಸರಾಗಿದ್ದ ಕಟಗಲ್ಲ ಮುರಿಗೇಂದ್ರ ಶಿವಯೋಗಿಗಳನ್ನು ಪುರಾಣ ಮಂಗಲ ಮಹೋತ್ಸವಕ್ಕೆ ಬಿಜಯಂಗೈಸಿ ಕೊಂಡಿದ್ದಳು. ಮಂಗಲ ಮುಕ್ತಾಯವಾದ ಬಳಿಕ ಷಣ್ಮುಖ ಶಿವಯೋಗಿ ಪೀಠದ ಸಕಲ ಕಾರ್ಯಭಾರವನ್ನು ಅವರ ಪಾದಕ್ಕೆ ಅರ್ಪಿಸಿ ಅಲಿಪ್ತಳಾದಳು. ಲಿಂಗತಪಗೈಯುತ್ತ ಲಿಂಗದಲ್ಲಿ ಲೀನವಾಗಿ ಲಿಂಗೈಕ್ಯಳಾದಳು.

ಮುರಿಗೇಂದ್ರ ಶಿವಯೋಗಿಗಳು ಮುಗುಳಿಯ ತಮ್ಮ ಶಾಖಾ ಮಠದ ಮರಿಯಾದ ನೀಲಕಂಠ ದೇವರನ್ನು ಬರಮಾಡಿಕೊಂಡು ಷಣ್ಮುಖ ಶಿವಯೋಗಿಗಳ ಪೀಠಾಧಿಕಾರಕ್ಕೆ ನಿಲ್ಲಿಸಿ ಕಟಗಲ್ಲಿಗೆ ದಯಮಾಡಿಸಿದರು.

ನೀಲಕಂಠ ಸ್ವಾಮಿಗಳು

ಗಣಾಚಾರವನ್ನು ಮೆರೆದು ಧರ್ಮವನ್ನು ಸಮಾಜವನ್ನು ರಕ್ಷಿಸಿದ ವೀರಧೀರ ಶಿವಯೋಗಿಗಳು ನೀಲಕಂಠ ಸ್ವಾಮಿಗಳು ಹರಸೂರ ಶ್ರೀಮಂತ ಸಿದ್ದಪ್ಪ ನಾಗಮ್ಮನವರಿಗೆ ಮಕ್ಕಳಿಲ್ಲದಿರುವಾಗ ಕಟಗಲ್ಲ ಮುರಿಗೇಂದ್ರ ಶಿವಯೋಗಿಗಳ ಆಶೀರ್ವಾದದಿಂದ ಆ ದಂಪತಿಗಳ ಉದರದಿಂದ ನೀಲಕಂಠರು ಉದಿಸಿ ಬಂದರು.

ಜೇವರಗಿ ಷಣ್ಮುಖ ಶಿವಯೋಗಿ ಮಠಕ್ಕೆ ಒಡೆಯರಾದ ಬಳಿಕ ಮಠದ ಅಭಿವೃದ್ಧಿಗೆ, ವೀರಶೈವ ಸಮಾಜದ ಹಿತಕ್ಕೆ ಸಾಕಷ್ಟು ದುಡಿದರು. ಧೃಡಕಾಯ-ಸುಂದರರೂಪ ಇವರದು, ಬಸವ ಪುರಾಣದ ಮೆರವಣಿಗೆಗೆ ಅನ್ಯಮತೀಯರು ಆತಂಕ ಒಡ್ಡಿದಾಗ ನಿಜಾಮ ಸರಕಾರದಲ್ಲಿ ಹೋರಾಡಿ ಅಪ್ಪಣೆ ಪಡೆದು ಸರಳಗೊಳಿಸಿದರು. ಮಠದ ಆವರಣದಲ್ಲಿರುವ ಇವರ ಗದ್ದುಗೆ ಇಂದಿಗೂ ಜಾಗ್ರತವಾಗಿದ್ದು ನಡೆದುಕೊಂಡ ಭಕ್ತರ ಇಷ್ಟಾರ್ಥ ಪೂರ್ತಿಯಾಗುತ್ತಿರುವದು.

ಸಿದ್ಧ ವೀರದೇವರು

ಜೇವರಗಿಯ ಜಂಗಮ ಮನೆತನದಲ್ಲಿ ಜನಿಸಿದ ಇವರು ಬಾಲ್ಯದಲ್ಲಿಯೇ ಮಠಕ್ಕೆ ಅರ್ಪಿತವಾದರು. ನೀಲಕಂಠ ಶಿವಯೋಗಿಗಳು ಇವರಿಗೆ ವಿದ್ಯೆ ಮತ್ತು ಶಿವಾನುಭವ ಶಾಸ್ತ್ರ ಅಭ್ಯಾಸ ಮಾಡಿಸಿದರು. ಅವರ ತರುವಾಯ ಇವರೇ ನಿರಂಜನ ಪೀಠಕ್ಕೆ ಅಧಿಕಾರಿಗಳಾಗಬೇಕಾಗಿತ್ತು. ಆದರೆ ನಾರು ಹುಣ್ಣುಗಳಿಂದ ಕಾಲು ನ್ಯೂನವಾದರಿಂದ ಪೀಠಾರೋಹಣ ಮಾಡದೆ ಮಠದ ಸರ್ವ ಆಡಳಿತೆಯನ್ನು ದಕ್ಷತೆಯಿಂದ ನೋಡಿಕೊಂಡರು. ಇವರು ಜ್ಯೋತಿಷ್ಯ-ವೈದ್ಯ ವಿದ್ಯೆಗಳನ್ನು ಬಲ್ಲವರಾಗಿದ್ದರು.

ಸದ್ಯದ ಪೀಠಾಧಿಪತಿಗಳು

ಶ್ರೀ ನಿ ಪ್ರ. ಸ್ವ. ಶಾಂತಲಿಂಗ ಸ್ವಾಮಿಗಳವರು

ಪ್ರಸುತ್ತ ಜೇವರಗಿಯ ಷಣ್ಮುಖ ಶಿವಯೋಗಿಗಳ ನಿರಂಜನ ಪೀಠಾಧಿಪತಿಗಳಾಗಿರುವ ಶ್ರೀ ಶಾಂತಲಿಂಗ ಸ್ವಾಮಿಗಳವರು ಶ್ರೀ ಮಠದ ಮಹತಿಯನ್ನು ಕರ್ತೃ ಶಿವಯೋಗಿಗಳ ಕೀರ್ತಿಯನ್ನು ಪುನರುತ್ಥಾನ ಗೈಯುತ್ತಲು ಹಾಗೂ ಆದರಿಂದ ಭಕ್ತರ ಮನಭಾವಗಳನ್ನು ಬೆಳಗಲು ಬಂದಂತಿದ್ದಾರೆ.

ಇವರ ಪೂರ್ವಾಶ್ರಮದ ಮೂಲಸ್ಥಳ ವಿಜಾಪೂರ ತಾಲೂಕಿನ ಕನ್ನಮಡಿ ಅಲ್ಲಿಯ ಗುರುಪಾದಯ್ಯ ರಾಚಮ್ಮ ಈ ತಂದೆ ತಾಯಿಗಳ ಪವಿತ್ರ ಉದರದಲ್ಲಿ ೧೯೨೦ ರಲ್ಲಿ ಜನ್ಮ ತಾಳಿದರು. ಮೂರು ವರ್ಷದ ಬಾಲಕರಿರುವಾಗಲೇ ಪೂರ್ವಾಶ್ರಯ ಸಂಬಂಧದ ಸುಳಿವಿನಿಂದ ರಟಗಲ್ಲ ಶ್ರೀ ಮುರುಗೇಂದ್ರ ಮಹಾ ಶಿವಯೋಗಿಗಳ ಕೃಪಾಕಟಾಕ್ಷದಲ್ಲಿ ಬಂದರು. ಚಿಂಚೋಳಿ ಸಿದ್ದಪ್ಪನವರ ಪಾಲನೆ ಪೋಷಣೆಹೊಂದಿ ಪ್ರಾಥಮಿಕ ಶಿಕ್ಷಣ ಪಡೆದರು. ಯಾದಗಿರಿ ಸಂಸ್ಕೃತ ಕಾಲೇಜಿನಲ್ಲಿ ಇರಿಸಲ್ಪಟ್ಟು ಕಾವ್ಯ ವ್ಯಾಕರಣ-ಛಂದಸ್ಸುಗಳಲ್ಲಿ ಚೆನ್ನಾಗಿ ಅಭ್ಯಾಸ ಮಾಡಿದರು. ಷಟ್‌ಸ್ಥಲ ಸಾಧನೆ

ಗಾಗಿ ಬೆಂಗಳೂರಿನ ಸೌರ್ದಭೂಷಿಣ ಮಠದ ಶ್ರೀ ಮಹಾದೇವ ಸ್ವಾಮಿಗಳ ಶಿಷ್ಯತ್ವ ವಹಿಸಿದರು. ಅಲ್ಲಿ ವಚನಗಳನ್ನು ಓದಿ ಶಿವಾನುಭವ ಶಾಸ್ತ್ರವನ್ನು ಅಂಗೈಸಿಕೊಂಡರು. ಧರ್ಮ-ಸಮಾಜಗಳ ಉನ್ನತಿಗಾಗಿ ತಮ್ಮ ಜೀವನವನ್ನು ಮುಡಿಪಾಗಿರುಸುವ ಸ್ಫೂರ್ತಿ ಪಡೆದರು. ಜೇವರಗಿಯಲ್ಲಿ ನೀಲಕಂಠ ಶಿವಯೋಗಿಗಳು ಲಿಂಗೈಕ್ಯರಾದಾಗಲೇ ಆ ಪೀಠಕ್ಕೆ ಶಾಂತಲಿಂಗ ದೇವರನ್ನು ನಿಯಮಿಸುವ ಸಂಕಲ್ಪವನ್ನು ಮರಿಗೇಂದ್ರ ಶಿವಯೋಗಿಗಳು ಮಾಡಿದ್ದರು. ಆಗಿನ್ನೂ ಇವರು ಅಧ್ಯಯನದಲ್ಲಿದ್ದರು. ಪ್ರೌಢ ವಯಸ್ಕರೂ ಆಗಿರಲಿಲ್ಲ ಸಿದ್ಧ ವೀರದೇವರು ಕೆಲವು ವರ್ಷ ಮಠದ ಆಡಳಿತ ವಹಿಸಿದರು. ಅವರ ನಂತರವೂ ಕೆಲವು ವರ್ಷ ಮಠಕ್ಕೆ ಒಡೆಯರಿರಲಿಲ್ಲ. ಮರಿಗೇಂದ್ರ ಶಿದಯೋಗಿಗಳು ಆಗಾಗ ಬಂದು ಅದರ ವ್ಯವಸ್ಥೆಯನ್ನು ವಿಚಾರಿಸುತ್ತಿದ್ದರು. ಆ ಮೇಲೆ ಜೇವರಗಿ ಭಕ್ತರ ಒತ್ತಾಸೆಯಿಂದ ಶಾಂತಲಿಂಗ ಮರಿ ದೇವರಿಗೆ ಮಠದ ಆಡಳಿತದ ಅಧಿಕಾರ ನೀಡಿದರು. ೧೨ ವರ್ಷಗಳ ನಂತರ ಶ್ರೀ ಶಾಂತಲಿಂಗ ಶಿವಯೋಗಿಗಳು ನಿರಂಜನ ಪೀಠಾರೋಹಣ ಸಮಾರಂಭವನ್ನು ವೈಭವದಿಂದ (ಕ್ರಿ. ಶ. ೧೯೫೮)ರಲ್ಲಿ ನೆರವೇರಿಸಿದರು. ಇವರು ಈ ಮಠದ ೧೨ ಅಧಿಪತಿಗಳು.

ಸಂಶೋಧನೆ :- ಉತ್ಸಾಹ ಸ್ಫುರಿಸುತ್ತಿತ್ತು, ಅಧಿಕಾರಾರೂಢರಾದೊಡನೆ ಮಠದ ಐತಿಹ್ಯಧ ಸಂಶೋಧನೆಗೆ ತೊಡಗಿದರು. ಮಠದಲ್ಲಿಯ ಹಳೆಯ ಕಾಗದ ಪತ್ರಗಳನ್ನು ಪರಿಶೀಲಿಸಿದರು. ತಮ್ಮ ಶಾಖಾಮಠಗಳಿದ್ದಲ್ಲೆಲ್ಲ ಸಂಚರಿಸಿ ಪೂರ್ವದ ಗುರುಗಳಿಂದ ಸಂಭವಿಸಿದ ಘಟನೆಗಳನ್ನು ಮಹಿಮೆಗಳನ್ನು ಕಲೆಹಾಕಿದರು. ಅಲ್ಲಿಯ ಭಕ್ತರ ಭಕ್ತಿಭಾವನೆಯನ್ನು ಚೇತನಗೊಳಿಸಿದರು. ಹಿಂದಿನ ಉಜ್ವಲ ಸಂಗತಿಗಳ ವಿವರಣೆಗಳು ಮಠದ ಮುಂದಿನ ಅಭಿವೃದ್ಧಿಗೆ ತಳಹದಿಯಾಗುವವೆಂಬುದನ್ನು ಮನಗಂಡಿದ್ದರು. ಈ ವಿಷಯದಲ್ಲಿ ಅವಿರತ ಶ್ರಮ ವಹಿಸುತ್ತಿದ್ದಾರೆ. ಅವರ ಇಂತಹ ಪ್ರಯತ್ನವು ಷಣ್ಮುಖ ಶಿವಯೋಗಿಗಳ ಜೀವನ ಚರಿತ್ರವನ್ನು ರೂಪಿಸುವ

ದಕ್ಕೂ ಕಾಲ ನಿರ್ಣಯಕ್ಕೂ ಸಂಶೋಧಕರಿಗೆ ನೆರವಾಗಿದೆ. ಸಂಘಟನೆ ಸಂಶೋಧನೆಗಳಲ್ಲಿ ನಿರಂತರ ಒಲವುಳ್ಳವರಾಗಿದ್ದಾರೆ ಶ್ರೀಗಳು.

ಗದ್ದುಗೆಯ ಜೀರ್ಣೋದ್ಧಾರ

ಹೈದರಾಬಾದ ಕರ್ನಾಟಕದ ವೀರಶೈವ ಗುಡಿಗಳ ಮೇಲೆ ಮುಸಲ್ಮಾನರ ಸಂಸ್ಕೃತಿಯ ದಟ್ಟ ಪ್ರಭಾವ ಇರುವದನ್ನು ಈಗಲೂ ಕಾಣಬಹುದು. ಮೇಲೆ ಗುಮ್ಮಟ ಒಳಗೆ ಗದ್ದುಗೆಗಳು " ಮಜಾರ ಆಕಾರ " ಷಣ್ಮುಖ ಶಿವಯೋಗಿಗಳ ಮೂಲ ಗದ್ದುಗೆ "ಮಜಾರ" ಪದ್ಧತಿಯಲ್ಲಿಯೇ ಇತ್ತು. ಶ್ರೀಗಳು ಅದನ್ನು ವೀರಶೈವ ಸಂಸ್ಕೃತಿ ಮತ್ತು ಸಂಪ್ರದಾಯಕ್ಕೆ ಮಾರ್ಪಡಿಸುವ ನಿರ್ಧಾರ ಮಾಡಿದರು. ಶಲ್ಲೀಕೇರಿ ಕಲ್ಲಿನ ಸುಂದರವಾದ ಗದ್ದುಗೆ ತಯಾರಿಸಲು ಅಪ್ಪಣೆ ಮಾಡಿದರು. ಮೂಲಗದ್ದುಗೆ ಬಿಚ್ಚಲಾಯಿತು. ಇದನ್ನು ಕೆಲವು ಸಂಪ್ರದಾಯಕ ಭಕ್ತರು ವಿರೋಧಿಸಿದರು, ನಮ್ಮ ಧಾರ್ಮಿಕ ವಿಧಿವಿಧಾನಗಳ ತತ್ವದಂತೆ ಗದ್ದುಗೆ ಇರಬೇಕು ಹಾಗೆ ಮಾಡೋಣ ಎಂದು ಶ್ರೀಗಳು ಭಕ್ತರ ಮನವೊಲಿಸಿದರು. ಮುಂದೆ ಆಕಾರದ ಶಲ್ಲಿಕೇರಿ ಕಲ್ಲಿನ ಗದ್ದುಗೆಯ ಸ್ಥಾಪನೆಯನ್ನು ವಿಧಾನಪೂರ್ವಕ ಸಡಗರದಿಂದ ಮಾಡಿಸಿದರು. ಅದರಂತೆ ಅಖಂಡೇಶ್ವರ ಗದ್ದುಗೆಯ ಜೀರ್ಣೋದ್ಧಾರವನ್ನೂ ಮಾಡಿಸಿದರು. ಈ ಜೀರ್ಣೋದ್ಧಾರ ಕೆಲಸ ಮಾಡಿಸುವಾ. ಕಾಲಲ್ಲಿ ಹಾವುಗೆ ಮೆಟ್ಟದೆ. ತಲೆಯ ಮೇಲೆ ಕೊಡೆ ಹಿಡಿಯದೆ ಬಿಸಿಲಲ್ಲಿ ನಿಂತು ಬಿಡುತ್ತಿದ್ದರು. ಮಠದ ಪ್ರಾಂಗಣ ಹೆಬ್ಬಾಗಿಲು ಅದಕ್ಕೆ ಹೊಂದಿದ ಆವಾರದ ದೊಡ್ಡ ಗೋಡೆ ಇವೆಲ್ಲ ತಮ್ಮ ರೂಪ ಆಕಾರ ಕೆಡಿಸಿಕೊಂಡಿದ್ದವು. ಅವನ್ನೆಲ್ಲ ಸರಿಪಡಿಸಿ ಅಂದಗೊಳಿಸಿದರು. ಹೆಬ್ಬಾಗಿಲು ಎಡಬಲಕ್ಕೆ ವಿಸ್ತಾರವಾದ ಕಾಡ್ಯೆಗಳನ್ನು ಹಾಕಿಸಿದರು.

ಹಳೆಯ ತೇರಿನ ಅಚ್ಚು ಒಮ್ಮೆ ಜಾತ್ರೆಯಲ್ಲಿಯೇ ಮುರಿಯಿತು ಮರುವರ್ಷದ ಜಾತ್ರೆಗೆ ಒದಗುವಂತೆ, ಸಿಕಂದರಾಬಾದದಿಂದ ೫ ಅಂ

ಸ್ತಿನ ಕಬ್ಬಿಣದ ತೇರು ಮಾಡಿಸಿ ತರಿಸಿದರು, ಇದು ಯಾರಿಗೂ ಗೊತ್ತಿರಲಿಲ್ಲ, ಜಾತ್ರೆ ಮತ್ತಿಷ್ಟು ಉತ್ಸಾಹದಿಂದ ಜರುಗಿತು.

ಶೈಕ್ಷಣಿಕ ಕಾರ್ಯಗಳು

ವಿದ್ಯೆಯು ಎಲ್ಲ ಬಗೆಯ ಏಳಿಗೆಗೂ ಬೇಕು. ಸ್ವಸಮಾಜವು ವಿದ್ಯಾಹೀನವಾದುದರಿಂದಲೇ ಲೌಕಿಕ ಮತ್ತು ಪಾರಮಾರ್ಥಿಕ ಎರಡು ಕ್ಷೇತ್ರಗಳಲ್ಲಿ ಹಿಂದುಳಿದಿದೆ. ಎಂದು ಶ್ರೀಗಳು ತಮ್ಮ ಅಧ್ಯಾಯನ ಕಾಲದಲ್ಲಿಯೇ ಕಂಡು ಕಳವಳ ಪಟ್ಟಿದ್ದರು. ಸಾಧ್ಯವಾದಷ್ಟು ಈ ಕೊರತೆ ನೀಗುವ ಉದ್ದೇಶ ಹೊಂದಿದ್ದರು. ಬಹಳಪ್ರಯತ್ನ ಪಟ್ಟು ೧೯೪೭ರಲ್ಲಿಯೇ ಜೇವರಗಿಯಲ್ಲಿ ಹಾಯಸ್ಕೂಲ ಆರಂಭವಾಗುವಂತೆ ಮಾಡಿದರು ಅದು ಈಗ ಜ್ಯೂನಿಯರ ಕಾಲೇಜಿನವರೆಗೆ ಬೆಳೆದಿದೆ. ಪೂರ್ಣ ಸ್ವತಂತ್ರ ಕಾಲೇಜ ಸ್ಥಾಪಿಸಲು ಜನರ ಸಹಕಾರ ಪಡೆಯುವ ಯೋಚನೆಯಲ್ಲಿದ್ದಾರೆ. ಮಠದಲ್ಲೊಂದು ಪ್ರಾಥಮಿಕ ಶಾಲೆ ನಡೆಸಿದ್ದಾರೆ. ತಾಲುಕ ಶಿಕ್ಷಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇದಕ್ಕೆ ಇವರ ಶಿಕ್ಷಣ ಪ್ರೇಮವೂ ಸ್ವಂತ ಪ್ರತಿಭಾವಂತಿಕೆಯು ಕಾರಣವಾಗಿವೆ.

ಹೆಚ್ಚಿನ ಶಿಕ್ಷಣವು ಬಡವರಿಗೆ ಅದರಲ್ಲಿಯೂ ಗ್ರಾಮಾಂತರ ಬಡವರಿಗೆ ಅಸಾಧ್ಯವಾಗಿರುವದರಿಂದ ಅಂಥವರಿಗೆ ಅನುಕೂಲವಾಗುವದಕ್ಕಾಗಿ ಮಠದಲ್ಲಿ ಶ್ರೀ ಷಣ್ಮುಖೇಶ್ವರ ಪ್ರಸಾದ ನಿಲಯವನ್ನು ಸ್ಥಾಪಿಸಿದ್ದಾರೆ. ಊಟ ವಸತಿಗಳನ್ನು ಬಡವಿಧ್ಯಾರ್ಥಿಗಳಿಗೆ ಒದಗಿಸುತ್ತಿದ್ದಾರೆ. ಈ ಪ್ರಸಾದ ನಿಲಯದಲ್ಲಿ ಓದಿದ ಹಲವರು ಪ್ರಾಧ್ಯಾಪಕರು, ವಕೀಲರು, ಡಾಕ್ಟರರು, ಅಧಿಕಾರಿಗಳು, ಇಂಜನಿಯರು, ಸಮಾಜ ಸಂಸ್ಥೆಗಳ ಮುಖ್ಯರು, ಹಿರಿಯ ವರ್ತಕರು ಆಗಿ ಸುಖಿಜೀವಿಗಳೂ ಆದರ್ಶ ವ್ಯಕ್ತಿಗಳೂ ಆಗಿದ್ದಾರೆ. ಶ್ರೀಗಳಲ್ಲಿಯೂ ಮಠದ ಬಗೆಗೂ ಶ್ರದ್ಧೆಯುಳ್ಳವರಾಗಿದ್ದಾರೆ.

ಸಾಹಿತ್ಯ, ಸಂಶೋಧನೆ, ರಚನೆ, ಘೋಷಣೆ,

ಅಖಂಡೇಶ್ವರ ವಚನಗಳನ್ನು ಮೊದಲು ಧಾರವಾಡದ ಶ್ರೀ ನಿ.ಪ್ರ. ಸ್ವ. ಮೃತ್ಯುಂಜಯ ಸ್ವಾಮಿಗಳು ಮೂರು ಆವೃತ್ತಿ ಮುದ್ರಿಸಿದರು. ಮೂರನೆಯ ಸಲ ಮುದ್ರಿಸುವಾಗ ವಚನಕಾರರ ಜನ್ಮಭೂಮಿ ಜೇವರಗಿಗೆ ಹೊಸ ಮಠದ ಸಿದ್ಧವೀರದೇವರನ್ನು ಕಳಿಸಿ ಮಠ ಗದ್ದುಗೆ ಮುಂತಾದವು ಗಳ ಛಾಯಾಚಿತ್ರ ತರಿಸಿ ಸೇರಿಸಿ ಪ್ರಕಟಿಸಿದರು. ಅವರ ಜೊತೆಗೆ ಸದ್ಯ ಶ್ರೀಗಳು ಕೂಡ ಭಾಗವಹಿಸಿದರು. ಇದರಿಂದ ಮಠದ ಕೀರ್ತಿ ಹೆಚ್ಚಿತಾದರು ವಚನಕಾರರ ಕಾಲ ಜೀವನದ ಸಂಗಾತಿ ಮುಂತಾದವು ವಿವರವಾದಿ ಬೆಳಕು ಕಾಣಲಿಲ್ಲ. ಅಷ್ಟರಲ್ಲಿ ಅಧಿಕಾರ ವಹಿಸಿಕೊಂಡಿದ್ದ ಶ್ರೀ ಶಾಂತಲಿಂಗ ಶಿವಯೋಗಿಗಳು ವಚನಕಾರ ಷಣ್ಮುಖ ಶಿವಯೋಗಿಗಳು ಅವರ ಕಾಲ ನಿರ್ಣಯಕ್ಕೆ ಆಧಾರಗಳನ್ನು ಅವರ ಜೀವನದ ಸಂಗತಿಗಳನ್ನು ಸಂಗ್ರಹಿಸಿದರು. ಇದಕ್ಕಾಗಿ ಮಠದ ಹಳೆಯ ಕಾಗದ ಪತ್ರಗಳನ್ನು ಹೋತೆಗೆದರು ಪರಿಶೀಲಿಸಿದರು. ಶಿವಯೋಗಿಗಳಿಗೆ ಜನ್ಮವಿತ್ತ ಗೌಡರ ಮನೆತನದ ವಂಶಾವಳಿಯನ್ನು ಅವಗಾಹನೆ ತಕ್ಕೊಂಡರು ನಾಡಿನಲ್ಲಿ ಹರಡಿಕೊಂಡಿದ್ದ ತಮ್ಮ ಶಾಖಾ ಮಠಗಳು ಸಂಬಂಧಿಸಿದ ಸ್ಮಾರಕಗಳು ಇರುವಲ್ಲೆಲ್ಲ ಸಂಚರಿಸಿದರು. ಅಲ್ಲಲ್ಲಿಯ ಜನವಾಣಿಗಳನ್ನು ಜಾತ್ರೆಯಲ್ಲಿ ನಡೆಯುವ ಸಂಪ್ರದಾಯಕ ನಡವಳಿಕೆಗಳನ್ನು ವಿಶ್ಲೇಷಿಸಿದರು. ಇವೆಲ್ಲವುಗಳ ಆಧಾರದಿಂದ ಹಾಗೂ ಸಮಕಾಲೀನರ ಚರಿತ್ರೆ ಮೊಧಲಾದ ಅನ್ಯ ಸಾಹಿತ್ಯದಿಂದಲೂ ಷಣ್ಮುಖ ಸ್ವಾಮಿಗಳ ಜೀವಿತಕಾಲವನ್ನು ಕಂಡು ಹಿಡದು ಜೀವನ ಚರಿತ್ರೆಯನ್ನು ರೂಪಿಸಿದರು. ಷಣ್ಮುಖ ಶಿವಯೋಗಿಗಳ ಸಂಸ್ಮರಣೆಗೆಂದು ಸ್ಮಾರಕ–ಗ್ರಂಥ ವೊಂದನ್ನು ನಾಡಿನ ಗಣ್ಯ ವಿದ್ವಾಂಸರುಗಳಿಂದ ಬರೆಯಿಸಿ ಸಂಪಾದನೆ ಮಾಡಿಸಿ " ಜ್ಞಾನಜ್ಯೋತಿ " ಎಂಬ ಹೆಸರಿನಿಂದ ಪ್ರಕಟಿಸಿದರು.

ಶ್ರೀಗಳವರು ನಡೆಸುತ್ತಿರುವ ಶ್ರೀ ಮಠದ ಸಾಹಿತ್ಯ ಪ್ರಕಾಶನದ ಮಹತ್ವದ ಕಾಲವೆಂದರೆ ಶ್ರೀ ಷಣ್ಮುಖ ಶಿವಯೋಗಿ ಚತು ಶತಮಾನೋ

ತ್ಸವ ಸಮಯ ಡಾ. ಶಿವಾನಂದ M. A. Phd ಅವರು ಅಖಂಡೇಶ್ವರ ವಚನಗಳ ಸಂಗ್ರಹ ಗ್ರಂಥವೊಂದನ್ನು ಸಂಪಾದಿಸಿದರು. ಸಂಪಾದಕರು ಅದರ ಆರಂಭದಲ್ಲಿ ಹೊಸಕಿರಣ ಎಂಬ ಪ್ರಸ್ತಾವನಾ ಲೇಖವು ಮನನೀಯವಾಗಿದೆ. ಅಖಂಡೇಶ್ವರ ವಚನದಲ್ಲಿಯ ತಾತ್ವಿಕ ಹಿರಿಮೆಯನ್ನು ವಚನಕಾರ ಷಣ್ಮುಖ ಶಿವಯೋಗಿಗಳ ಸ್ಥಾನಮಾನ ಘನತೆಗಳನ್ನು ಹೃದಯಂಗಮವಾಗಿ ವಿವೇಚಿಸಿದ್ದಾರೆ. ಕರ್ನಾಟಕದ ೧೫ ಜನ ಹಿರಿಯ ವಿದ್ವಾಂಸರಿಂದ ಬರೆಯಿಸಿದ ಜೇವರಗಿ ಜ್ಯೋತಿ ಎಂಬ ಹೆಸರಿನ ಗ್ರಂಥವನ್ನು ಪ್ರಕಟಿಸಿದರು. ಇದರಲ್ಲಿಯ ಲೇಖನಗಳು ಷಣ್ಮುಖ ಶಿವಯೋಗಿಗಳ ಘನ ವ್ಯಕ್ತಿತ್ವದ ವಿವಿಧ ಮುಖಗಳ ಮೇಲೆ ಬೆಳಕು ಬೀರುವಂಥವುಗಳಾಗಿವೆ. ಗುಂಜೀಹಳ್ಳಿ ಷಡಕ್ಷರಿ ಕವಿಗಳನ್ನು ಕೆಲವು ವರುಷ ಮಠದಲ್ಲಿ ಇರಿಸಿಕೊಂಡು ಅವರಿಂದ ಶ್ರೀ ಷಣ್ಮುಖ ಶಿವಯೋಗಿಯವರ ಕಾವ್ಯ "ರತ್ನಾಕರಂ" ಎಂಬ ಪುರಾಣ ಕಾವ್ಯ ಬರೆಯಿಸಿದ್ದನ್ನು ಪ್ರಕಟ ಮಾಡಿದ್ದು ಇದೇ ಸಮಯ ಈ ಗ್ರಂಥತ್ರಯಗಳಿಂದ ಕಾಲದ ಪರದೆಯ ಹಿಂದೆ ಹೋಗಿದ್ದ ಅಖಂಡೇಶ್ವರ ವಚನಗಳ ಮಹತ್ವ ಷಣ್ಮುಖ ಶಿವಯೋಗಿಗಳ ಬೆಳಗು ಬಾಳಿನ ವಿವರ ಮತ್ತೆ ಬೆಳಕಿಗೆ ಬಂದವು. ಆಗ ಜೇವರಗಿ ಕನ್ನಡ ನಾಡಿನ ಸಾಹಿತ್ಯ ಲೋಕದಲ್ಲಿ ಪ್ರತಿಷ್ಠಿತ ಚರಿತ್ರಿಕ ಭೂಮಿಯೆನ್ನಿಸಿತು. ಎಂದಿದ್ದಾರೆ ಡಾ. ಶಿವಾನಂದರು.

ಅಖಂಡೇಶ್ವರ ಗ್ರಂಥಪ್ರಕಾಶನ ಸಂಸ್ಥೆಯನ್ನು ಸ್ಥಾಪಿಸಿಕೊಂಡು ಶ್ರೀಗಳವರು ತಮ್ಮ ಮಠದಿಂದ ಬರೆಯಿಸಿ ಪ್ರಕಟಪಡಿಸಿದ ಗ್ರಂಥಗಳು ೨೦ ಕ್ಕಿಂತ ಹೆಚ್ಚಿವೆ. ಅವುಗಳಲ್ಲಿ ಮೇಲೆ ನಾಲ್ಕು ಪ್ರಮುಖ ಗ್ರಂಥಗಳಲ್ಲದೆ ಇನ್ನೂ ಕೆಲವು ಮುಖ್ಯವಾದವುಗಳನ್ನು ಇಲ್ಲಿ ಹೇಳಿದೆ.

1 ನಂದಾದೀಪ — ಲೇ. ಅಮರನಾಥಸ್ವಾಮಿ
2 ಸಗರನಾಡಿನ ಶಿವಶರಣರು — ಡಾ. ಶಿವಾನಂದರು

3 ಶಿವಪೂಜಾ ತತ್ವಕೋಶ
4 ಗುಂಡಬ್ರಹ್ಮಯ್ಯಗಳ ಚರಿತ್ರೆ ಜಾನಪದದಲ್ಲಿ
5 ಗುರುನಂಜೇಶ್ವರ ಪುರಾಣ
6 ಕರುಣೇಶ್ವರ ನಾಮಾವಳಿ
7 ಭರತನೂರ ಬಯಲಮೂರ್ತಿ
8 To A brief life sketch of Shri Shanmukh Shivayogi
9 ಜ್ಞಾನಜ್ಯೋತಿ
10 ನಾಮಾಮೃತ
11 ಬಿಳೂರ ಗುರುಬಸವ ಚರಿತಾಮೃತ

ಲೇಖಕರಿಗೆ ಸಂಭಾವನೆಗಳನ್ನಿತ್ತು ಗೌರವಿಸುವದರಲ್ಲಿ ಶ್ರೀಗಳ ವರ ಹಸ್ತವು ತುಂಬ ಉದಾರವಾಗಿರುವದು. ಪುರಾಣ ಕಾವ್ಯ ರಚಿಸಿದ ಗುಂಜಿ ಹಳ್ಳಿ ಷಡಕ್ಷರ ಕವಿಗಳಿಗೆ ರಾಜಮರ್ಯಾದೆ ಮಾಡಿಸಿ ಭಕ್ತರೂ ಕವಿಗಳ ಮೇಲೆ ಚಿನ್ನದ ಮಳೆಗರೆದರು, ಬೀಳ್ಕೊಡುವಾಗ ಅವರ ತಲೆಯ ಮೇಲೆ ಬಂಗಾರದ ಕಿರೀಟ ಹಿಡಿದರು. ಶ್ರೀಗಳು ಈ ಕವಿಯನ್ನು ಜೀವಮಾನ ಇರುವವರೆಗೆ ಜೋಪಾನ ಮಾಡಿದರು. ಉಪನ್ಯಾಸಿಗಳಿಗೆ ಕರೆಯಿಸಿದ ಶ್ರೇಷ್ಠ ವಾಗ್ಮಿಗಳ, ಸಾಹಿತಿಗಳ. ಆದರೋಪಚಾರವನ್ನು ಉನ್ನತ ಮಟ್ಟ ದಲ್ಲಿ ಮಾಡುತ್ತಾರೆ. ೧೯೬೫ ರಲ್ಲಿ ಬಂದಿದ್ದ ಪತ್ರ ಎಮ್. ಎಸ್. ಸುಂಕಾ ಪುರ ಅವರಿಗೆ "ಹಾಸ್ಯಾನಂದ" ಎಂಬ ಚಿನ್ನದ ಬಿರುದು ನೀಡಿದರು. ಅದೇ ವರುಷ ಕರ್ನಾಟಕ ವಿಶ್ವವಿದ್ಯಾಲಯದ ವಿದ್ವಾಂಸರ ತಂಡವನ್ನು ಪ್ರಕಾಶನ ವಿಭಾಗದಿಂದ ಆಮಂತ್ರಿಸಿದರು. ಪ್ರಚಾರೋಪನ್ಯಾಸ ಶಿಬಿರ ವನ್ನೂ ಜೇವರಗಿಯಲ್ಲಿ ಏರ್ಪಡಿಸಿದರು. ಆ ಕಾಲಕ್ಕೆ ಎಸ್. ಎಮ್. ವೃಷಭೇಂದ್ರ ಸ್ವಾಮಿ ಅವರು ಅಖಂಡೇಶ್ವರ ವಚನಗಳ ಮೇಲೆ ಮಾತನಾ ಡಿದರು. ಡಾ. ಶಿವಾನಂದರು ನೀಡಿದ ಸಗರನಾಡಿನ ಶಿವಶರಣರು ಎಂಬ

ಉಪನ್ಯಾಸದಿಂದ ಶರಣ ಚರಿತ್ರೆಗಳ ಮೇಲೆ ಹೆಚ್ಚಿನ ಬೆಳಕು ಬಿದ್ದಿತು. ರಾವೂರ ಸಿದ್ಧಲಿಂಗೇಶ್ವರರು ಪ್ರಕಟಿಸಿದ ಶೂನ್ಯ ಸಂಪಾದನೆಗೆ ಹೊಳಲು ಚಂದ್ರಶೇಖರ ಶಾಸ್ತ್ರಿಗಳು ಬರೆದ ಬಸವತತ್ವ ರತ್ನಾಕರದ ಪ್ರಕಟನೆಗೆ ಧನಸ ಹಾಯುವಿತ್ತಿದ್ದಾರೆ ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರಾಗಿ ದ್ದಾರೆ.

ಭಕ್ತರು ಕೊಟ್ಟ ಕಾಣಿಕೆಯನ್ನೆಲ್ಲ ಹೀಗೆ ಸಾಹಿತ್ಯ ಸೇವೆಗೆ ಮುಡಿಪಾಗಿರಿಸಿದ್ದಾರೆ. ಜ್ಞಾನದ ನಂದಾದೀಪ ಹಚ್ಚಿ ಜ್ಞಾನ ದಾಸೋಹ ನಡೆಸುತ್ತಿದ್ದಾರೆ. ಇಂತಹ ಸ್ವಾಮಿಗಳಿಂದಲೇ ನಾಡಿನ ನುಡಿ ಮತ್ತು ಸಂಸ್ಕೃತಿಗಳು ದೇದೀಪ್ಯಮಾನವಾಗುವವು. ನಮ್ಮ ನಾಡಿನ ಗಣ್ಯರು ಶ್ರೀ ಶಾಂತಲಿಂಗ ಸ್ವಾಮಿಗಳ ಸಾಹಿತ್ಯ ಪ್ರೇಮವನ್ನು ಶ್ಲಾಘಿಸಿ ಹಲವಾರು ಮೆಚ್ಚುಗೆಯ ಪತ್ರಗಳನ್ನು ಬರೆದಿದ್ದಾರೆ.

ಈ ತರದ ಸಾಹಿತ್ಯ ಪ್ರೇಮಿಗಳು ವಿದ್ಯಾಪಕ್ಷ ಪಾತಿಗಳೂ ಶಿವ ಯೋಗ ಸಂಪನ್ನರೂ ಆದ ಶ್ರೀ ನಿ. ಪ್ರ. ಸ್ವ. ಶಾಂತಲಿಂಗ ಮಹಾಸ್ವಾಮಿ ಗಳಿಂದ ಪೂಜ್ಯ ವಚನಕಾರರಾದ ಶ್ರೀ ಷಣ್ಮುಖ ಶಿವಯೋಗಿಗಳ ಈ ನಿರಂಜನ ಪೀಠಕ್ಕೆ ಮತ್ತೆ ಒಳ್ಳೆಯ ಕಳೆ ಬಂದಿದೆ, ಶಾಂತಲಿಂಗ ಸ್ವಾಮಿ ಗಳವರು ಮಹಾಕಾರ್ಯಗಳ ಕರ್ತೃಗಳಾಗಿದ್ದರೂ ಎಂದೂ ನಾನು ಮಾಡಿದೆ ಎಂದು ನುಡಿದವರಲ್ಲ. ಅಷ್ಟು ನಿರಹಂಕಾರಿಗಳು, ವಿದ್ಯಾವಿನಯ ಸಂಪನ್ನರು! ವಾಗ್ಮಿಗಳು! ಪರರ ಮನಸ್ಸನ್ನು ಅರಿತು ಅವರ ಮನವೊಲಿಸು ವದಕ್ಕೆ ಬಲ್ಲವರು. ಸ್ವತಃ ಕಾರ್ಯತತ್ಪರರು ಆದ್ದರಿಂದಲೇ ಶ್ರೀಗಳು ಅನೇಕ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿದ್ದಾರೆ. ಹಲವು ಸಭೆಗಳಲ್ಲಿ ಅಧ್ಯಕ್ಷ ಸ್ಥಾನದಿಂದ ಮಾತುಗಳನ್ನಾಡಿ ಜನರ ಒಲವುಗಳಿಸಿದ್ದಾರೆ. ತಮ್ಮ ಗುರು ಪೀಠದ ಏಳಿಗೆಗಾಗಿ ತಾವು ತಮ್ಮನ್ನೇ ಅರ್ಪಿಸಿಕೊಂಡಿದ್ದಾರೆ.

ಶ್ರೀ ಮಠದ ಪ್ರಭಾವಲಯ ವ್ಯಾಪ್ತಿ

ಷಣ್ಮುಖ ಶಿವಯೋಗಿಗಳ ಪ್ರಭಾವದ ಮಹಿಮೆಯು ಶ್ರೀ

ಶಾಂತಲಿಂಗ ಶಿವಯೋಗಿಗಳಲ್ಲಿ ಅಂತರ್ಗತವಾಗಿದೆ. ಅಂತೆಯೇ ಇವರ ಅಧಿಷ್ಠಾನದಲ್ಲಿ ಶಿವಯೋಗಿ ಗದ್ದುಗೆಯ ಲೀಲೆಗಳು ನಡೆಯುತ್ತಿರುತ್ತವೆ. ಅವು ಭಕ್ತರ ಹಿತಕ್ಕಾಗಿ ಜರುಗುತ್ತಿರಬೇಕು. ಅವುಗಳಲ್ಲಿ ಕೆಲವನ್ನು ಮುಂದೆ ಅನುಭಂದದಲ್ಲಿ ಕೊಡಲಾಗಿದೆ.

ಷಣ್ಮುಖ ಶಿವಯೋಗಿಗಳು ಕೆಲ ದಿನವಿದ್ದು ಉಪದೇಶ ಮಾಡಿದ ಗ್ರಾಮಗಳಲ್ಲಿ ಶಾಖಾ ಮಠಗಳಾಗಿವೆ. ಲೀಲೆ ಜರುಗಿದ ಅಥವಾ ಅನುಷ್ಠಾನಗೈದ ಸ್ಥಳಗಳಲ್ಲಿ ಸ್ಮಾರಕಗಳೂ ಕುರುಹಗಳು ಉಂಟಾಗಿವೆ. ಇವು ನಾಡಿನ ವಿವಿಧ ಕಡೆಗಳಲ್ಲಿವೆ, ಹಿರಿಯ ಕೌಲಗಿ, ಚಿಕ್ಕಕೌಲಗಿ, ಮುದೆನೂರು, ಮಂದೇವಾಲ ಹಿಪ್ಪರಗಿ, ನೆಲ್ಲಗಿ ಕೊಳ್ಳೂರು, ಸುರಪುರ ಜೇವರಗಿ ತಾಂಬಾಳ, ಕೊಡಂಬಲ ಈ ಊರುಗಳಲ್ಲಿ ಶಾಖಾ ಮಠಗಳಿವೆ. ಗೌನಳ್ಳಿ ಜೋಗೂರು, ನರಬೋಳಿ, ಬೆಳಗುಂಪೆಗಳಲ್ಲಿ ಶಿವಯೋಗಿ ಗದ್ದುಗೆಗಳಿವೆ. ವಿಜಾಪುರ ಜಿಲ್ಲೆ ಅಮೀನಗಡದಲ್ಲಿ ಅಖಂಡೇಶ್ವರ ವಚನ ಪಾರಾಯಣ ಮಠವಿದೆ. ಇವಲ್ಲದೆ ರಟಗಲ್ಲ ಕೊಕಟನೂರ ಕನಮಡಿ ಮಠಗಳು ಇವರ ಮೇಲ್ವಿಚಾರಣೆಯಲ್ಲಿವೆ.

ಅನುಬಂಧ

ಗದ್ದುಗೆಯ ಪ್ರಭೆ

ಷಣ್ಮುಖ ಶಿವಯೋಗಿಗಳು ಲಿಂಗೈಕ್ಯರಾಗಿ ಇನ್ನೂರಾಎಪ್ಪತ್ತು ವರ್ಷಗಳಾಗಿವೆ. ಆದರೂ ಅವರು ನಿಷ್ಠೆಯುಳ್ಳ ಭಕ್ತರ ಇಷ್ಟಸಿದ್ಧಿಯ ರೂಪದಲ್ಲಿ ಪ್ರಕಟವಾಗುತ್ತಲಿದ್ದಾರೆ. ಅವರ ನುಡಿಗಡಣ [ವಚನಾಮೃತ] ಪ್ರತ್ಯಕ್ಷವಾಗಿಯೇ ಇದೆ. ಅವರ ಈ ತವಸ್ತೇಜ ಅಳಿಯುವೇ ಕಾಲ–ಮಿತಿಯನ್ನು ಮೀರಿ ಉಳಿಯುವಲ್ಲಿ ಸಂದೇಹವಿಲ್ಲ. ಇಲ್ಲಿ ಕೆಲವು ನಿದರ್ಶನಗಳನ್ನು ಕಾಣಬಹುದು.

1 ಅಖಂಡೇಶ್ವರ ವಚನ ಪಾರಾಯಣದಿಂದ ಮುಕ್ತಳಾದಳು

ಸಜ್ಜಲಗುಡ್ಡದ ಶರಣೆತಾಯಿ ಅಕ್ಕಮಹಾದೇವಿಯ ಅಪರಾವ ತಾರಿ ಎನಿಸಿದ್ದಾರೆ. ಯಾವ ಕಟ್ಟಿಗೆ ಸುಟ್ಟರೂ ಅದರ ಪೂರ್ವದ ಗುಣ ವಳಿದು ಒಂದೇ ತೆರನಾದ ಬೂದಿಯಾಗುವಂತೆ, ಈ ಶರಣಮ್ಮ ಪೂರ್ವಾ ಶ್ರಯದ ಹಾಲುಮತ ಕಳಚಿ ಲಿಂಗಾಂಗಿಯಾಗಿದ್ದಾರೆ. ಇವರಿಗೆ ಅನುಗ್ರಹ ಮಾಡಿದ ಗೂಡದೂರ ಶ್ರೀ ದೊಡ್ಡಬಸವಾರ್ಯರು ಇವರಿಗೆ ಅಖಂಡೇ ಶ್ವರ ವಚನ ಗ್ರಂಥವನ್ನು ಕೊಟ್ಟು ನಿಷ್ಠೆಯಿಂದ ಅದರ ಪಾರಾಯಣ ಮಾಡಲು ಬೋಧಿಸಿದರು. ಶರಣೆತಾಯಿ ಅನ್ಯಶಾಸ್ತ್ರಗ್ರಂಥಗಳಿಗೆ ಎಳಸದೆ ಗುರುವಾಣಿಯಂತೆ ಷಣ್ಮುಖ ಶಿವಯೋಗಿಗಳ ಈ ವಚನಾಮೃತ ಬೋಧೆ ಯನ್ನು ತನು-ಮನ-ಭಾವಗಳಿಗೆ ವೇದಿಸಿಕೊಂಡು ಮುಕ್ತಾತ್ಮಳಾಗಿದ್ದಾಳೆ

2 ಅಖಂಡೇಶ್ವರ ವಚನಾವಲೋಕನದಿಂದ ಬಡವ ಬಲ್ಲಿದ ನಾದನು

ಮೈಸಲಗಿ ಬಸವಕಲ್ಯಾಣ ತಾಲೂಕಿನ ಒಂದು ಗ್ರಾಮ ಅಲ್ಲಿ ಕುಂಬಾರ ಕಾಯಕದ ಶಿವಶರಣಪ್ಪ ಸಾತ್ವಿಕಜೀವಿ, ಕಡು ಬಡವ, ಅವನ ಮಗನು ಒಮ್ಮೆ ಅಂಗಡಿಯಿಂದ ಚಿಕ್ಕ ಪೊಟ್ಟಣದಲ್ಲಿ ಸಾಮಾನು ತಂದನು. ಪೊಟ್ಟಣಕಟ್ಟಿದ ಕಾಗದ ಅಖಂಡೇಶ್ವರ ವಚನ ಪುಸ್ತಕದಿಂದ ಹರಿದ ಹಾಳಿ ಯಾಗಿತ್ತು. ಹಣಗಳಿಸುವಲ್ಲಿಯೇ ಹವ್ಯಾಸಿಯಾದ ವರ್ತಕನು ಅದರ ಬೆಲೆಯನ್ನು ಬಲ್ಲನೆ? ಮಗ ತಂದ ಸಾಮಾನು ಬಿಚ್ಚಿದಾಗ ಆ ಕಾಗದ ದಲ್ಲಿಯ ವಚನವನ್ನು ಶಿವಶರಣಪ್ಪ ನೋಡಿ ಓದಿದ ಅವನ ಬುದ್ಧಿಗೆ ಬೆಳಕು ಕಂಡಿತು. ಆ ವಚನದಿಂದ ಆಕರ್ಷಿತನಾದ ಅವನು ಕೂಡಲೆ ಅಂಗಡಿಗೆ ಹೋಗಿ ಕರಡು ಕಾಗದದಲ್ಲಿ ಬಿದ್ದಿದ್ದ ಒಂದೆರಡು ಓಲೆ ಹರಿದು ಹೋಗಿದ್ದ ಆ ವಚನ ಪುಸ್ತಕವನ್ನು ಅಂಗಡಿಕಾರನಿಗೆ ಅಲ್ಪ ಬೆಲೆ ಕೊಟ್ಟು ಮನೆಗೆ ತಂದನು. ಮಣೆಯ ಮೇಲಿಟ್ಟು ಪೂಜಿಸಿ ಓದಹತ್ತಿದನು. ನಿತ್ಯವೂ

ಲಿಂಗಾರ್ಚನೆಯಾದ ಬಳಿಕ ಪಾರಾಯಣ ಮಾಡಹತ್ತಿದನು. ಅವನ ಅಂತರಂಗದಲ್ಲಿ ಆಧ್ಯಾತ್ಮದ ಸಿರಿ ತಲೆದೋರಿದುದಲ್ಲದೆ, ಬಹಿರಂಗದಲ್ಲಿ ಮನೆಯ ಸಂಪತ್ತಿನ ಅಭಿವೃದ್ಧಿಯು ಆಗುತ್ತ ನಡೆದಿದೆ. ಬಡವನು ಬಲ್ಲಿದನಾಗುತ್ತಿದ್ದಾನೆ, ಅಖಂಡೇಶ್ವರ ವಚನಗಳ ಬಗೆಗೆ ಜೇವರಗಿಯ ಮಠದ ಬಗೆಗೆ ಉಂಟಾದ ಭಕ್ತಿಹೆಚ್ಚುತ್ತ ನಡೆದಿದೆ. ಷಣ್ಮುಖ ಶಿವಯೋಗಿಗಳ ನೆನಹು ಮನದಲ್ಲಿ ನೆಲೆಯಾಗಿ ನಿಂತಿದೆ. ಕುಂಬಾರ ಶಿವಶರಣಪ್ಪನೂ ಅವನನ್ನು ಅನುಸರಿಸಿ ನಡೆದ ಗದ್ದುಗೆ ಭಕ್ತಿ ಭೂಷಣ ಗುರುಲಿಂಗ ಜಂಗಮ ಪ್ರೇಮಿ ಶರಣ ಶಿವಶರಣಪ್ಪ ಇವರು ಜೇವರಗಿ ಶ್ರೀಮಠದ ಭಕ್ತಬಳಗದಲ್ಲಿ ಸೇರಿದವರಾಗಿ ಸುಖರೂಪದಿಂದ ಸಂಸಾರ ಸಾಗಿಸುತ್ತಿದ್ದಾರೆ.

3 ಗುಬ್ಬಿಯ ರೂಪದಲ್ಲಿ ದರ್ಶನ

ಸಜ್ಜಲಗಡದ ತಾಯಿಯವರ ಅನುಜ್ಞೆಯಂತೆ ಬಾಗಲಕೋಟೆಯಲ್ಲಿ ಶ್ರೀ ಷಣ್ಮುಖ ಶಿವಯೋಗಿಗಳ ಶಿಲಾ ಪ್ರತಿಮೆಯನ್ನು ಮಾಡಿಸಲಾಯಿತು. ಶ್ರೀ ಶಾಂತಲಿಂಗ ಶ್ರೀಗಳವರು ಅಖಂಡೆಪ್ಪ ಗೋಗಿ, ಮಲ್ಲಪ್ಪ ಸಾಹು ಕಲ್ಲಾ ಶಿವಶರಣಪ್ಪ ಕೋಳಕೂರ, ಮಲ್ಲಪ್ಪ ಹುಗ್ಗಿ ಈ ನಾಲ್ವರೊಡನೆ ಬಾಗಲಕೋಟೆಗೆ ಹೋಗಿ ಮೂರ್ತಿಯನ್ನು ವಿಶೇಷ ವಾಹನದಲ್ಲಿ ಜೇವರಗಿಗೆ ತಂದರು. ಅಂದು ಯುಗಾದಿ [ಕ್ರಿ.ಶ, ೧೯೭೬] ಊರವರು ಆ ಶಿವಯೋಗಿ ಪ್ರತಿಮೆಯನ್ನು ಉತ್ಸವದಿಂದ ಊರಲ್ಲಿ ಬರ ಮಾಡಿಕೊಳ್ಳಲು ಯೋಚಿಸಿದ್ದರಿಂದ ಶ್ರೀಗಳವರು ಊರ ಹೊರವಲಯದಲ್ಲಿ ವಾಹನ ನಿಲ್ಲಿಸಿ ತಾವು ಮಠಕ್ಕೆ ಬಂದರು.

ಮುಂದೆ ಊರ ಹಿರಿಕಿರಿಯರು ವಿವಿಧ ವಾದ್ಯಗಳೊಡನೆ ಆರತಿ ಹಿಡಿದ ಸುಮಂಗಲೆಯರೊಡನೆ ಬಂದು ಪ್ರತಿಮೆಯನ್ನು ಪೂಜಿಸಿ ಊರ ಒಳಗೆ ಸಾಗಿಸಿಕೊಂಡರು. ಅಗಸಿಗೆ ಬಂದಾಗ ಗುಬ್ಬಿಯೊಂದು ಬಂದು ಮೂರ್ತಿಯ ತೊಡೆಯ ಮೇಲೆ ಕುಳಿತಿತು. ಸಂಭ್ರಮವನ್ನು ನೋಡಲು ಶಾಂತವಾದಿ ಕುಳಿತುಬಿಟ್ಟಿತು. ಹಾದಿಯಲ್ಲಿ ಜನರು ಪ್ರತಿಮೆಗೆ ಹಾಕುವ

ಹೂಮಾಲೆಗಳ ತಡಬಡಿಕೆಗಾಗಲಿ, ಜನರ ಗದ್ದಲ ಸಪ್ಪಳಕ್ಕಾಗಲಿ. ಹಾರಿಸ ಬೇಕೆಂಬವರ ಚಪ್ಪಾಳೆಗಳಿಗಾಗಲಿ ಅಳುಕದೆ ಕುಳಿತು ಬಿಟ್ಟಿತು. ಆ ಗುಬ್ಬಿ! ಮುಂದೆ ಮುಂದೆ ಹೋದಂತೆ ಅದರ ಗಟ್ಟಿತನದಿಂದ ಹತ್ತಿರದ ಜನರಿಗೆ ಆಶ್ಚರ್ಯವೂ ಆಯಿತು. ಉತ್ಸವ ಮಠಕ್ಕೆ ಬಂದಿತು, ಮೂರ್ತಿಯನ್ನು ಗುರುಮನೆಯಲ್ಲಿ ಇರಿಸಿ ಮಂಗಳಾರತಿ ಮಾಡಿದರು. ಆಗಲೂ ಗುಬ್ಬಿ ಕದ ಲದಿರುವದನ್ನು ಕಂಡು ಭಕ್ತರ ಸಮೂಹಕ್ಕೆ ಅತ್ಯಾಶ್ಚರ್ಯವಾಯಿತು, ಶ್ರೀಗಳವರಿಗೆ ಅದರ ಅರ್ಥವಾಗಿತ್ತು.ಅವರು ಅದನ್ನು ಕೈಯಲ್ಲಿ ತಕ್ಕೊಂ ಡರು. ಅದು ಅವರ ಮೈಮೇಲೆ ಕ್ಷಣಹೊತ್ತು ಕುಳಿತು ಮತ್ತೆ ಹಾರಿಹೋಗಿ ಮೂರ್ತಿಯನ್ನೇ ಆಶ್ರಯಿಸಿ ಕುಳಿತಿತು. ಮೂರುದಿನ ಅಲ್ಲಿ ಉಳಿಯಿತು. ಹೊಸದಾಗಿ ಕೇಳಿದ ಜನ ನೋಡ ಬರುತ್ತಿದ್ದರು. ಮೂರನೆಯ ದಿನ ಶ್ರೀಗಳವರು ಕೈಮುಗಿದು ಯೋಗಿವರ್ಯನೆ ಆಶ್ಚರ್ಯಕರವಾದ ಈ ರೀತಿ ಗುಬ್ಬಿಯ ರೂಪದಲ್ಲಿ ದರ್ಶನ ಕೊಟ್ಟು ನಮಗೆ ಮಹದಾನಂದವಾಗಿದೆ. ಆದರೆ ನಿನ್ನ ರೂಪವನ್ನು ನಾಯಿ, ಬೆಕ್ಕುಗಳು ಕಬಳಿಸಿದರೆ ನನಗೆ ಖೇದ ವಾಗುತ್ತದೆ ಆದ್ದರಿಂದ ಈ ವೇಷದಿಂದ ತೊಲಗಬೇಕು ಎಂದು ಪ್ರಾರ್ಥಿಸಿ ಸ್ನಾನಕ್ಕಾಗಿ ತೆರಳಿದರು. ಪೂಜಾ -ಪ್ರಸಾದ ಮುಗಿಸಿಕೊಂಡು ಬಂದಾಗ ಅಲ್ಲಿ ಆ ಗುಬ್ಬಿ ಇರಲಿಲ್ಲ ಇದನ್ನು ಕೇಳಿದ ಭಕ್ತರು ಇದಲ್ಲ ಆಗಿನ ಶಿವ ಯೋಗಿಗಳ ಲೀಲೆ ಈಗಿನ ಶ್ರೀಗಳ ಅರಿಕೆ ಎಂದು ಭಾವಿಸಿ ನಲಿದರು.

4 ತುಂಬಿದ ಹಳ್ಳ ದಾಟಿದ್ದು ಪ್ರಸಾದ ಮಹಿಮೆಯಾದದ್ದು

ಪ್ರೊ. ಚೆ. ಸುಂದರೇಶನ್ ಎಂ. ಎ, ಇವರು ಬೆಂಗಳೂರು ಸರಕಾರಿ ಕಾಲೇಜದಲ್ಲಿ ಪ್ರೊಫೆಸರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಅಖಂ ಡೇಶ್ವರ ವಚನ, ವಚನಕಾರ ಷಣ್ಮುಖ ಶಿವಯೋಗಿ ಈ ವಿಷಯ ಕುರಿತು ಪಿ.ಎಚ್.ಡಿ,ಗೆ. ಪ್ರಬಂಧ ಬರೆಯುವದಕ್ಕೆ ಅಭ್ಯಾಸ ಮಾಡುತ್ತಿದ್ದರು. ಶ್ರೀ ಮಠದ ವಿಶೇಷ ಸಾಹಿತ್ಯ ಪರಿಶೀಲಿಸುವ ಜೋಗಿಕೊಳ್ಳವನ್ನು ಪ್ರತ್ಯಕ್ಷ ಕಾಣುವ ಉದ್ದೇಶದಿಂದ ೧೯೬೭ರ ಜುಲೈದಲ್ಲಿ ಜೇವರಗಿಗೆ ಬಂದರು.

ಶ್ರೀಗಳು ಅಮಾರ ಪರಾಮರಿಕೆಮಾಡಿ ಅವಶ್ಯಕ ಸಂಗತಿಗಳನ್ನು ತಿಳಿಸಿದರು. ಮರುದಿನ ಮಠದ ಕಮತದ ಗುರಣ್ಣ ಕಲ್ಲಾ ಈತನ ಚಕ್ಕಡಿ ಹೂಡಿಸಿ ಕೊಂಡು ಶ್ರೀಗಳು ಬೇರೆ ತಮ್ಮ ಮೂವರು ಒಡನಾಡಿ ಭಕ್ತರು ಸಹಿತ ಸುಂದರೇಶನ್‌ರನ್ನು ಜೋಗಿ ಕೊಳ್ಳಕ್ಕೆ ಕರಕೊಂಡು ಹೊರಟರು. ದಾರಿ ಯಲ್ಲಿ ಶಿವಯೋಗಿಯ ಹಲವು ಲೀಲೆಗಳನ್ನು ಪ್ರೊಫೇಸರರಿಗೆ ವಿವರಿಸಿ ಹೇಳುತ್ತ ಸಾಗಿದ್ದರು. ಮೇಲೆ ನೋಡಿ ಪ್ರೊಫೇಸರರು ನುಡಿದರು,

ಪೂಜ್ಯರೆ, ಇದೊಂದು ಆ ಮಹಾತ್ಮರ ಲೀಲೆ ನೋಡಿರಿ. ನಾವು ಹೊರಟಾಗಿನಿಂದ ನಮ್ಮ ಮೇಲೆ ಒಂದು ಚಿಕ್ಕ ಮೋಡ ನಮಗೆ ನೆರಳು ಮಾಡುತ್ತ ನಮ್ಮೊಡನೆಯೇ ಇದೆ. ಬೇರೆ ಕಡೆಯಲೆಲ್ಲ ಬಿಸಿಲು ಇದೆ. "ಉಳಿ ದವರು ಮೇಲೆ ನೋಡಿ "ಶಿವಯೋಗಿಯ ಸೇವೆಗೆ ತೊಡಗಿದ ನಿಮ್ಮ ಮೇಲೆ ಆತನ ಕರುಣೆ ಇದು" ಎಂದರು ಸಂತಸಪಟ್ಟರು.

ಕೊಳ್ಳುರಿಗೆ ಬಂದು ಚಕ್ಕಡಿ ಬಿಟ್ಟು ಪ್ರಸಾದ ಬುತ್ತಿಯನ್ನು ತಕ್ಕೊಂಡು ಕೊಳ್ಳಕ್ಕೆ ಇಳಿದರು. ಅಷ್ಟರಲ್ಲಿ ಮೋಡಮುಸುಕಿ ಮಳೆ ಬರ ಹತ್ತಿತು. ಅವಸರ ಮಾಡಿ ನಡೆದು ಕೊಳ್ಳದಲ್ಲಿ ಕಲ್ಲಮಂಟಪ ಸೇರಿದರು. ಆದರೆ ಬಿರಿಸಾಗಿ ಬಂದ ಮಳೆಯ ಧಾರೆಗಳು ಒಳನುಗ್ಗಿ ನಿಂತವರನ್ನು ತೋಯಿಸಹತ್ತಿದವು. ಪ್ರೊಫೇಶರರ ಬೆಡಗಿನ ಬಟ್ಟೆಗಳು ಕೆಡಹತ್ತಿದವು. ಅಷ್ಟರಲ್ಲಿ ಒಬ್ಬ ಮನುಷ್ಯನು ಒಂದು ಸೊಪ್ಪೆ [ಕಣಕಿ]ಯ ಹೊರೆಯನ್ನು ತಂದು ಮುಂಬದಿಗೆ ನಿಲ್ಲಿಸಿದನು. ಅದು ಪ್ರೊಫೇಶರ ತೊಂದರೆಗೆ ಪರಿಹಾರ ವಾಯಿತು.

ಮಳೆ ನಿಂತಿತು, ಸ್ವಾಮಿಗಳು ಷಣ್ಮುಖ ಶಿವಯೋಗಿಗಳ ತಪಸ್ಸಿನ ಕುರುಹುಗಳನ್ನೆಲ್ಲ ತೋರಿಸಿ ವಿವರಿಸಿದರು. ಬಳಿಕ ಭೋಜನಕ್ಕೆ ಕುಳಿತರು. ಶ್ರೀಗಳು ಸ್ವತಃ ಎಡೆ ಮಾಡಿದರು. ಗೋಡೆಯ ಆಸನಕ್ಕೆ ನಿಂತ ದಾರಿಕಾರ ನನ್ನೂ ಪ್ರಸಾದಕ್ಕೆ ಕರೆದರು. ಪ್ರಸಾದಬುತ್ತಿ ಅಲ್ಪವಾಗಿತ್ತು. ಉಳಿದವ ರಿಗೆ ಸಾಲದೆಂಬ ಅನುಮಾನ! ಬಾಯಿಬಿಚ್ಚಿ ಯಾರೂ ಆಡಲಾರರು.

ಶ್ರೀಗಳ ಇಚ್ಛೆ! ಅದೊಂದು ಲೀಲೆ! ಒದಗಿದವರೆಲ್ಲ ಉಂಡು ಇನ್ನೂ ಉಳಿಯಿತು ಪ್ರಸಾದ.

ಕೊಳ್ಳೂರಿಗೆ ಬಂದರು. ಸಂಜೆಯಾಯಿತು. ಮಳೆ ಹೊಡೆದು ಹಳ್ಳ ಹರಿಗಳು ರಭಸದಿಂದ ಹರಿಯುತ್ತಿದ್ದವು. ಅಂದು ಅಲ್ಲಿ ನಿಲ್ಲಲು ಊರ ಹಿರಿಯರು ಭಿನ್ನವಿಸಿದರು. ಅತಿಥಿಗಳ ಅವಸರದ ಪ್ರಯಾಣಕ್ಕಾಗಿ ಹೊರಡಲೇಬೇಕಾಯಿತು.

ಚಕ್ಕಡಿ ಹಳ್ಳದ ದಂಡೆಗೆ ಬಂದಾಗ ಅದು ತುಂಬಿ ಹರಿಯುತ್ತಿತ್ತು. ಮೇಲೆ ಮೋಡ ಕವಿದು ಮತ್ತಿಷ್ಟು ಕತ್ತಲಾಯಿತು. ಎತ್ತುಗಳು ನೀರಲ್ಲಿ ದಾರಿತಪ್ಪಬಹುದು. ಪರಿಸ್ಥಿತಿ ಯೋಚನೆಗಿಟ್ಟಿತು. ಶಿವಯೋಗಿಯೇ ಪಾರುಮಾಡಬೇಕೆಂದರು. ಎದುರುಗಡೆಯಿಂದ ಒಂದು ಧ್ವನಿ "ಗಾಡಿ ದಾರಿಯ ಮೇಲೆ ನಿಂತಿದೆ, ಮುಂದೆ ಹೊಡೆಯಿರಿ. ನನ್ನ ಧ್ವನಿ ಕೇಳುವ ಕಡೆಗೆ ಬನ್ನಿರಿ" ಇದನ್ನು ಕೇಳಿ ಗುರಣ್ಣ ಗಾಡಿಯನ್ನು ಹಳ್ಳಕ್ಕೆ ಇಳಿಸಿದನು, ಗಾಡಿಯಲ್ಲಿರುವ ಯಾರಿಗೂ ನೀರು ತಾಗಲಿಲ್ಲ. ಹೀಗೆ ಬನ್ನಿರಿ ಸ್ವಲ್ಪ ಬಲಕ್ಕೆ ಈಗ ಎಡಕ್ಕೆ ಹಿಡಿಯಿರಿ" ಎಂಬ ಧ್ವನಿಕೇಳಿ ದಾರಿ ಹಿಡಿದು ಗುರಣ್ಣ ಹೊಡೆದು ಈಚೆಯ ದಂಡೆಗೆ ಬಂದರು. ಸಂಜ್ಞೆ ಮಾಡಿದ ಮನುಷ್ಯ ಇಲ್ಲ. ಬ್ಯಾಟ್ರಿಯಿಂದ ನೋಡಿದರು ಯಾರೂ ಇಲ್ಲ. ಅದೂ ಶಿವಯೋಗಿಯ ರಕ್ಷೆ! ಸುರಳಿತವಾಗಿ ಬಂದು ಮಠ ಸೇರಿದರು. ಈ ಕಂಡ ವಿಷಯ ಲಿಂಗಪ್ಪ ಸೀರಿ ಬಸಣ್ಣ ಗುರುಮೂರ್ತಿ ಸೋಮಣ್ಣ ಕಲ್ಲಾ ಇವರೆಲ್ಲರಿಗೂ ಅಚ್ಚರಿಯಾಯಿತು.

5 ಪತ್ರಿ ಪುಷ್ಪಗಳ ರೂಪದಲ್ಲಿ ದರ್ಶನ

ಕ್ರಿ.ಶ. ೧೯೪೪ರ ರಲ್ಲಿ ಶ್ರೀ ಶಾಂತಲಿಂಗ ಸ್ವಾಮಿಗಳವರು ಶ್ರೀ ಷಣ್ಮುಖ ಶಿವಯೋಗಿಗಳ ಗದ್ದುಗೆ ಗುಡಿಯ ಜೀರ್ಣೋದ್ಧಾರ ಕೈಕೊಳ್ಳುತ್ತಾರೆ. ಮಜಾರ ಆಕಾರದಲ್ಲಿ ರಚಿಸಲ್ಪಟ್ಟ ಮೇಲಿನ ಗದ್ದುಗೆಯನ್ನು

ಸರಿಯಾದ ಆಕಾರದಲ್ಲಿ ರಚಿಸಬೇಕಾಗಿತ್ತು. ಒಂದು ಒಳ್ಳೆಯ ದಿನ ಬೆಳಿಗ್ಗೆ ಈ ಕಾರ್ಯಕ್ಕಾಗಿ ತಮ್ಮ ನಿಕಟ ವರ್ತಿ ಭಕ್ತರಿಗೆ ಮುಡಿಯಿಂದ ಬರಲು ತಿಳಿಸಿದರು. ತಾವೂ ಶಿವಾರ್ಚನೆ ಗೈದು ಅವರಿಗಾಗಿ ಕಾದಿದ್ದರು. ಆ ಭಕ್ತರು ಬಂದೊಡನೆ. ಕಲ್ಲುಗಾರೆಗಳಿಂದ ಕಟ್ಟಿದ್ದರೂ ಶಿಥಿಲವಾಗಿದ್ದ ಆ ಮಜಾರದ ಆಕಾರದ ಆ ಗದ್ದುಗೆ ಬಿಚ್ಚಲು ಅಪ್ಪಣೆ ಮಾಡಿದರು. ಆ ಮಹಾಶಿವಯೋಗಿಯ ಗದ್ದುಗೆಯನ್ನು ಒಡೆಯಲು ಆ ಭಾವುಕರು ಹಿಂಜರಿದು ಒಬ್ಬರ ಮುಖವನ್ನೊಬ್ಬರು ನೋಡುತ್ತ ನಿಂತರು. ಇವರು ಸಂಸಾರಿಗಳು ಇವರಿಗಿದು ಸಹಜ ಎಂದು ಶ್ರೀಗಳು ತಾವೇ ಗುದ್ದಲಿ ಹಿಡಿದು ಶಿವಯೋಗಿಯ ಸೇವೆಗೆಂದೇ ಶಿವಯೋಗಿಯ ಗದ್ದುಗೆಯ ಕಲ್ಲು ಬಿಡಿಸಿ ತೆಗೆದರು ಎಂದು ಮುಬ್ಬುಗಲ್ಲುಗಳನ್ನು ತೆಗೆದಾಗ ಒಳಗೆಲ್ಲ ಬಸ್ಮದ ಉಂಡೆಗಳು ಅವುಗಳ ಮಧ್ಯದಲ್ಲಿ ಒಂದು ಲಿಂಗಾಕಾರ ಭಸ್ಮದುಂಡೆಯು ಮೇಲೆ ಪತ್ರಿಪುಷ್ಪಗಳಿದ್ದವು, ಶತಮಾನಗಳು ಕಳೆದಿದ್ದರು ಇದೀಗ ತಂದು ಧರಿಸಿದ ಹೂಗಳಂತೆ ಇದ್ದವು. ಮಹಾ ಶಿವಯೋಗಿ ಸುಪ್ತ ಚೇತನವನ್ನು ಈ ಪತ್ರಿ ಪುಷ್ಪಗಳಲ್ಲಿರಿಸಿ ಎಲ್ಲರಿಗೆ ದರ್ಶನ ಕೊಟ್ಟನೆಂದು ಶ್ರೀಗಳು ಆನಂದ ತುಂಬಿದವರಾಗಿ ವಂದನೆ ಸಲ್ಲಿಸಿದರು. ಉಳಿದವರೂ ಪ್ರಣಾಮಗೈದರು. ಕೆಲವು ವಿಭೂತಿಯ ಗುಟಿಕೆಗಳನ್ನು ಬೇರೆಕಡೆಗೆ ಮಠದಲ್ಲಿ ತೆಗೆದಿರಿಸಿ. ಮುಚ್ಚುಗಲ್ಲು ಹಾಕಿ ಮುಚ್ಚಿದರು. ಶೆಲ್ಲಿಕೇರಿ ಕಲ್ಲಿನಲ್ಲಿ ಶಾಸ್ತ್ರಶುದ್ಧವಾಗಿ ಸುಂದರವಾದಿ ಮಾಡಿದ ಗದ್ದುಗೆಯನ್ನು ಮೇಲೆ ಸ್ಥಾಪಿಸಿದ್ದಾರೆ. ನಿತ್ಯವೂ ಭಕ್ತ ಸಮುದಾಯವು ದರ್ಶನಪಡೆದು ಆರಾಧಿಸಿ ಪುನೀತರಾಗುತ್ತಿದ್ದಾರೆ,

6 ಕಂಠಮಾಲೆ ರೋಗ ಪರಿಹಾರ

ಜೇವರಗಿಯ ಮಾಲಿ ಪಾಟೀಲ ಗುರುಲಿಂಗಪ್ಪ ಗೌಡರ ಸಹಧರ್ಮಿಣಿ ಸರಸ್ವತಮ್ಮನಿಗೆ ಗಂಡಮಾಲೆ ಆಗಿದ್ದವು ವೈದ್ಯರ ಡಾಕ್ಟರರ ದೇಶೀ ವಿದೇಶೀ ಉಪಾಯಗಳೆಲ್ಲ ಮುಗಿದಿದ್ದವು, ಗುಣವಾಗಿರಲಿಲ್ಲ. ನಿರಾಶೆ ತಲೆ ಹಾಕಿತ್ತು ಬಂಧು ಬಳಗಕ್ಕೆಲ್ಲ ವಿಶೇಷ ಚಿಂತೆಯಾಗಿತ್ತು.

ಒಂದು ಮುಂಜಾವು ಗೌಡರು ತಮ್ಮ ಹೆಂಡತಿಯ ರೋಗದ ಬಗೆಗೆ ಚಿಂತೆಯ ಮಾತನಾಡುತ್ತ ಕುಳಿತ್ತಿದ್ದರು. ಅಗ ಭಿಕ್ಷೆಗೆ ಬಂದ ಜಂಗಮರೊಬ್ಬರು ಆದನ್ನು ಕೇಳಿದರು. ಗೌಡರೆ ನನ್ನ ಮಾತಿನಲ್ಲಿ ವಿಶ್ವಾಸವಿರಿಸಿ ಕೇಳಿರಿ, ನಮ್ಮ ಗ್ರಾಮದ ಷಣ್ಮುಖ ಶಿವಯೋಗಿಗಳು ಅಗಣಿತ ಮಹಿಮಾ ಪುರುಷರು ಅಮ್ಮನವರು ನಿತ್ಯವೂ ಆ ಶಿವಯೋಗಿಗಳ ಗದ್ದುಗೆಯ ದರ್ಶನ ಪಡೆದು ಆಧಾರ ಧರಿಸಿ ಬರಲಿ ರೋಗ ಗುಣವಾಗುವದು, ಮಾಡುವಿರಾ? ಎಂದನು. ಗೌಡರಿಗೆ ನೇರದಾರಿ ಕಂಡಂತಾಯಿತು. ಆಗಲಿ ಅಯ್ಯನವರೆ ಹಾಗೆ ಮಾಡುವೆವು ಮರೆತ ಮಾತನ್ನು ನೆನಪಿಗೆ ತಂದು ಕೊಟ್ಟಿರಿ ಎಂದು ಜಂಗಮರಿಗೆ ನಮಿಸಿದರು.

ಅಂದಿನಿಂದ ಸರಸ್ವತಿ ಗೌಡತಿ, ನಿತ್ಯವೂ ಮಡಿಯಿಂದ ಮಠಕ್ಕೆ ಬಂದು ಷಣ್ಮುಖ ಶಿವಯೋಗಿ ಗದ್ದುಗೆಯ ದರ್ಶನ ಪಡೆದು, ಶ್ರೀಗಳ ಪಾದಕ್ಕೆ ಎರಗಿ ಹೋಗಹತ್ತಿದಳು. ಹಲವು ದಿವಸಗಳಲ್ಲಿ ರೋಗದಲಕ್ಷಣ ಬದಲಾಯಿತು. ಗೌಡತಿಯ ಭಕ್ತಿ ಹೆಚ್ಚಿ ನಂಬುಗೆ ಧೃಢಪಟ್ಟಿತು. ಆರು ತಿಂಗಳಲ್ಲಿ ರೋಗ ಪೂರ್ಣವಾಗಿ ಗುಣವಾಯಿತು [ವಾಸಿಯಾಯಿತು] ದಂಪತಿಗಳು ಶ್ರೀಗಳಲ್ಲಿ ಅಚಲ ವಿಶ್ವಾಸವುಳ್ಳವರಾಗಿದ್ದಾರೆ. ಅಂದು ಬಂದು ಸೂಚಿಸಿದ ಜಂಗಮ ಷಣ್ಮುಖ ಶಿವಯೋಗಿಯೇ ಎಂದು ಭಾವಿಸಿ ಸುಖವಾಗಿದ್ದಾರೆ.

7 ಸಾಹಿತ್ಯ ಸೇವೆ ಸಲ್ಲಿಸಿ ಜಾಡ್ಯದಿಂದ ಮುಕ್ತಿ

ಕ್ರಿ.ಶ. ೧೯೬೪ ರಲ್ಲಿ ಶ್ರೀ ನಿ. ಪ್ರ. ಸ್ವ. ಶಾಂತಲಿಂಗ ಸ್ವಾಮಿಗಳು ಶ್ರೀ ಷಣ್ಮುಖ ಶಿವಯೋಗಿಗಳ ಸಂಸ್ಮರಣಾರ್ಥವಾಗಿ ಜ್ಞಾನಜ್ಯೋತಿ ಎಂಬ ಸಂಪಾದನೆಯ ಗ್ರಂಥವನ್ನು ಅಖಂಡೇಶ್ವರ ಗ್ರಂಥ ಮಾಲಿಕೆಯಲ್ಲಿ ಪ್ರಕಟಿಸಿದರು. ಆದಕ್ಕೆ ಮುನ್ನುಡಿ ಬರೆಯಬೇಕೆಂದು ಬೆಳಗಾವಿಯಲ್ಲಿದ್ದ ಪ್ರೊ. ಕೆ. ಜಿ. ಕುಂದಣಗಾರ ಇವರನ್ನು ಕೇಳಿ ಪತ್ರ ಬರೆದರು. ೧೫–೨೦ ದಿವಸ

ಕಳೆದರೂ ಅವರಿಂದ ಉತ್ತರ ಬರಲಿಲ್ಲ ಆದರೂ ಅವರ ಮೇಲಿನ ಶ್ರೀಗಳ ವಿಶ್ವಾಸ ಕಡಿಮೆಯಾಗಲಿಲ್ಲ. ಕಡೆಗೆ ಅವರು "ನಿಮಗೆ ಬರೆಯಲು ಆಗುವದಿಲ್ಲ" ಎಂದರೆ ಅವೆರಡು ಶಬ್ದಗಳನ್ನೇ ಮುನ್ನುಡಿ ಎಂದು ಹಾಕಿ ಪುಸ್ತಕ ಪ್ರಕಟಿಸುತ್ತೇವೆ ಎಂದು ಕುಂದಣಗಾರರಿಗೆ ಪತ್ರ ಬರೆದರು.

ಸ್ವಾಮಿಗಳ ಮೊದಲನೆಯ ಪತ್ರ ಹೋದಾಗಲೇ ಕುಂದಣಗಾರರು ಕಾಯಿಲೆಯಾಗಿ ಆಸ್ಪತ್ರೆಯಲ್ಲಿದ್ದರು. ಉತ್ತರ ಬರೆಯುವದಕ್ಕೂ ಶಕ್ಯವಾಗಿರಲಿಲ್ಲ ೨ ನೆಯ ಬಲವಾದ ಪತ್ರ ನೋಡಿ ಸ್ವಾಮಿಗಳು ತಮ್ಮಲ್ಲಿಟ್ಟ ವಿಶ್ವಾಸವನ್ನು ಭಂಗಿಸಲಿಕ್ಕಾಗದೆ ತಾವು ವಿಷಯ ಹೇಳುತ್ತ ತಮ್ಮ ಮಗನಿಂದ ಬರೆಯಿಸುತ್ತ ಮುನ್ನುಡಿ ಸಿದ್ಧಪಡಿಸಹತ್ತಿದರು. ಶಿವಯೋಗಿ ಸ್ಮರಣೆಯಲ್ಲಿ ಆ ಕಾರ್ಯ ಮುಂದುವರಿದಂತೆ ರೋಗ ಗುಣವಾಗುತ್ತ ಬಂದಿತು. ಮುನ್ನುಡಿ ಪೂರ್ಣವಾಯಿತು, ರೋಗವು ಪೂರ್ಣ ಗುಣವಾಯಿತು. ಡಾಕ್ಟರರಿಗೂ ಆಶ್ಚರ್ಯ

ಷಣ್ಮುಖ ಶಿವಯೋಗಿಗಳ ಗ್ರಂಥಕ್ಕೆ ಮುನ್ನುಡಿಯಾಗಿ ಸಲ್ಲಿಸಿದ ಸಾಹಿತ್ಯದ ಸೇವೆಯೇ ನನಗೆ ದಿವ್ಯೌಷಧಿಯಾಯಿತು. ನಾನು ಪೂರ್ಣ ಆರೋಗ್ಯ ಹೊಂದಿದ್ದೇನೆ ಎಂದು ಕುಂದಣಗಾರರು ಬಳಿಕ ಶ್ರೀಗಳಿಗೆ ಬರೆದ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

8 ಅಂದೋಲಾ ಶರಣಪ್ಪಗೌಡರ ಸ್ವಪ್ನದಲ್ಲಿ ಅಖಂಡೇಶ್ವರ ವಚನ ಪಡೆದದ್ದು

ಪೂಜ್ಯ ಷಣ್ಮುಖ ಶಿವಯೋಗಿಗಳ ಪೀಠದ ಅಧಿಪತಿಗಳಲ್ಲಿ ಲಿಂಗೈಕ್ಯ ಯಜಮಾನ ಶರಣಪ್ಪ ಗೌಡರು ತಮ್ಮ ೨೫ ನೆಯ ವಯಸ್ಸಿನಿಂದ ೯೯ ವಯದ ಅತಿವೃದ್ಧಾಪ್ಯದ ವರೆಗೂ ಅದೇ ಒಂದೇ ಭಕ್ತಿ ವಿಶ್ವಾಸದಿಂದ ನಡೆದುಕೊಂಡು ಬಂದರು ೧೯೭೭ರ ಜುಲೈದಲ್ಲಿ ಲಿಂಗೈಕ್ಯರಾದರು.

ಶರಣರಾದ ಶರಣಪ್ಪಗೌಡರಿಗೆ ೧೯೫೮ರ ಅಗಷ್ಟದಲ್ಲಿ ವಿಶೇಷ ಕಾಯಿಲೆಯಾಗಿ ಹಾಸಿಗೆ ಹಿಡಿದರು. ಒಂದು ದಿನ ದಯಮಾಡಿಸಿ ಆಶೀರ್ವದಿಸಿ ಹೋಗಬೇಕೆಂದು ಅಂದೋಲಿಯಿಂದ ಶಾಂತಲಿಂಗ ಶ್ರೀಗಳಿಗೆ ಪತ್ರ ಬರೆಯಿಸಿದರು ಆದರೆ ಜೇವರಗಿಯ ಸದ್ಭಕ್ತ ಅರಳಿ ಶರಣಪ್ಪನವರ ಮನೆಯಲ್ಲಿ ಶ್ರೀಗಳವರ ಶ್ರಾವಣಮಾಸದ ಲಿಂಗಾನುಷ್ಠಾನ ನಡೆಯುತ್ತಿರುವದರಿಂದ ಅವರಿಗೆ ಅಂದೋಲಿಗೆ ಹೋಗಲು ಶಕ್ಯವಾಗಲಿಲ್ಲ. ಇತ್ತ ಶರಣಪ್ಪಗೌಡರ ಅಸ್ವಾಸ್ಥ್ಯ ಉಲ್ಬಣಿಸುತ್ತದೆ. ಇವರು ಉಳಿಯುವದಿಲ್ಲವೆಂದು ಎಲ್ಲರಿಗೂ ಅನಿಸಿತು! ಬಳಗವೆಲ್ಲ ಕಳವಳ ಪಡುತ್ತಲಿತ್ತು.

ಒಮ್ಮೆ ಗೌಡರಿಗೆ ಸ್ವಲ್ಪ ನಿದ್ರೆಹತ್ತಿತು. ಸ್ವಪ್ನದಲ್ಲಿ ಶ್ರೀ ಶಾಂತಲಿಂಗ ಸ್ವಾಮಿಗಳು ದರ್ಶನವಿತ್ತರು. ಹೀಗೆ ನುಡಿದರು.

"ಗೌಡರೆ, ನೀವು ಶಿವಯೋಗಿಗಳಲ್ಲಿ ಅಚಲ ಶ್ರದ್ಧೆಯುಳ್ಳವರಾಗಿದ್ದಿರಿ ಅವರ ಅಖಂಡೇಶ್ವರ ವಚನಗ್ರಂಥ ಪಾರಾಯಣ ಮಾಡಿದರೆ ನಿಮಗೆ ಸಂಪೂರ್ಣ ಆರೋಗ್ಯವಾಗುವದು

" ನನಗೆ ಕುಳಿತುಕೊಳ್ಳಲಿಕ್ಕೆ ಬರುವದಿಲ್ಲ ಓದುವದು ಹೇಗೆ"

" ಅದಾಗದಿದ್ದರೆ ನಿಮ್ಮ ತಲೆದಿಂಬಿನ ಹತ್ತಿರ ಇಟ್ಟುಕೊಂಡು ಮಲಗಿರಿ" ಈ ಅಭಯವಾಣಿಗೆ ಒಪ್ಪಿ ಗೌಡರು ನಮಸ್ಕರಿಸುತ್ತಿರುವಾಗ ಎಚ್ಚರವಾಯಿತು.

ಗೌಡರು ಬಂಧು ಪ್ರೇಮದ ಭರತನಂತಿದ್ದ ತಮ್ಮ ಸೋದರ ಡಾ. ಸಂಗನಗೌಡರನ್ನು ತಮ್ಮ ಧರ್ಮಪತ್ನಿ ಲಕ್ಷ್ಮೀಬಾಯಿಯವರನ್ನು ಕರೆದು ಸ್ವಪ್ನದ ವಿಷಯ ತಿಳಿಸಿದರು. ಅಪ್ಪಾ ಅವರು ದರ್ಶನ ಕೊಟ್ಟು ಹೋದರೆಂದು ಅತ್ಯಂತ ಸಂತೋಷ ಪಡುತ್ತಾರೆ. ಮರಣೋನ್ಮುಖರಾಗಿದ್ದ ಗೌಡರಿಗೆ ಆರೋಗ್ಯವಾಗುತ್ತದೆ. ಮುಂಜಾನೆ ಎದ್ದು ಕುಳಿತರು ಅಡ್ಡಾಡಲು ಪ್ರಾರಂಭಿಸಿದರು. ಮನೆಯವರಿಗೂ ಸರ್ವಬಳಗಕ್ಕೂ ಆನಂದವಾಗುತ್ತದೆ.

ಶ್ರೀಗಳಲ್ಲಿಯ ಶಿವಯೋಗಿಯ ತೋರಗದ್ದುಗೆಯಲ್ಲಿಯೂ ಅವರ ಭಕ್ತಿ ಮತ್ತಿಷ್ಟು ಧೃಢಪಡುತ್ತದೆ. ಶ್ರೀಗಳನ್ನು ಬರಮಾಡಿಕೊಂಡು ಭಾರೀ ಗಣಾರಾಧನೆ ಮಾಡಿ ಸಂತೋಷ ಪಡುತ್ತಾರೆ. ನಂಬಿದವರನ್ನು ಶಿವ ಯೋಗಿ ಎತ್ತಿಕೊಳ್ಳುತ್ತಾನೆ. ಶ್ರೀ ಶಾಂತಲಿಂಗ ಸ್ವಾಮಿಗಳು ಷಣ್ಮುಖ ಶಿವಯೋಗಿಗಳ ಅಪರಾವತಾರಿಗಳು ಎಂದು ತಮ್ಮ ಮಾತಿನಲ್ಲಿ ಅಭಿಮಾ ನದಿಂದ ಹೇಳಹತ್ತಿದರು. ಗೌಡರು ಯಾರ ಮಾತನ್ನು ನಂಬುವದಿಲ್ಲ ಶ್ರೀಗಳ ವರ ಮಾತಿನಲ್ಲಿ ಅವರಿಗೆ ನಂಬಿಗೆ ಎಂದು ಜನರು ಅನ್ನುತ್ತಿದ್ದರು.

ಶರಣಪ್ಪಗೌಡರು ಶ್ರೀ ಗುರು ಕರುಣೇಶ್ವರರ ಶಿಷ್ಯರು ಗುರುಲಿಂಗ ಜಂಗಮ ಪ್ರೇಮಿಗಳು ಕ್ರಿಯಾನಿಷ್ಟರು ಸದುವಿನಯ ಸಂಪನ್ನರು ಪರನಾರಿ ಸೋದರರು ಪರೋಪಕಾರಿ ಜೀವಿಗಳು ಸಾಹಿತ್ಯ ಪ್ರೇಮಿಗಳು ವಾಗ್ಮಿ ಗಳು ಲೇಖಕರು ನುಡಿಯಂತೆ ನಡೆಯುಳ್ಳವರು, ಜೇವರಗಿಯನ್ನು ಕೈಲಾಸ ದಂತೆ ಭಾವಿಸಿದವರು. ಸೋದರ ಸಂಗನಗೌಡರು ಮನೆಯ ಸರ್ವರೂ ಅವರ ಅನುಚರರು ಅವರ ಮಕ್ಕಳಾದ ಶಂಕರಗೌಡರು ತಾಲೂಕಾ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರು,

9 ಕಡೆಗೀಲಿಲ್ಲದ ಬಂಡಿಯಿಂದ ಯೋಗಿ (ಜೋಗಿ) ಕೊಳ್ಳುವನ್ನು ಕಂಡ ಸರ್ಕಲ್ ಗುರುಬಸಯ್ಯನವರು

ಸುಲೆಪೇಟೆಯ ಸಾಲಿ ಶಿವಲಿಂಗಯ್ಯನವರ ಮಗ ಶ್ರೀ ಗುರುಬಸಯ್ಯ ನವರು ಸರ್ಕಲ್ ಇನಸ್ಪೆಕ್ಟರರಾಗಿ ಜೇವರಗಿಗೆ ಬಂದರು. [ಕ್ರಿ. ಶ. ೧೯೭೫ ರಲ್ಲಿ] ಅವರು ಪೂಜ್ಯ ಶಾಂತಲಿಂಗ ಶ್ರೀಗಳವರಿಗೆ ಬಾಲ್ಯದಿಂದಲೂ ಪರಿಚಿ ತರು ಇನಸ್ಪೆಕ್ಟರರಿಗೆ ಶಿವಯೋಗಿಗಳಲ್ಲಿ ಶಿವಯೋಗಿ ಗದ್ದುಗೆಯಲ್ಲಿ ಬಹಳ ಭಕ್ತಿ. ಅವರು ವಾರಕ್ಕೊಂದು ಸಲವಾದರೂ ಮನೆಯವರೊಡನೆ ಮಠಕ್ಕೆ ಬಂದು ದರ್ಶನಾಶೀರ್ವಾದ ಪಡೆಯುತ್ತಿದ್ದರು. ಅವರಿಗೆ ಅಖಂಡೇಶ್ವರ ವಚನಗಳ ವೀಕ್ಷಣೆಯಿಂದ ಜೋಗಿಕೊಳ್ಳ ನೋಡಬೇಕೆಂಬ ಬಯಕೆ ಬಲವಾ ಯಿತು. ಅವರ ಪತ್ನಿ ಸರಸ್ವತಿ ಅವ್ವನವರು ಕೊಳ್ಳದಲ್ಲಿ ವನಭೋಜನ

ಮಾಡುವ ಸಿದ್ಧತೆ ಮಾಡಿದರು. ಅವರ ಆಗ್ರಹಕ್ಕೆ ಶ್ರೀಗಳೂ ಹೊರಟರು. ಮಠದ ಗಾಡಿಯನ್ನೆ ಹೂಡಿಸಿಕೊಂಡು ಹೊರಟರು. ಇನಸ್ಪೆಕ್ಟರ ತಂದೆ ಯಜಮಾನ ಶಿವಲಿಂಗಯ್ಯನವರೂ ಬಂದಿದ್ದರು. ಹರೆಯದ ಎತ್ತುಗಳು ಗಾಡಿ ಓಡಿಸುತ್ತಲೇ ಇದ್ದರು. ಅದು ಕೊಳ್ಳೂರ ಸಮೀಪಕ್ಕೆ ಬಂದಿತು. ಆ ಕಡೆಯಿಂದ ಬಂದ ಒಬ್ಬನು ಏನರಿ ಬಿಂದೆಗೆ ಎರಡೂ ಕೀಲವಿಲ್ಲವಲ್ಲ! ಎಂದನು ಬಾಲಕನು ಬಂಡಿಯನ್ನು ನಿಲ್ಲಿಸಿ ನೋಡುತ್ತಾನೆ ಎರಡು ಕೀಲಗಳು ಯಾವಾಗಲೋ ಹೋಗಿವೆ. ಆದರೂ ಗಾಲಿಗಳು ಕಳಚಿಲ್ಲ. ಕಡೆಗೀಲಿಲ್ಲದ ಬಂಡಿ ಹೊಡೆಗೆಡಬೇಕು ನೀವು ಬಂಡಿಯಲ್ಲಿ ಇದ್ದುದರಿಂದ ಹಾಗೆ ಆದಿಲ್ಲ. ನಮಗೆ ಭಯವಿಲ್ಲ ಎಂದು ಯಜಮಾನ 'ಶಿವಲಿಂಗಯ್ಯನವರು ಶ್ರೀಗಳನ್ನು ಕುರಿತು ನುಡಿದರು. ಶಿವಯೋಗಿಯಲ್ಲಿ ನಿಮ್ಮ ಭಕ್ತಿ ವಿಶ್ವಾಸಗಳು ಘನವಾಗಿರುವದರಿಂದ ಆತನೇ ನಿಮ್ಮನ್ನು ಕಾಯ್ದಿದ್ದಾನೆ ಎಂದರು ಶ್ರೀಗಳು. ಶಿವಯೋಗಿ ನಾಮಸ್ಮರಣೆ ಕಡೆಗೀಲು ಎಂದರು ಇನಸ್ಪೆಕ್ಟರ ಗುರಬಸಯ್ಯನವರು.

ಗೋತೀರ್ಥದಲ್ಲಿ ಮಿಂದು ಪೂಜಾಧಿಗಳನ್ನು ಜರುಗಿಸಿ ಪ್ರಸಾದ ಸೇವಿಸಿ ಸಂತಸದಿಂದ ಮರಳಿದರು. ಇನಸ್ಪೆಕ್ಟರ ಗುರುಬಸಯ್ಯನವರು ಈಗ ಕಲಬುರ್ಗಿಯಲ್ಲಿ ಡಿ. ವಾಯ್.ಎಸ್.ಪಿ.ಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಉಭಯರು ಭಾಷಾವಿಶಾರದ

10 ಷಡಕ್ಷರ ಕವಿಗಳು ಗುಂಜಹಳ್ಳಿ–ಶಿವಯೋಗಿಗಳ ಪುರಾಣ ಬರೆಯುವಾಗ ಮನಸ್ಸು ಚಂಚಲವಾದುದರ ಪರಿಣಾಮ

ಶ್ರೀ ಶಾಂತಲಿಂಗ ದೇವರು (ಈ ಶ್ರೀ. ನಿ. ಪ್ರ ಸ್ವ. ಶಾಂತಲಿಂಗ ಶಿವಯೋಗಿಗಳು) ಯಾದಗಿರಿ ಸಂಸ್ಕೃತ ಕಾಲೇಜದಲ್ಲಿ ಅಧ್ಯಯನ ಮಾಡುತ್ತಿದ್ದರು. ಗುಂಜೀಹಳ್ಳಿ ಷಡಕ್ಷರಕವಿ ತಮ್ಮ "ಅಮರೇಶ್ವರ ಶತಕ" ದ ಮುದ್ರಣಮಾಡಿಸಲಿಕ್ಕೆ ಯಾದಗಿರಿಯಲ್ಲಿ ಇದ್ದಾಗ ಶಾಂತಲಿಂಗದೇವರ

ಕೋಣೆಯಲ್ಲಿ ಬಿಡಾರ ಮಾಡಿದ್ದರು. ಆಗ ಉಂಟಾದ ಪರಿಚಯು ಬೆಳೆದು ಅವರಿಬ್ಬರನ್ನು ಸ್ನೇಹದ ನಿಕಟವರ್ತಿಗಳನ್ನಾಗಿಸಿತು.

ಜೇವರಗಿ ಶ್ರೀ ಷಣ್ಮುಖಸ್ವಾಮಿ ಪೀಠವು ಕೆಲವು ವರ್ಷಗಳಿಂದ ತೆರವಾಗಿತ್ತು. ರಟಗಲ್ಲಿನ ಪೂಜ್ಯ ಮರಿಗೇಂದ್ರ ಶಿವಯೋಗಿಗಳು ಅದರ ಮೇಲ್ವಿಚಾರಣೆ ಮಾಡುತ್ತಿದ್ದರು. ಮುಂದೆ ತಮ್ಮ ಸೇವೆಯಲ್ಲಿದ್ದ ಭಕ್ತಿ-ಜ್ಞಾನ-ವೈರಾಗ್ಯಗಳಲ್ಲಿ ಅರ್ಹರೆನಿಸಿದ್ದ ಶಾಂತಲಿಂಗದೇವರನ್ನು ಭಕ್ತರ ಅಭಿಪ್ರಾಯದಂತೆ ಈ ಮಠದ ಅಧಿಕಾರಿಗಳಾಗಲೆಂದು ನಿರ್ಣಯಿಸಿದರು, ೧೯೫೫ ರ ಅಕ್ಷಯ ತೃತಿಯೆಯಂದು ಪೀಠಾಧಿಕಾರ ಸಮಾರಂಭವನ್ನು ವೈಭವಯುತವಾಗಿ ಜರುಗಿಸಿದರು. ಶಾಂತಲಿಂಗ ಶಿವಯೋಗಿಗಳು ಕೂಡಲೆ ಮಠದ ಅಭಿವೃದ್ಧಿಗೆ ಗಮನ ಹರಿಸಿದರು. ಹಿಂದಿನ ಆಗುಹೋಗುಗಳ ಸಂಶೋಧನೆ ನಡೆಸಿದರು. ಮಹಾತ್ಮರು ವಚನಕಾರರು ಆದ ಷಣ್ಮುಖ ಶಿವಯೋಗಿಗಳ ಪುರಾಣ ಬರೆಯಿಸಲು ಯೋಚಿಸಿದರು. ಅದನ್ನು ಬರೆಯಲು ತಮ್ಮ ಪೂರ್ವ ಪರಿಚಯದ ಗುಂಜಿಹಳ್ಳಿ ಷಡಕ್ಷರ ಕವಿಗಳಿಂದ ಹರವಾಳ ಗವಾಯಿ ಇವರಿಗೆ ಆಜ್ಞಾಪಿಸಿದರು. ಶ್ರೀಗಳು ಕಲಬುರ್ಗಿಗೆ ಹೋಗಿದ್ದರು. ಅಪ್ಪನ ಜಾತ್ರೆಗೆಂದು ರೇವಣಸಿದ್ಧಪ್ಪನೂ ಅಲ್ಲಿಗೆ ಹೋಗಿದ್ದರು. ಷಡಕ್ಷರ ಕವಿ ಅಲ್ಲಿಗೆ ಬಂದಿರುವದನ್ನು ತಿಳಿದು ಅವರನ್ನು ಹುಡುಕಿ ಕರೆಕೊಂಡು ಶ್ರೀಗಳಿದ್ದಲ್ಲಿಗೆ ಬಂದು ಅವರಿಗೆ ಭೆಟ್ಟಿಮಾಡಿಸಿದನು. ಶ್ರೀಗಳಿಗೆ ಬಹಳ ಸಂತೋಷವಾಯಿತು. ಕುಶಲ ವಾರ್ತೆಗಳ ಅನಂತರ ಶ್ರೀಗಳು

“ನೀವು ಪ್ರತಿಭಾವಂತ ಕವಿಗಳು ನನಗೆ ಗೊತ್ತಿದೆ ನಮ್ಮ ಮಠದ ಮಹಾಶಿವಯೋಗಿ ಷಣ್ಮುಖ ಸ್ವಾಮಿಗಳ ಪುರಾಣ ಬರೆಯಬೇಕು ಈ ಸೇವೆ ನಿಮ್ಮಿಂದಾಗಲಿ”

“ನಾನು ಈ ಮೊದಲು ಯಾವ ಪುರಾಣವನ್ನು ಬರೆದಿಲ್ಲ ನನ್ನಿಂದ ನೀಗಬಹುದೇ ಪೂಜ್ಯರೇ?”

"ಈ ವರೆಗೆ ನಿಮ್ಮಿಂದ ಯಾರು ಬರಿಸಿಲ್ಲ ನೀವು ಬರೆದಿಲ್ಲ. ಈಗ ನಾನು ನಿಮ್ಮಿಂದ ಈ ಸೇವೆ ಸಲ್ಲಬೇಕೆಂದು ಯೋಚಿಸಿದ್ದೇನೆ ಬರೆಯಿರಿ"

" ಶಿವಯೋಗಿ ಇಚ್ಛೆಯಿದ್ದರೆ ಆಗಲಿ" ಒಪ್ಪಿಕೊಂಡರು ಕವಿಗಳು ಅವರನ್ನು ಕರಕೊಂಡು ಜೇವರದಿಗೆ ಬಂದರು. ಪುರಾಣ ಬರೆಯುವದಕ್ಕೆ ಸಂಬಂಧಿಸಿದ ವಿಚಾರಗಳನ್ನೆಲ್ಲ ಅವರ ಮುಂದಿಟ್ಟರು. ಅವಶ್ಯವಿದ್ದ ಮಾಹಿತಿಯ ಸಂಗ್ರಹವನ್ನು ಕೊಟ್ಟರು. ೨೫೧ ರೂ. ಸಂಭಾವನೆ ಪಡೆದು ಪುರಾಣ ಕಾವ್ಯ ರಚಿಸುವದಕ್ಕೆ ಒಪ್ಪಿ ಕವಿಗಳು ನಿಂತುಕೊಂಡರು. ನಿತ್ಯವೂ ಸ್ನಾನ ಪೂಜೆ ಮುಗಿದ ಬಳಿಕ ಶಿವಯೋಗಿಯ ಗದ್ದುಗೆಯ ಮುಂದೆ ಕುಳಿತು ಪದ್ಯಗಳನ್ನು ರಚಿಸುವದಕ್ಕೆ ತೊಡಗಿದರು.

ಕೆಲವು ಕಿಡಿಗೇಡಿಗಳು ಇಷ್ಟು ಅಲ್ಪ ಹಣಕ್ಕೆ ಕಾವ್ಯ ರಚಿಸುವದೇ ? ಎಂದು ಕವಿಗಳ ಕಿವಿಯೂದಿದರು. ಕವಿಯ ಮನಸ್ಸು ವಿಚಲಿತವಾಯಿತು. ಕಾಕತಾಲೀಯ ನ್ಯಾಯದಂತೆ ಅದೇ ಸಂದರ್ಭದಲ್ಲಿ ಷಡಕ್ಷರ ಕವಿಗಳಿಗೆ ಅವರ ಒಬ್ಬಳೇ ಮಗಳು ಮಹಾದೇವಿಯಮ್ಮನಿಗೆ ತೀಕ್ಷರೋಗ ಬಾಧೆಯೆಂದು ಅವರ ಊರಿನಿಂದ ಪತ್ರ ಬಂದಿತು, ಕವಿಗಳು ಊರಿಗೆ ಹೋಗಲು ಶ್ರೀಗಳ ಅಪ್ಪಣೆ ಕೇಳಿದರು. ಶಿವಕವಿ ಇಷ್ಟು ಅಧೀರನಾಗುವದು, ಕಾವ್ಯರಚನೆ ನಿಲ್ಲಿಸಿ ಹೋಗುವದು ಶ್ರೀಗಳಿಗೆ ಸರಿಕಾಣಲಿಲ್ಲ ಅವರು "ಕವಿಗಳೆ ಮುಂಬರುವ ಸೋಮುವಾರ ವರೆಗೆ ಗಟ್ಟಿಮನಸ್ಸು ಮಾಡಿ ನೋಡಿರಿ ಅಂದು ಸಂಜೆಯ ಒಳಗೆ ನಿಮ್ಮ ಮಗಳಿಗೆ ಆರೋಗ್ಯವಾದ ಬಗೆಗೆ ಪತ್ರ ಬಂದೀತು. ಹಾಗೆ ಬರದಿದ್ದರೆ ಹೋಗುವಿರಂತೆ ಕಾವ್ಯ ರಚನೆ ನಿಲ್ಲಿಸಬೇಡಿರಿ" ಎಂದರು.

ಅಂತು ಷಡಕ್ಷರಿ ಕವಿಗಳು ನಿಂತು ತಮ್ಮ ಕಾರ್ಯ ಮುಂದುವರಿಸಿದರು. ಸೋಮವಾರ ಬಂದಿತು. ಮಠಕ್ಕೆ ಅಂಚೆಯಿಂದ ಪತ್ರವೊಂದು ಬಂದಿತು. ಆದರೆ ಅದು ಶ್ರೀಗಳದು ಕಾತರಗೊಂಡ ಕವಿಗಳು ಶ್ರೀಗಳ

ಹತ್ತಿರ ಬಂದು ಇಂದು ಪತ್ರ ಬರಲಿಲ್ಲ ಎಂದು ಹೇಳಿದರು. ಆಗ ಶ್ರೀಗಳು ಕವಿಗಳೇ ನೀವು ಇಷ್ಟು ಆತುರದಿಂದ ನಿರಾಶರಾಗ ಬೇಡಿರಿ ಇಂದು ಸಾಯಂಕಾಲದ ವರೆಗೆ ಇದ್ದು ಸಂಜೆಯ ಅಂಚೆಯಿಂದ ಬರಬಹುದು ಪತ್ರ ಬಾರದಿದ್ದರೆ ಹೋಗುವಿರಂತೆ ಎಂದು ಹೇಳಿದರು. ಆಗ ಕವಿಗಳು ಸುಮ್ಮನಾದರು. ಶ್ರೀಗಳು ತಮ್ಮ ದಿನನಿತ್ಯ ಪೂಜೆ ಜಪತಪಗಳನ್ನು ಮಾಡಲು ಹೋದರು. ಕವಿಗಳು ಸಂಜೆಯ ಅಂಚೆಯ ಹಾದಿ ಕಾಯಹತ್ತಿದರು. ಸಂಜೆಯ ಅಂಚೆಯಿಂದ ಕವಿಗಳಿಗೆ ಒಂದು ಪತ್ರ ಬಂದಿತು. ಅದು ಅವರ ಮಗಳಾದ ಮಹಾದೇವಮ್ಮ ಬರೆದ ಪತ್ರವಾಗಿತ್ತು ಪೂಜ್ಯ ತಂದೆಯುವರಿಗೆ ಈಗ ನಾನು ಶ್ರೀಗಳ ಕೃಪೆಯಿಂದ ಗುಣಮುಖವಾಗಿರುವೆನು ನೀವೇನು ಕಾಳಜಿ ಮಾಡಬಾರದು ಮತ್ತು ಕಾವ್ಯ ರಚನೆಯನ್ನು ಮುಂದುವರಿಸಬೇಕು ಎಂದು ಬರೆದಿದ್ದಳು. ಅದನ್ನು ಓದಿ ಕವಿಗಳಿಗೆ ಆನಂದವಾಯಿತು. ಶ್ರೀಗಳಿಗೆ ಪತ್ರ ಬಂದ ವಿಷಯ ಹೇಳಿದರು. ತಮ್ಮ ಕಾವ್ಯ ರಚನೆಯ ಕಾರ್ಯ ಮುಂದುವರೆಸಿ ಪೂರ್ತಿಗೊಳಿಸಿದರು. ಆಗ ಶ್ರೀಗಳು ಅವರಿಗೆ ಶಾಲು ಹೊದಿಸಿ ಸನ್ಮಾನಿಸಿದರು ಮತ್ತು ಸಂಭಾವನೆ ಫಲಪುಷ್ಪ ಕೊಟ್ಟು ಆಶೀರ್ವದಿಸಿದರು. ಕವಿಗಳು ಶ್ರೀಗಳಿಗೆ ವಂದಿಸಿ ಶ್ರೀಗಳ ಆಶೀರ್ವಾದವನ್ನು ಅಪ್ಪಣೆ ಪಡೆದು ತಮ್ಮ ಊರಿಗೆ ಪ್ರಯಾಣ ಮಾಡಿದರು.

ಇತಿ ಶುಭಂ

ಶ್ರೀ ಷಣ್ಮುಖ ಶಿವಯೋಗಿಗಳ ವಚನಗಳ ಕುರಿತು

ಷಣ್ಮುಖ ಶಿವಯೋಗಿ ವೀರಶೈವ ಸಿದ್ಧಾಂತವನ್ನೂ, ಭಾರತೀಯ ತತ್ವಜ್ಞಾನವನ್ನೂ ಚೆನ್ನಾಗಿ ಮನನ ಮಾಡಿಕೊಂಡು ಅವುಗಳನ್ನು ತಮ್ಮ ವಚನದಲ್ಲಿ ವಿವರಿಸಿರುವರು.

ಡಾ. ಶಿ. ಚೆ. ನಂದಿಮಠ

ಹನ್ನೊಂದನೆಯ ಶತಮಾನದಿಂದ ಆರಂಭವಾದ ವಚನ ವಾಙ್ಮಯದ ಪ್ರವಾಹಕ್ಕೆ ಹದಿನೇಳನೆಯ ಶತಮಾನದ ಷಣ್ಮುಖ ಶಿವಯೋಗಿಗಳೇ ಚರಮ ವಿರಮಸ್ಥಾನದಂತಿದ್ದಾರೆ.

ಡಾ. ಆರ್. ಸಿ. ಹಿರೇಮಠ

ವಚನ ಸಾಹಿತ್ಯದ ಪರಂಪರೆಯನ್ನು ನಡೆಸಿಕೊಂಡು ಬಂದ ಸ್ವಲ್ಪ ವಚನಕಾರರಲ್ಲಿ ಷಣ್ಮುಖ ಶಿವಯೋಗಿ ಒಬ್ಬರಾಗಿದ್ದಾರೆ ಅಖಂಡೇಶ್ವರ ವಚನಗಳಲ್ಲಿ ಅವರ ಆತ್ಮಾನುಭಾವವು ಅಖಂಡ ಧಾರೆಯಾಗಿ ಸುರಿದಿರುತ್ತದೆ.

ಡಾ. ರಂ. ಶ್ರೀ. ಮುಗಳಿ

ವಚನಕಾರರಲ್ಲಿ ಬಹುಶ: ಷಣ್ಮುಖ ಶಿವಯೋಗಿಗಳದೆ ಕೊನೆಯ ದೊಡ್ಡ ಹೆಸರು.

ಡಾ. ಎಚ್. ತಿಪ್ಪೇರುದ್ರಸ್ವಾಮಿ

ಅಖಂಡೇಶ್ವರ ವಚನಗಳು ಶಿವಾನುಭವ ಶಬ್ದಕೋಶವಾಗಿದೆ.

ಶ್ರೀ ಸಿದ್ಧವೀರದೇವರು ಹೊಸಮಠ

ಪೂಜ್ಯ ಶ್ರೀಗಳವರಲ್ಲಿ ಭಕ್ತಿ ಪುರುಷರ ವಂದನೆಗಳು

ಮೊದಲನೆಯದಾಗಿ ನಾನು ಕೂಡಲೇ ಕಾಗದ ಬರೆಯದ್ದಕ್ಕಾಗಿ ಕ್ಷಮೆ ಕೋರುವೆ ಹಾಗೆ ಆದದ್ದಕ್ಕೆ ಕಾರಣವೂ ಇದೆ, ತಾವು ಆಶೀರ್ವದಿಸಿದ ಜ್ಞಾನಜ್ಯೋತಿಯನ್ನು ಸಂಪೂರ್ಣವಾಗಿ ಓದಿ ಮುಗಿಸಿದೊಡನೆ ಕಾಗದ ಬರೆಯಬೇಕೆಂದು ಮನಸ್ಸು ಮಾಡಿದುದೇ ವಿಳಂಬಕ್ಕೆ ಎಡೆಯಾಯಿತು. ತಾವು ವಿವಿಧ ಪಂಡಿತರಿಂದ ಸಂಗ್ರಹಿಸಿ ಹೊತ್ತಿಸಿದ ಜ್ಞಾನಜ್ಯೋತಿ ತಮ್ಮ ಮಠದ ಮೇಲೆ ಬೆಳಕು ಚೆಲ್ಲುವದಲ್ಲದೆ ರಸಿಕರ ಹೃದಯಮಂದಿರಗಳಲ್ಲಿ ನಂದಾದೀಪವನ್ನು ಹಚ್ಚಿಯೇತೀರುವದೆಂದು ಕಲ್ಪನೆ ನನಗಾಯಿತು. ಶ್ರೀ ಷಣ್ಮುಖ ಶಿವಯೋಗಿಗಳ ಭವ್ಯ ಜೀವನ, ರಸವಾಣಿ, ಶಿವಯೋಗಿಗಳ ಮಹತ್ವ ಮುಪ್ಪರಿಗೊಂಡು ಈ ದಿವ್ಯ ಕೃತಿಯಲ್ಲಿ ಬೆಳಗುವಂತೆ ಪ್ರಯತ್ನಿಸಿದ ತಾವು ಕನ್ನಡ ಸಾರಸ್ವತ ಪ್ರಪಂಚಕ್ಕೆ ಮಹದುಪಕಾರ ವೆಸಗಿದ್ದೀರಿ ಆದಕ್ಕಾಗಿ ನಾಡಿನಭಕ್ತರೆಲ್ಲರೂ ತಮಗೆ ಋಣಿಯೇ ಸರಿ.

ಎಂ. ಎಸ್. ಸುಂಕಾಪೂರ
M. A. Ph. D.
ಲೆಕ್ಚರರು ಕನ್ನಡ

ಕರ್ನಾಟಕ ಯುನಿವರಸಿಟಿ
ಧಾರವಾಡ

ಪ್ರೇಮವೇ ದೇವರು

ಸುಕ್ಷೇತ್ರ ಜೇವರಗಿ ಶ್ರೀ ಷಣ್ಮುಖ ಶಿವಯೋಗಿ ಮಠಾಧ್ಯಕ್ಷರೂ ಜ್ಞಾನ ಜ್ಯೋತಿ ಗ್ರಂಥ ಪ್ರಕಟಣೆಗೆ ಕಾರಣ ಕರ್ತೃಗಳೂ ಆದ ಶ್ರೀಮನ್ ನಿರಂಜನ ಪ್ರಣವ ಸ್ವರೂಪ ಶ್ರೀ ಶಾಂತಲಿಂಗ ಸ್ವಾಮಿಗಳವರ ದಿವ್ಯ ಸನ್ನಿಧಾನದಲ್ಲಿ ಕೃಪಾಪಾತ್ರನಾದ ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಸಾಹಿತ್ಯ ಸಮಿತಿ ಪ್ರಚಾರಾಧಿಕಾರಿ ಮಲ್ಲಾಬಾದಿ ವೀರಭದ್ರಪ್ಪನು ಪೊಡಮಟ್ಟು ಮಾಳ್ಪ ಶಿರಸಾಷ್ಟಾಂಗ ಬಿನ್ನಹಗಳು.

ಮಹಾ ಸನ್ನಿಧಿಯ ಸಾಹಸಪೂರ್ಣ ಪ್ರಕಟಣೆಯಾದ "ಜ್ಞಾನಜ್ಯೋತಿ" ಗ್ರಂಥವು ಆಶೀರ್ವಾದ ಪೂರ್ವಕವಾಗಿ ದಯಪಾಲಿಸಿದ್ದು ಹೊಸ ಮೊದಲಗಿತ್ತಿಗೆ ಉಡಿ ತುಂಬಿದಂತೆ ಆಯಿತು. ಕೆಲವು ವರ್ಷಗಳಿಂದ ನಿರೀಕ್ಷಿಸುತ್ತಿದ್ದ ಗ್ರಂಥವೊಂದನ್ನು ಕಣ್ಣಾರೆ ಕಂಡು ಬಹುವಾಗಿ ಆನಂದ ಪಟ್ಟಿದ್ದೇನೆ. ಹಸಿದ ಪಿಕನನ್ನು ಬನದೊಳಗೆ ಬಿಟ್ಟಂತೆ ಆ ಮೂಲಾಗ್ರವಾಗಿ ಓದಿದ್ದೇನೆ. ರಾಷ್ಟ್ರಾಧ್ಯಕ್ಷರಾದ ಡಾ. ರಾಧಾಕೃಷ್ಣರಿಂದ ರ್‍ಯಾಂಗಲರ ಪಾವಟಿಯವರನ್ನು ಬಳಿವಿಡಿದು ಶ್ರೀ ನಿಜಲಿಂಗಪ್ಪನವರ ಮೇಲೆ ಪ್ರಭಾವದ ಆಜ್ಞೆ ಜ್ಞಾತ್ತಿದಂತೆ ತಮ್ಮ ಸತತೋತ್ಸಾಹಪೂರ್ಣವಾದ ಸ್ಮಾರಕ ಸಂಪುಟವನ್ನು ಭಕ್ತಿಪ್ರೇಮದಿಂದ ಅತ್ಮಿಯತೆಯಿಂದ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದೆಲ್ಲಕ್ಕೂ ಮಹಾಮಹಿಮರಾದ ಕೊಕ್ಕಟನೂರ ಶ್ರೀ ಮುರುಗೇಂದ್ರ ಸ್ವಾಮಿಗಳು ಹಾಗು ಮಹಾಕರ್ತೃಗಳಾದ ಅಖಂಡೇಶ್ವರ ಅನುಗ್ರಹ ಬಲವೆಂದೇ ಭಾವಿಸಿದ್ದೇನೆ. ಸಾಹಿತ್ಯ ಪ್ರಪಂಚದಲ್ಲಿ ತಮ್ಮ ಅಸ್ತಿತ್ವವು ಅಖಂಡೇಶ್ವರ ಅಂಕಿತವುಳ್ಳ ಶ್ರೀ

ಷಣ್ಮುಖಸ್ವಾಮಿಗಳವರಂತೆ ಚಿರನೂತನವಾಗಿದೆ. ಅಮೃತದ ಸಸಿಗೆ ಸವಿಯ ಬಳ್ಳಿಯನ್ನು ಹಬ್ಬಿಸಿದಂತೆ ಈ ಮಹತ್ಕಾರ್ಯದಲ್ಲಿ ನನ್ನ ಸೋದರಳಿಯ ಪ್ರೊಫೆಸರ ಬಸವರಾಜ ಚೆನ್ನವೀರಪ್ಪ ಜವಳಿ ಅವರನ್ನು ಉಪಸಂಪಾದಕನನ್ನಾಗಿ ಆಯ್ದುಕೊಂಡು ಸೇವೆಸಲ್ಲಿಸಲು ಆತನಿಗೆ ಅವಕಾಶ ಕೊಟ್ಟದ್ದಕ್ಕಾಗಿ ಸಿರಾಭಾರಿ ಚರವರ್ಯರಾದ ತಮ್ಮ ಶ್ರೀ ಚರಣದಲ್ಲಿ ಆಭಾರಿಯಾಗಿದ್ದೇನೆ. ಡಾ. ಶಿ. ಚೆ. ನಂದೀಮಠರವರ ಪ್ರಸ್ತಾವನೆಯ ಔಚಿತ್ಯವು ಈ ಗ್ರಂಥಕ್ಕೆ ಅಪ್ಪಿಷ್ಟಲ್ಲ ತ್ರಿವಿಧ ದಾಸೋಹ ಮೂರ್ತಿಗಳಾದ ಶ್ರೀ ಪೂಜ್ಯ ಮೃತ್ಯುಂಜಯಪ್ಪಗಳವರಿಗೆ ಅರ್ಪಿಸಿರುವದು ಕಾಲೋಚಿತವಾಗಿದೆ.

ಕೊನೆಯಮಾತೆಂದರೆ ಮುಖ್ಯವಾಗಿ ವಚನ ವಾಙ್ಮಯ ಸರೋವರದಲ್ಲಿ ಜ್ಞಾನಜ್ಯೋತಿ ಸಾಹಿತ್ಯ ಸರಸಿಜವು ಶ್ರೀ ಷಣ್ಮುಖ ಶಿವಯೋಗಿಗಳ ಸ್ಮಾರಕ ಸಂಪುಟವಾಗಿ ಅರಳಲಿಕ್ಕೆ ಚಿತ್‌ಸೂರ್ಯನೋಪಾದಿಯಲ್ಲಿ ಸಾಹಸ ಪೂರ್ಣವಾದ ಪವಿತ್ರ ಕಾರ್ಯವನ್ನೆಸಗಿದ ಪರಮ ಪೂಜ್ಯ ಶ್ರೀ ಶಾಂತಲಿಂಗ ಸ್ವಾಮಿಗಳವರ ಸತತೋತ್ಸಾಹ ಸಾಹಸಕ್ಕಾಗಿ ಶರಣಾಗತನಾಗಿ ಭಕ್ತಿ ಪ್ರೇಮಾತಿಶಯ ಪೂರ್ವಕ ಕೃತಜ್ಞತೆಯನ್ನು ಈ ಮೂಲಕ ಸಲ್ಲಿಸುತ್ತೇನೆ.

ಲಿಂಗಾಯತ ಭವನ
ಧಾರವಾಡ

ಕೃಪಾ ಪಾತ್ರ
ಮಲ್ಲಾಬಾದಿ ವೀರಭದ್ರಪ್ಪ

ಶ್ರೀ ಶ್ರೀ ಶ್ರೀ ಜ, ಸಿದ್ಧಲಿಂಗ ಮಹಾಸ್ವಾಮಿಗಳು ತೋಂಟದಾರ್ಯಮಠ ಡಂಬಳ–ಗದಗ ಇವರಿಂದ

ಶ್ರೀ ಮ. ನಿ, ಪ್ರ. ಶ್ರೀ ಶಾಂತಲಿಂಗ ಸ್ವಾಮಿಗಳು ಷಣ್ಮುಖ ಶಿವಯೋಗಿ ಮಠ ಜೇವರಗಿ ಇವರಿಗೆ ನೀವು ಕಳುಹಿದ ಜಡದಲ್ಲಿ ಜಂಗಮ ಗ್ರಂಥ ತಲುಪಿದೆ ನಿಮ್ಮ ವಿಶ್ವಾಸಕ್ಕೆ ಕೃತಜ್ಞತೆಗಳು ಡಾ. ಎಚ್. ತಿಪ್ಪೆರುದ್ರಸ್ವಾಮಿ ಶ್ರೀ ಷಣ್ಮುಖ ಶಿವಯೋಗಿಗಳನ್ನು ಕುರಿತು, ಬರೆದಿರುವ ಜಡದಲ್ಲಿ ಜಂಗಮ ಕಾದಂಬರಿ ತುಂಬ ಚೆನ್ನಾಗಿ ಬಂದಿದೆ. ಶ್ರೀ ಷಣ್ಮುಖ ಶಿವಯೋಗಿಗಳವರನ್ನು ಬಹು ಮುಖವಾಗಿ ನಾಡವರೆಗೆ ಪರಿಚಯಿಸುವದರಲ್ಲಿ ಕಾದಂಬರಿ ಮಾಧ್ಯಮ ಮಹತ್ವದ ಸಾದನ ಇಂಥ ಕೃತಿಗಳು ಹೆಚ್ಚು ಹೆಚ್ಚಾಗಿ ಬರಲಿ

ಇತಿ ಶಿವಂ

ಅಪ್ಪನ (ಷಣ್ಮುಖ ಶಿವಯೋಗಿ) ವಚನಗಳಂತೂ ನನಗೆ ಕಾಮಧೇನು ಕಲ್ಪವೃಕ್ಷ ಚಿಂತಾಮಣಿಗಳಾಗಿವೆ, ಅವುಗಳ ಪಾರಾಯಣದಿಂದಲೇ ನನ್ನ ಆತ್ಮಕ್ಕೆ ಚಿರಶಾಂತಿ ದೊರಕಿದೆ. ಈ ಗ್ರಂಥ ಅತ್ಯಾವಶ್ಯವಾಗಿ ಶ್ರೀ ಮಠದ ಅಖಂಡೇಶ್ವರ ಗ್ರಂಥಮಾಲೆಯಿಂದ ಪ್ರಕಟವಾಗಲಿ

ಶ್ರೀ ಷಣ್ಮುಖ ಶಿವಯೋಗೇಶ್ವರ ತತ್ ಸ್ವರೂಪರಾದ ಪೂಜ್ಯ ಅಪ್ಪನವರಾದ ಶ್ರೀ ಶಾಂತಲಿಂಗ ಸ್ವಾಮಿಗಳವರಿಗೆ ಅನಂತ ಪ್ರಣಾಮಗಳು.

ಪೂಜ್ಯ ಮಾತೆ ಶಿವಶರಣೆ
ಸಜ್ಜಲ ಗುಡ್ಡ–ಕಂಬಳಿಹಾಳ

ಅನುಭವದ ಸಂಕೀರ್ಣತೆ: ಸಾಂದ್ರತೆ: ತೀವ್ರತೆ ಹಾಗೂ ಉತ್ಕಟತೆಗಳನ್ನು ಉಕ್ಕಿಸುವ ವಚನಗಳನ್ನು ನಮಗೆ ನೀಡಿರುವ ಷಣ್ಮುಖ ಶಿವಯೋಗಿಗಳೇ ಆಷಾಢ ಭೂತತನ ಕಂಡಲೆಲ್ಲ ಅದನ್ನು ಖಂಡಿಸುವ ವಚನಗಳನ್ನೂ. ಸಮಾಜಲೋಪದೋಷಗಳನ್ನು ವಿಡಂಬಿಸುವ ವಚನಗಳನ್ನೂ ಜಾತಿ, ಕುಲಗೋತ್ರ, ವರ್ಣ ಮೊದಲಾದ ಕೃತ್ರಿಮ ವಿಭೇದಗಳನ್ನು ಪ್ರಭಂಜಿಸುವ ವಚನಗಳನ್ನೂ ಮೇಲು ಕೀಳುಗಳ ಕಲ್ಪನೆಯನ್ನು ತುಂಡರಿಸುವ ವಚನಗಳನ್ನೂ ಇತ್ತಿದ್ದಾರೆ.

ಜೇಡರ ದಾಸಿಮಯ್ಯನ, ಮದನೂರ ಕೇಶಿರಾಜನ, ಕೊಂಡಗೂಳಿ ಬಸವಣ್ಣನ ಬಾಗೇವಾಡಿಗಳನ್ನೊಳಗೊಂಡ ಭೂಭಾಗದಲ್ಲಿ ಷಣ್ಮುಖ ಶಿವಯೋಗಿಗಳವರ ಜೇವರಗಿ ನೆಲಸಿದೆ. ಅಂತೆಯೇ ಅಲ್ಲಿ ಉದಿಸಿದ್ದ ವಚನ ಭಾಗೀರಥಿ ಬತ್ತಿದಾಗ ಆದಕ್ಕೆ ಮತ್ತೆ ಮಳಿಗರೆದ ಮೇಲ್ಮೆ ಷಣ್ಮುಖ ಶಿವಯೋಗಿಗಳವರದಾಯಿತು. ಇಂಥ ಮಹಾನುಭಾವರ ಮಠಕ್ಕೆ ಈಗ ಶ್ರೀಮನ್ ಮಹಾರಾಜ ನಿರಂಜನ ಶ್ರೀ ಶ್ರೀ ಶಾಂತಲಿಂಗ ಮಹಾಸ್ವಾಮಿಗಳವರು ಅಧಿಪತಿಗಳಾಗಿ ದೊರೆತಿರುವದು ಅತ್ಯಂತ ಸಂತಸದ ಸಂಗತಿ. ಇವರ ಅಧಿಕಾರವಧಿಯಲ್ಲಿ ಶ್ರೀ ಮಠದ ಹಿರಿಮೆ ಮತ್ತೆ ಮರಳುತ್ತಿದೆ.

- ಸಿದ್ದಯ್ಯ ಪುರಾಣಿಕ

ಒಪ್ಪೋಲೆ

[ದಯವಿಟ್ಟು ಗಮನಿಸಿರಿ]

ಪುಟ	ಸಾಲು	ತಪ್ಪು	ಒಪ್ಪು
೪	೨	ಪ್ರಜಾ	ಪೂಜಾ
೮	೧೯	ಪೇಟಿಗೆ	ಪೇಚಿಗೆ
೮	೨೩	ಎಂದೂ	ಎಂದರು
೯	೫	ಬಾರದೆಂದು	ಬಾರರೆಂದೂ
೯	೧೦	ಗತಿಯಿಲ್ಲ	ಗತಿಯಲ್ಲಿ
೧೦	೧೧	ಚಪ್ಪಳಿಗಳನ್ನು	ಚಪ್ಪರಗಳನ್ನು
೧೦	೧೪	ಕೊಡುತ್ತ	ಬಂದು ಕೊಡುತ್ತಿದ್ದರು ಸ್ವಾಮಿಗಳು
೧೦	೨೦	ಮಾನ	ಮೌನ
೧೧	೧೧	ಅಪೂರ್ವ	ಅಪೂರ್ಣ
೧೧	೧೫	ಹೆಚ್ಚರಳಿನಂತೆ	ಹೆಚ್ಚೆಳಸಿನಂತೆ
೧೨	೧೬	ಈ ಪೂರ್ಣ ಸಾಲನ್ನು ಕಿತ್ತು ಹಾಕಿರಿ ಆಸ್ಥಳದಲ್ಲಿ ಕೆಳಗಿನ ವಾಕ್ಯಗಳನ್ನು ಕೂಡಿಸಿಕೊಂಡು ಓದಿರಿ.	

.... ತೃಪ್ತಿಯುಂಟಾಗಿ ಭಕ್ತರ ಇಚ್ಛೆಯಂತೆ ಅದು ಮಠವೆಂದು ಪೀಠ ಸ್ಥಾಪನೆ ಮಾಡಿದರು. ಮರಿ ಅಖಂಡೇಶ್ವರ ಪೀಠಾರೋಹಣ ಸಮಾರಂಭ ನೆರವೇರಿಸಿದರು. ತಾವು ಮತ್ತೆ ಕಲ್ಯಾಣ ದರ್ಶನಕ್ಕೆ ಅತುರಗೊಂಡು ಹೊರಟು ಬಿಟ್ಟರು. ಮರಿಸ್ವಾಮಿಗಳಿಗಾಗಲಿ ಭಕ್ತರಿಗಾಗಲಿ ಅವರನ್ನು ತಡೆಯುವದು ಸಾಧ್ಯವಿರಲಿಲ್ಲ.

ದಿವಂಗತ ದೊಂಡೊಪಂತನು ಪತ್ನಿಯ ಕನಸಿನಲ್ಲಿ ಕಾಣಿಸಿಕೊಂಡು ಅಖಂಡೇಶ್ವರ ಸ್ವಾಮಿಗಳು ತಪಸ್ಸು ಮಾಡಿದ ಸ್ಥಳದಲ್ಲಿ ತೋರ ಗದ್ದುಗೆ ಕಳಿಸುವಂತೆ ಸೂಚಿಸಿದನಂತೆ ಆ ತಾಯಿ ಮಕ್ಕಳನ್ನು ಕರೆದು ಸ್ವಪ್ನದ ಸಮಾಚಾರ ತಿಳಿಸಿದಳು.

೧೨ ೨೧ರ ಬಳಿಕ [ಇಲ್ಲಿ ಅದ್ಯಾಯದ ಹೆಸರು ಬೇಕು] ಕಾರಣ ಕಿರಣ

೧೪	೧೫	ಕುಣಿಯು	ಕಾಣು
೨೦	೧೦	ಕೇಳಿತು ?	ಕೇಳೀತು ?

೨೫ ಮೇಲೆ [ಇಲ್ಲಿ ಅಧ್ಯಾಯ ಹೆಸರು ಬೇಕು.] ಕಾರಣ ಕಿರಣ

೨೭	೮	ಳೆಲ್ಲ	ಳೆಲ್ಲರ
೨೯	೧೪	ಮೈಯಿಗೆ	ಮಹಿಗೆ
೩೦	೧೧	ಬೆಸತಿಗೆ	ಬೆಸಲೆಗೆ
೩೧	೧೧	ಎಷ್ಟೋ	ಎಷ್ಟು
೩೨	೫	ಆಕಳು	ಆಕಳೆ

೩೪	೧	ಆವತಾರ	ಅವಸರ
೩೫	೧೫ರ ಬಳಿಕ [ಇಲ್ಲಿ ಅಧ್ಯಾಯದ ಹೆಸರು ಬೇಕು] ವೈರಾಗ್ಯ ವಿಭವ		
೩೬	೧೭	ಕವಲೆಗ	ಕಮತಿಗ
೩೬	೧೮	ಕೇಳಿದನು	ಗೌಡತಿ ಕೇಳಿದಳು
೩೯	೩	ಗೌಡರೇ	ಗೌಡಕೀ
೩೯	೫	ಆವಶ್ಯ	ಅಶಕ್ಯ
೪೩	೧೭	ಅಲ್ಲಲ್ಲಿ	ಅಲ್ಲಿಲ್ಲ
೪೩	೧೮	ಬೆಳಗಿನ	ಬೇಗಿನ
೪೩	೨೨	ಊರಿಗೆ	ಹೊರಬಿದ್ದು
೪೬	ಮೇಲೆ [ಇಲ್ಲಿ ಅಧ್ಯಾಯದ ಹೆಸರು] ಗುರುಸಾನಿಧ್ಯದಲ್ಲಿ		
೫೧	೧೦	ಅಭಾವ	ಆ ಭಾವ
೫೨	೨೩	ಮಾಡಿಸಿಕೊಂಡು	ಮೂಡಿಸಿಕೊಂಡು
೫೪	೧೨ರ ಬಳಿಕ [ಇಲ್ಲಿ ಅಧ್ಯಾಯದ ಹೆಸರು] ಭೂತಾನು ಕಂಪೆ		
೬೦	೪	ನಮಗೇನು	ನಿಮಗೇನು
೬೬	೮ರ ಬಳಿಕ [ಇಲ್ಲಿ ಆಧ್ಯಾಯದ ಹೆಸರು ಬೇಕು] ಲೋಕಾನುಭವದಿಂದ ಸ್ಫೂರ್ತಿ		
೭೧	೧೬	ಹಣಕಿಹಬ್ಬಿ	ಪಣಕ್ಕೆ ಹಚ್ಚಿ
೭೨	೩	ಪೊಡಬಿಟ್ಟು	ಪೊಡಮಟ್ಟು
೭೨	೪	ಪ್ರಾರ್ಥಿಸಿ	ಪ್ರಾರ್ಥಿಸಿದನು
೭೩	೧೨	ಭವಿಗಳು	ಭವಿಗಳನ್ನು
೭೩	೧೪	ಬೆಚ್ಚಲವ	ಚಿಜ್ಜಲವ
೮೧	೨	ಏಳಲಾದುದಕ್ಕೆ	ಏಳಲಾಗದುದಕ್ಕೆ

೮೩	೧೩	ಸೇಪಿಪರ	ಸೇವಿಸದ
೮೫	೧	ಖರಿವಂತೆ	ತಿರಿವಂತೆ
೮೫	೧	ವರೆದು	ಬರೆದು
೮೫	೨	ಬಂದನದಂತ	ಚಂದನದಂತೆ
೮೬	೧೨	ಎನುಲಿರ್ಥೆನೆಯ್ಯಾ	ಎನುತಿರ್ದೆನಯ್ಯಾ
೯೬	೧೧	ವಾದ	ವೇದ
೧೦೨	೧	ಹೀಗೆ?	ಹೇಗೆ?
೧೦೨	೨೨	ಮೂಢಳಿಸಿಸುತ್ತೇವೆ	ಮೂಢರೆನಿಸುತ್ತೇವೆ
೧೦೩	೧೨	ನೀತಿಗಳೆದು	ನೇತಿಗಳೆದು
೧೧೨	೧೬	ನಮಸ್ಕರಿಸಿದರು	ನಮಸ್ಕರಿಸಿದ
೧೧೪	೭	ಹೆರಿಗೆ	ಹಲಗೆ
೧೧೭	೧೯	ಅಣ್ಮೊಂಬ	ಕಣ್ತೊಂಬ
೧೧೯	೨೧	ಆಲೂರ	ಆ ಊರ
೧೨೧	೩	ನಾಮುಪತ್ರ	ದಾನಪತ್ರ
೧೨೪	೧೯	ಆಲೂರಲ್ಲಿ	ಆ ಊರಲ್ಲಿ
೧೨೭	೧೨	ವಾದದರ್ಶನ	ಪಾದದರ್ಶನ
೧೨೮	೮	ಶಕ್ತಿವಿಶಿಷ್ಟವಾದ	ಶಕ್ತಿವಿಶಿಷ
೧೨೮	೧೦	ನಿರತಾದ	ವಾದ ನಿರಾಕಾರ
೧೨೮	೧೧	ಶೂನ್ಯ	ನೂನ
೧೨೮	೧೨	ಶೂನ್ಯ	ನೂನ
೧೨೮	೧೩	ಉದಾಸಕಲಿಂಗ	ಉಪಾಸಕ ಲಿಂಗ
೧೨೮	೧೩	ಅವ್ಯವಸ್ಥೆ	ವ್ಯವಸ್ಥೆ